ಬುಧವಾರ, ಜುಲೈ 3, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 184 | ಪುಟ 16 • www.prajavani.net prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
'ಆರ್‌ಒ' ಫಿಲ್ಟರ್ ನೀರಿನಿಂದ ಆರೋಗ್ಯಕ್ಕೆ ಅನುಕೂಲಗಳಿರುವಂತೆ ತೊಂದರೆಗಳೂ ಇವೆ



ಆಳ-ಅಗಲ
ಡೆಂಗಿಗೆ ತತ್ತರಿಸಿದ ಕರುನಾಡು
ಕೊಡಗಿನಲ್ಲಿ ಮಳೆ, ತುಂಬಿದ ಚಿಕ್ಲಿಹೊಳೆ 7
ಹಾಲಿನ ದರ ಹೆಚ್ಚಳ ತಾತ್ಕಾಲಿಕ? 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
79,441	24,123	₹74,050 (ಬೆಂಗಳೂರು)	₹90,600 (ಬೆಂಗಳೂರು)	83.48

ಉತ್ತರ ಪ್ರದೇಶದಲ್ಲಿ 'ಸತ್ಸಂಗ'ದ ವೇಳೆ ದುರಂತ • ಆಸ್ಪತ್ರೆ ಎದುರು ಹೆಣಗಳ ರಾಶಿ • ಅಂಗಳದಲ್ಲೇ ನರಳಿದ ಗಾಯಾಳುಗಳು

ಹಾಥರಸ್ ಕಾಲ್ತುಳಿತ: 116 ಸಾವು

ಪ್ರಜಾವಾಣಿ ವಾರ್ತೆ/ಪಿಟಿಐ

ಲಖನೌ: ಉತ್ತರ ಪ್ರದೇಶದ ಹಾಥರಸ್ ಜಿಲ್ಲೆಯ ಫೂಲರಾಯ್ ಗ್ರಾಮದಲ್ಲಿ ಮಂಗಳವಾರ ಆಯೋಜಿಸಿದ್ದ 'ಸತ್ಸಂಗ'ದ ವೇಳೆ ಸಂಭವಿಸಿದ ಕಾಲ್ತುಳಿತದಿಂದಾಗಿ ಕನಿಷ್ಠ 116 ಮಂದಿ ಮೃತಪಟ್ಟು, ಹಲವರು ಗಾಯಗೊಂಡಿದ್ದಾರೆ.

ಮೃತಪಟ್ಟವರಲ್ಲಿ 108 ಮಹಿಳೆಯರು ಮತ್ತು 7 ಮಕ್ಕಳು ಸೇರಿದ್ದಾರೆ. ಬಹುತೇಕರ ಶವಗಳನ್ನು ಗುರುತಿಸಲಾಗಿದೆ. ಗಾಯಗೊಂಡವರಲ್ಲಿ ಹಲವರ ಸ್ಥಿತಿ ಗಂಭೀರವಾಗಿದ್ದು, ಸಾವಿನ ಸಂಖ್ಯೆ ಹೆಚ್ಚುವ ಸಾಧ್ಯತೆ ಇದೆ.

ಸತ್ಸಂಗದಲ್ಲಿ ಸುತ್ತಮುತ್ತಲಿನ ಗ್ರಾಮಗಳ ಜನರು ಭಾರಿ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಕಾರ್ಯಕ್ರಮ ಮುಕ್ತಾಯಗೊಂಡ ನಂತರ, ಸಭಾಂಗಣದಿಂದ ಹೊರಹೋಗಲು ಜನ ದೊಡ್ಡ-ಸಂಖ್ಯೆಯಲ್ಲಿ ನುಗ್ಗಿದ್ದರಿಂದ ಕಾಲ್ತುಳಿತ ಸಂಭವಿಸಿದೆ ಎಂದು ಪ್ರತ್ಯಕ್ಷದರ್ಶಿಗಳು ಮಾಹಿತಿ ನೀಡಿದ್ದಾರೆ.

'ಕಾರ್ಯಕ್ರಮ ನಡೆದ ಸಭಾಂಗಣ ಚಿಕ್ಕದಿತ್ತು, ನಿರ್ಗಮನ ದ್ವಾರವೂ ಕಿರಿದಾಗಿತ್ತು. ಕಾರ್ಯಕ್ರಮ ಮುಗಿದ ಮೇಲೆ ಸ್ಥಳದಿಂದ ಹೊರಡುವುದಕ್ಕಾಗಿ ಮುನ್ನುಗ್ಗುತ್ತಿದ್ದಾಗ ಭಕ್ತರ ಕಾಲಡಿ ಹಲವು ಮಹಿಳೆಯರು ಹಾಗೂ ಮಕ್ಕಳು ಸಿಲುಕಿಬಿದ್ದರು. ಕಾಲಡಿ ಸಿಲುಕಿ ಒದ್ದಾಡುತ್ತಿದ್ದ ಮಹಿಳೆಯರು ಮತ್ತು ಮಕ್ಕಳ ಚೀರಾಟವನ್ನು ಯಾರೂ ಕೇಳಿಸಿ-ಕೊಳ್ಳಲಿಲ್ಲ' ಎಂದು ಪ್ರತ್ಯಕ್ಷದರ್ಶಿ ಶಕುಂತಲಾ ದೇವಿ ಎಂಬುವವರು ಪಿಟಿಐಗೆ ತಿಳಿಸಿದ್ದಾರೆ.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಸರ್ಕಾರ್ ವಿಶ್ವಹರಿ ಭೋಲೆಬಾಬಾ ಅವರ ಬೆಂಗಾವಲು ವಾಹನಗಳ ಸಂಚಾರಕ್ಕಾಗಿ ಒಂದು ದ್ವಾರವನ್ನು ಆಯೋಜಕರು ಮುಚ್ಚಿದ್ದರಿಂದ ಮತ್ತೊಂದು ದ್ವಾರದ ಮೇಲೆ ಒತ್ತಡ ಹೆಚ್ಚಾಯಿತು. ಇದು ಕಾಲ್ತುಳಿತಕ್ಕೆ ಕಾರಣವಾಯಿತು ಎಂದು ಕೆಲವು ವರದಿಗಳು ಹೇಳಿವೆ.


ಮೃತದೇಹಗಳು ಚೆಲ್ಲಾಪಿಲ್ಲಿ

ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಮೃತದೇಹಗಳು, ಮೃತದೇಹಗಳ ಮೇಲೆ ಬಿದ್ದು, ಹೊರಳಾಡುತ್ತಾ ರೋದಿಸುತ್ತಿದ್ದ ಸಂಬಂಧಿಗಳು, ಪರಸ್ಪರ ಸಮಾಧಾನ ಹೇಳುತ್ತಿದ್ದ ಗ್ರಾಮಸ್ಥರು... ಸಿಕಂದ್ರಾ ರಾವ್ ಪಟ್ಟಣದ ಸರ್ಕಾರಿ ಆಸ್ಪತ್ರೆ ಮುಂಭಾಗದಲ್ಲಿ ಕಂಡುಬಂದ ಮನಕಲಕುವ ದೃಶ್ಯಗಳಿವು.

ಟ್ರಕ್‌ವೊಂದರಲ್ಲಿ 5–6 ಮೃತದೇಹಗಳ ನಡುವೆ ಕುಳಿತಿದ್ದ ಮಹಿಳೆಯೊಬ್ಬರು ತಮ್ಮ ಮಗಳ ಶವವನ್ನು ಕೆಳಗೆ ಇಳಿಸಿಕೊಡುವಂತೆ ರೋದಿಸುತ್ತಿದ್ದ ಹೃದಯವಿದ್ರಾವಕ ದೃಶ್ಯ ಅಲ್ಲಿ ನೆರೆದಿದ್ದ ಎಲ್ಲರಲ್ಲೂ ಕಣ್ಣೀರು ಉಕ್ಕುವಂತೆ ಮಾಡಿತ್ತು. ಬಸ್ಸಿನಲ್ಲಿ ನಿಸ್ತೇಜವಾಗಿ ಮಲಗಿದ್ದ ವ್ಯಕ್ತಿಗಳ ಶರೀರಗಳು ದುರಂತದ ಭೀಕರತೆಗೆ ಕನ್ನಡಿ ಹಿಡಿದ್ದವು.

ಹಲವು ಗಾಯಾಳುಗಳನ್ನು ಆಸ್ಪತ್ರೆಯ ಮುಂಭಾಗದಲ್ಲಿ ನೆಲದ ಮೇಲೆ ಮಲಗಿಸಲಾಗಿತ್ತು. ಆಸ್ಪತ್ರೆಯ ಸುತ್ತ ಭಾರಿ ಸಂಖ್ಯೆಯಲ್ಲಿ ಜನ ಜಮಾಯಿಸಿದ್ದರು. ದುರಂತದ ನಿರ್ವಹಣೆಯಲ್ಲಿ ಸ್ಥಳೀಯ ಆಡಳಿತ ಮುಗ್ಗರಿಸಿದೆ ಎಂಬ ಆಕ್ರೋಶ ಅಲ್ಲಿ ನೆರೆದವರಲ್ಲಿ ಮಡುವುಗಟ್ಟಿತ್ತು.

ಘಟನೆಗೆ ಕಾರಣ ಪತ್ತೆ ಹಚ್ಚುವುದಕ್ಕಾಗಿ ಆಗ್ರಾದ ಎಡಿಜಿಪಿ ಹಾಗೂ ಅಲಿಗಢ ವಿಭಾಗೀಯ ಆಯುಕ್ತರ ನೇತೃತ್ವದ ಉನ್ನತ ಮಟ್ಟದ ಸಮಿತಿ ರಚಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಾರ್ಯಕ್ರಮ ಆಯೋಜಕರ ವಿರುದ್ಧ ಎಫ್‌ಐಆರ್ ದಾಖಲಿಸುವುದಾಗಿ ಸರ್ಕಾರ ಹೇಳಿದೆ.



ದುರಂತದ ಕ್ಷಣಗಳು

- ಲಖನೌದಿಂದ 400 ಕಿ.ಮೀ. ದೂರದಲ್ಲಿನ ಫೂಲರಾಯ್ ಗ್ರಾಮದಲ್ಲಿ ದುರ್ಘಟನೆ
- ಕಾರ್ಯಕ್ರಮದಲ್ಲಿ ಲಕ್ಷಕ್ಕೂ ಅಧಿಕ ಭಕ್ತರು ಸೇರಿದ್ದರು
- ಅಧಿಕ ತಾಪಮಾನದ ಕಾರಣದಿಂದ ಹಲವು ಭಕ್ತರು ಅಸ್ವಸ್ಥಗೊಂಡಿದ್ದರು
- ಜಿಲ್ಲಾ ಕೇಂದ್ರ ಎಟಾದ ಆಸ್ಪತ್ರೆಗೆ ಗಾಯಾಳುಗಳ ದಾಖಲು
- 'ನನ್ನ ಮಗಳು,15ರ ಛಾಯಾಗೆ ಮಾತು ಬಾರದು. ಅವಳಿಗೆ ಅಳುವುದಷ್ಟೇ ಗೊತ್ತು' ಎಂದು ಆಕೆಯ ತಾಯಿ ಹುಡುಕಾಟ ನಡೆಸಿದ್ದ ಮನಕಲಕುವ ಘಟನೆ ಕಂಡಿತು
- ನೆರೆ ರಾಜ್ಯಗಳಿಂದ ಬಂದಿದ್ದ ಭಕ್ತರೂ ಕಾರ್ಯಕ್ರಮದಲ್ಲಿ ಭಾಗಿ
- ಪರಿಹಾರ ಕಾರ್ಯಕ್ಕೆ ನೆರವಾಗಲು ಅಕ್ಕಪಕ್ಕದ ಜಿಲ್ಲೆಗಳ ಪೊಲೀಸ್ ಸಿಬ್ಬಂದಿ ನಿಯೋಜನೆ
- ಬುಧವಾರ ಸ್ಥಳಕ್ಕೆ ಸಿ.ಎಂ ಆದಿತ್ಯನಾಥ ಭೇಟಿ ಸಾಧ್ಯತೆ

ನೆರವಿಗೆ ಧಾವಿಸಿದ ಎನ್‌ಡಿಆರ್‌ಎಫ್

ಹಾಥರಸ್‌ನಲ್ಲಿ ಕಾಲ್ತುಳಿತದಿಂದ ಗಾಯಗೊಂಡವರ ಚಿಕಿತ್ಸೆಗಾಗಿ ಕೇಂದ್ರ ಸರ್ಕಾರವು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ (ಎನ್‌ಡಿಆರ್‌ಎಫ್) ವೈದ್ಯಕೀಯ ತಂಡವನ್ನು ಕಳುಹಿಸಿಕೊಟ್ಟಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು, 'ಎಕ್ಸ್'ನಲ್ಲಿ ಈ ಮಾಹಿತಿಯನ್ನು ಹಂಚಿಕೊಂಡಿದ್ದು, 'ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರೊಂದಿಗೆ ಮಾತನಾಡಿದ್ದು, ಕೇಂದ್ರದಿಂದ ಅಗತ್ಯವಿರುವ ಎಲ್ಲ ನೆರವನ್ನು ನೀಡಲಾಗುವುದು' ಎಂದು ತಿಳಿಸಿದ್ದಾರೆ.

ಇನ್ನಷ್ಟು ಸುದ್ದಿಗಳು 9

ಪರಿಹಾರ ಘೋಷಿಸಿದ ಪ್ರಧಾನಿ

ಪ್ರಧಾನಿ ನರೇಂದ್ರ ಮೋದಿ ಅವರು ಹಾಥರಸ್ ಜಿಲ್ಲೆಯಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ತಲಾ ₹ 2 ಲಕ್ಷ ಹಾಗೂ ಗಾಯಗೊಂಡವರಿಗೆ ತಲಾ ₹50 ಸಾವಿರ ಪರಿಹಾರ ಘೋಷಿಸಿದ್ದಾರೆ ಎಂದು ಪ್ರಧಾನಿ ಕಚೇರಿ ತಿಳಿಸಿದೆ.

ಕಾಲ್ತುಳಿತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಸಾಂತ್ವನ ಹೇಳಿರುವ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಮೃತರ ಕುಟುಂಬಗಳಿಗೆ ತಲಾ ₹2 ಲಕ್ಷ ಹಾಗೂ ಗಾಯಗೊಂಡವರಿಗೆ ತಲಾ ₹ 50 ಸಾವಿರ ಪರಿಹಾರ ಘೋಷಿಸಿದ್ದಾರೆ.



ಕಾಲ್ತುಳಿತದಲ್ಲಿ ಮೃತಪಟ್ಟವರ ದೇಹಗಳನ್ನು ಸಿಕಂದ್ರಾ ರಾವ್ ಪಟ್ಟಣದಲ್ಲಿ ಬಸ್‌ವೊಂದರ ಸೀಟುಗಳಲ್ಲಿ ಇರಿಸಲಾಗಿತ್ತು –ಪಿಟಿಐ ಚಿತ್ರಗಳು

ಮಗುವನ್ನು ಕಳೆದುಕೊಂಡ ಮಹಿಳೆಯ ರೋದನ



ಬೀದರ್‌ನಲ್ಲೂ ಅಕ್ರಮ ಗಣಿಗಾರಿಕೆಯ 'ದೂಳು'

• ಶಶಿಕಾಂತ ಎಸ್. ಶೆಂಬೆಳ್ಳಿ

ಬೀದರ್: ಬೀದರ್ ಜಿಲ್ಲೆಯಲ್ಲಿ ಅವ್ಯಾಹತವಾಗಿ ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದು, ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿ ನಷ್ಟವಾಗುತ್ತಿದೆ. ಜಿಲ್ಲೆಯ ವಿವಿಧ ಭಾಗಗಳಲ್ಲಿ ಬೋಳಾಗಿ, ಹೊಟ್ಟೆ ಬಗೆಸಿಕೊಂಡು ನಿಂತಿರುವ ಗುಡ್ಡಗಳು ಅಕ್ರಮದ ಕಥೆಗಳನ್ನು ಸಾರಿ ಹೇಳುತ್ತಿವೆ.

ಬೀದರ್ ತಾಲ್ಲೂಕಿನ ಬಾಗ್–ಎ–ಶಾಹಿ, ನಾವದಗೇರಿ, ಚೊಂಡಿ, ಅಷ್ಟೂರ, ಮಾಮನಕೇರಿ, ಮಲ್ಕಾಪುರ, ಹುಮನಾಬಾದ್ ತಾಲ್ಲೂಕಿನ ಸಿಂಧನಕೇರಾದಲ್ಲಿಹಗಲು–ರಾತ್ರಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಯಿಂದ ಗುಡ್ಡಗಳೆಲ್ಲ ಬೋಳಾಗುತ್ತಿವೆ. ಉಪಯುಕ್ತ ಖನಿಜಾಂಶಗಳನ್ನು ಹೊಂದಿರುವ ಮುರಂ ಅನ್ನು ಅನುಮತಿ ಇಲ್ಲದೆ, ಅಕ್ರಮವಾಗಿ ಸಾಗಾಟ ಮಾಡಲಾಗುತ್ತಿದೆ. ಬೀದರ್, ಅರಣ್ಯ ಮತ್ತು ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆಯವರ ತವರು ಜಿಲ್ಲೆ.

ಬೀದರ್ ತಾಲ್ಲೂಕಿನ ಅಷ್ಟೂರ ಗ್ರಾಮದ ಸರ್ವೆ ನಂಬರ್ 186/1 ಕೃಷಿ ಭೂಮಿಯನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿಕೊಳ್ಳಲಾಗಿತ್ತು. ಆದರೆ, ಅಲ್ಲಿ ಅವ್ಯಾಹತವಾಗಿ ಗಣಿಗಾರಿಕೆ ನಡೆಸುತ್ತಿದ್ದ ಕಾರಣ ಸ್ವತಃ ಜಿಲ್ಲಾಧಿಕಾರಿ ಭೂ ಪರಿವರ್ತನೆ ಆದೇಶವನ್ನು ರದ್ದುಪಡಿಸಿದ್ದಾರೆ. ಇದಾದ ಬಳಿಕವೂ ಎಗ್ಗಿಲ್ಲದೇ ಗಣಿಗಾರಿಕೆ ನಡೆಸಲಾಗುತ್ತಿದೆ.

ಅರಣ್ಯ ಇಲಾಖೆಗೆ ಸೇರಿದ ಜಾಗದಲ್ಲಿ ಅಕ್ರಮವಾಗಿ ಗಣಿಗಾರಿಕೆ ಮಾಡುತ್ತಿದ್ದರೆ ತಡೆಯಬಹುದು. ಇದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ
ವಾನತಿ ಎಮ್.ಎಮ್., ಡಿಸಿಎಫ್

ಸರ್ಕಾರದ ಬೊಕ್ಕಸಕ್ಕೆ ಉಂಟಾಗಿರುವ ನಷ್ಟವನ್ನು ಗಣಿಗಾರಿಕೆ ಮಾಡುತ್ತಿರುವವರಿಂದ ಭರಿಸಿಕೊಳ್ಳಬೇಕು
ವಿನಯ್ ಮಾಳಗೆ
ಪರಿಸರ ಹೋರಾಟಗಾರ

ಪ್ರಜಾವಾಣಿ ವಿಶೇಷ

ಗಣಿಗಾರಿಕೆ ನಡೆಸುತ್ತಿರುವವರ ಬೆನ್ನ ಹಿಂದೆ ಕೆಲ ಪ್ರಭಾವಿಗಳು ನಿಂತಿದ್ದಾರೆ. ಹೀಗಾಗಿಯೇ ಅಧಿಕಾರಿಗಳು ಅಸಹಾಯಕರಾಗಿ ಕಾನೂನು ಕ್ರಮಕ್ಕೆ ಹಿಂದೇಟು ಹಾಕುತ್ತಿದ್ದಾರೆ ಎಂದು ಸ್ಥಳೀಯರು ದೂರುತ್ತಾರೆ.

ಅಷ್ಟೂರ ಗ್ರಾಮದಲ್ಲಿ ನಡೆಯುತ್ತಿರುವ ಗಣಿಗಾರಿಕೆಯಿಂದ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಗೆ ಸೇರಿದ ಚೌಖಂಡಿ ಸ್ಮಾರಕಕ್ಕೆ ಧಕ್ಕೆ ಉಂಟಾಗುವ ಭೀತಿ ಎದುರಾಗಿದೆ. ಈಗಾಗಲೇ ಗಣಿಗಾರಿಕೆಯಿಂದ ಸಮೀಪದ ಸೋಲಪುರ ಕೆರೆಗೆ ಅಪಾರ ಪ್ರಮಾಣದಲ್ಲಿ ಹರಿದು ಹೋಗುತ್ತಿದ್ದ ನೀರಿನ ಜಲಮೂಲಗಳು ನಾಶವಾಗಿವೆ. ಹೀಗೇ ಗಣಿಗಾರಿಕೆ ಮುಂದುವರಿದರೆ ಕೆರೆ ಅಸ್ತಿತ್ವ ಕಳೆದುಕೊಳ್ಳುವ ಆತಂಕ ಎದುರಾಗಿದೆ.

7ನೇ ಪುಟ ನೋಡಿ



ಬೀದರ್ ತಾಲ್ಲೂಕಿನ ಅಷ್ಟೂರ ಗ್ರಾಮದಲ್ಲಿ ಅಕ್ರಮ ಗಣಿಗಾರಿಕೆಯಿಂದ ಗುಡ್ಡ ಬೋಳಾಗಿದೆ

ಚಿನಕುರುಳಿ
ಪ್ರಕಾಶ್ ಶೆಟ್ಟಿ



ಪ್ರಶ್ನೆ ಪತ್ರಿಕೆ ಸೋರಿಕೆ ತಡೆಗೆ ಯುದ್ಧೋಪಾದಿ ಕೆಲಸ: ಮೋದಿ 9
ಹಿಂಡೆನ್‌ಬರ್ಗ್‌ಗೆ ಷೋಕಾಸ್ ನೋಟಿಸ್ 12

ನಮ್ಮದು ತುಷ್ಟೀಕರಣವಲ್ಲ, ಸಂತುಷ್ಟೀಕರಣ: ಮೋದಿ

'ಬಾಲಕ ಬುದ್ಧಿಯ ರಾಹುಲ್'

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರಪತಿ ಭಾಷಣದ ಮೇಲಿನ ಚರ್ಚೆಗೆ ಉತ್ತರ ನೀಡುವುದನ್ನು ಕಾಂಗ್ರೆಸ್ ವಿರುದ್ಧ ತೀಕ್ಷ್ಣ ಟೀಕೆಗೆ ವೇದಿಕೆಯನ್ನಾಗಿ ಬಳಸಿಕೊಂಡ ಪ್ರಧಾನಿ ನರೇಂದ್ರ ಮೋದಿ, 'ದೇಶವು ತುಷ್ಟೀಕರಣದ ರಾಜಕೀಯವನ್ನು ದೀರ್ಘಕಾಲ ನೋಡಿದೆ. ನಾವು ತುಷ್ಟೀಕರಣ ಅನುಸರಿಸದೆ 'ಸಂತುಷ್ಟೀಕರಣ' ಅನುಸರಿಸಿದ್ದೇವೆ' ಎಂದು ಪ್ರತಿಪಾದಿಸಿದರು.

ಮಣಿಪುರದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ವಿರೋಧ ಪಕ್ಷಗಳ ಸದಸ್ಯರ ಧರಣಿ ಹಾಗೂ ಗದ್ದಲದ ನಡುವೆಯೂ ಲೋಕಸಭೆಯಲ್ಲಿ ಮಂಗಳವಾರ ಸುಮಾರು ಎರಡೂವರೆ ಗಂಟೆ ಮಾತನಾಡಿದ ಅವರು, ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರನ್ನು ಗುರಿಯಾಗಿಸಿಕೊಂಡು ತೀವ್ರ ವಾಗ್ದಾಳಿ ನಡೆಸಿದರು. 'ರಾಹುಲ್ ಅವರದ್ದು ಬಾಲಕ ಬುದ್ಧಿ' ಎಂದು ಕಾಲೆಳೆದರು.



'ಸತ್ಯವನ್ನು ಹತ್ತಿಕಲು ಸಾಧ್ಯವಿಲ್ಲ, ಸುಳ್ಳುಗಳಿಗೆ ಬೇರುಗಳಿಲ್ಲ. ಘೋಷಣೆಗಳನ್ನು ಕೂಗುವ ಮೂಲಕ ಸತ್ಯವನ್ನು ಎಂದಿಗೂ ಸೋಲಿಸಲಾಗುವುದಿಲ್ಲ. ನಾನು ಇಂದು ಸತ್ಯದ ಶಕ್ತಿಯಲ್ಲಿ ಬದುಕಿದ್ದೇನೆ' ಎಂದೂ ಅವರು ಹೇಳಿದರು.

ಭಾಷಣ ಮುಗಿಸುವ ಮುನ್ನ, ಬಾಲಕ ಬುದ್ಧಿಯು ಸದ್ಬುದ್ಧಿಯನ್ನು ಪಡೆಯಲಿ' ಎಂದು ವ್ಯಂಗ್ಯವಾಗಿ ಹೇಳಿದರು. ಹಿಂದೂ ಧರ್ಮದ ಬಗ್ಗೆ ರಾಹುಲ್ ಹೇಳಿಕೆಗೆ ತಿರುಗೇಟು ನೀಡಿದ ಪ್ರಧಾನಿ, 'ಹಿಂದೂಗಳ ಮೇಲೆ ಸುಳ್ಳು ಆರೋಪ ಹೊರಿಸುವ ಸಂಚು ಗಂಭೀರ ವಿಷಯವಾಗಿದೆ' ಎಂದರು.

'ನಿನ್ನೆ ನಡೆದದ್ದನ್ನು ದೇಶದ ಜನರು ಎಂದಿಗೂ ಕ್ಷಮಿಸುವುದಿಲ್ಲ' ಎಂದು ಪ್ರಧಾನಿ ಮೋದಿ ಅವರು ಹೇಳಿದರು.

9ನೇ ಪುಟ ನೋಡಿ

ಖರ್ಗೆ–ಧನಕರ್ ವಾಕ್ಸಮರ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಸ್ಥಾನವನ್ನು ಜೈರಾಮ್ ರಮೇಶ್ ಅಲಂಕರಿಸಬೇಕು ಎಂದು ಸಭಾಪತಿ ಜಗದೀಪ್ ಧನಕರ್ ಅವರು ವ್ಯಂಗ್ಯವಾಗಿ ಹೇಳಿದ್ದು, ಮಂಗಳವಾರ ರಾಜ್ಯಸಭೆಯಲ್ಲಿ ವಾಗ್ವಾದಕ್ಕೆ ಕಾರಣವಾಯಿತು.

ರಾಷ್ಟ್ರಪತಿ ಅವರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಕಾಂಗ್ರೆಸ್‌ನ ಪ್ರಮೋದ್ ತಿವಾರಿ ಅವರು ಮಾತನಾಡುವ ವೇಳೆ ಖರ್ಗೆ–ಧನಕರ್ ಮಧ್ಯೆ 'ವಾಕ್ಸಮರ' ನಡೆಯಿತು.

9ನೇ ಪುಟ ನೋಡಿ

ಪೀಠಕ್ಕೆ ನೀವು ತೋರಿದಷ್ಟು ಅಗೌರವವನ್ನು ಸಂಸದೀಯ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಯಾರೂ ತೋರಿಲ್ಲ. ಪ್ರತಿ ಬಾರಿ ಸಭಾಪತಿ ಜತೆ ಜಗಳ ಕಾಯುವುದು ಸರಿಯಲ್ಲ
ಜಗದೀಪ್ ಧನಕರ್, ರಾಜ್ಯಸಭೆ ಸಭಾಪತಿ



ಸೋನಿಯಾ ಗಾಂಧಿ ಮತ್ತು ಜನರ ಸಹಕಾರದಿಂದಾಗಿ ನಾನು ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ಏರಿದ್ದೇನೆ. ನಿಮ್ಮ (ಧನಕರ್) ಅಥವಾ ಜೈರಾಮ್ ಅವರಿಂದಾಗಿ ಈ ಹಂತಕ್ಕೆ ಏರಿಲ್ಲ
ಮಲ್ಲಿಕಾರ್ಜುನ ಖರ್ಗೆ, ರಾಜ್ಯಸಭೆ ವಿಪಕ್ಷ ನಾಯಕ



ಮತಾಂತರ ನಿಲ್ಲದಿದ್ದರೆ ಬಹುಸಂಖ್ಯಾತರೇ ಅಲ್ಪಸಂಖ್ಯಾತರಾಗುತ್ತಾರೆ: ಕೋರ್ಟ್

'ಮತಾಂತರದ ಸಭೆ ಸ್ಥಗಿತಗೊಳಿಸಿ'

ಪ್ರಜಾವಾಣಿ ವಾರ್ತೆ/ಪಿಟಿಐ

ಪ್ರಯಾಗರಾಜ್ (ಉತ್ತರ ಪ್ರದೇಶ): ಮತಾಂತರ ನಡೆಯುವ ಧಾರ್ಮಿಕ ಸಭೆಗಳನ್ನು ಕೂಡಲೇ ನಿಲ್ಲಿಸಬೇಕು. ಇಲ್ಲದೇ ಹೋದಲ್ಲಿ ದೇಶದ ಬಹುಸಂಖ್ಯಾತರು ಮುಂದೊಂದು ದಿನ ಅಲ್ಪಸಂಖ್ಯಾತರಾಗುತ್ತಾರೆ ಎಂದು ಅಲಹಾಬಾದ್ ಹೈಕೋರ್ಟ್ ಹೇಳಿದೆ.

'ಪ್ರಸಾರ' ಎಂಬ ಪದದ ಅರ್ಥ 'ಪ್ರಚಾರ' ಮಾಡುವುದು ಎಂದಾಗುತ್ತದೆ. ಆದರೆ, ಯಾವುದೇ ಒಬ್ಬ ವ್ಯಕ್ತಿಯನ್ನು ಆತನ ಧರ್ಮದಿಂದ ಮತ್ತೊಂದು ಧರ್ಮಕ್ಕೆ ಪರಿವರ್ತಿಸು ಎಂದರ್ಥವಲ್ಲ' ಎಂದು ನ್ಯಾಯಮೂರ್ತಿ ರೋಹಿತ್ ರಂಜನ್ ಅಗರವಾಲ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಹೇಳಿದೆ.

ವ್ಯಕ್ತಿಗೆ ತನ್ನ ಇಚ್ಛೆಯ ಮತಾಚರಣೆ, ಧರ್ಮ ಪ್ರಸಾರದ ಸ್ವಾತಂತ್ರ್ಯವನ್ನು ಸಂವಿಧಾನದ 25ನೇ ವಿಧಿ ನೀಡಿದೆ. ಆದರೆ, ಒಂದು ಧರ್ಮದವರನ್ನು ಮತ್ತೊಂದು ಧರ್ಮಕ್ಕೆ ಸೇರ್ಪಡೆ ಮಾಡಲು ಅವಕಾಶ ನೀಡಿಲ್ಲ
ರೋಹಿತ್ ರಂಜನ್ ಅಗರವಾಲ್, ನ್ಯಾಯಮೂರ್ತಿ



ತಮ್ಮ ಗ್ರಾಮದ ಹಲವರನ್ನು ಮತಾಂತರಗೊಳಿಸಿದ ಆರೋಪ ಎದುರಿಸುತ್ತಿರುವ ಕೈಲಾಶ್ ಎಂಬುವವರ ಜಾಮೀನು ಅರ್ಜಿ ತಿರಸ್ಕರಿಸಿ ಸೋಮವಾರ ಆದೇಶ ಹೊರಡಿಸಿದ ವೇಳೆ, ನ್ಯಾಯಪೀಠ ಈ ಮಾತು ಹೇಳಿದೆ. ಕೈಲಾಶ್ ವಿರುದ್ಧ ಉತ್ತರ ಪ್ರದೇಶದ ಕಾನೂನು ಬಾಹಿರ ಧಾರ್ಮಿಕ ಮತಾಂತರ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

'ನವದೆಹಲಿಯಲ್ಲಿ ನಡೆಯುತ್ತಿದ್ದ ಧಾರ್ಮಿಕ ಸಭೆಗಳಿಗೆ ಕೈಲಾಶ್ ತಮ್ಮ ಗ್ರಾಮದ ಜನರನ್ನು ಕರೆದುಕೊಂಡು ಹೋಗುತ್ತಿದ್ದರು ಹಾಗೂ ಅವರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರ ಮಾಡಲಾ-ಗುತ್ತಿತ್ತು ಎಂಬುದನ್ನು ತನಿಖಾಧಿಕಾರಿ ದಾಖಲಿಸಿಕೊಂಡಿರುವ ಹೇಳಿಕೆಗಳು ಸ್ಪಷ್ಟವಾಗಿ ಹೇಳುತ್ತವೆ' ಎಂದು ಆದೇಶದಲ್ಲಿ ಹೇಳಲಾಗಿದೆ.

'ಈ ಪ್ರಕರಣದಲ್ಲಿ, ತಮ್ಮ ಸಹೋದರನ ಕುರಿತು ಮಾಹಿತಿ ನೀಡಿರುವ ಮಹಿಳೆ, ಆತ ಮರಳಿ ಬಂದೇ ಇಲ್ಲ ಎಂದು ತಿಳಿಸಿದ್ದಾರೆ. ಅಲ್ಲದೆ, ಕೈಲಾಶ್ ವಿರುದ್ಧ ಗಂಭೀರ ಆರೋಪಗಳನ್ನು ಮಾಡಿರುವ ಕಾರಣ ಅವರ ಅರ್ಜಿ ತಿರಸ್ಕರಿ-ಸಲಾಗಿದೆ' ಎಂದೂ ತಿಳಿಸಲಾಗಿದೆ.

'ಉತ್ತರ ಪ್ರದೇಶದಾದ್ಯಂತ, ಎಸ್‌ಸಿ, ಎಸ್‌ಟಿ, ಆರ್ಥಿಕವಾಗಿ ದುರ್ಬಲರು ಸೇರಿದಂತೆ ಇತರ ಜಾತಿಗಳ ಜನರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಿಸುತ್ತಿರುವ ಕಾನೂನುಬಾಹಿರ ಚಟುವಟಿಕೆಗಳು ನ್ಯಾಯಾಲಯದ ಗಮನಕ್ಕೆ ಬಂದಿವೆ' ಎಂದೂ ಪೀಠ ಹೇಳಿದೆ.

13ನೇ ಪುಟ ನೋಡಿ

‘ಲಿಂಗತ್ವ ಅಲ್ಪಸಂಖ್ಯಾತರಿಗೆ ಮಂಡಳಿ ಸ್ಥಾಪಿಸಿ’

ಬೆಂಗಳೂರು: ಲಿಂಗತ್ವ ಅಲ್ಪಸಂಖ್ಯಾತರ ಅಭಿವೃದ್ಧಿ ಮಂಡಳಿ ಸ್ಥಾಪಿಸಿ ವಾರ್ಷಿಕ ₹200 ಕೋಟಿ ಅನುದಾನ ಒದಗಿಸಬೇಕು ಎಂದು ಸಾಮಾಜಿಕ ನ್ಯಾಯಕ್ಕಾಗಿ ಲಿಂಗತ್ವ ಮತ್ತು ಲೈಂಗಿಕತೆ ಅಲ್ಪಸಂಖ್ಯಾತರ ಮೈತ್ರಿಕೂಟ ಆಗ್ರಹಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮೈತ್ರಿಕೂಟದ ಸದಸ್ಯರಾದ ರೂಮಿ ಹರೀಶ್, ಸವಿತಾ, ಉಮಾ, ಸನಾ ಸುಮನ್, ‘ಲಿಂಗತ್ವ ಅಲ್ಪಸಂಖ್ಯಾತ ಸಮುದಾಯಕ್ಕೆ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಅಭಿವೃದ್ಧಿಗೆ ಸಂವಿಧಾನದ ಆಶೋತ್ತರಗಳನ್ನು ಈಡೇರಿಸಲು ಮಂಡಳಿ ಸ್ಥಾಪಿಸಬೇಕು’ ಎಂದು ಒತ್ತಾಯಿಸಿದರು.

‘ಏಪ್ರಿಲ್ 15 ಅನ್ನು ರಾಷ್ಟ್ರೀಯ ಲಿಂಗತ್ವ ಅಲ್ಪಸಂಖ್ಯಾತರ ದಿನವೆಂದು ಘೋಷಿಸಬೇಕು. ರಾಜ್ಯ ಸರ್ಕಾರದ ಐದು ಗ್ಯಾರಂಟಿಗಳ ಅನುಕೂಲವು ಲಿಂಗತ್ವ ಅಲ್ಪಸಂಖ್ಯಾತರಿಗೂ ಸಿಗುವಂತೆ ಕ್ರಮ ಕೈಗೊಳ್ಳಬೇಕು. ಜೊತೆಗೆ ಲಿಂಗತ್ವ ಅಲ್ಪಸಂಖ್ಯಾತರ ನೀತಿ–2017 ಅನುಷ್ಠಾನ, ಸಮುದಾಯದ ಜನಗಣತಿ ನಡೆಸಬೇಕು’ ಎಂದು ಒತ್ತಾಯಿಸಿದರು.

ಬಹು ಪಾಲಿಕೆಗಳು, ನಗರದ ಎಲ್ಲ ಇಲಾಖೆಗಳ ಆಡಳಿತ ಯಂತ್ರ: ಕರಡು ಮಸೂದೆ

ನಗರಕ್ಕೆ ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ’

● ನವೀನ್ ಮಿನೇಜಸ್

ಮುಖ್ಯಾಂಶಗಳು
- ಅಧಿಕಾರ ಕಳೆದು ಕೊಳ್ಳಲಿರುವ ಬಿಡಿಎ
- ಪಾಲಿಕೆ ವ್ಯಾಪ್ತಿಗೆ ಎಲೆಕ್ಟ್ರಾನಿಕ್ ಸಿಟಿ ಇಂಡಸ್ಟ್ರಿಯಲ್ ಟೌನ್‌ಶಿಪ್ ಪ್ರಾಧಿಕಾರ
- ನಗರ ವ್ಯಾಪ್ತಿ 958 ಚದರ ಕಿಲೋಮೀಟರ್‌ಗೆ ವಿಸ್ತರಣೆ

ಬೆಂಗಳೂರು: ರಾಜ್ಯ ಸರ್ಕಾರದ ಸದ್ಯದ ಯೋಜನೆಯಂತೆಯೇ ಎಲ್ಲವೂ ನಡೆದರೆ, ಬೆಂಗಳೂರು ನಗರಕ್ಕೆ ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ’ (ಜಿಬಿಎ) ಹೆಸರಿನ ಹೊಸ ಆಡಳಿತ ವ್ಯವಸ್ಥೆ ರಚನೆಯಾಗಲಿದೆ.

ಇದಕ್ಕೆ ಯೋಜನೆ ಮತ್ತು ಆರ್ಥಿಕ ಶಕ್ತಿಯೂ ಲಭ್ಯವಾಗಲಿದೆ. ಅಲ್ಲದೆ ಬಹು ಪಾಲಿಕೆಗಳು ಹಾಗೂ ಇಲಾಖೆಗಳ ಮೇಲುಸ್ತುವಾರಿ ಜವಾಬ್ದಾರಿ ಇದರದ್ದಾಗಲಿದೆ.

ನಾಲ್ಕು ಸದಸ್ಯರ ಸಮಿತಿ ಸಿದ್ಧಪಡಿಸಿರುವ ಕರಡು ಮಸೂದೆಯ ಪ್ರಕಾರ, ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಪ್ರಾಧಿಕಾರ (ಜಿಬಿಎ) ರಚನೆಯಾಗಲಿದೆ. ಪಾಲಿಕೆ ಸದಸ್ಯರಿಂದ ಆಯ್ಕೆಯಾಗುವ ಮೇಯರ್‌ಗಳು, ಆಯ್ದ ಪಾಲಿಕೆ ಸದಸ್ಯರು, ನಗರದ ಎಲ್ಲ ಶಾಸಕರು, ತಜ್ಞರು ಸದಸ್ಯರಾಗಿರುತ್ತಾರೆ. ಬೆಸ್ಕಾಂ, ಜಲಮಂಡಳಿ, ನಮ್ಮ ಮೆಟ್ರೊ, ಸಂಚಾರ, ಸಾರಿಗೆ ಇಲಾಖೆ ಸೇರಿದಂತೆ ನಗರಕ್ಕೆ ಸಂಬಂಧಿಸಿದ ಎಲ್ಲ ಇಲಾಖೆಗಳೂ ಈ ಪ್ರಾಧಿಕಾರದಡಿ ಬರಲಿವೆ.

ಹೊಸ ಯೋಜನೆಯಂತೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಭೂ ಬಳಕೆ ಹಾಗೂ ಅಭಿವೃದ್ಧಿ ನಕ್ಷೆಯನ್ನು ಅನುಮೋದಿಸುವ ಅಧಿಕಾರ ಕಳೆದುಕೊಳ್ಳಲಿದೆ. ಹೊಸ ರೂಪ ಹಾಗೂ ಹೆಸರಿನೊಂದಿಗೆ ರಸ್ತೆ, ನೀರುಗಾಲುವೆಯಂತಹ ಬೃಹತ್ ಮೂಲಸೌಕರ್ಯ ಯೋಜನೆಗಳನ್ನು ಕೈಗೊಳ್ಳುವ ಜವಾಬ್ದಾರಿ ಹೊಂದಲಿದೆ.

ಕರಡು ಮಸೂದೆಯಲ್ಲಿ ಬೆಂಗಳೂರು ಆಡಳಿತ ನಿರ್ವಹಣೆಗೆ ಮೂರು ಹಂತದ ವ್ಯವಸ್ಥೆಯನ್ನು ಪ್ರಸ್ತಾಪಿಸಲಾಗಿದ್ದು, ದೇಶದಲ್ಲಿಯೇ ಈ ರೀತಿಯ ಆಡಳಿತ ಪ್ರಯೋಗ ಪ್ರಥಮ ಎನಿಸಲಿದೆ. ಜಿಬಿಎ ಪ್ರಥಮ ಹಂತದಲ್ಲಿದ್ದು, 1ರಿಂದ 10 ಪಾಲಿಕೆಗಳು (ಎಷ್ಟು ತೀರ್ಮಾನವಾಗುತ್ತವೋ ಅಷ್ಟು) ದ್ವಿತೀಯ ಹಂತದಲ್ಲಿದ್ದು, 400 ವಾರ್ಡ್‌ಗಳು ಕೊನೆಯ ಹಂತದಲ್ಲಿ ವಿಕೇಂದ್ರೀಕೃತ ಅಧಿಕಾರ ಹೊಂದಿರುತ್ತವೆ. ಈಗಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರದ್ದಾಗಲಿದೆ.

ಬಿಬಿಎಂಪಿ ಈಗ 708 ಚದರ ಕಿಲೋಮೀಟರ್ ಪ್ರದೇಶದಲ್ಲಿ ವ್ಯಾಪಿಸಿದೆ. ಜಿಬಿಎ ವ್ಯಾಪ್ತಿ ಪಾಲಿಕೆಯ ಆಚೆ ಸುಮಾರು 250 ಚದರ ಕಿಲೋಮೀಟರ್ ಹೆಚ್ಚಾಗಲಿದೆ. ಎಲೆಕ್ಟ್ರಾನಿಕ್ ಸಿಟಿ ಇಂಡಸ್ಟ್ರಿಯಲ್ ಟೌನ್‌ಶಿಪ್ ಪ್ರಾಧಿಕಾರ (ಇಎಲ್‌ಸಿಐಟಿಎ) ಸೇರಿದಂತೆ ಹೊರಭಾಗದಲ್ಲಿ ಹೆಚ್ಚು ಅಭಿವೃದ್ಧಿ ಹೊಂದುತ್ತಿರುವ ಪ್ರದೇಶಗಳನ್ನು ಜಿಬಿಎ ವ್ಯಾಪ್ತಿಗೆ ತರಲಾಗುತ್ತದೆ.

ಬಿಡಿಎ ಇದೀಗ ಹೊಂದಿರುವ ಯೋಜನಾ ಅಧಿಕಾರವನ್ನು ಹೊಂದಲಿರುವ ಜಿಬಿಎ, ರಾಜ್ಯ ಸರ್ಕಾರ ಪಾಲಿಕೆಗಳಿಗೆ ಬಿಡುಗಡೆ ಮಾಡುವ ಅನುದಾನದಲ್ಲಿ ಯಾವ ಪಾಲಿಕೆಗೆ ಎಷ್ಟು ಬಿಡುಗಡೆ ಮಾಡಬೇಕು ಎಂಬುದನ್ನು ನಿರ್ಧರಿಸಲಿದೆ.

ಮೂರು ಹಂತದಲ್ಲಿ ಆಡಳಿತವನ್ನು ಅಳವಡಿಸಿಕೊಳ್ಳುವ ಬದಲು ಬಿಬಿಎಂಪಿಯನ್ನು ವಿಭಜನೆ ಮಾಡಿದರೆ ಯೋಜನೆ ವಿಫಲವಾಗುತ್ತದೆ ಎಂದು ನಾಲ್ಕು ಸದಸ್ಯರ ಸಮಿತಿ ಹೇಳಿದೆ. ದೆಹಲಿಯ ಪಾಲಿಕೆಗಳಲ್ಲಿ ಒಂದು ಸಮೃದ್ಧವಾಗಿದ್ದರೆ ಮತ್ತೊಂದು ಆರ್ಥಿಕ ಸಂಪನ್ಮೂಲವಿಲ್ಲದೆ ಸೊರಗಿದ್ದವು.

ಆದರೆ, ಜಿಬಿಎ ಆಡಳಿತದ ಮೇಲ್ಪಂಕ್ತಿಯಲ್ಲಿ ಇರುವುದರಿಂದ ಪಾಲಿಕೆಗಳಿಗೆ ಆರ್ಥಿಕ ಅಗತ್ಯಕ್ಕೆ ತಕ್ಕಂತೆ ಅನುದಾನ ವಿಭಾಗ ಮಾಡಿ ಅಭಿವೃದ್ಧಿಯಲ್ಲಿ ಸಮತೋಲನ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಸಮಿತಿ ಅಭಿಪ್ರಾಯಪಟ್ಟಿದೆ.



‘ಬೆಂಗಳೂರನ್ನು ಬಿಬಿಎಂಪಿ ನಿರ್ವಹಿಸಲಾಗದು..’

‘ಬೆಂಗಳೂರನ್ನು ಬಿಬಿಎಂಪಿ ನಿರ್ವಹಿಸಲು ಸಾಧ್ಯವಿಲ್ಲ. ಬಿಬಿಎಂಪಿ ವ್ಯಾಪ್ತಿ ಮೀರಿ ನಗರ ಬೆಳೆಯುತ್ತಿದೆ. ತ್ಯಾಜ್ಯ ನಿರ್ವಹಣೆ, ನೀರು, ವಿದ್ಯುತ್ ಸೇವೆಗಳು ಬಿಬಿಎಂಪಿ ವ್ಯಾಪ್ತಿಯಿಂದ ಹೊರಗಿವೆ. ಆದ್ದರಿಂದ, ಮೂರು ಹಂತದ ಆಡಳಿತವನ್ನು ರಚಿಸಲು ಯೋಜಿಸಲಾಗಿದೆ. ಈ ಬಗ್ಗೆ ಶೀಘ್ರವೇ ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹಿಸಲಾಗುವುದು’ ಎಂದು ಬೆಂಗಳೂರು ಅಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ಬಿಬಿಎಂಪಿಗೆ ಮೂರು ಹಂತದ ಆಡಳಿತ ವ್ಯವಸ್ಥೆ

● ಸ್ನೇಹಾ ರಮೇಶ್

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪುನಾರಚನೆಯಾಗಿ ಹೊಸದಾಗಿ ಮೂರು ಹಂತದ ಆಡಳಿತ ವ್ಯವಸ್ಥೆ ಬರಲಿದೆ. ಸಮಗ್ರ ಬೆಂಗಳೂರಿನ ಆಡಳಿತ ನಿರ್ವಹಣೆಯ ಮೇಲಿನ ಹಂತದಲ್ಲಿ ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ’ (ಜಿಬಿಎ) ಇದ್ದರೆ, ಎರಡನೇ ಹಂತದಲ್ಲಿ ಮಹಾನಗರ ಪಾಲಿಕೆಗಳು ಹಾಗೂ ಮೂರನೇ ಹಂತದಲ್ಲಿ ವಾರ್ಡ್‌ಗಳು ಇರಲಿವೆ.

ಬಿಬಿಎಂಪಿಯನ್ನು ಐದು ಪಾಲಿಕೆಗಳನ್ನಾಗಿ ವಿಭಜಿಸುವ ಪ್ರಸ್ತಾವವಿದೆ. ಪಾಲಿಕೆ ಆಡಳಿತ ನಿರ್ವಹಣೆಯಲ್ಲಿ ಸಂಪುಟದೀಯ ಮಾದರಿ ಅಳವಡಿಸಿಕೊಳ್ಳಲಿದ್ದು, ತಲಾ ಒಬ್ಬ ಮೇಯರ್, ಉಪ ಮೇಯರ್ ಜತೆಗೆ ಹತ್ತು ಸದಸ್ಯರ ಸಂಪುಟವೂ ಇರಲಿದೆ. ಆದರೆ, ಈಗ ಇರುವ ಸ್ಥಾಯಿ ಸಮಿತಿಗಳು ರದ್ದಾಗಲಿವೆ.

ಪಾಲಿಕೆಯು ತನ್ನ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಸಂಗ್ರಹ ಮತ್ತು ಅದನ್ನು ವೆಚ್ಚ ಮಾಡುವ ಸಂಪೂರ್ಣ ಅಧಿಕಾರವನ್ನು ಹೊಂದಿರಲಿದೆ. ಆದರೆ, ಒಂದು ಪಾಲಿಕೆಗೂ ಮತ್ತೊಂದು ಪಾಲಿಕೆಗೂ ಆಸ್ತಿ ತೆರಿಗೆಯ ದರದಲ್ಲಿ ಶೇಕಡ 5ರಿಂದ ಶೇ 10ರಷ್ಟು ವ್ಯತ್ಯಾಸಗಳಿರುವ ಸಾಧ್ಯತೆ ಇರುತ್ತದೆ.

ಮೂಲಗಳ ಪ್ರಕಾರ, ‘ಬಿಬಿಎಂಪಿ ಪುನರ್‌ರಚನೆ ಸಮಿತಿಯು (ಬ್ರಾಂಡ್ ಬೆಂಗಳೂರು ಸಮಿತಿ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಐದು ಮಹಾನಗರ ಪಾಲಿಕೆಗಳನ್ನಾಗಿ ಪುನರ್ ರಚಿಸಲು ಯೋಜಿಸಿದೆ. ಪ್ರತಿ ಪಾಲಿಕೆಗೂ ಸರ್ಕಾರದಿಂದ ನೇಮಿಸಲಾದ ಒಬ್ಬ ಆಯುಕ್ತರು ಮತ್ತು ಪ್ರತಿ ವಲಯಕ್ಕೆ ಒಬ್ಬ ವಲಯ ಆಯುಕ್ತರು ಇರುತ್ತಾರೆ. ಆಡಳಿತ ನಿರ್ವಹಣೆಗಾಗಿ ಲೆಕ್ಕಪತ್ರ ಸಮಿತಿ ಮತ್ತು ವಿಷಯ ನಿರ್ವಹಣಾ ಸಮಿತಿಗಳು ಇರಲಿವೆ’.

ಪ್ರತಿ ವಾರ್ಡ್‌ನಲ್ಲೂ ವಾರ್ಡ್ ಸಮಿತಿ ರಚಿಸಲಾಗುತ್ತದೆ. ಶೇ 10ರಷ್ಟು ಮತದಾರರಿಗೆ ಒಬ್ಬರಂತೆ ವಾರ್ಡ್ ಸಮಿತಿಗೆ ಸದಸ್ಯರನ್ನು ಆಯ್ಕೆ ಮಾಡಲಾಗುತ್ತದೆ. ಆಯಾ ವಾರ್ಡ್‌ನ ಸದಸ್ಯರೇ ವಾರ್ಡ್ ಸಮಿತಿಯ ಅಧ್ಯಕ್ಷರೂ ಆಗಿರುತ್ತಾರೆ. ಪ್ರತಿ ಸಮಿತಿಯಲ್ಲೂ ತಲಾ ಹತ್ತು ಮಂದಿ ಮತದಾರ ಗುಂಪಿನ ಪ್ರತಿನಿಧಿಗಳು ಮತ್ತು ನಾಮನಿರ್ದೇಶನ ಹೊಂದಿದ ಸದಸ್ಯರು ಇರಬೇಕೆಂಬ ಶಿಫಾರಸನ್ನು ಮಾಡಲು ಪುನರ್‌ರಚನಾ ಸಮಿತಿ ಮುಂದಾಗಿದೆ ಎಂದು ಮಾಹಿತಿ ಲಭ್ಯವಾಗಿದೆ.

‘ಪ್ರತಿ ಅಭ್ಯರ್ಥಿಯೂ ನಾಮಪತ್ರ ಸಲ್ಲಿಸುವಾಗ ವಾರ್ಡ್ ಸಮಿತಿ ಸದಸ್ಯರ ಆಯ್ಕೆಯಲ್ಲಿ ಆದ್ಯತೆ ಮೇಲೆ ಪರಿಗಣಿಸಲು ಮೂವರ ಹೆಸರನ್ನು ನಾಮನಿರ್ದೇಶನ ಮಾಡಬೇಕು. ಪಾಲಿಕೆ ಸದಸ್ಯರಾಗಿ ಆಯ್ಕೆಯಾದವರು ಅಭ್ಯರ್ಥಿ ಗಳಿಸಿದ ಮತಗಳ ಅನುಪಾತಕ್ಕೆ ತಕ್ಕಂತೆ ಆಡಳಿತದ ಶಿಫಾರಸು ಮಾಡಲಾದ ವ್ಯಕ್ತಿಗಳನ್ನು ವಾರ್ಡ್ ಸಮಿತಿಗಳಿಗೆ ಆಯ್ಕೆ ಮಾಡಲಾಗುತ್ತದೆ’ ಎಂದು ಮೂಲಗಳು ಹೇಳಿವೆ.


ಸಂಗ್ರಹಿಸಿದ ಆಸ್ತಿ ತೆರಿಗೆಯಲ್ಲಿ ಒಂದು ಭಾಗವನ್ನು ವಾರ್ಡ್ ಸಮಿತಿಗಳಿಗಾಗಿ ವೆಚ್ಚ ಮಾಡಬೇಕೆಂಬ ಪ್ರಸ್ತಾವ ಮಂಡಿಸಲು ವಾರ್ಡ್ ಸಮಿತಿಗಳಿಗೆ ಅಧಿಕಾರ ಇರಲಿದೆ. ವಿಶೇಷವಾಗಿ ತೆರಿಗೆ ಸಂಗ್ರಹ ಹೆಚ್ಚಳಕ್ಕೆ ಪೂರಕವಾಗಿ ವಾರ್ಡ್ ಸಮಿತಿಗಳು ಈ ಹಣವನ್ನು ಬಳಸಬಹುದು.

ಬಿಬಿಎಂಪಿ ಪುನರ್‌ರಚನಾ ಕರಡಿನಲ್ಲಿ ಏನಿದೆ?

5	ಮಹಾನಗರ ಪಾಲಿಕೆಗಳ ಸಂಖ್ಯೆ
2	ಪ್ರತಿ ಪಾಲಿಕೆಯಲ್ಲಿರುವ ವಲಯಗಳು
400	ಒಟ್ಟು ವಾರ್ಡ್‌ಗಳ ಸಂಖ್ಯೆ
80	ಪ್ರತಿ ಪಾಲಿಕೆಯ ವಾರ್ಡ್‌ಗಳ ಸಂಖ್ಯೆ
900ರಿಂದ 1,050 ಚ.ಕಿ.ಮೀ.	ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿ
200 ಚದರ ಕಿ.ಮೀ.	ಪ್ರತಿ ಪಾಲಿಕೆಯ ವ್ಯಾಪ್ತಿ

ಜತಿನ್ ದಾಸ್‌ಗೆ ‘ನಂಜುಂಡ ರಾವ್ ರಾಷ್ಟ್ರೀಯ ಪ್ರಶಸ್ತಿ’

ಬೆಂಗಳೂರು: ಕರ್ನಾಟಕ ಚಿತ್ರಕಲಾ ಪರಿಷತ್ತು ನೀಡುವ ‘ಪ್ರೊ.ಎಂ.ಎಸ್. ನಂಜುಂಡ ರಾವ್ ರಾಷ್ಟ್ರೀಯ ಪ್ರಶಸ್ತಿ’ಗೆ ಒಡಿಶಾದ ಕಲಾವಿದ ಜತಿನ್ ದಾಸ್ ಆಯ್ಕೆಯಾಗಿದ್ದಾರೆ.



ಜತಿನ್ ದಾಸ್

ಈ ಪ್ರಶಸ್ತಿಯು ₹1 ಲಕ್ಷ ನಗದು, ಫಲಕ ಒಳಗೊಂಡಿದೆ. ‘ಪದ್ಮಭೂಷಣ ಪ್ರಶಸ್ತಿ’ ಪುರಸ್ಕೃತ ಜತಿನ್ ದಾಸ್ ಅವರು, 71ಕ್ಕೂ ಅಧಿಕ ಏಕವ್ಯಕ್ತಿ ಪ್ರದರ್ಶನ ನೀಡಿದ್ದಾರೆ. ಪ್ರಶಸ್ತಿ ಪ್ರದಾನ ಸಮಾರಂಭ ಇದೇ 5 ರಂದು ಬೆಳಿಗ್ಗೆ 11.30ಕ್ಕೆ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ನಡೆಯಲಿದೆ ಎಂದು ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್ ಅವರು ತಿಳಿಸಿದ್ದಾರೆ.

ಸಮ್ಮೇಳನ ಮಹಾಪೋಷಕರಾಗಿ ಆದಿಚುಂಚನಗಿರಿ ಸ್ವಾಮೀಜಿ

ಬೆಂಗಳೂರು: ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ‘ಮಹಾಪೋಷಕ’ರಾಗಿ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ನಿಯೋಜನೆಗೊಂಡಿದ್ದಾರೆ.



ನಿರ್ಮಲಾನಂದ ನಾಥ ಸ್ವಾಮೀಜಿ

ಡಿಸೆಂಬರ್ 20, 21 ಹಾಗೂ 22ರಂದು ಸಮ್ಮೇಳನ ನಡೆಯಲಿದೆ. ಈ ಸಂಬಂಧ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಹಾಗೂ ಪದಾಧಿಕಾರಿ ಗಳು, ಮಂಡ್ಯದ ಜಿಲ್ಲಾಧಿಕಾರಿ ಕುಮಾರ ಅವರನ್ನು ಒಳಗೊಂಡ ನಿಯೋಗವು ನಿರ್ಮಲಾನಂದನಾಥ ಸ್ವಾಮೀಜಿ ಅವರನ್ನು ಭೇಟಿ ಮಾಡಿ, ಸಮ್ಮೇಳನದ ‘ಮಹಾಪೋಷಕ’ರಾಗುವಂತೆ ಮನವಿ ಮಾಡಿಕೊಂಡಿದ್ದರು. ಇದಕ್ಕೆ ಸ್ವಾಮೀಜಿ ಸಮ್ಮತಿ ಸೂಚಿಸಿದ್ದಾರೆ.

ನಗರದಲ್ಲಿ ಇಂದು


ಕಮಲಾ ಹಂಪನಾ ಅವರಿಗೆ ನುಡಿ–ನಮನ: ಎಲ್.ಜಿ. ಮೀರಾ, ಅತಿಥಿ: ಎಂ. ಪ್ರಕಾಶಮೂರ್ತಿ, ಅಧ್ಯಕ್ಷತೆ: ಕೆ.ಆರ್. ಮುದ್ದುಕೃಷ್ಣ, ಆಯೋಜನೆ ಮತ್ತು ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಳಿಗ್ಗೆ 10.30

2023–24ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ, ಕ್ರೀಡೆ, ಕನ್ನಡ ಸಂಘ, ಎನ್‌ಸಿಸಿ, ಎನ್‌ಎಸ್‌ಎಸ್, ರೋವರ್ಸ್ ಮತ್ತು ರೇಂಜರ್ಸ್, ರೆಡ್‌ಕ್ರಾಸ್ ಸೇರಿ ಇತರೆ ಚಟುವಟಿಕೆಗಳ ಸಮಾರೋಪ ಸಮಾರಂಭ: ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿಗಳು: ಜಿ. ಶೋಭಾ, ಪಿ.ಸಿ. ಕೃಷ್ಣಸ್ವಾಮಿ, ಸುಂದರ್ ರಾಜ್ ವಿ., ಉಪಸ್ಥಿತಿ: ಪಿ.ಟಿ. ಶ್ರೀನಿವಾಸ ನಾಯಕ, ಸ್ಥಳ: ಸರ್ಕಾರಿ ಕಲಾ ಕಾಲೇಜು, ಡಾ. ಅಂಬೇಡ್ಕರ್ ವೀದಿ, ಬೆಳಿಗ್ಗೆ 11

ಹೇಮಾ ವಿನಾಯಕ್ ಪಾಟೀಲರ ‘ಕಲಾ ದರ್ಪಣ’ ಏಕವ್ಯಕ್ತಿ ಕಲಾಕೃತಿಗಳ ಪ್ರದರ್ಶನ: ಉದ್ಘಾಟನೆ:ವಿಶ್ವನಾಥ, ಉಮೇಶ್ ಕುಮಾರ್, ಸ್ಥಳ: ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಡಾ.ಬಿ.ಆರ್. ಅಂಬೇಡ್ಕರ್, ಬಾಬು ಜಗಜೀವನ ರಾಮ್ ಸ್ಮಾರಕ ನಾಟಕೋತ್ಸವ–ಪೌರಾಣಿಕ, ಐತಿಹಾಸಿಕ, ಜಾನಪದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಲಾಮೇಳ–2024: ಆಯೋಜನೆ: ವಿ.ಕೆ.ಎಂ. ಕಲಾವಿದರು, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 3

ಕಮಲಾ ಹಂಪನಾ ಅವರಿಗೆ ನುಡಿನಮನ: ಚಾಲನೆ: ಬರಗೂರು ರಾಮಚಂದ್ರಪ್ಪ, ನುಡಿ ಗೌರವ: ಕೆ.ಎನ್. ರಾಜಣ್ಣ, ವೂಡೇ ಪಿ. ಕೃಷ್ಣ, ಎಚ್.ಎಲ್. ಪುಷ್ಪಾ, ಎಂ.ಎಸ್. ಆಶಾದೇವಿ, ಭಕ್ತರಹಳ್ಳಿ ಕಾಮರಾಜ್, ಸುಕನ್ಯಾ ಮಾರುತಿ, ಶಿವಾನಂದ ತಗಡೂರು, ಸಿ.ಕೆ. ರಾಮೇಗೌಡ, ಜಿ.ಎನ್. ಮೋಹನ್, ಅಮರೇಂದ್ರ ಹೊನ್ನಂಬಳ್ಳಿ, ಸಮೀವುಲ್ಲಾ ಖಾನ್, ಆಯೋಜನೆ: ಬಂಡಾಯ ಸಾಹಿತ್ಯ ಸಂಘಟನೆ, ಕರ್ನಾಟಕ ಲೇಖಕಿಯರ ಸಂಘ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬಹುರೂಪಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಕನ್ನಡ ಜನಶಕ್ತಿ ಕೇಂದ್ರ, ಸೌಹಾರ್ದ ಕರ್ನಾಟಕ, ಅಖಿಲ ಕರ್ನಾಟಕ ಮಹಮದೀಯರ ಕನ್ನಡ ವೇದಿಕೆ, ಸ್ಥಳ: ಗಾಂಧಿ ಭವನ, ಕುಮಾರ ಕೃಪಾ ರಸ್ತೆ, ಸಂಜೆ 5



ಬರಗೂರು ರಾಮಚಂದ್ರಪ್ಪ

ಪ್ರವಚನ ವಾಹಿನಿ: ‘ಶ್ರೀಮದ್ ರಾಮಾನುಜರ ಮಾನವೀಯತೆ, ಅಂಡಾಳ್‌ರ, ತಿರುಪ್ಪಾವೈ’ ಕುರಿತು ಉಪನ್ಯಾಸ: ಎನ್.ಕೆ. ರಾಮಶೇಷನ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ)ಕಳುಹಿಸಿ.

nagaradalli_indu@prajavani.co.in

ಆನ್‌ಲೈನ್‌ನಲ್ಲಿ ಹಣ ವರ್ಗಾವಣೆ ಮಾಡಿಸಿಕೊಂಡಿದ್ದ ಆರೋಪಿಗಳು

ಕತ್ತಿಯಿಂದ ಹಲ್ಲೆ ನಡೆಸಿ ಹಣಕ್ಕೆ ಬೇಡಿಕೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಮೊಬೈಲ್, ಹಣ ಕಸಿದು ಪರಾರಿ ಆರೋಪ
- ದೂರು ಆಧರಿಸಿ ಆರೋಪಿಗಳ ಬಂಧನ

ಬೆಂಗಳೂರು: ಪ್ರತ್ಯೇಕ ಪ್ರಕರಣಗಳಲ್ಲಿ, ಪಾದಚಾರಿಗಳಿಂದ ಮೊಬೈಲ್ ಹಾಗೂ ಹಣ ಕಸಿದು ಪರಾರಿಯಾಗಿದ್ದ ನಾಲ್ವರು ಆರೋಪಿಗಳನ್ನು ಎಚ್‌ಎಎಲ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜೂನ್ 23ರಂದು ಠಾಣಾ ವ್ಯಾಪ್ತಿಯ ಹೊರವರ್ತುಲ ರಸ್ತೆಯಲ್ಲಿ ನಡೆದು ತೆರಳುತ್ತಿದ್ದ ವ್ಯಕ್ತಿಯೊಬ್ಬರಿಂದ ಮೊಬೈಲ್ ಕಸಿದು ಪರಾರಿಯಾಗಿದ್ದ ಬಿಹಾರದ ರಾಕೇಶ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ಬಂಧಿತನಿಂದ ₹20 ಸಾವಿರ ಮೌಲ್ಯದ ಮೊಬೈಲ್ ಜಪ್ತಿ ಮಾಡಿಕೊಳ್ಳಲಾಗಿದೆ.

'ಹೊರವರ್ತುಲ ರಸ್ತೆಯಲ್ಲಿರುವ ಎಟಿಎಂನಲ್ಲಿ ವ್ಯಕ್ತಿಯೊಬ್ಬರು ₹4 ಸಾವಿರ ಹಣ ಡ್ರಾ ಮಾಡಿಕೊಂಡು ಮನೆಗೆ ನಡೆದು ತೆರಳುತ್ತಿದ್ದರು. ಆಗ ಬೈಕ್‌ನಲ್ಲಿ ಬಂದ ಇಬ್ಬರು ಆರೋಪಿಗಳು, ಮೊಬೈಲ್ ಹಾಗೂ ಹಣ ಕಸಿದು ಪರಾರಿ ಆಗಿದ್ದರು' ಎಂದು ಪೊಲೀಸರು ಹೇಳಿದರು.

ಮತ್ತೊಂದು ಪ್ರಕರಣದಲ್ಲಿ ವಿಭೂತಿಪುರದ ಶಾಲೆಯ ಬಳಿ ವ್ಯಕ್ತಿಯೊಬ್ಬರಿಂದ ಮೊಬೈಲ್ ಕಸಿದು ಪರಾರಿಯಾಗಿದ್ದ ಆರೋಪಿಗಳಾದ


ಈರಣ್ಣ


ರಾಜೇಶ್ ಕುಮಾರ್


ರೈಯಾನ್ ಮ್ಯಾಥ್ಯು

ಈರಣ್ಣ, ರಾಜೇಶ್‌ಕುಮಾರ್ ಹಾಗೂ ರಯಾನ್ ಮ್ಯಾಥ್ಯು ಎಂಬುವವರನ್ನು ಬಂಧಿಸಲಾಗಿದೆ.

'ಹಣ ನೀಡುವಂತೆ ಬೆದರಿಕೆ ಹಾಕಿದ್ದ ಆರೋಪಿಗಳು, ಹಣವಿಲ್ಲದ ಎಂದಾಗ ಕತ್ತಿಯಿಂದ ಹಲ್ಲೆ ನಡೆಸಿದ್ದರು. ಕ್ಯೂಆರ್ ಕೋಡ್ ಮೂಲಕ ₹4 ಸಾವಿರ ವರ್ಗಾವಣೆ ಮಾಡಿಸಿಕೊಂಡು ಪರಾರಿ ಆಗಿದ್ದರು. ಮೊಬೈಲ್ ಸಹ ಕಸಿದುಕೊಂಡಿದ್ದರು. ಹಣ ಕಳೆದುಕೊಂಡವರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಆರೋಪಿಗಳಿಂದ ₹50 ಸಾವಿರ ಮೌಲ್ಯದ ಎರಡು ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಆಭರಣ ಕಳ್ಳತನ–ಬಂಧನ: ಮನೆಗಳಿಗೆ ನುಗ್ಗಿ ಚಿನ್ನಾಭರಣ ಹಾಗೂ ನಗದು ದೋಚಿ ಪರಾರಿಯಾಗುತ್ತಿದ್ದ ಎಚ್‌ಎಎಲ್‌ನ ನಲ್ಲೂರು ಫಾರಂ ನಿವಾಸಿ ಮಲ್ಲಿಕಾರ್ಜುನ್(24) ಎಂಬಾತನನ್ನು ಇದೇ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಆರೋಪಿಯಿಂದ 25 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ.

'ಠಾಣಾ ವ್ಯಾಪ್ತಿಯ ಮನೆಯೊಂದರ ಮಾಲೀಕರು, ಕಿಟಕಿ ಬಳಿ ಮನೆ ಕೀಲಿಯನ್ನು ಬಚ್ಚಿಟ್ಟು ಕೆಲಸಕ್ಕೆ ತೆರಳಿದ್ದರು. ಮನೆ ಬಳಿಗೆ ಬಂದಿದ್ದ ಆರೋಪಿ ಕೀಲಿಯನ್ನು ಹುಡುಕಿ ಬೀಗ ತೆಗೆದು ಚಿನ್ನಾಭರಣ ಕಳವು ಮಾಡಿದ್ದ' ಎಂದು ಪೊಲೀಸರು ಹೇಳಿದರು.

'ಆರೋಪಿ ಮಲ್ಲಿಕಾರ್ಜುನ್ ಕಳ್ಳತನವನ್ನೇ ವೃತ್ತಿ ಮಾಡಿಕೊಂಡಿದ್ದ. ಈತನ ವಿರುದ್ಧ ಈ ಹಿಂದೆ ಜೀವನ್ ಭಿಮಾ ನಗರ ಠಾಣೆಯಲ್ಲಿ ನಾಲ್ಕು, ಎಚ್‌ಎಎಲ್ ಠಾಣೆಯಲ್ಲಿ ಎರಡು ಹಾಗೂ ಬಾಗಲಗುಂಟೆ ಠಾಣೆಯಲ್ಲಿ ವಿವಿಧ ಪ್ರಕರಣಗಳು ದಾಖಲಾಗಿದ್ದವು' ಎಂದು ಪೊಲೀಸರು ತಿಳಿಸಿದರು.

ಲೈಂಗಿಕ ದೌರ್ಜನ್ಯ: ಅಪರಾಧಿಗೆ 20 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಅಪರಾಧಿಗೆ 20 ವರ್ಷಗಳ ಕಠಿಣ ಜೈಲು ಶಿಕ್ಷೆ ಹಾಗೂ ₹1 ಲಕ್ಷ ದಂಡ ವಿಧಿಸಿ, 1ನೇ ತ್ವರಿತಗತಿ ನ್ಯಾಯಾಲಯ ಆದೇಶಿಸಿದೆ.

ಲಗ್ಗೆರೆಯ ನಿವಾಸಿ ದೇವರಾಜ್(21) ಶಿಕ್ಷೆಗೆ ಒಳಗಾದ ಅಪರಾಧಿ.

2021ರಲ್ಲಿ ದೇವರಾಜ್ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ. ಆತನ ವಿರುದ್ಧ ಪೋಕ್ಸೊ ಕಾಯ್ದೆ ಅಡಿ ನಂದಿನಿ ಲೇಔಟ್ ಠಾ ಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆರೋಪಿಯನ್ನು ಪೊಲೀಸರು ಬಂಧಿಸಿ ವಿಚಾರಣೆ ನಡೆಸಿದ್ದರು. ಬಳಿಕ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಕೋರ್ಟ್ ಅಪರಾಧಿಗೆ ಶಿಕ್ಷೆ ವಿಧಿಸಿದೆ.

ಹೊಸ ಕಾನೂನು: ಮೊದಲ ದಿನ 39 ಪ್ರಕರಣ

ಬೆಂಗಳೂರು: ಕ್ರಿಮಿನಲ್ ಅಪರಾಧಕ್ಕೆ ಸಂಬಂಧಿಸಿದಂತೆ ಹೊಸದಾಗಿ ಜಾರಿಯಾದ ಮೂರು ಕಾಯ್ದೆಗಳ ಅಡಿಯಲ್ಲಿ ಮೊದಲನೇ ದಿನ (ಜುಲೈ 1ರಂದು) ಬೆಂಗಳೂರು ನಗರದಲ್ಲಿ ಒಟ್ಟು 39 ಪ್ರಕರಣಗಳು ದಾಖಲಾಗಿವೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

ನೂತನ ಕಾನೂನಿನ ಅನ್ವಯವೇ ನಗರದಲ್ಲಿ ಮೊದಲನೇ ದಿನ ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ. ಯಾವುದೇ ಸಮಸ್ಯೆ ಆಗಿಲ್ಲ. ತಾಂತ್ರಿಕ ಸಮಸ್ಯೆಗಳೂ ಕಾಣಿಸಿಲ್ಲ ಎಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಅಡಿ 32, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಅಡಿ 7 ಪ್ರಕರಣಗಳು ದಾಖಲಾಗಿವೆ ಎಂದು ಮಾಹಿತಿ ನೀಡಿದರು.

ಅಪಘಾತ: ಬೈಕ್ ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್‌ಬಿಐ ಲೇಔಟ್‌ನಲ್ಲಿ ನಿಯಂತ್ರಣ ತಪ್ಪಿ ರಸ್ತೆಯ ಮೇಲೆ ಬಿದ್ದ ಬೈಕ್ ಸವಾರನ ತಲೆಯ ಮೇಲೆ ನೀರಿನ ಟ್ಯಾಂಕರ್ ವಾಹನದ ಚಕ್ರ ಹರಿದು ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಪುಟ್ಟೇನಹಳ್ಳಿ ನಿವಾಸಿ ಕಿರಣ್(19) ಮೃತಪಟ್ಟವರು. ಮಂಡ್ಯ ಜಿಲ್ಲೆ, ಕೆ.ಆರ್. ಪೇಟೆಯ ಕಿರಣ್ ಅವರು ಆರ್‌ಬಿಐ ಲೇಔಟ್‌ನ ಬೇಕರಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಮಂಗಳವಾರ ಬೆಳಿಗ್ಗೆ ಬೈಕ್‌ನಲ್ಲಿ ದಿನಸಿ ಸಾಮಗ್ರಿ ತರಲು ಅಂಗಡಿಗೆ ತೆರಳಿ ವಾಪಾಸ್ ಆಗುತ್ತಿದ್ದರು. ಆಗ ಅವಘಡ ಸಂಭವಿಸಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಘಟನೆ ಸಂಬಂಧ ನೀರಿನ ಟ್ಯಾಂಕರ್ ವಾಹನವನ್ನು ಜಪ್ತಿ ಮಾಡಿಕೊಂಡು, ಚಾಲಕನ ವಿಚಾರಣೆ ನಡೆಸಲಾಗಿದೆ ಕುಮಾರಸ್ವಾಮಿ ಲೇಔಟ್ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾನ್‌ಸ್ಟೆಬಲ್ ಸುಳಿವಿಗೆ 250 ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಪತ್ತೆಯಾಗಿ ತೆರೆದ ಬಾವಿಯಲ್ಲಿ ಶವವಾಗಿ ಪತ್ತೆಯಾದ ಮಡಿವಾಳ ಪೊಲೀಸ್ ಠಾಣೆಯ ಕಾನ್‌ಸ್ಟೆಬಲ್ ಶಿವರಾಜ್ ಅವರ ಸುಳಿವಿಗಾಗಿ ಪೊಲೀಸರು, ನಗರದ 250 ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಪರಿಶೀಲಿಸಿದ್ದರು ಎಂದು ಗೊತ್ತಾಗಿದೆ.

ಶಿವರಾಜ್ ಅವರ ಮೃತದೇಹ ಸೋಮವಾರ ಜ್ಞಾನಭಾರತಿ ಆವರಣ ತೆರೆದ ಬಾವಿಯಲ್ಲಿ ಪತ್ತೆಯಾಗಿತ್ತು. ಜೂನ್ 25ರಂದು ಅವರು ನಾಪತ್ತೆ ಆಗಿದ್ದರು.

ನಾಪತ್ತೆ ಪ್ರಕರಣದ ದೂರು ದಾಖಲು ಮಾಡಿಕೊಂಡಿದ್ದ ಸುಬ್ರಮಣ್ಯಪುರ ಠಾಣೆ ಪೊಲೀಸರು ಹುಡುಕಾಟ ನಡೆಸಿದ್ದರು. ಮತ್ತೊಂದೆಡೆ ಮಡಿವಾಳ ಠಾಣೆ ಪೊಲೀಸರೂ ತಮ್ಮ ಠಾಣೆ ಸಿಬ್ಬಂದಿಗಾಗಿ ಶೋಧ ನಡೆಸಿದ್ದರು.

'ಶಿವರಾಜ್ ಅವರನ್ನು ಪತ್ತೆ ಮಾಡಲು ಹಲವು ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲನೆ ನಡೆಸಲಾಗಿತ್ತು. ಆದರೂ ಸುಳಿವು ಸಿಕ್ಕಿರಲಿಲ್ಲ. ಕೊನೆಯಲ್ಲಿ ಶಿವರಾಜ್ ಅವರು ಜ್ಞಾನಭಾರತಿ ಮೆಟ್ರೊ ನಿಲ್ದಾಣಕ್ಕೆ ಬಂದು ವಾಹನ ನಿಲುಗಡೆ ಸ್ಥಳದಲ್ಲಿ ಬೈಕ್ ನಿಲುಗಡೆ ಮಾಡಿದ್ದು ಕ್ಯಾಮೆರಾವೊಂದರಲ್ಲಿ ಸೆರೆಯಾಗಿತ್ತು. ನಂತರ, ನೀರಿನ ಬಾಟಲಿ ಹಾಗೂ ಬ್ಯಾಗ್ ಹಿಡಿದು ಬೆಂಗಳೂರು ವಿ.ವಿ ಆವರಣದ ಒಳಗೆ ನಡೆದುಕೊಂಡು ತೆರಳಿದ್ದ ದೃಶ್ಯ ಇನ್ನೊಂದು ಕ್ಯಾಮೆರಾದಲ್ಲಿ ಸೆರೆ ಆಗಿತ್ತು. ಅದನ್ನು ಆಧರಿಸಿ ಸುತ್ತಮುತ್ತ ಹುಡುಕಾಟ ನಡೆಸಿದಾಗ ಬಾವಿಯಲ್ಲಿ ಮೃತದೇಹ ಪತ್ತೆ ಆಯಿತು' ಎಂದು ಪೊಲೀಸರು ಹೇಳಿದರು.

'ಆರಂಭದಲ್ಲಿ ಶಿವರಾಜ್ ಅವರನ್ನು ದುಷ್ಕರ್ಮಿಗಳು ಕೊಲೆ ಮಾಡಿರಬಹುದು ಎಂದು ಶಂಕಿಸಲಾಗಿತ್ತು. ಪ್ರಕರಣದ ತನಿಖೆ ನಡೆಸಿದ ಬಳಿಕ ಅವರು ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

ಕೌಟುಂಬಿಕ ಕಲಹದ ವಿಚಾರವಾಗಿ ಶಿವರಾಜ್ ಸೇರಿ ಅವರ ಕುಟುಂಬಸ್ಥರ ವಿರುದ್ಧ ದಾವಣಗೆರೆ ಪೊಲೀಸ್ ಠಾಣೆಗೆ ಮಹಿಳೆಯೊಬ್ಬರು ದೂರು ನೀಡಿದ್ದರು. ಆ ಮಹಿಳೆ ಕರೆ ಮಾಡಿ, ಶಿವರಾಜ್‌ಗೆ ಬೆದರಿಕೆ ಹಾಕುತ್ತಿದ್ದರು ಎನ್ನಲಾಗಿದೆ. ಇದರಿಂದ ನೊಂದಿದ್ದ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ದೂರು ನೀಡಲಾಗಿದೆ.

₹1.38 ಕೋಟಿ ಮೌಲ್ಯದ ಕಳಪೆ ಗುಣಮಟ್ಟದ ಬಟ್ಟೆ ಜಪ್ತಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿಗಳು

ಬೆಂಗಳೂರು: ಪ್ರತಿಷ್ಠಿತ ಕಂಪನಿಗಳ ಬ್ರ್ಯಾಂಡ್‌ಗಳ ಹೆಸರಿನಲ್ಲಿ ಕಳಪೆ ಗುಣಮಟ್ಟದ ಬಟ್ಟೆಗಳನ್ನು ಮಾರಾಟ ಮಾಡುತ್ತಿದ್ದ ಬಿಇಎಂಎಲ್ ಲೇಔಟ್‌ನ ಅಂಗಡಿಯೊಂದರ ಮೇಲೆ ಸಿಸಿಬಿ ಆರ್ಥಿಕ ಅಪರಾಧ ದಳದ ಪೊಲೀಸರು ದಾಳಿ ನಡೆಸಿ, ₹1.38 ಕೋಟಿ ಮೌಲ್ಯದ ಬಟ್ಟೆಗಳನ್ನು ಜಪ್ತಿ ಮಾಡಿದ್ದಾರೆ.

ನೈಕಿ, ಪೂಮಾ, ಅಡಿದಾಸ್ ಸೇರಿದಂತೆ ಆರು ಕಂಪನಿಗಳ ಹೆಸರಿನಲ್ಲಿ ಕಳಪೆ ಗುಣಮಟ್ಟದ ಬಟ್ಟೆಗಳನ್ನು ಮಾರಾಟ ಮಾಡುತ್ತಿದ್ದ ಮಾಹಿತಿ ಆಧರಿಸಿ ಸಿಸಿಬಿ ಪೊಲೀಸರು ಕಾರ್ಯಾಚರಣೆ ನಡೆಸಿದ್ದರು.

ಕಳಪೆ ಗುಣಮಟ್ಟದ ಬಟ್ಟೆ ಮಾರಾಟ ಮಾಡುತ್ತಿದ್ದ ಬಗ್ಗೆ ವ್ಯಕ್ತಿಯೊಬ್ಬರು ಮಾಹಿತಿ ನೀಡಿದ್ದರು. ಆ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಬಿಇಎಂಎಲ್ ಲೇಔಟ್‌ನ ನಿವಾಸಿ ನರಸಿಂಹರಾಜು(38) ಎಂಬುವರನ್ನು ಬಂಧಿಸಲಾಗಿದೆ ಎಂದು ಸಿಸಿಬಿ ಪೊಲೀಸರು ತಿಳಿಸಿದರು.

'ಆರೋಪಿಯ ವಿರುದ್ಧ ರಾಜರಾಜೇಶ್ವರಿನಗರ ಪೊಲೀಸ್ ಠಾಣೆಯಲ್ಲಿ ಹಕ್ಕುಸ್ವಾಮ್ಯ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ಆರೋಪಿ ಎಲ್ಲಿಂದ ಕಳಪೆ ಗುಣಮಟ್ಟದ ಬಟ್ಟೆಗಳನ್ನು ಖರೀದಿಸಿ ತಂದು ಮಾರಾಟ ಮಾಡುತ್ತಿದ್ದರು ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ' ಎಂದರು.

ನಾಲ್ವರು ಡ್ರಗ್ಸ್ ಪೆಡ್ಲರ್‌ಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಕಡೆ ಕಾರ್ಯಾಚರಣೆ ನಡೆಸಿದ ಸಿಸಿಬಿ, ಕೋಣನಕುಂಟೆ ಹಾಗೂ ವಿ.ವಿ ಪುರಂ ಠಾಣೆ ಪೊಲೀಸರು, ಇಬ್ಬರು ವಿದೇಶಿ ಪ್ರಜೆಗಳೂ ಸೇರಿ ನಾಲ್ವರು ಡ್ರಗ್ಸ್ ಪೆಡ್ಲರ್‌ಗಳನ್ನು ಬಂಧಿಸಿದ್ದಾರೆ.

ಬಂಧಿತರಿಂದ ಅಂದಾಜು ₹18 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಮೋಜಿನ ಜೀವನಕ್ಕಾಗಿ ಡ್ರಗ್ಸ್ ಮಾರಾಟ ದಂಧೆ: ವಿದ್ಯಾರಣ್ಯಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗ್ರಾಹಕರಿಗೆ ಡ್ರಗ್ಸ್ ಪೂರೈಸುತ್ತಿದ್ದ ಘಾನಾ ದೇಶದ ಕೈರಿಲ್ (23) ಹಾಗೂ ನೈಜೀರಿಯಾದ ಇಮ್ಯಾನುವೆಲ್ (27) ಬಂಧಿತ ಆರೋಪಿಗಳು.

ಆರೋಪಿ ಇಮ್ಯಾನುವೆಲ್ ವಿರುದ್ಧ ಈ ಹಿಂದೆಯೂ ವಿದ್ಯಾರಣ್ಯಪುರ ಹಾಗೂ ಪುಲಕೇಶಿನಗರ ಠಾಣೆಗಳಲ್ಲಿ ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರಕರಣಗಳು ದಾಖಲಾಗಿದ್ದವು.

'ಆರೋಪಿಗಳಿಂದ ಎಂಡಿಎಂಎ ಕ್ರಿಸ್ಟಲ್, ಎಕ್ಸ್‌ಟಸಿ ಪಿಲ್ಸ್ , ಕೊಕೇನ್, ಬೈಕ್ ಜಪ್ತಿ ಮಾಡಲಾಗಿದೆ. ಇದರ ಮೌಲ್ಯ ₹12 ಲಕ್ಷ ಎಂದು ಅಂದಾಜಿಸಲಾಗಿದೆ. ಇಬ್ಬರೂ ಆರೋಪಿಗಳು ವಿದ್ಯಾರ್ಥಿ ವೀಸಾ ಪಡೆದು ನಗರಕ್ಕೆ ಬಂದು ನೆಲೆಸಿದ್ದರು. ಮೋಜಿನ ಜೀವನ ನಡೆಸಲು ಡ್ರಗ್ಸ್ ಪೂರೈಕೆ ದಂಧೆಗೆ ಇಳಿದಿದ್ದರು. ಗೋವಾ, ಮುಂಬೈ ಹಾಗೂ ದೆಹಲಿಯಲ್ಲಿ ವಾಸವಾಗಿರುವ ಘಾನಾ ಹಾಗೂ ನೈಜೀರಿಯಾ ದೇಶದ ಪ್ರಜೆಗಳಿಂದ ಡ್ರಗ್ಸ್ ಖರೀದಿಸಿ ಬೆಂಗಳೂರಿನ ಗ್ರಾಹಕರಿಗೆ ಪೂರೈಸುತ್ತಿದ್ದರು. ಎಂಡಿಎಂಎ ಕ್ರಿಸ್ಟಲ್‌ನ ಒಂದು ಗ್ರಾಂಗೆ ₹ 10 ಸಾವಿರದಿಂದ ₹12 ಸಾವಿರ, ಒಂದು ಎಕ್ಸ್‌ಟಸಿ ಪಿಲ್ಸ್ ಅನ್ನು ₹5 ಸಾವಿರದಿಂದ ₹ 6 ಸಾವಿರಕ್ಕೆ ಮಾರಾಟ ಮಾಡುತ್ತಿದ್ದರು' ಎಂದು ಸಿಸಿಬಿ ಪೊಲೀಸರು ಹೇಳಿದರು.

ಪಾಪ್ಪಿ ಸ್ಟ್ರಾ ಜಪ್ತಿ: ಡ್ರಗ್ಸ್ ಹಾಗೂ ಪಾಪ್ಪಿ ಸ್ಟ್ರಾ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಕೋಣನಕುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಂಗನಾಥ್ ಕಾಲೊನಿಯ ವಿಕಾಸ್(23) ಬಂಧಿತ.

ಆರೋಪಿಯಿಂದ 2 ಕೆ.ಜಿ. 20 ಗ್ರಾಂ ಮಾದಕ ವಸ್ತು ಹಾಗೂ 10 ಕೆ.ಜಿ. 600 ಗ್ರಾಂ ಪಾಪ್ಪಿ ಸ್ಟ್ರಾಗಳನ್ನು ಜಪ್ತಿ ಮಾಡಲಾಗಿದೆ. ಇದರ ಮೌಲ್ಯ ₹1.80 ಲಕ್ಷವೆಂದು ಅಂದಾಜಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ದೊಡ್ಡಕಲ್ಲಸಂದ್ರದಲ್ಲಿ ಗ್ರಾಹಕರಿಗೆ ಡ್ರಗ್ಸ್ ಪೂರೈಸುತ್ತಿದ್ದ ಮಾಹಿತಿ ಆಧರಿಸಿ ದಾಳಿ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದರು.

ಕೌಟುಂಬಿಕ ಕಲಹ: ಆತ್ಮಹತ್ಯೆ

ಬೆಂಗಳೂರು: ಕೌಟುಂಬಿಕ ಕಲಹದಿಂದ ಸೊಸೆಯೊಂದಿಗೆ ಮನಸ್ತಾಪ ಮಾಡಿಕೊಂಡಿದ್ದ ಅತ್ತೆ–ಮಾವ ಹಳೇ ಬೈಯಪ್ಪನಹಳ್ಳಿಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಸಂಬಂಧ ಬೈಯಪ್ಪನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಳೇ ಬೈಯಪ್ಪನಹಳ್ಳಿ ನಿವಾಸಿಗಳಾದ ಚಂದ್ರಶೇಖರ್(54) ಮತ್ತು ಅವರ ಪತ್ನಿ ಶಾರದಮ್ಮ(46) ಆತ್ಮಹತ್ಯೆ ಮಾಡಿಕೊಂಡವರು.

ಸೋಮವಾರ ಸಂಜೆ ಅವರು ಆತ್ಮಹತ್ಯೆ ಮಾಡಿಕೊಂಡಿದ್ದು, ಅಂದೇ ರಾತ್ರಿ ಅವರ ಕಿರಿಯ ಮಗ ಮನೆಗೆ ಬಂದಾಗ ವಿಷಯ ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

'ಚಂದ್ರಶೇಖರ್ ಹಾಗೂ ಶಾರದಮ್ಮ ಅವರು ತಮ್ಮ ಹಿರಿಯ ಮಗ ಪ್ರಶಾಂತ್ ಹಾಗೂ ಕಿರಿಯ ಮಗನ ಜತೆ ನೆಲೆಸಿದ್ದರು. ಪ್ರಶಾಂತ್ ಕೆಲಸಕ್ಕೆ ಹೋಗುತ್ತಿರಲಿಲ್ಲ. ಕಿರಿಯ ಪುತ್ರ ಎಸ್ಸೆಸ್ಸೆಲ್ಸಿ ಓದುತ್ತಿದ್ದರು. ಕೆಲವು ತಿಂಗಳ ಹಿಂದಷ್ಟೇ ಪ್ರಶಾಂತ್ ಅವರಿಗೆ ಮದುವೆ ಮಾಡಲಾಗಿತ್ತು. ಕೌಟುಂಬಿಕ ವಿಚಾರಕ್ಕೆ ಅತ್ತೆ–ಮಾವ ಹಾಗೂ ಸೊಸೆ ಮಧ್ಯೆ ಗಲಾಟೆ ನಡೆಯುತ್ತಿತ್ತು ಎನ್ನಲಾಗಿದೆ.

ಪ್ರಶಾಂತ್ ಮದ್ಯವ್ಯಸನಿ ಆಗಿದ್ದರು. ಅದರಿಂದ ಬೇಸರಗೊಂಡಿದ್ದ ಸೊಸೆ, ಮನೆ ಬಿಟ್ಟು ತವರು ಮನೆ ಸೇರಿದ್ದರು. ಈ ಮಧ್ಯೆ ರಾಜಿ ಸಂಧಾನ ನಡೆಸಲಾಗಿತ್ತು. ಅವರು ಮನೆಗೆ ಬರಲು ಒಪ್ಪಿರಲಿಲ್ಲ. ಪತಿ ಬೇರೆ ಮನೆ ಮಾಡಿದರೆ ಮಾತ್ರ ಬರುವುದಾಗಿ ಷರತ್ತು ಹಾಕಿದ್ದರು. ಇದಕ್ಕೆ ಚಂದ್ರಶೇಖರ್ ಅವರು ಒಪ್ಪಿರಲಿಲ್ಲ. ಸೊಸೆ ಮನೆಗೆ ವಾಪಸ್ ಆಗದಿರುವ ವಿಷಯದಿಂದ ಬೇಸರಗೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ' ಎಂದು ಮೂಲಗಳು ತಿಳಿಸಿವೆ.

ಕಣ್ಣು ಕುಕ್ಕುವ ಎಲ್ಇಡಿ ದೀಪ: 239 ಪ್ರಕರಣ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಕಣ್ಣುಕುಕ್ಕುವ ಎಲ್ಇಡಿ ದೀಪ ಅಳವಡಿಸಿಕೊಂಡ ವಾಹನಗಳ ವಿರುದ್ಧ ಪಶ್ಚಿಮ ಸಂಚಾರ ವಿಭಾಗದ ಪೊಲೀಸರು ಕೇಂದ್ರ ಮೋಟರು ವಾಹನ ಕಾಯ್ದೆ ಪ್ರಕಾರ 239 ಪ್ರಕರಣ ದಾಖಲಿಸಿಕೊಂಡಿದ್ದಾರೆ' ಎಂದು ಪಶ್ಚಿಮ ಸಂಚಾರ ವಿಭಾಗದ ಡಿಸಿಪಿ ಅನಿತಾ ಬಿ. ಹದ್ದಣ್ಣವರ್ ಹೇಳಿದರು.

'ನಗರದಲ್ಲಿ ಇತ್ತೀಚೆಗೆ ಕಣ್ಣುಕುಕ್ಕುವ ಎಲ್ಇಡಿ ದೀಪ ಅಳವಡಿಸಿಕೊಂಡಿರುವ ವಾಹನಗಳ ಸಂಖ್ಯೆ ಹೆಚ್ಚಾಗುತ್ತಿದೆ. ಇದರಿಂದ, ರಸ್ತೆ ಅಪಘಾತಗಳ ಪ್ರಕರಣ ಸಂಖ್ಯೆಯೂ ಹೆಚ್ಚುತ್ತಿದೆ. ಜುಲೈ 1ರಂದು ಪಶ್ಚಿಮ ಸಂಚಾರ ವಿಭಾಗದ ಎಲ್ಲ ಸಂಚಾರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿ ಪ್ರಕರಣಗಳನ್ನು ದಾಖಲಿಸಿ ಕೊಳ್ಳಲಾಗಿದೆ. ವಾಹನ ಸವಾರರಲ್ಲಿ ಸಂಚಾರ ನಿಯಮಗಳನ್ನು ಪಾಲಿಸುವಂತೆ ಜಾಗೃತಿ ಸಹ ಮೂಡಿಸಲಾಗಿದೆ' ಎಂದು ತಿಳಿಸಿದರು.

ಕಳ್ಳನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ ತಾಯಿ, ಮಗಳು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರಸಿದ್ಧಿನಗರದ ಮನೆಯೊಂದರಲ್ಲಿ ಚಿನ್ನಾಭರಣ, ನಗದು ಹಾಗೂ ಆಸ್ತಿ ದಾಖಲೆಗಳನ್ನು ದೋಚಿ ಪರಾರಿಯಾಗಲು ಯತ್ನಿಸಿದ್ದ ಆರೋಪಿಯನ್ನು ತಾಯಿ–ಮಗಳು 15 ನಿಮಿಷ ತಡೆದು ನಿಲ್ಲಿಸಿ, ಪೊಲೀಸರಿಗೆ ಒಪ್ಪಿಸಿದ್ದಾರೆ.

ವರಸಿದ್ಧಿನಗರದ ನಿವಾಸಿಗಳಾದ ಕಾವ್ಯಶ್ರೀ (29) ಹಾಗೂ ಅವರ ತಾಯಿ ಭಾಗ್ಯ (49) ಅವರು ಸಾಹಸ ತೋರಿದ್ದು, ಕಳ್ಳನನ್ನು ಹಿಡಿಯಲು ಸ್ಥಳೀಯರು ನೆರವಾಗಿದ್ದಾರೆ.

ಕಾವ್ಯಶ್ರೀ ವಿಮಾ ಕಂಪನಿಯ ಉದ್ಯೋಗಿ. ಭಾಗ್ಯ ಅವರು ಗೃಹಿಣಿ. ಕಳವು ಮಾಡಲು ಯತ್ನಿಸಿದ ರಾಜಾಜಿ ನಗರದ ಲೋಕನಾಥ್ ಎಂಬಾತನನ್ನು ಬ್ಯಾಡರಹಳ್ಳಿ ಠಾಣೆಗೆ ಒಪ್ಪಿಸಲಾಗಿದೆ.

'ಕಾವ್ಯಶ್ರೀ ಅವರ ತಂದೆ, ಜೂನ್ 26ರಂದು ಬೆಳಿಗ್ಗೆ ಕೆಲಸಕ್ಕೆ ತೆರಳಿದ್ದರು. ಆ ವೇಳೆ ಕಾವ್ಯಶ್ರೀ ಮನೆಯಲ್ಲಿದ್ದರು. ತಾಯಿ ಹಾಗೂ ಮಗಳು ಮಹಡಿಯಲ್ಲಿ ಬಟ್ಟೆಗಳನ್ನು ಒಣಗಿಸಲು ಹಾಕುವುದಕ್ಕೆ ಮನೆಯ ಬಾಗಿಲು ಹಾಕಿ ತೆರಳಿದ್ದರು. ಅದೇ ಸಂದರ್ಭದಲ್ಲಿ ಕಳ್ಳ ಮನೆ ಪ್ರವೇಶಿಸಿದ್ದ. ವಾಪಸ್ ಬಂದಾಗ ಬಾಗಿಲು ತೆರೆದಿರುವುದನ್ನು ಕಂಡ ಕಾವ್ಯಶ್ರೀ ಗಾಬರಿಗೊಂಡರು. ವ್ಯಕ್ತಿಯೊಬ್ಬ ಮನೆ ಒಳಗಿದ್ದು ಜಾಕೆಟ್‌ನಲ್ಲಿ ಚಿನ್ನಾಭರಣವನ್ನು ಬಚ್ಚಿಟ್ಟುಕೊಂಡಿರುವುದನ್ನು ಗಮನಿಸಿದ್ದರು. ಒಳಗೆ ಪ್ರವೇಶಿಸಿ ಕಳ್ಳನ ಜಾಕೆಟ್ ಅನ್ನು ಹಿಡಿದುಕೊಂಡರು. ಜೋರಾಗಿ ಕಿರುಚಿದ್ದರಿಂದ ತಾಯಿ ಸಹ ನೆರವಿಗೆ ಬಂದರು' ಎಂದು ಮೂಲಗಳು ತಿಳಿಸಿವೆ.

ಕಳ್ಳನನ್ನು ಸುಮಾರು 15 ನಿಮಿಷ ತಡೆದು ನಿಲ್ಲಿಸಿದ್ದರು. ಕಳ್ಳ ಪರಾರಿಯಾಗಲು ಯತ್ನಿಸಿದರೂ ಅವಕಾಶ ನೀಡಿರಲಿಲ್ಲ. ಅಷ್ಟರಲ್ಲಿ ಮನೆ ಮಾಲೀಕರು ಸೇರಿ ಅಕ್ಕಪಕ್ಕದ ನಿವಾಸಿಗಳು ನೆರವಿಗೆ ಬಂದಿದ್ದರು. ಕಾವ್ಯಶ್ರೀ ಅವರು ಪೊಲೀಸ್ ಸಹಾಯವಾಣಿಗೆ ಕರೆ ಮಾಡಿದ ಬಳಿಕ ಹೊಯ್ಸಳ ಸಿಬ್ಬಂದಿ ಸ್ಥಳಕ್ಕೆ ಬಂದು ಆರೋಪಿಯನ್ನು ವಶಕ್ಕೆ ಪಡೆದರು.

ಕಳ್ಳ ತಪ್ಪಿಸಿಕೊಳ್ಳಲು ಎಳೆದಾಡಿದಾಗ ಕಾವ್ಯಶ್ರೀ ಅವರಿಗೆ ಗಾಯವಾಗಿದ್ದು, ಚಿಕಿತ್ಸೆ ಕೊಡಿಸಲಾಗಿದೆ. ಎರಡೂ ಬಾಗಿಲುಗಳನ್ನು ಬಂದ್ ಮಾಡಿ ಕಳ್ಳನನ್ನು ಸೆರೆ ಹಿಡಿಯಲಾಗಿದೆ ಎಂದು ಕಾವ್ಯಶ್ರೀ ಅವರ ತಂದೆ ನಿಂಗಯ್ಯ ಹೇಳಿದ್ದಾರೆ.

ಚಿನ್ನಾಭರಣ, ಆಸ್ತಿ ಪತ್ರಗಳು ಸಿಕ್ಕಿವೆ. ಆದರೆ, ₹12 ಸಾವಿರ ನಗದು ಕಳವು ಆಗಿದೆ ಎಂದು ಪೊಲೀಸರಿಗೆ ದೂರು ನೀಡಲಾಗಿದೆ. ಆರೋಪಿಯನ್ನು ಬಂಧಿಸಿರುವ ಪೊಲೀಸರು ವಿಚಾರಣೆಗೆ ನಡೆಸಿದ್ದಾರೆ.

'ನಿಂಗಯ್ಯ ಅವರ ಮನೆಯಿಂದ ಆಸ್ತಿ ಪತ್ರ ಕಳವು ಮಾಡುವಂತೆ ಬೀಡಾ ಸ್ಟಾಲ್ ಮಾಲೀಕರೊಬ್ಬರು ಸೂಚಿಸಿದ್ದರು. ಅವರ ಸೂಚನೆ ಮೇರೆಗೆ ಮನೆಗೆ ನುಗ್ಗಿದ್ದಾಗಿ ಕಳ್ಳ ಹೇಳಿದ್ದಾನೆ. ಆತ ಕಳ್ಳತನವನ್ನೇ ವೃತ್ತಿ ಮಾಡಿಕೊಂಡಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

ಶ್ರೀಗಂಧ ಕಳ್ಳತನಕ್ಕೆ ಯತ್ನ: ಗಾಯಾಳು ಆರೋಪಿ ಸೆರೆ

ಕಳ್ಳನ ಕಾಲಿಗೆ ಗುಂಡೇಟು

ಪ್ರಜಾವಾಣಿ ವಾರ್ತೆ



ಭತ್ಯಪ್ಪ

ಮುಳಬಾಗಿಲು- (ಕೋಲಾರ): ತಾಲ್ಲೂಕಿನ ಕಾಶಿಪುರ ಅರಣ್ಯ ಪ್ರದೇಶದಲ್ಲಿ ಮಂಗಳವಾರ ನಸುಕಿನಲ್ಲಿ ಶ್ರೀಗಂಧದ ಮರಗಳನ್ನು ಕಳ್ಳತನ ಮಾಡಲು ಯತ್ನಿಸಿದವರ ಮೇಲೆ ಅರಣ್ಯ ಇಲಾಖೆ ಸಿಬ್ಬಂದಿ ಗುಂಡು ಹಾರಿಸಿ ಒಬ್ಬ ವ್ಯಕ್ತಿಯನ್ನು ಬಂಧಿಸಿದ್ದು, ಉಳಿದ ಐವರು ಪರಾರಿಯಾಗಿದ್ದಾರೆ.

ತಾಯಲೂರು ಗ್ರಾಮದ ಭತ್ಯಪ್ಪ (25) ಎಂಬಾತನ ಕಾಲಿಗೆ ಗುಂಡೇಟು ಬಿದ್ದಿದ್ದು, ಆತನನ್ನು ಬಂಧಿಸಿದ್ದಾರೆ. ಆರೋಪಿಯ ಎರಡೂ ಕಾಲುಗಳಿಗೆ ಗಾಯವಾಗಿದ್ದು, ಮುಳಬಾಗಿಲು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಶ್ರೀಗಂಧ ಕಳ್ಳತನದ ಬಗ್ಗೆ ಸುಳಿವು ಆಧರಿಸಿ ಇಲಾಖೆಯ ಸಿಬ್ಬಂದಿ ಸ್ಥಳಕ್ಕೆ ತೆರಳಿದ್ದಾರೆ. ಆಗ ಕಳ್ಳರು ಕತ್ತಿ, ಕೊಡಲಿ ಹಾಗೂ ಇತರ ಆಯುಧಗಳಿಂದ ದಾಳಿ ನಡೆಸಿದ್ದಾರೆ. ಆಗ ಅರಣ್ಯ ಗಸ್ತು ಅಧಿಕಾರಿ ಅನಿಲ್ ಸಿದ್ಧರಾಮ ಪರೀಟ ಆತ್ಮರಕ್ಷಣೆ ಹಾಗೂ ಕಳ್ಳತನ ತಡೆಯುವ ಸಲುವಾಗಿ ಗುಂಡು ಹಾರಿಸಿದ್ದಾರೆ.

> **ಕಳ್ಳತನ ಮಾಡುವ ಸುಳಿವು ಸಿಕ್ಕಿತ್ತು. ಅಧಿಕಾರಿಗಳು ಸ್ಥಳಕ್ಕೆ ಹೋದಾಗ ಕಳ್ಳರು ಆಯುಧಗಳಿಂದ ಹಲ್ಲೆ ಮಾಡಿದರು. ಹೀಗಾಗಿ, ಗುಂಡು ಹಾರಿಸಿದ್ದಾರೆ. ಒಂದೆರಡು ದಿನಗಳಲ್ಲಿ ಉಳಿದವರನ್ನು ಬಂಧಿಸುತ್ತೇವೆ**
> **ವಿ.ಏಡುಕೊಂಡಲು,** ಡಿಸಿಎಫ್, ಕೋಲಾರ

ಪರಾರಿಯಾಗಿರುವ ಇನ್ನುಳಿದ ಆರೋಪಿಗಳಾದ ಸೀನಪ್ಪ (30), ರವಿ (25), ಸುರೇಶ್, ಸೀನಪ್ಪ (30) ಹಾಗೂ ಮಹೇಂದ್ರ (35) ಎಂಬುವರ ಪತ್ತೆಗೆ ಬಲೆ ಬೀಸಿದ್ದಾರೆ. ಇವರಲ್ಲಿ ಕೆಲವರು ಆಂಧ್ರ ಪ್ರದೇಶದವರೂ ಇದ್ದಾರೆ ಎಂಬುದು ಗೊತ್ತಾಗಿದೆ.

'ಒಬ್ಬ ಆರೋಪಿಯ ಕಾಲಿಗೆ ಗುಂಡೇಟು ಬಿದ್ದಿದ್ದು, ಆತನನ್ನು ಬಂಧಿಸಿದ್ದೇವೆ. ಮತ್ತೊಬ್ಬ ಆರೋಪಿಗೆ ಬಿದಿರು ಹಾಗೂ ಮುಳ್ಳು ತಾಗಿ ತೀವ್ರ ಗಾಯವಾಗಿದೆ. ಉಳಿದವರ ಸಹಾಯದಿಂದ ಆತನೂ ಪರಾರಿಯಾಗಿದ್ದಾನೆ. ಆರೋಪಿಗಳ ಪತ್ತೆಗಾಗಿ ಆ ಪ್ರದೇಶದಲ್ಲಿನ ಮೊಬೈಲ್ ಕರೆ ದಾಖಲೆ ತೆಗೆಸುತ್ತಿದ್ದೇವೆ. ಶೀಘ್ರದಲ್ಲೇ ಬಂಧಿಸಲಿದ್ದೇವೆ' ಎಂದು ಡಿಸಿಎಫ್ ವಿ.ಏಡುಕೊಂಡಲು 'ಪ್ರಜಾವಾಣಿ'ಗೆ ತಿಳಿಸಿದರು.

ಕಳ್ಳತನ ಮಾಡಲು ಬಂದಿದ್ದ ಖದೀಮರು ಸೋಮವಾರ ಸಂಜೆ ಅನುಮಾನಾಸ್ಪದವಾಗಿ ತಾಲ್ಲೂಕಿನ ಕೆಜಿಎಫ್ ರಸ್ತೆಯಲ್ಲಿರುವ ಕಾಶಿಪುರ ಅರಣ್ಯ ವಲಯದ ಸುತ್ತ ತಿರುಗಾಡುತ್ತಿದ್ದರು. ಇದರಿಂದ ಸಂಶಯಗೊಂಡು ಅವರನ್ನು ಹಿಂಬಾಲಿಸಿದ್ದಾರೆ. ರಾತ್ರಿ 1.30ರಿಂದ 3 ಗಂಟೆ ಸುಮಾರಿಗೆ ಅರಣ್ಯಕ್ಕೆ ನುಗ್ಗಿ ಶ್ರೀಗಂಧದ ಮರಗಳನ್ನು ಕತ್ತರಿಸಲು ಸಿದ್ಧತೆ ನಡೆಸಿ ದ್ದಾರೆ. ಗಸ್ತು ಅಧಿಕಾರಿ ಅನಿಲ್ ಕಳ್ಳತನ ಮಾಡದಂತೆ ಎಚ್ಚರಿಸಿದ್ದಾರೆ. ಆದರೆ, ಕಳ್ಳರು ಆಯುಧಗಳಿಂದ ಅಧಿಕಾರಿಯ ಮೇಲೆ ಹಲ್ಲೆ ಮಾಡಲು ಮುಂದಾಗಿದ್ದಾರೆ. ಕೂಡಲೇ ಅಧಿಕಾರಿಯು ತಮ್ಮ ಬಳಿ ಇದ್ದ ಡಬಲ್ ಬ್ಯಾರಲ್ ಗನ್‌ನಿಂದ ದಾಳಿ ನಡೆಸಿದ್ದಾರೆ.

ಜಿಲ್ಲಾ ಅರಣ್ಯ ಅಧಿಕಾರಿ ವಿ.ಏಡುಕೊಂಡಲು, ಉಪ ಅರಣ್ಯ ಅಧಿಕಾರಿ ಸಹನ್ ಕುಮಾರ್, ರೇಂಜ್ ಅರಣ್ಯ ಅಧಿಕಾರಿ ಜ್ಯೋತಿ, ಶಿವಕೋಟಿ ಚಿಕ್ಕರುದ್ರಯ್ಯ, ಕೃಷ್ಣಮೂರ್ತಿ ಮಾರ್ಗದರ್ಶನದಲ್ಲಿ ಅರಣ್ಯ ಅಧಿಕಾರಿಗಳು ಕಾರ್ಯಾಚರಣೆ ನಡೆಸಿದ್ದಾರೆ.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ರವಿಶಂಕರ್, ಡಿವೈಎಸ್ಪಿ ಡಿ. ಸಿ.ನಂದಕುಮಾರ್, ವೃತ್ತ ನಿರೀಕ್ಷಕ ಸತೀಶ್, ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ವಿಠಲ್ ವೈ. ತಳವಾರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಮುಳಬಾಗಿಲು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ತಿರುಪತಿ , ತಿರುಚ್ಚಿ ಭೇಟಿಗೆ ಅನುಮತಿ ಕೋರಿದ ರೇವಣ್ಣ

ಪ್ರಜಾವಾಣಿ ವಾರ್ತೆ



ಎಚ್.ಡಿ.ರೇವಣ್ಣ

ಬೆಂಗಳೂರು: 'ನಾನೊಬ್ಬ ಹಿರಿಯ ನಾಗರಿಕನಿದ್ದು, ನನ್ನ ಮನಸ್ಸು ಹಾತೊರೆದಾಗಲೆಲ್ಲಾ ನಾನು ಆತ್ಮಸಂತೋಷಕ್ಕಾಗಿ ದೇಗುಲಗಳಿಗೆ ಭೇಟಿ ನೀಡುತ್ತೇನೆ. ಆದರೆ, ನಮ್ಮ ಇಡೀ ಕುಟುಂಬ ಇಂದು ಅತ್ಯಂತ ಸಂಕಷ್ಟದ ಪರಿಸ್ಥಿತಿಯಲ್ಲಿದ್ದು, ದುರ್ದಿನಗಳನ್ನು ಎಣಿಸುತ್ತಿದೆ. ನಾನು ಜಾಮೀನಿನ ಮೇಲಿರುವ ಕಾರಣ ನನಗೆ ತಿರುಪತಿ ಮತ್ತು ತಿರುಚ್ಚಿ ದೇವಾಲಯಗಳಿಗೆ ಭೇಟಿ ನೀಡುವ ದಿಸೆಯಲ್ಲಿ ರಾಜ್ಯದಿಂದ ಹೊರಗೆ ಪ್ರಯಾಣಿಸಲು ಅನುಮತಿ ನೀಡಬೇಕು' ಎಂದು ಕೋರಿ ಮಾಜಿ ಸಚಿವ ಹಾಗೂ ಶಾಸಕ ಎಚ್.ಡಿ.ರೇವಣ್ಣ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಮನವಿ ಮಾಡಿದ್ದಾರೆ.

ಈ ಕುರಿತಂತೆ ಎಚ್.ಡಿ.ರೇವಣ್ಣ ಸಲ್ಲಿಸಿರುವ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಮಂಗಳವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ರೇವಣ್ಣ ಪರ ವಕೀಲ ಜಿ.ಅರುಣ್, 'ಅರ್ಜಿದಾರರ ಪುತ್ರ ಪ್ರಜ್ವಲ್ ರೇವಣ್ಣ 2019ರಿಂದ 2024ರವರೆಗೆ ಹಾಸನ ಲೋಕಸಭಾ ಕ್ಷೇತ್ರದ ಸಂಸದರಾಗಿದ್ದರು. ಈ ವೇಳೆ ಅವರಿಗೆ ದೆಹಲಿಯಲ್ಲಿ ನೀಡಲಾಗಿದ್ದ ಸರ್ಕಾರಿ ನಿವಾಸವನ್ನು ತೆರವುಗೊಳಿಸಲು ನೋಟಿಸ್ ನೀಡಲಾಗಿದೆ. ಸದ್ಯ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ ಮತ್ತು ಎಚ್.ಡಿ.ರೇವಣ್ಣ ಕೂಡ ಕೆಲವು ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡಬೇಕಿದ್ದು, ಅವರಿಗೆ ನೀಡಲಾಗಿರುವ ಜಾಮೀನಿನ ಷರತ್ತುಗಳನ್ನು ಸಡಿಲಿಸಬೇಕು' ಎಂದು ಕೋರಿದರು.

ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, 'ಅರ್ಜಿದಾರರು ತಾವು ಎಲ್ಲೆಲ್ಲಿ ಭೇಟಿ ನೀಡಲಿದ್ದಾರೆ ಎಂಬುದರ ಪ್ರವಾಸದ ಪಟ್ಟಿಯನ್ನೇ ನೀಡಿಲ್ಲ. ಅಂತೆಯೇ, ಸಂಸದರ ನಿವಾಸ ತೆರವುಗೊಳಿಸಬೇಕಾದವರು ಅವರ ಪುತ್ರ. ಇವರು ಹೇಗೆ ನಿವಾಸ ಖಾಲಿ ಮಾಡಲು ಅನುಮತಿ ಕೇಳುತ್ತಿದ್ದಾರೆ' ಎಂದು ಕಳವಳ ವ್ಯಕ್ತಪಡಿಸಿದರು. ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶರು ವಿಚಾರಣೆಯನ್ನು ಬುಧವಾರಕ್ಕೆ ಮುಂದೂಡಿದರು.

ಪ್ರಜ್ವಲ್ ಪ್ರಕರಣ: ತ್ವರಿತ ಕೋರ್ಟ್ ಸ್ಥಾಪನೆಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಂದ ಹಲವು ಮಹಿಳೆಯರ ಮೇಲೆ ನಡೆದ ಅತ್ಯಾಚಾರ ಪ್ರಕರಣದ ವಿಚಾರಣೆಗೆ ವಿಶೇಷ ನ್ಯಾಯಾಲಯ ಸ್ಥಾಪಿಸಬೇಕು ಎಂದು ಹಾಸನ ಜಿಲ್ಲಾ ಜನಪರ ಚಳವಳಿಗಳ ಒಕ್ಕೂಟ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕೋರಿದೆ.

ಸಿದ್ದರಾಮಯ್ಯ ಅವರನ್ನು ಮಂಗಳವಾರ ಭೇಟಿ ಮಾಡಿದ ಒಕ್ಕೂಟದ ಪ್ರಮುಖರಾದ ರೂಪ ಹಾಸನ, ಮಮತಾ, ವಿಜಯಕುಮಾರ್, ಆರ್. ಪಿ. ವೆಂಕಟೇಶ್‌ಮೂರ್ತಿ, ಧರ್ಮೇಶ್ ನೇತೃತ್ವದ ನಿಯೋಗ, ಎಸ್ಐಟಿ ತನಿಖೆಯನ್ನು ಚುರುಕುಗೊಳಿಸಬೇಕು. ತನಿಖೆ ಆರಂಭವಾದ ದಿನದಿಂದ ಮೂರು ತಿಂಗಳ ಒಳಗೆ ದೋಷಾರೋಪ ಪಟ್ಟಿ ಸಲ್ಲಿಸಲು ಸೂಚಿಸಬೇಕು ಎಂದು ಮನವಿ ಮಾಡಿದರು.

ಕೆಲ ಮಾಧ್ಯಮಗಳಲ್ಲಿ ಸತ್ಯಕ್ಕೆ ದೂರವಾದ ವರದಿಗಳನ್ನು ಬಿತ್ತರಿಸುತ್ತಿರುವುದರಿಂದ ಸಂತ್ರಸ್ತ ಮಹಿಳೆಯರು ಧೈರ್ಯವಾಗಿ ಮುಂದೆ ಬಂದು ವಿಚಾರಣೆ ಎದುರಿಸಲು ಹಿಂದೇಟು ಹಾಕುತ್ತಿದ್ದಾರೆ. ಅವರಿಗೆ ಧೈರ್ಯ ತುಂಬಬೇಕು. ಗೋಪ್ಯತೆ ಕಾಪಾಡಬೇಕು. ಹೊರಗೆ ಸುದ್ದಿ ಸೋರಿಕೆಯಾದಂತೆ ಎಚ್ಚರ ವಹಿಸಬೇಕು. ಸಂತ್ರಸ್ತರ ಗೋಪ್ಯತೆ ನಿಯಮಗಳನ್ನು ಪಾಲಿಸದ ಮಾಧ್ಯಮಗಳ ವಿರುದ್ಧ ಕ್ರಮ ಜರುಗಿಸಬೇಕು ಎಂದು ಬೇಡಿಕೆ ಸಲ್ಲಿಸಿದರು.

ಫ.ಗು. ಹಳಕಟ್ಟಿ ಜನ್ಮ ದಿನಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫ.ಗು. ಹಳಕಟ್ಟಿಯವರು ವಚನ ಸಾಹಿತ್ಯವನ್ನು ಸಂಶೋಧನೆ ಮತ್ತು ಅಧ್ಯಯನಗಳ ಮೂಲಕ ಮುಂದಿನ ತಲೆಮಾರಿಗೆ ತಲುಪಿಸುವ ಕೆಲಸ ಮಾಡಿದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಫ.ಗು.ಹಳಕಟ್ಟಿಯವರ 145ನೇ ಜನ್ಮ ದಿನದ ಅಂಗವಾಗಿ ರವೀಂದ್ರ ಕಲಾಕ್ಷೇತ್ರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದರು.

'ವಚನ ಮತ್ತು ದಾಸ ಸಾಹಿತ್ಯಗಳು ಕನ್ನಡ ಸಾಹಿತ್ಯದ ಮೇರು ಕೊಡುಗೆ. ವಚನಗಳು ಜನಸಾಮಾನ್ಯರಿಗೆ ಅತ್ಯಂತ ಸುಲಭವಾಗಿ ಅರ್ಥ ಆಗುವ ಜನಸಾಮಾನ್ಯರ ಭಾಷೆಯಲ್ಲಿದ್ದವು. ಅದಕ್ಕೂ ಮೊದಲು ಜನ ಸಾಮಾನ್ಯರಿಗೆ ಗೊತ್ತಿಲ್ಲದ, ಜನಸಾಮಾನ್ಯರಿಗೆ ಅರ್ಥವಾಗದ ಭಾಷೆಯಲ್ಲಿ ಧರ್ಮವನ್ನು ಪ್ರಚಾರ ಮಾಡಲಾಗುತ್ತಿತ್ತು. ಜನಸಾಮಾನ್ಯರ ಭಾಷೆಯಲ್ಲಿ ಜನರಿಗೆ ಹತ್ತಿರ ಇದ್ದುದರಿಂದಲೇ ಬಸವಣ್ಣ ಜನಸಮುದಾಯದೊಳಗೆ ಬೆರೆತುಹೋದರು' ಎಂದು ಅವರು ಹೇಳಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

ಸಾರ್ವಜನಿಕ ಸೂಚನೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತಿಳಿಸುವ ವಿಷಯವೇನೆಂದರೆ, ನನ್ನ ಕಕ್ಷಿದಾರರಾದ **ಶ್ರೀಮತಿ ದಾಕ್ಷಾಯಣಿ ಕೋಂ ಶ್ರೀ ಆರ್. ವೆಂಕಟೇಶ್,** ವಯಸ್ಸು ಸುಮಾರು 69 ವರ್ಷ, ಶ್ರೀ ಆರ್ ವೆಂಕಟೇಶ್ ಬಿನ್ ಶ್ರೀ ರಾಮಯ್ಯ, ವಯಸ್ಸು ಸುಮಾರು 73 ವರ್ಷ, ಶ್ರೀಮತಿ ಪುಷ್ಪಲತಾ ಬಿನ್ ಆರ್ ವೆಂಕಟೇಶ್, ವಯಸ್ಸು ಸುಮಾರು 43 ವರ್ಷ, ಶ್ರೀ ಮೋಹನ್ ಬಾಬು ಬಿನ್ ಆರ್ ವೆಂಕಟೇಶ್, ವಯಸ್ಸು ಸುಮಾರು 45 ವರ್ಷ, ಹಂಸ ಶ್ರೀ ಎಂ. ಬಿನ್ ಮೋಹನ್ ಬಾಬು, ವಯಸ್ಸು ಸುಮಾರು 22 ವರ್ಷ, ಸೆಲ್ವಿ ನಯನ ಶ್ರೀ ಬಿನ್ ಮೋಹನ್ ಬಾಬು, ವಯಸ್ಸು ಸುಮಾರು 19 ವರ್ಷ, ಶ್ರೀಮತಿ ಲಕ್ಷ್ಮಿಕುಮಾರಿ ಕೋಂ ಲೇಟ್ ನಂದೀಶ್, ವಯಸ್ಸು ಸುಮಾರು 15 ವರ್ಷ, ಸೆಲ್ವಿ ಎನ್ ಹರ್ಷಿತಾ ಬಿನ್ ಲೇಟ್ ನಂದೀಶ್, ವಯಸ್ಸು ಸುಮಾರು 16 ವರ್ಷ, ಸೆಲ್ವಿ ಎನ್ ನಿಶೀಥ ಬಿನ್ ಲೇಟ್ ನಂದೀಶ್, ವಯಸ್ಸು ಸುಮಾರು 15 ವರ್ಷ, ಕುಮಾರಿ ಎನ್ ಸಾಯಿ ಸಮೃದ್ ಬಿನ್ ಲೇಟ್ ನಂದೀಶ್, ವಯಸ್ಸು ಸುಮಾರು 12 ವರ್ಷಗಳು, ಮೇಲಿನ ನನ್ನ ಕಕ್ಷಿದಾರರುಗಳಾದ ಇವರುಗಳು ದಿನಾಂಕ: 06-03-2021 ರಂದು, ಶ್ರೀ ಬತಿನ ಸುಮಂತ್ ಕುಮಾರ್ ರೆಡ್ಡಿ ಬಿನ್ ಶ್ರೀ ಬಿ ಕುಮಾರ ಸ್ವಾಮಿ ರೆಡ್ಡಿ, ವಯಸ್ಸು ಸುಮಾರು 45 ವರ್ಷ ವಯಸ್ಸುಳ್ಳ ಇವರಿಗೆ ನೋಂದಾಯಿಸಿರುವ ಜಂಟಿ ಅಭಿವೃದ್ಧಿ ಒಪ್ಪಂದ ಹಾಗೂ ಜನರಲ್ ಪವರ್ ಆಫ್ ಅಟಾರ್ನಿಯನ್ನು ಇಂದು ರದ್ದುಗೊಳಿಸಲಾಗುತ್ತಿದೆ. ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ, ನಮ್ಮ ಕಕ್ಷಿದಾರರುಗಳನ್ನು ಹೊರತುಪಡಿಸಿ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು, ಮಾಲೀಕತ್ವ, ವಾರಸುದಾರಿಕೆ ಹಕ್ಕು ಅಥವಾ ಯಾವುದೇ ರೀತಿಯ ಹಕ್ಕು ಇರುವುದಿಲ್ಲ ಹಾಗೂ ಈ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ವ್ಯವಹಾರ ನಡೆಸುವಂತಿಲ್ಲ. ಒಂದು ವೇಳೆ ಈ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ವ್ಯವಹಾರ ನಡೆಸಿದರೆ, ಇದು ಅವರ ವೈಯಕ್ತಿಕ ನಷ್ಟ ಮತ್ತು ತೊಂದರೆಯಾಗಿರುತ್ತದೆ. ಅಂತಹ ಕೃತ್ಯಗಳಿಗೆ ನನ್ನ ಕಕ್ಷಿದಾರರುಗಳು ಯಾವುದೇ ರೀತಿಯಲ್ಲಿ ಜವಾಬ್ದಾರರಾಗಿರುವುದಿಲ್ಲ.

ಷೆಡ್ಯೂಲ್ ಸ್ವತ್ತು

ಸ್ವತ್ತಿನ ಸಂಖ್ಯೆ:1 ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರ್ ಹೋಬಳಿ, ದೇವರಬೀಸನಹಳ್ಳಿ ಗ್ರಾಮದ ಸರ್ವೆ ನಂ.11/1, 00 ಏಕರೆ, 04.08 ಗುಂಟೆ ಅಭಿವೃದ್ಧಿ ಹೊಂದದ ಕೃಷಿ ಜಮೀನು ಹೊಂದಿರುವ ಸದರಿ ಸ್ವತ್ತಿಗೆ **ಚೆಕ್ಕು ಬಂದಿ:- ಪೂರ್ವಕ್ಕೆ:** ಜಿ.ಚಂದ್ರಶೇಖರ್‌ರವರ ಭಾಗದ ಸರ್ವೆ ನಂ. 11/1 ರ ಜಮೀನು. **ಪಶ್ಚಿಮಕ್ಕೆ:** ಆರ್. ಶ್ರೀನಿವಾಸ್‌ರವರ ಭಾಗದ ಸರ್ವೆ ನಂ. 11/1ರ ಜಮೀನು. **ಉತ್ತರಕ್ಕೆ:** ಅಗ್ರಹಾರದ ಅಬ್ಬಯ್ಯರವರ ಜಮೀನು ಮತ್ತು **ದಕ್ಷಿಣಕ್ಕೆ:** ಸರ್ವೆ ನಂ. 11/1 ಮತ್ತು ಸರ್ವೆ ಸಂ. 11/2 (25 ಅಡಿ ರಸ್ತೆ)ರಲ್ಲಿ ನಿರ್ಮಾಣವಾಗಿರುವ ಖಾಸಗಿ ರಸ್ತೆ.

ಸ್ವತ್ತಿನ ಸಂಖ್ಯೆ: 2 ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರ್ ಹೋಬಳಿ, ದೇವರಬೀಸನಹಳ್ಳಿ ಗ್ರಾಮದ ಸರ್ವೆ ನಂ.11/1, ವಿಸ್ತೀರ್ಣ ಒಟ್ಟು 07 ಗುಂಟೆ ಜಮೀನಿನಲ್ಲಿ, 00 ಎಕರೆ, 01.12 ಗುಂಟೆ ಅಭಿವೃದ್ಧಿ ಹೊಂದದ ಕೃಷಿ ಜಮೀನು ಹೊಂದಿರುವ ಸದರಿ ಸ್ವತ್ತಿಗೆ **ಚೆಕ್ಕು ಬಂದಿ:- ಪೂರ್ವಕ್ಕೆ:** ಜಿ. ಚಂದ್ರಶೇಖರ್‌ರವರ ಜಮೀನು. **ಪಶ್ಚಿಮಕ್ಕೆ:** ಆರ್. ಶ್ರೀನಿವಾಸ್‌ರವರ ಜಮೀನು. **ಉತ್ತರಕ್ಕೆ:** ಆರ್. ವೆಂಕಟೇಶ್‌ರವರ ಜಮೀನು. **ದಕ್ಷಿಣಕ್ಕೆ:** ಬೆಳ್ಳಂದೂರು ಮುನಿಗುರಪ್ಪರವರ ಜಮೀನು. **ಸ್ವತ್ತಿನ ಸಂಖ್ಯೆ:3** ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರ್ ಹೋಬಳಿ, ದೇವರಬೀಸನಹಳ್ಳಿ ಗ್ರಾಮದ ಸರ್ವೆ ನಂ.11/2, 00 ಎಕರೆ, 04 ಗುಂಟೆ ಅಭಿವೃದ್ಧಿ ಹೊಂದದ ಕೃಷಿ ಜಮೀನು ಹೊಂದಿರುವ ಸದರಿ ಸ್ವತ್ತಿಗೆ **ಚೆಕ್ಕು ಬಂದಿ:- ಪೂರ್ವಕ್ಕೆ:** ಆರ್. ಶ್ರೀನಿವಾಸ್‌ರವರ ಭಾಗದ ಸರ್ವೆ ನಂ.11/2ರ ಜಮೀನು. **ಪಶ್ಚಿಮಕ್ಕೆ:** ಜಿ. ಮುರಳಿರವರ ಭಾಗದ ಸರ್ವೆ ನಂ. 11/2ರ ಜಮೀನು. **ಉತ್ತರಕ್ಕೆ:** ಅಗ್ರಹಾರದ ಅಬ್ಬಯ್ಯರವರ ಜಮೀನು ಮತ್ತು **ದಕ್ಷಿಣಕ್ಕೆ:** ಸರ್ವೆ ನಂ. 11/1 ಮತ್ತು ಸರ್ವೆ ನಂ. 11/2 (25 ಅಡಿ ರಸ್ತೆ) ರಲ್ಲಿ ನಿರ್ಮಾಣವಾಗಿರುವ ಖಾಸಗಿ ರಸ್ತೆ, **ಸ್ವತ್ತಿನ ಸಂಖ್ಯೆ:4** ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರ್ ಹೋಬಳಿ, ದೇವರಬೀಸನಹಳ್ಳಿ ಗ್ರಾಮದ ಸರ್ವೆ ನಂ.11/2, ವಿಸ್ತೀರ್ಣ ಒಟ್ಟು 05 ಗುಂಟೆ ಜಮೀನಿನಲ್ಲಿ, 00 ಎಕರೆ, 1.04 ಗುಂಟೆ ಅಭಿವೃದ್ಧಿ ಹೊಂದದ ಕೃಷಿ ಜಮೀನು ಹೊಂದಿರುವ ಸದರಿ ಸ್ವತ್ತಿಗೆ **ಚೆಕ್ಕು ಬಂದಿ:- ಪೂರ್ವಕ್ಕೆ:** ಆರ್ ಶ್ರೀನಿವಾಸ್‌ರವರ ಜಮೀನು. **ಪಶ್ಚಿಮಕ್ಕೆ:** ಜಿ ಮುರಳಿರವರ ಜಮೀನು. **ಉತ್ತರಕ್ಕೆ:** ಆರ್ ವೆಂಕಟೇಶ್‌ರವರ ಜಮೀನು. **ದಕ್ಷಿಣಕ್ಕೆ:** ಬೆಳ್ಳಂದೂರು ಮುನಿಗುರಪ್ಪರವರ ಜಮೀನು.

ಸಹಿ/– ನೀಲ್ ಮತ್ತು ನಿಹಾಲ್ ಅಸೋಸಿಯೇಟ್ಸ್, ಬೆಂಗಳೂರು.

ಸಾರ್ವಜನಿಕರ ಸೂಚನೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತಿಳಿಸುವ ವಿಷಯವೇನೆಂದರೆ, ನನ್ನ ಕಕ್ಷಿದಾರರಾದ **ಶ್ರೀ. ಆರ್. ಕೃಷ್ಣಮೂರ್ತಿ ಬಿನ್ ಲೇಟ್ ರಾಮಯ್ಯ,** ವಯಸ್ಸು ಸುಮಾರು 69 ವರ್ಷಗಳು, ಶ್ರೀಮತಿ ರತ್ನಮ್ಮ ಕೋಂ ಆರ್. ಕೃಷ್ಣಮೂರ್ತಿ ವಯಸ್ಸು ಸುಮಾರು 64 ವರ್ಷ ವಯಸ್ಸು, ಶ್ರೀ ಶ್ರೀನಿವಾಸ ಕೃಷ್ಣ ಮೂರ್ತಿ ಬಿನ್ ಲೇಟ್ ರಾಮಯ್ಯ, ವಯಸ್ಸು ಸುಮಾರು 48 ವರ್ಷ ವಯಸ್ಸು, ಶ್ರೀಮತಿ ಮಂಜುಳಾ ಹೇಮಂತ್ ಕೋಂ ಶ್ರೀ ಕೆ. ಹೇಮಂತ್ ಕುಮಾರ್, ವಯಸ್ಸು ಸುಮಾರು 45 ವರ್ಷ ವಯಸ್ಸು, ಶ್ರೀ ಅರವಿಂದ್ ಸಾಗರ್ ಮುರ್ಕನಾಥ್, ವಯಸ್ಸು ಸುಮಾರು 44 ವರ್ಷ ವಯಸ್ಸು, ಈ ಮೇಲಿನ ನನ್ನ ಕಕ್ಷಿದಾರರುಗಳಾದ ಇವರುಗಳು ದಿನಾಂಕ: 02-02-2022ರಂದು, ಶ್ರೀ ಬತಿನ ಸುಮಂತ್ ಕುಮಾರ್‌ರೆಡ್ಡಿ ಬಿನ್ ಶ್ರೀ ಬಿ. ಕುಮಾರ ಸ್ವಾಮಿ ರೆಡ್ಡಿ, ವಯಸ್ಸು ಸುಮಾರು 45 ವರ್ಷ ವಯಸ್ಸುಳ್ಳ ಇವರಿಗೆ ನೋಂದಾಯಿಸಿರುವ ಮಾರಾಟ ಕ್ರಯ ಹಾಗೂ ಜನರಲ್ ಪವರ್ ಆಫ್ ಅಟಾರ್ನಿಯನ್ನು ಇಂದು ರದ್ದುಗೊಳಿಸಲಾಗುತ್ತಿದೆ. ಸದರಿ ಷಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ, ನಮ್ಮ ಕಕ್ಷಿದಾರರುಗಳನ್ನು ಹೊರತುಪಡಿಸಿ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು, ಮಾಲೀಕತ್ವ , ವಾರಸುದಾರಿಕೆ ಹಕ್ಕು ಅಥವಾ ಯಾವುದೇ ರೀತಿಯ ಹಕ್ಕು ಇರುವುದಿಲ್ಲ ಹಾಗೂ ಈ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ವ್ಯವಹಾರ ನಡೆಸುವಂತಿಲ್ಲ. ಒಂದು ವೇಳೆ ಈ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ವ್ಯವಹಾರ ನಡೆಸಿದರೆ, ಇದು ಅವರ ವೈಯಕ್ತಿಕ ನಷ್ಟ ಮತ್ತು ತೊಂದರೆಯಾಗಿರುತ್ತದೆ. ಅಂತಹ ಕೃತ್ಯಗಳಿಗೆ ನನ್ನ ಕಕ್ಷಿದಾರರುಗಳು ಯಾವುದೇ ರೀತಿಯಲ್ಲಿ ಜವಾಬ್ದಾರರಾಗಿರುವುದಿಲ್ಲ.

ಷಡ್ಯೂಲ್ ಸ್ವತ್ತು

ಸ್ವತ್ತಿನ ಸಂಖ್ಯೆ:1 ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರ್ ಹೋಬಳಿ, ದೇವರಬೀಸನಹಳ್ಳಿ ಗ್ರಾಮದ ಸರ್ವೆ ನಂ.11/2, ವಿಸ್ತೀರ್ಣ 4 ಗುಂಟೆ ಜಮೀನು (4356 ಚದರ ಅಡಿಗಳು) ಹೊಂದಿರುವ ಸದರಿ ಸ್ವತ್ತಿಗೆ **ಚೆಕ್ಕು ಬಂದಿ:- ಪೂರ್ವಕ್ಕೆ:** ಜಿ ಮುರಳಿರವರ ಭಾಗದ ಸರ್ವೆ ನಂ. 11/2ರ ಜಮೀನು **ಪಶ್ಚಿಮಕ್ಕೆ:** ಆರ್. ಕೃಷ್ಣಮೂರ್ತಿರವರ ಭಾಗದ ಸರ್ವೆ ನಂ. 11/1ರ ಜಮೀನು **ಉತ್ತರಕ್ಕೆ:** ಅಗ್ರಹಾರದ ಅಬ್ಬಯ್ಯರವರ ಜಮೀನು ಮತ್ತು **ದಕ್ಷಿಣಕ್ಕೆ:** ಸರ್ವೆ ನಂ. 11/1 ಮತ್ತು ಸರ್ವೆ ನಂ. 11/2 (25 ಅಡಿ ರಸ್ತೆ) ರಲ್ಲಿ ನಿರ್ಮಾಣವಾಗಿರುವ ಖಾಸಗಿ ರಸ್ತೆ **ಸ್ವತ್ತಿನ ಸಂಖ್ಯೆ: 2** ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರ್ ಹೋಬಳಿ, ದೇವರಬೀಸನಹಳ್ಳಿ ಗ್ರಾಮದ ಸರ್ವೆ ನಂ.11/2, ವಿಸ್ತೀರ್ಣ 1.4 (1 1/4) ಗುಂಟೆ ಜಮೀನು (1361.25 ಚದರ ಅಡಿಗಳು) ಹೊಂದಿರುವ ಸದರಿ ಸ್ವತ್ತಿಗೆ **ಚೆಕ್ಕುಬಂದಿ:- ಪೂರ್ವಕ್ಕೆ:** ಜಿ. ಮುರಳಿರವರ ಜಮೀನು **ಪಶ್ಚಿಮಕ್ಕೆ:** ಆರ್. ಕೃಷ್ಣಮೂರ್ತಿರವರ ಜಮೀನು **ಉತ್ತರಕ್ಕೆ:** ಆರ್. ಕೃಷ್ಣಮೂರ್ತಿರವರ ಜಮೀನು **ದಕ್ಷಿಣಕ್ಕೆ:** ಬೆಳ್ಳಂದೂರು ಮುನಿಗುರಪ್ಪರವರ ಜಮೀನು.

ಸಹಿ/– ನೀಲ್ ಮತ್ತು ನಿಹಾಲ್ ಅಸೋಸಿಯೇಟ್ಸ್, ಬೆಂಗಳೂರು.

ಸಾರ್ವಜನಿಕ ಸೂಚನೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತಿಳಿಸುವ ವಿಷಯವೇನೆಂದರೆ, ನನ್ನ ಕಕ್ಷಿದಾರರಾದ **ಶ್ರೀ ಆರ್. ಕೃಷ್ಣಮೂರ್ತಿ ಬಿನ್ ಲೇಟ್ ರಾಮಯ್ಯ,** ವಯಸ್ಸು ಸುಮಾರು 69 ವರ್ಷಗಳು, ಶ್ರೀಮತಿ ರತ್ನಮ್ಮ ಕೋಂ ಆರ್. ಕೃಷ್ಣಮೂರ್ತಿ ವಯಸ್ಸು ಸುಮಾರು 64 ವರ್ಷ ವಯಸ್ಸು, ಶ್ರೀ ಶ್ರೀನಿವಾಸ ಕೃಷ್ಣಮೂರ್ತಿ ಬಿನ್ ಲೇಟ್ ರಾಮಯ್ಯ, ವಯಸ್ಸು ಸುಮಾರು 48 ವರ್ಷ ವಯಸ್ಸು, ಶ್ರೀಮತಿ. ಮಂಜುಳಾ ಹೇಮಂತ್ ಕೋಂ ಶ್ರೀ ಕೆ. ಹೇಮಂತ್ ಕುಮಾರ್, ವಯಸ್ಸು ಸುಮಾರು 45 ವರ್ಷ ವಯಸ್ಸು, ಶ್ರೀ ಅರವಿಂದ್ ಸಾಗರ್ ಮುರ್ಕನಾಥ್, ವಯಸ್ಸು ಸುಮಾರು 44ವರ್ಷ ವಯಸ್ಸು, ಇವರುಗಳು ದಿನಾಂಕ: 02-02-2022 ರಂದು, ಶ್ರೀ ಬತಿನ ಸುಮಂತ್ ಕುಮಾರ್ ರೆಡ್ಡಿ ಬಿನ್ ಶ್ರೀ ಬಿ. ಕುಮಾರ ಸ್ವಾಮಿ ರೆಡ್ಡಿ, ವಯಸ್ಸು ಸುಮಾರು 45 ವರ್ಷ ವಯಸ್ಸುಳ್ಳ ಇವರಿಗೆ ನೋಂದಾಯಿಸಿರುವ ಮಾರಾಟ ಕ್ರಯ ಹಾಗೂ ಜನರಲ್ ಪವರ್ ಆಫ್ ಅಟಾರ್ನಿಯನ್ನು ಇಂದು ರದ್ದುಗೊಳಿಸಲಾಗುತ್ತಿದೆ. ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ, ನಮ್ಮ ಕಕ್ಷಿದಾರರುಗಳನ್ನು ಹೊರತುಪಡಿಸಿ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು, ಮಾಲೀಕತ್ವ, ವಾರಸುದಾರಿಕೆ ಹಕ್ಕು ಅಥವಾ ಯಾವುದೇ ರೀತಿಯ ಹಕ್ಕು ಇರುವುದಿಲ್ಲ ಹಾಗೂ ಈ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ವ್ಯವಹಾರ ನಡೆಸುವಂತಿಲ್ಲ. ಒಂದು ವೇಳೆ ಈ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ವ್ಯವಹಾರ ನಡೆಸಿದರೆ, ಇದು ಅವರ ವೈಯಕ್ತಿಕ ನಷ್ಟ ಮತ್ತು ತೊಂದರೆಯಾಗಿರುತ್ತದೆ. ಅಂತಹ ಕೃತ್ಯಗಳಿಗೆ ನನ್ನ ಕಕ್ಷಿದಾರರುಗಳು ಯಾವುದೇ ರೀತಿಯಲ್ಲಿ ಜವಾಬ್ದಾರರಾಗಿರುವುದಿಲ್ಲ.

ಷೆಡ್ಯೂಲ್ ಸ್ವತ್ತು

ಸ್ವತ್ತಿನ ಸಂಖ್ಯೆ:1 ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರ್ ಹೋಬಳಿ, ದೇವರಬೀಸನಹಳ್ಳಿ ಗ್ರಾಮದ ಸರ್ವೆ ನಂ.11/1, ಹೊಸ ಸರ್ವೆ ನಂ.11/14, ವಿಸ್ತೀರ್ಣ 4.8 (4 1/2) ಗುಂಟೆಗಳು (**4900.5 ಚದರ ಅಡಿಗಳು**) ಹೊಂದಿರುವ ಸದರಿ ಸ್ವತ್ತಿಗೆ **ಚೆಕ್ಕು ಬಂದಿ:- ಪೂರ್ವಕ್ಕೆ:** ಆರ್.ಕೃಷ್ಣಮೂರ್ತಿರವರ ಭಾಗದ ಸರ್ವೆ ನಂ.11/2ರ ಜಮೀನು. **ಪಶ್ಚಿಮಕ್ಕೆ:** ಜಿ. ಚಂದ್ರಶೇಖರ್‌ರವರ ಭಾಗದ ಸರ್ವೆ ನಂ. 11/1 ರ ಜಮೀನು. **ಉತ್ತರಕ್ಕೆ:** ಅಗ್ರಹಾರದ ಅಬ್ಬಯ್ಯರವರ ಜಮೀನು ಮತ್ತು **ದಕ್ಷಿಣಕ್ಕೆ:** ಸರ್ವೆ ನಂ. 11/1 ಮತ್ತು ಸರ್ವೆ ನಂ. 11/2 (25 ಅಡಿ ರಸ್ತೆ) ರಲ್ಲಿ ನಿರ್ಮಾಣವಾಗಿರುವ ಖಾಸಗಿ ರಸ್ತೆ.

ಸ್ವತ್ತಿನ ಸಂಖ್ಯೆ:2 ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರ್ ಹೋಬಳಿ, ದೇವರಬೀಸನಹಳ್ಳಿ ಗ್ರಾಮದ ಸರ್ವೆ ನಂ.11/1, ವಿಸ್ತೀರ್ಣ 1.12 (1 3/4) ಗುಂಟೆಗಳು (**1905.75 ಚದರ ಅಡಿಗಳು**) ಹೊಂದಿರುವ ಸದರಿ ಸ್ವತ್ತಿಗೆ **ಚೆಕ್ಕುಬಂದಿ:- ಪೂರ್ವಕ್ಕೆ:** ಕೃಷ್ಣ ಮೂರ್ತಿ ರವರ ಜಮೀನು. **ಪಶ್ಚಿಮಕ್ಕೆ:** ಚಂದ್ರಶೇಖರ್‌ರವರ ಜಮೀನು. **ಉತ್ತರಕ್ಕೆ:** ಕೃಷ್ಣಮೂರ್ತಿರವರ ಜಮೀನು. **ದಕ್ಷಿಣಕ್ಕೆ:** ಬೆಳ್ಳಂದೂರು ಮುನಿಗುರಪ್ಪರವರ ಜಮೀನು.

ಸಹಿ/– ನೀಲ್ ಮತ್ತು ನಿಹಾಲ್ ಅಸೋಸಿಯೇಟ್ಸ್, ಬೆಂಗಳೂರು.

ಸಾರ್ವಜನಿಕ ಸೂಚನೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತಿಳಿಸುವ ವಿಷಯವೇನೆಂದರೆ, ನನ್ನ ಕಕ್ಷಿದಾರರಾದ **ಶ್ರೀ ಮಹಾವೀರ್ ಶ್ರೀನಿವಾಸ್ ಬಿನ್ ಆರ್ ಶ್ರೀನಿವಾಸ್,** ವಯಸ್ಸು ಸುಮಾರು 35 ವರ್ಷ, ಶ್ರೀ ಆರ್ ಶ್ರೀನಿವಾಸ ಬಿನ್ ಲೇಟ್ ಶ್ರೀ ರಾಮಯ್ಯ, ವಯಸ್ಸು ಸುಮಾರು 68 ವರ್ಷ, ಶ್ರೀಮತಿ ಸರಳ ಕೋಂ ಆರ್ ಶ್ರೀನಿವಾಸ, ವಯಸ್ಸು ಸುಮಾರು 64 ವರ್ಷಗಳು, ಮೇಲಿನ ನನ್ನ ಕಕ್ಷಿದಾರರುಗಳಾದ ಇವರುಗಳು ದಿನಾಂಕ: 06-03-2021ರಂದು, ಶ್ರೀ ಬತಿನ ಸುಮಂತ್ ಕುಮಾರ್ ರೆಡ್ಡಿ ಬಿನ್ ಶ್ರೀ ಬಿ ಕುಮಾರಸ್ವಾಮಿ ರೆಡ್ಡಿ, ವಯಸ್ಸು ಸುಮಾರು 45 ವರ್ಷ ವಯಸ್ಸುಳ್ಳ ಇವರಿಗೆ ನೋಂದಾಯಿಸಿರುವ ಜಂಟಿ ಅಭಿವೃದ್ಧಿ ಒಪ್ಪಂದ ಹಾಗೂ ಜನರಲ್ ಪವರ್ ಆಫ್ ಅಟಾರ್ನಿಯನ್ನು ಇಂದು ರದ್ದುಗೊಳಿಸಲಾಗುತ್ತಿದೆ. ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ, ನಮ್ಮ ಕಕ್ಷಿದಾರರುಗಳನ್ನು ಹೊರತುಪಡಿಸಿ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು , ಮಾಲೀಕತ್ವ, ವಾರಸುದಾರಿಕೆ ಹಕ್ಕು ಅಥವಾ ಯಾವುದೇ ರೀತಿಯ ಹಕ್ಕು ಇರುವುದಿಲ್ಲ ಹಾಗೂ ಈ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ವ್ಯವಹಾರ ನಡೆಸುವಂತಿಲ್ಲ. ಒಂದು ವೇಳೆ ಈ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ವ್ಯವಹಾರ ನಡೆಸಿದರೆ, ಇದು ಅವರ ವೈಯಕ್ತಿಕ ನಷ್ಟ ಮತ್ತು ತೊಂದರೆಯಾಗಿರುತ್ತದೆ. ಅಂತಹ ಕೃತ್ಯಗಳಿಗೆ ನನ್ನ ಕಕ್ಷಿದಾರರುಗಳು ಯಾವುದೇ ರೀತಿಯಲ್ಲಿ ಜವಾಬ್ದಾರರಾಗಿರುವುದಿಲ್ಲ.

ಷೆಡ್ಯೂಲ್ ಸ್ವತ್ತು

ಸ್ವತ್ತಿನ ಸಂಖ್ಯೆ:1 ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರ್ ಹೋಬಳಿ, ದೇವರಬೀಸನಹಳ್ಳಿ ಗ್ರಾಮದ ಸರ್ವೆ ನಂ.11/1. ವಿಸ್ತೀರ್ಣ, 00 ಎಕರೆ, 04.08 ಗುಂಟೆ ಅಭಿವೃದ್ಧಿ ಹೊಂದದ ಕೃಷಿ ಜಮೀನು ಹೊಂದಿರುವ ಸದರಿ ಸ್ವತ್ತಿಗೆ **ಚೆಕ್ಕು ಬಂದಿ:- ಪೂರ್ವಕ್ಕೆ:** ಆರ್ ವೆಂಕಟೇಶ್ ರವರ ಜಮೀನು ಮತ್ತು ರಸ್ತೆ. **ಪಶ್ಚಿಮಕ್ಕೆ:** ಬೊಮ್ಮಸಂದ್ರ ಅಬ್ಬಯ್ಯರೆಡ್ಡಿರವರ ಜಮೀನು. **ಉತ್ತರಕ್ಕೆ:** ಅಗ್ರಹಾರದ ಅಬ್ಬಯ್ಯರವರ ಜಮೀನು ಮತ್ತು **ದಕ್ಷಿಣಕ್ಕೆ:** ಬೆಳ್ಳಂದೂರು ಮುನಿಗುರಪ್ಪರವರ ಜಮೀನು. **ಸ್ವತ್ತಿನ ಸಂಖ್ಯೆ:2** ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರ್ ಹೋಬಳಿ, ದೇವರಬೀಸನಹಳ್ಳಿ ಗ್ರಾಮದ ಸರ್ವೆ ನಂ.11/1 ವಿಸ್ತೀರ್ಣ ಒಟ್ಟು 7 ಗುಂಟೆ ಜಮೀನಿನಲ್ಲಿ, 00 ಎಕರೆ, 01.12 ಗುಂಟೆ ಅಭಿವೃದ್ಧಿ ಹೊಂದದ ಕೃಷಿ ಜಮೀನು ಹೊಂದಿರುವ ಸದರಿ ಸ್ವತ್ತಿಗೆ **ಚೆಕ್ಕು ಬಂದಿ: ಪೂರ್ವಕ್ಕೆ:** ಆರ್. ವೆಂಕಟೇಶ್‌ರವರ ಜಮೀನು ಮತ್ತು ರಸ್ತೆ. **ಪಶ್ಚಿಮಕ್ಕೆ:** ಆರ್.ಶ್ರೀನಿವಾಸ್‌ರವರ ಜಮೀನು. **ಉತ್ತರಕ್ಕೆ:** ಆರ್. ವೆಂಕಟೇಶ್ ಮತ್ತು ಚಂದ್ರಶೇಖರ್ ರವರ ಜಮೀನು. **ದಕ್ಷಿಣಕ್ಕೆ:** ಬೆಳ್ಳಂದೂರು ಮುನಿಗುರಪ್ಪ ರವರ ಜಮೀನು.

ಸಹಿ/– ನೀಲ್ ಮತ್ತು ನಿಹಾಲ್ ಅಸೋಸಿಯೇಟ್ಸ್, ಬೆಂಗಳೂರು.

ಸಾರ್ವಜನಿಕ ಸೂಚನೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತಿಳಿಸುವ ವಿಷಯವೇನೆಂದರೆ, ನನ್ನ ಕಕ್ಷಿದಾರರಾದ ಶ್ರೀಮತಿ **ಶಿಲ್ಪ ಬಿನ್ ಆರ್. ಶ್ರೀನಿವಾಸ,** ವಯಸ್ಸು ಸುಮಾರು 40 ವರ್ಷ, ಶ್ರೀ ಆರ್ ಶ್ರೀನಿವಾಸ ಬಿನ್ ಲೇಟ್ ಶ್ರೀ ರಾಮಯ್ಯ, ವಯಸ್ಸು ಸುಮಾರು 68 ವರ್ಷ, ಶ್ರೀಮತಿ ಸರಳ ಕೋಂ ಆರ್ ಶ್ರೀನಿವಾಸ, ವಯಸ್ಸು ಸುಮಾರು 64 ವರ್ಷಗಳು, ಮೇಲಿನ ನನ್ನ ಕಕ್ಷಿದಾರರುಗಳಾದ ಇವರುಗಳು ದಿನಾಂಕ: 06-03-2021 ರಂದು, ಶ್ರೀ ಬತಿನ ಸುಮಂತ್ ಕುಮಾರ್ ರೆಡ್ಡಿ ಬಿನ್ ಶ್ರೀ ಬಿ ಕುಮಾರ ಸ್ವಾಮಿ ರೆಡ್ಡಿ, ವಯಸ್ಸು ಸುಮಾರು 45 ವರ್ಷ ವಯಸ್ಸುಳ್ಳ ಇವರಿಗೆ ನೋಂದಾಯಿಸಿರುವ ಜಂಟಿ ಅಭಿವೃದ್ಧಿ ಒಪ್ಪಂದ ಹಾಗೂ ಜನರಲ್ ಪವರ್ ಆಫ್ ಅಟಾರ್ನಿಯನ್ನು ಇಂದು ರದ್ದುಗೊಳಿಸಲಾಗುತ್ತಿದೆ. ಸದರಿ ಷಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ, ನಮ್ಮ ಕಕ್ಷಿದಾರರುಗಳನ್ನು ಹೊರತುಪಡಿಸಿ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು, ಮಾಲೀಕತ್ವ, ವಾರಸುದಾರಿಕೆ ಹಕ್ಕು ಅಥವಾ ಯಾವುದೇ ರೀತಿಯ ಹಕ್ಕು ಇರುವುದಿಲ್ಲ ಹಾಗೂ ಈ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ವ್ಯವಹಾರ ನಡೆಸುವಂತಿಲ್ಲ. ಒಂದು ವೇಳೆ ಈ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ವ್ಯವಹಾರ ನಡೆಸಿದರೆ, ಇದು ಅವರ ವೈಯಕ್ತಿಕ ನಷ್ಟ ಮತ್ತು ತೊಂದರೆಯಾಗಿರುತ್ತದೆ. ಅಂತಹ ಕೃತ್ಯಗಳಿಗೆ ನನ್ನ ಕಕ್ಷಿದಾರರುಗಳು ಯಾವುದೇ ರೀತಿಯಲ್ಲಿ ಜವಾಬ್ದಾರರಾಗಿರುವುದಿಲ್ಲ.

ಷೆಡ್ಯೂಲ್ ಸ್ವತ್ತು

ಸ್ವತ್ತಿನ ಸಂಖ್ಯೆ:1 ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರ್ ಹೋಬಳಿ, ದೇವರಬೀಸನಹಳ್ಳಿ ಗ್ರಾಮದ ಸರ್ವೆ ನಂ.11/2, ವಿಸ್ತೀರ್ಣ, 00 ಎಕರೆ, 04 ಗುಂಟೆ ಅಭಿವೃದ್ಧಿ ಹೊಂದದ ಕೃಷಿ ಜಮೀನು ಹೊಂದಿರುವ ಸದರಿ ಸ್ವತ್ತಿಗೆ **ಚೆಕ್ಕು ಬಂದಿ:- ಪೂರ್ವಕ್ಕೆ:** ರಸ್ತೆ, **ಪಶ್ಚಿಮಕ್ಕೆ.:** ವೆಂಕಟೇಶ್‌ರವರ ಜಮೀನು, **ಉತ್ತರಕ್ಕೆ:** ಅಗ್ರಹಾರದ ಅಬ್ಬಯ್ಯರವರ ಜಮೀನು ಮತ್ತು **ದಕ್ಷಿಣಕ್ಕೆ:** ಸರ್ವೆ ನಂ. 11/1 ಮತ್ತು ಸರ್ವೆ ನಂ. 11/2 (25 ಅಡಿ ರಸ್ತೆ)ರಲ್ಲಿ ನಿರ್ಮಾಣವಾಗಿರುವ ಖಾಸಗಿ ರಸ್ತೆ.

ಸ್ವತ್ತಿನ ಸಂಖ್ಯೆ:2 ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರ್ ಹೋಬಳಿ, ದೇವರಬೀಸನಹಳ್ಳಿ ಗ್ರಾಮದ ಸರ್ವೆ ನಂ.11/2, ವಿಸ್ತೀರ್ಣ, ಒಟ್ಟು 5 ಗುಂಟೆ ಜಮೀನಿನಲ್ಲಿ, 00 ಎಕರೆ, 1.04 ಗುಂಟೆ ಅಭಿವೃದ್ಧಿ ಹೊಂದದ ಕೃಷಿ ಜಮೀನು ಹೊಂದಿರುವ ಸದರಿ ಸ್ವತ್ತಿಗೆ **ಚೆಕ್ಕುಬಂದಿ:- ಪೂರ್ವಕ್ಕೆ:** ರಸ್ತೆ, **ಪಶ್ಚಿಮಕ್ಕೆ:** ವೆಂಕಟೇಶ್ ರವರ ಜಮೀನು. **ಉತ್ತರಕ್ಕೆ:** ಆರ್. ಶ್ರೀನಿವಾಸ್ ಜಮೀನು ಮತ್ತು **ದಕ್ಷಿಣಕ್ಕೆ:** ಬೆಳ್ಳಂದೂರು ಮುನಿಗುರಪ್ಪರವರ ಜಮೀನು.

ಸಹಿ/– ನೀಲ್ ಮತ್ತು ನಿಹಾಲ್ ಅಸೋಸಿಯೇಟ್ಸ್, ಬೆಂಗಳೂರು.

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd. Bengaluru

JOB OPPORTUNITIES

Multiple Vacancy

GLOBAL ACADEMY FOR LEARNING
Next Gen School
Near Global Village & R.V. Engineering College, R.R. Nagar, Bengalure - 59.

— WE ARE **HIRING** —

Manager Admission/Front Office Executive (2+ years Experience) Managing admissions and counselling parents & students.
Administrator (2+ years Experience) Handling operations, finance, marketing, academics and support HR activities.
Accountant (2+ years Experience) Managing school accounts & finance.
Counsellor Graduate in Psychology / Child Development / Career Guidance with experience of working in reputed schools.
Coaches/Instructors (2+ years Experience) Graduate in Psychology / Child Development / Career Guidance with experience of working in reputed schools.
Send your CV to contact@gaflschool.com
www.gaflschool.com
+ 91 88804 00900

Drivers

REQUIRE DRIVER for Canter Eitcher 10.90 (Goods Vehicle), only for local purpose. Contact: 8217649412

Teachers / Professors

R E S POLYTECHNIC
(Estd: 1986 - Run by Rajendra Education Society)
5, Sunkadakatte, Magadi Main Road, Hegganahalli Cross, Bangalore-560 091 Phone: 080-23484814

DIPLOMA COURSES OFFERED:
1. Automobile 2. Information Technology 3. Computer Science 4. Electrical & Electronics 5. Electronics & Commn. 6. Civil 7. Mechanical 8. Fashion Technology 9. Commercial Practice

REQUIRE FULLTIME / PARTTIME - LECTURERS
Qualification for Computer Dept: MCA / MSC / BE.
For EC / EE / ME / CIVIL Dept: BE First Class.
For MATHS / SCIENCE / COMMERCE Dept: MSc / MCom.
NOTE: B.Ed is not mandatory
Note: Send your resume to: respt450@gmail.com
WITH stating branch of your specialization in SUBJECT line
Apply to PRINCIPAL within a week
RES-24506

HOLY ANGEL'S High School, Hampinagar, Vijayanagar, Bengaluru-560104. Phone: 23404465/23202042 holyangels.highschool pclayout@gmail.com Requires Experienced Trained Teachers to handle English & Social-Studies for Primary & High-School. Mathematics for High School. Only English medium candidates need to apply.

WANTED ENGLISH & P.E. Teacher (High School) Mathikere/ Yeshwanthpur. Contact No:- 9379191544.

LITTLE LILLYS Education Society Requires Graduate/ Post Graduate Teachers High School: Physics & Chemistry Head Mistress and Office Staff for Accounts Section Salary: 3.0 Lakhs to 4.0 Lakhs Contact: 9731558585/ 9535498177

REQUIRES LADY Teacher For English and Computer For Primary & High School, Hebbal, Kempapura Call:9008981637

BUSINESS

Business to Business

Finance

MORTGAGE OF Site, Building, Commercial Property Loans, Construction Loans, Takeover and Topup Loans, Project Loans. Contact: 9353705002.

Business Offers

Finance

NRI'S INVESTMENT And Finance Available On Low Interest Against Properties,Land &Building,Sites,Flats, Converted &Agriculture Lands Call:7204995189

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

ಕ್ಲಾಸಿಫೈಡ್ಸ್ ADMISSION CORNER

VIVEKANANDA INSTITUTE OF TECHNOLOGY
AN INSTITUTE OF JANATHA EDUCATION SOCIETY®
Recognised by GOK, Affiliated to VTU & Approved by AICTE
CET CODE: E087 | Estd.: 1997 | COMEDK CODE: E149

BE: Bachelor of Engineering
B+ NAAC
- Computer Science
- Artificial Intelligence & Machine Learning
- Electronics & Communication
- Information Science
- Mechanical
- Civil



College of Law B++ NAAC
3Yr LL.B
5Yr B.A.LL.B | B.Com.LL.B

Institute of Management PGCET B-323
BCA | BBA
MBA - Finance | Marketing HR | Business Analytics

Degree College A NAAC
BCA | BA |
B.Ed | BA Journalism
B.Com | B.Com Data Analytics

College of Pharmacy CET B060
D.Pharm | B.Pharm
M.Pharm - Pharmaceutical Chemistry, Pharmaceutics

2024-25 Admissions Open
95139 53482
VKIT
VKIT Campus: Gudimavu, Kumbalgodu, Kengeri, Bengaluru - 74
City Campus: Dr. RajKumar Road, Next to Orion Mall, Rajajinagar, Bengaluru - 55

REAL ESTATE SELLING

Sites

HSR Layout

"SALE 35X60 Corner Site 3rd Sector HSR Layout, good location, Genuine Buyers Call: 7760388034/ 9242135834"

PERSONAL

Change of Name

CHANGE OF NAME
I, MASTER ANURAG VARADARAJ Residing at No. 008, Anjali Heritage, 5th Cross, Kuvempu Road, Vignan Nagar, Bangalore-560075, have changed my name to **ANURAG VARADARAJ** vide affidavit dated 25-06-2024 sworn to before notary D.B. Ramesh Bashkar, Bangalore. Henceforth I shall be known as **ANURAG VARADARAJ** only

CHANGE OF NAME
I, **AADI PRASAD MATHAKARI,** S/o Prasad Padmanabh Mathakari, residing at # E-205, Purva Skywood Silver County, Roadharlur HSR Extn Kudlu, Bangalore-560068, have changed my name to **AADI MATHAKARI** vide affidavit dated 02.07.2024, before notary Mohamed Hussain K, Bangalore. Henceforth I shall be known as **AADI MATHAKARI** only

CHANGE OF NAME
I, SAFEENA BEGUM SHAMAYEL AHMED, R/at # 302, Meridian Dreams, #27, Alfred Street, Richmond Town, Bengaluru-560025, have changed my name to **SAFEENA BEGUM** vide affidavit dated 02-07-2024 before notary L.Gopalakrishna, Bengaluru. Hence I shall be called **SAFEENA BEGUM** only.

I, SHAZIA Asadulla Shamshad Begum W/o Mohamed Avasur Rahman aged about 33 years, resident of #751, Devangapete, Kolar 563101. Have changed my name to Shaziya Asadulla Shamshad Begum vide affidavit dated 02.07.2024 before Notary K.M.Vijay Kumar Kolar. Henceforth I shall be called as Shaziya Asadulla Shamshad Begum only

PUBLIC NOTICE
To Place your Classified Ads Contact
9731810277

DH Classifieds More value, more impact — ಪ್ರಜಾವಾಣಿ

REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS



www.dhclassifieds.com BOOK NOW
Book your ad with us now! For more details contact:
+91 9845114560 | +91 9901641752 | +91 9886213331
+91 9731810277 | +91 9900428036 | 080-45557163/164
*Conditions apply

ಬಿಬಿಎಂಪಿಯ ವಿವಿಧೆಡೆ ರಸ್ತೆ ಅಭಿವೃದ್ಧಿ; ಪರ್ಯಾಯ ಮಾರ್ಗದಲ್ಲಿ ವಾಹನ ಸಂಚಾರ

105 ರಸ್ತೆಗಳ ವೈಟ್ ಟಾಪಿಂಗ್ ಕಾಮಗಾರಿಗೆ ಶುಕ್ರವಾರ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಬಹುತೇಕ ಪ್ರದೇಶಗಳಲ್ಲಿನ 105 ಪ್ರಮುಖ ರಸ್ತೆಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಶುಕ್ರವಾರ ಆರಂಭವಾಗಲಿದೆ.


ವೈಟ್‌ಟಾಪಿಂಗ್ ಕಾಮಗಾರಿ ನಡೆಸಲು ಭೂಮಿಪೂಜೆಗಾಗಿ ಸಿದ್ಧತೆಗಳನ್ನು ಮಾಡಿಕೊಳ್ಳಲು ಎಲ್ಲ ಇಲಾಖೆಗಳ ಅಧಿಕಾರಿಗಳಿಗೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮಂಗಳವಾರ ಸೂಚಿಸಿದ್ದಾರೆ.

ಜಲಮಂಡಳಿಯ ನೀರು ಹಾಗೂ ಒಳಚರಂಡಿ ಮಾರ್ಗ, ಬೆಸ್ಕಾಂ ಹಾಗೂ ಕೆಪಿಟಿಸಿಎಲ್ ಸಂಸ್ಥೆಯ ಕೇಬಲ್‌ಗಳು, ಗೇಲ್ ಗ್ಯಾಸ್ ಪೈಪ್‌ಲೈನ್‌ಗಳ ಬದಲಾವಣೆಗಳನ್ನು ಮಾಡಿಕೊಳ್ಳಲು ಇಲಾಖೆಗಳ ಸಮನ್ವಯ ಸಭೆಯಲ್ಲಿ ಅಧಿಕಾರಿಗಳಿಗೆ ತಿಳಿಸಿದ್ದಾರೆ.

15 ಪ್ಯಾಕೇಜ್‌ಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತಿದೆ. ಈ ಪೈಕಿ 13 ಪ್ಯಾಕೇಜ್‌ಗಳ ಟೆಂಡರ್ ಪ್ರಕ್ರಿಯೆ ಅಂತಿಮಗೊಂಡಿದ್ದು, ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲಾಗಿದೆ. ಇನ್ನೆರಡು ಪ್ಯಾಕೇಜ್‌ಗಳ ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದ ಕಡತ ಸರ್ಕಾರದ ಹಂತದಲ್ಲಿದ್ದು, ಶೀಘ್ರವೇ ಅನುಮೋದನೆ ದೊರೆಯಲಿದೆ ಎಂದು ತುಷಾರ್ ಗಿರಿನಾಥ್ ಸುದ್ದಿಗಾರರಿಗೆ ತಿಳಿಸಿದರು.

ವೈಟ್ ಟಾಪಿಂಗ್ ಕಾಮಗಾರಿ ನಡೆಯುವ ರಸ್ತೆಗಳಲ್ಲಿ ಯಾವುದಾದರೂ ಇಲಾಖೆಗಳಿಗೆ ಸಂಬಂಧಿಸಿದ ಕೆಲಸಗಳನ್ನು ಮಾಡಬೇಕಿದ್ದಲ್ಲಿ, ತಕ್ಷಣವೇ ಸಮೀಕ್ಷೆ ನಡೆಸಿ, ಕೋರಿಕೆ ಸಲ್ಲಿಸಬೇಕು. ವೈಟ್ ಟಾಪಿಂಗ್ ಕಾಮಗಾರಿ ನಡೆಸುವ ವೇಳೆಯೇ ಬದಲಾವಣೆಗಳಿದ್ದಲ್ಲಿ ಮಾಡಿಕೊಳ್ಳಬೇಕು. ಜಲಮಂಡಳಿಯಿಂದ ರಸ್ತೆಯ ಎರಡೂ ಬದಿ ಕೊಳವೆಗಳನ್ನು ಅಳವಡಿಸಿಕೊಳ್ಳಬೇಕು. ಕಾಮಗಾರಿ ಪೂರ್ಣಗೊಂಡ ಬಳಿಕ ಯಾವುದೇ ಕಾರಣಕ್ಕೂ ರಸ್ತೆ ಅಗೆಯಲು ಅಥವಾ ಕತ್ತರಿಸಲು ಅನುಮತಿ ನೀಡುವುದಿಲ್ಲ ಎಂದು ಹೇಳಿದರು.

ಸೌಲಭ್ಯಗಳಿಗೆ ಸಮಗ್ರ ವ್ಯವಸ್ಥೆ: ವೈಟ್ ಟಾಪಿಂಗ್ ಕಾಮಗಾರಿ ನಡೆಯುವ ರಸ್ತೆಗಳ ಎರಡೂ ಬದಿ ಪಾದಚಾರಿ ಮಾರ್ಗದಲ್ಲಿ 'ಯುಟಿಲಿಟಿಗಾಗಿ ಡಕ್ಟ್ಸ್' ಅಳವಡಿಕೆಗೆ ಸಮಗ್ರ ವ್ಯವಸ್ಥೆ ಮಾಡಿಕೊಳ್ಳಬೇಕು. ಈ ಸಂಬಂಧ ಸಂಬಂಧಪಟ್ಟ ಇಲಾಖೆಗಳ ಜೊತೆ ಸಮನ್ವಯ ಸಾಧಿಸಿಕೊಂಡು ಕಾರ್ಯನಿರ್ವಹಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಮಾಹಿತಿ ನೀಡಿದರು.



ವೈಟ್ ಟಾಪಿಂಗ್ ಕಾಮಗಾರಿ ಆರಂಭವಾಗುವ ಹಿನ್ನೆಲೆಯಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಇಲಾಖೆಗಳ ಸಮನ್ವಯ ಸಭೆಯಲ್ಲಿ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು

ಅಂಕಿ ಅಂಶ

- **₹1,700 ಕೋಟಿ** — 15 ಪ್ಯಾಕೇಜ್‌ಗಳ ಒಟ್ಟು ವೆಚ್ಚ
- **105** — ರಸ್ತೆಗಳಲ್ಲಿ ವೈಟ್‌ಟಾಪಿಂಗ್ ಕಾಮಗಾರಿ
- **157 ಕಿಲೋಮೀಟರ್** — ರಸ್ತೆಗಳ ಒಟ್ಟು ಉದ್ದ
- **11 ತಿಂಗಳು** — ಕಾಮಗಾರಿ ಪೂರ್ಣಗೊಳಿಸಲು ಗಡುವು

ಯಾವ ಪ್ರದೇಶದಲ್ಲಿ ವೈಟ್ ಟಾಪಿಂಗ್?

ಟ್ಯಾನರಿ ರಸ್ತೆ, ಡಿಜೆ ಹಳ್ಳಿ ಮುಖ್ಯರಸ್ತೆ, ಹೆಣ್ಣೂರು 80 ಅಡಿರಸ್ತೆ, ನಾಗವಾರ ಮುಖ್ಯರಸ್ತೆ, ಮಹಾತ್ಮ ಗಾಂಧಿ ರಸ್ತೆ, ವೆಸ್ಟ್ ಆಫ್ ಕಾರ್ಡ್ ರಸ್ತೆ, ಗೋವಿಂದರಾಜನಗರ ಮುಖ್ಯರಸ್ತೆ, ಜಕ್ಕೂರು ರಸ್ತೆ, ಉತ್ತರಹಳ್ಳಿ ಮುಖ್ಯರಸ್ತೆ, ಕಂಠೀರವ ಸ್ಟುಡಿಯೊ ರಸ್ತೆ, ಮಲ್ಲಸಂದ್ರ ಮುಖ್ಯರಸ್ತೆ, ಬಸವನಗುಡಿ ರಸ್ತೆ, ಚಾಮರಾಜಪೇಟೆ 2, 5, 7ನೇ ಮುಖ್ಯರಸ್ತೆ, ಬಿಟಿಎಂ ಲೇಔಟ್ 29ನೇ ಮುಖ್ಯರಸ್ತೆ, ಬಳ್ಳಾರಿ ರಸ್ತೆ, ದಿಣ್ಣೂರು ಮುಖ್ಯರಸ್ತೆ, ಗಾಂಧಿನಗರ ಕ್ಲಸ್ಟರ್ ರಸ್ತೆಗಳು, ರೇಸ್‌ಕೋರ್ಸ್ ರಸ್ತೆ ಸೇರಿದಂತೆ 43 ರಸ್ತೆಗಳನ್ನು ಬಿಬಿಎಂಪಿಯ ಕೇಂದ್ರ ಯೋಜನಾ ವಿಭಾಗದ ವತಿಯಿಂದ ವೈಟ್ ಟಾಪಿಂಗ್ ಮಾಡಲಾಗುತ್ತದೆ.

ಪೂರ್ವ, ಪಶ್ಚಿಮ, ದಕ್ಷಿಣ, ಯಲಹಂಕ, ರಾಜರಾಜೇಶ್ವರಿನಗರ ವಲಯಗಳ 62 ರಸ್ತೆಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿ ನಡೆಯಲಿದೆ.

ಸಂಚಾರ ಮಾರ್ಗ ಬದಲಾವಣೆ: ವೈಟ್ ಟಾಪಿಂಗ್ ಕಾಮಗಾರಿ ನಡೆಯುವ ರಸ್ತೆಗಳ ಪ್ರದೇಶದಲ್ಲಿ ಸಂಚಾರ ಪೊಲೀಸ್ ವಿಭಾಗದ ಜೊತೆ ಸಮನ್ವಯ ಸಾಧಿಸಿ ಮಾರ್ಗ ಬದಲಾವಣೆ ಮಾಡಿಕೊಳ್ಳಬೇಕು. ಕಾಲಮಿತಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕು. ಕಾಮಗಾರಿಯ ವೇಳೆ ವಾಹನಗಳ ಸಂಚಾರಕ್ಕೆ ಸಮಸ್ಯೆಯಾಗದಂತೆ ಹಂತ ಹಂತವಾಗಿ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ತಿಳಿಸಲಾಗಿದೆ ಎಂದರು.

ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಮಾತನಾಡಿ, 'ವೈಟ್ ಟಾಪಿಂಗ್ ಕಾಮಗಾರಿ ನಡೆಯುವ ರಸ್ತೆಗಳ ಬದಲು ಪರ್ಯಾಯ ರಸ್ತೆಗಳಲ್ಲಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಸಂಚಾರ ಪೊಲೀಸರಿಗೆ ಮನವಿ ಮಾಡಿಕೊಳ್ಳಲಾಗಿದೆ. ಹಗಲು-ರಾತ್ರಿ ಕಾಮಗಾರಿ ನಡೆಸಿ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು' ಎಂದರು.

ಬಿಬಿಎಂಪಿ ಯೋಜನಾ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್, ಜಲಮಂಡಳಿ ಮುಖ್ಯ ಎಂಜಿನಿಯರ್‌ಗಳಾದ ಗಂಗಾಧರ್, ವೆಂಕಟೇಶ್, ದೇವರಾಜ್, ಸಂಚಾರ ಪೊಲೀಸರು, ಕೆಪಿಟಿಸಿಎಲ್, ಬೆಸ್ಕಾಂ, ಜಲಮಂಡಳಿ, ಭಾರತೀಯ ಅನಿಲ ಪ್ರಾಧಿಕಾರದ (ಗೇಲ್) ಅಧಿಕಾರಿಗಳು ಉಪಸ್ಥಿತರಿದ್ದರು.

ಜುಲೈ 8ರಿಂದ ಕಾಮಗಾರಿ ಸ್ಥಗಿತ

ಬೇಡಿಕೆ ಈಡೇರಿಸಿಲ್ಲ: ಬಿಬಿಎಂಪಿ ಗುತ್ತಿಗೆದಾರರ ಸಂಘ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಗುತ್ತಿಗೆದಾರರ ಬೇಡಿಕೆಗಳನ್ನು ಈಡೇರಿಸದಿರುವುದರಿಂದ ಜುಲೈ 8ರಿಂದ ನಗರದಾದ್ಯಂತ ಕಾಮಗಾರಿಗಳನ್ನು ಸ್ಥಗಿತಗೊಳಿಸುವುದಾಗಿ ಬಿಬಿಎಂಪಿ ಗುತ್ತಿಗೆದಾರರ ಸಂಘ ತಿಳಿಸಿದೆ.

'ಗುತ್ತಿಗೆದಾರರ ಒಂಬತ್ತು ಬೇಡಿಕೆಗಳನ್ನು ಈಡೇರಿಸುವಂತೆ ಎರಡು ತಿಂಗಳಿಂದ ಐದಾರು ಬಾರಿ ಮನವಿ ಸಲ್ಲಿಸಲಾಗಿದೆ. ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಯವರ ಸಮ್ಮುಖದಲ್ಲಿ ನಡೆದ ಸಭೆಯಲ್ಲೂ ಬೇಡಿಕೆ ಈಡೇರಿಸಲು ಸೂಚಿಸಲಾಗಿತ್ತು. ಆದರೂ ಮುಖ್ಯ ಆಯುಕ್ತರು ಗುತ್ತಿಗೆದಾರರನ್ನು ಕಡೆಗಣಿಸಿದ್ದಾರೆ. ಬೇಡಿಕೆಗಳನ್ನು ಈಡೇರಿಸಿಲ್ಲ. ಹೀಗಾಗಿ, ಸೋಮವಾರದಿಂದ ಎಲ್ಲ ರೀತಿಯ ಕಾಮಗಾರಿಗಳನ್ನು ಸ್ಥಗಿತಗೊಳಿಸಲು ಸಂಘದ ಪದಾಧಿಕಾರಿಗಳ ಸಭೆಯಲ್ಲಿ ಮಂಗಳವಾರ ನಿರ್ಧರಿಸಲಾಗಿದೆ' ಎಂದು ಸಂಘದ ಅಧ್ಯಕ್ಷ ಜಿ.ಎಂ.ನಂದಕುಮಾರ್ ತಿಳಿಸಿದರು.

'ವಾರ್ಡ್ ಕಾಮಗಾರಿ, ಮಳೆ ನೀರುಗಾಲುವೆ, ರಸ್ತೆಗಳು, ವೈಟ್ ಟಾಪಿಂಗ್, ಕೆರೆ, ಯೋಜನೆ, ತೋಟಗಾರಿಕೆ ವಿಭಾಗ ಸೇರಿದಂತೆ ಎಲ್ಲ ರೀತಿಯ ಕಾಮಗಾರಿಗಳನ್ನೂ ಸ್ಥಗಿತಗೊಳಿಸಲು ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಸಮ್ಮತಿಸಿದ್ದಾರೆ' ಎಂದು ಹೇಳಿದರು.

ಬೇಡಿಕೆಗಳೇನು?: ಗುತ್ತಿಗೆದಾರರಿಗೆ ಕಾಮಗಾರಿಗಳ ಬಿಲ್ಲುಗಳನ್ನು ಪಾವತಿ ಮಾಡುವ ಸಮಯದಲ್ಲಿ ತಡೆಹಿಡಿದಿರುವ ಶೇ 25 ಬಾಕಿ ಹಣ ಬಿಡುಗಡೆ ಮಾಡಬೇಕು. 24 ತಿಂಗಳಿಂದ ಕೈಗೊಂಡ ಕಾಮಗಾರಿಗಳಿಗೆ ಸುಮಾರು ₹1,600 ಕೋಟಿ ಪಾವತಿಸಬೇಕಾಗಿದ್ದು, ಅದರಲ್ಲಿ ಕನಿಷ್ಠ 12 ತಿಂಗಳ ಎಲ್‌ಒಸಿ ಬಿಡುಗಡೆ ಮಾಡಬೇಕು. ಗುತ್ತಿಗೆದಾರರಿಗೆ ಬಿಲ್ ಸಲ್ಲಿಸಲು ಸರಳ ಮಾದರಿ ಹಾಗೂ ಟಿವಿಸಿಸಿ ರ‍್ಯಾಂಡಮೈಸೇಷನ್ ತನಿಖೆ ಕೈಬಿಡಬೇಕು. ಕೇಂದ್ರ ಕಚೇರಿಯ ಮುಖ್ಯ ಲೆಕ್ಕಾಧಿಕಾರಿಗಳ ಕಚೇರಿಯಿಂದ ಬಿಲ್ ಪಾವತಿಸಬೇಕು.. ಕಟ್ಟಡ ಕಾಮಗಾರಿಗಳ ಬಿಲ್‌ಗಳನ್ನು 'ಎಸೆನ್ಷಿಯಲ್' ಎಂದು ಪರಿಗಣಿಸಿ ತ್ವರಿತವಾಗಿ ಪಾವತಿಸಬೇಕು. ಹಿಂದಿನ ಪದ್ಧತಿಯಂತೆ ಟೆಂಡರ್ ಪ್ರೀಮಿಯಂ ಅಧಿಕಾರವನ್ನು ಮುಖ್ಯ ಎಂಜಿನಿಯರ್‌ಗೆ ನೀಡಬೇಕು. ಕೆಆರ್‌ಐಡಿಎಲ್ ಸಂಸ್ಥೆಯ ಬಾಕಿ ಬಿಲ್ಲುಗಳನ್ನು ಪಾವತಿಸಬೇಕು ಎಂಬ ಬೇಡಿಕೆಗಳನ್ನು ಗುತ್ತಿಗೆದಾರರ ಸಂಘ ಮುಂದಿಟ್ಟಿದೆ.



ಕಾಮಗಾರಿಗಳನ್ನು ಸ್ಥಗಿತಗೊಳಿಸುವ ಬಗ್ಗೆ ಬಿಬಿಎಂಪಿ ಗುತ್ತಿಗೆದಾರರ ಸಂಘದ ಸದಸ್ಯರು ಮಂಗಳವಾರ ಸಭೆ ನಡೆಸಿದರು

ಸಿಇಟಿ ದಾಖಲೆ: ತಪ್ಪು ಕಂಡರೆ ಕಚೇರಿಗೆ ಬರಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸಿಇಟಿ ಅಭ್ಯರ್ಥಿಗಳ ದಾಖಲಾತಿ ಪರಿಶೀಲನಾ ಮಾಹಿತಿಯನ್ನು ಪ್ರಕಟಿಸಿದ್ದು, ತಪ್ಪು ಕಂಡುಬಂದಿದ್ದರೆ ಅಂತಹ ಅಭ್ಯರ್ಥಿಗಳು ಜುಲೈ 4ರಿಂದ 6ರ ಒಳಗೆ ಮಲ್ಲೇಶ್ವರದ ಕಚೇರಿಗೆ ಖುದ್ದು ಹಾಜರಾಗಬೇಕು ಎಂದು ಕೆಇಎ ಹೇಳಿದೆ.

ಒಂದು ಲಕ್ಷಕ್ಕಿಂತ ಒಳಗಿನ ರ‍್ಯಾಂಕಿಂಗ್‌ನ ವಿದ್ಯಾರ್ಥಿಗಳು ಜುಲೈ 4ರಂದು, 1.8 ಲಕ್ಷಕ್ಕಿಂತ ಒಳಗಿನವರು ಜುಲೈ 5ರಂದು ಹಾಗೂ 1.8 ಲಕ್ಷಕ್ಕಿಂತ ಮೇಲ್ಪಟ್ಟ ರ‍್ಯಾಂಕ್ ಪಡೆದವರು ಜುಲೈ 6ರಂದು ಕೆಇಎ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ವೇಳಾಪಟ್ಟಿಯ ಪ್ರಕಾರ ಹಾಜರಾಗಬೇಕು. ಸಿಇಟಿಗೆ ಸಲ್ಲಿಸಿದ್ದ ಅರ್ಜಿ ಪ್ರತಿ, ಪ್ರವೇಶ ಪತ್ರ, ಅಗತ್ಯವಿರುವ ಎಲ್ಲಾ ಮೂಲ ದಾಖಲೆಗಳು ಮತ್ತು ಎಲ್ಲಾ ಪ್ರಮಾಣಪತ್ರಗಳ ಎರಡು ಸೆಟ್ ಜೆರಾಕ್ಸ್ ಪ್ರತಿಗಳೊಂದಿಗೆ ಬರಬೇಕು ಎಂದು ಸೂಚಿಸಿದೆ.

ಎಲ್ಲಾ ಮಾಹಿತಿ ಸರಿ ಇರುವವರು ಕೆಇಎ ಕಚೇರಿಗೆ ಭೇಟಿ ನೀಡುವ ಅಗತ್ಯವಿಲ್ಲ. ವೆರಿಫಿಕೇಶನ್ ಸ್ಲಿಪ್ ಡೌನ್ಲೋಡ್ ಮಾಡಿಕೊಳ್ಳಲು ಶೀಘ್ರದಲ್ಲೇ ಅವಕಾಶ ಕಲ್ಪಿಸಲಾಗುವುದು ಎಂದು ಮಾಹಿತಿ ನೀಡಲಾಗಿದೆ.

ವಿಭಾಗೀಯ ನ್ಯಾಯಪೀಠದಲ್ಲಿ ಮೇಲ್ಮನವಿಯ ವಿಚಾರಣೆ ಪೂರ್ಣ

ಪವರ್ ಟಿ.ವಿ.ಮೇಲ್ಮನವಿ: ಇಂದು ತೀರ್ಪು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರವಾನಗಿ ನವೀಕರಿಸದ ಆರೋಪದಡಿ ಪವರ್ ಟಿ.ವಿ.ಕನ್ನಡ ಚಾನಲ್ ತನ್ನೆಲ್ಲಾ ಕಾರ್ಯಕ್ರಮಗಳ ಪ್ರಸಾರ ಸ್ಥಗಿತಗೊಳಿಸಬೇಕು' ಎಂದು ಏಕಸದಸ್ಯ ನ್ಯಾಯಪೀಠ ನೀಡಿದ್ದ ಆದೇಶ ಪ್ರಶ್ನಿಸಿದ ಮೇಲ್ಮನವಿಯನ್ನು ಹೈಕೋರ್ಟ್‌ನ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ಪೂರ್ಣಗೊಳಿಸಿ ತೀರ್ಪು ಕಾಯ್ದಿರಿಸಿದೆ.

ಈ ಸಂಬಂಧ 'ಮೆಸರ್ಸ್ ಪವರ್ ಸ್ಮಾರ್ಟ್ ಮೀಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿ' ನಿರ್ದೇಶಕ ಬೆಂಗಳೂರಿನ ದಬ್ಬೇಗಟ್ಟ ಮಧು ಲಕ್ಷ್ಮಣ, 'ಮೆಸರ್ಸ್ ಮಿಟ್‌ಕಾನ್ ಇನ್‌ಫ್ರಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ' ನಿರ್ದೇಶಕ ಮುಂಬೈನ ಶ್ರೀಕಾಂತ್ ಮಿಥೇಶ್ ಬಾಂಗ್ದಿಯಾ ಮತ್ತು 'ಪವರ್ ಸ್ಮಾರ್ಟ್ ಮೀಡಿಯಾ'ದ ಬೆಂಗಳೂರಿನ ಹೆಚ್ಚುವರಿ ನಿರ್ದೇಶಕ ರಾಕೇಶ್ ಸಂಜೀವ ಶೆಟ್ಟಿ ಅಲಿಯಾಸ್ ರಾಕೇಶ್ ಶೆಟ್ಟಿ ಸಲ್ಲಿಸಿದ್ದ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಮೇಲ್ಮನವಿದಾರ ಕಂಪನಿಗಳ ಪರ ವಾದ ಮಂಡಿಸಿದ ಹಿರಿಯ ವಕೀಲರಾದ ಎಸ್.ಎಸ್.ನಾಗಾನಂದ, 'ಸಚಿವಾಲಯ ಹೊರಡಿಸಿರುವ ಷೋಕಾಸ್ ನೋಟಿಸ್ ಆಧರಿಸಿ ಚಾನಲ್ ಸ್ಥಗಿತಗೊಳಿಸಲು ಏಕಸದಸ್ಯ ನ್ಯಾಯಪೀಠ ನೀಡಿರುವ ಆದೇಶ ಸೂಕ್ತವಾಗಿಲ್ಲ. ಅರ್ಜಿದಾರರು ಷೋಕಾಸ್ ನೋಟಿಸ್‌ಗೆ ಈಗಾಗಲೇ ವಿವರವಾದ ಉತ್ತರವನ್ನು ನೀಡಿದ್ದಾರೆ. ಆದರೂ, ಏಕಸದಸ್ಯ ನ್ಯಾಯಪೀಠವು ಚಾನಲ್ ಸ್ಥಗಿತಗೊಳಿಸಲು ನೀಡಿರುವ ಆದೇಶದಿಂದ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಸಿದುಕೊಂಡಂತಾಗಿದೆ' ಎಂದು ಪ್ರತಿಪಾದಿಸಿದರು.

ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಅರವಿಂದ ಕಾಮತ್ ಅವರು, 'ಮೆಸರ್ಸ್ ಮಿಟ್‌ಕಾನ್ ಇನ್‌ಫ್ರಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಪರವಾನಗಿಯನ್ನು 2021ರ ಅಕ್ಟೋಬರ್ 12ರಿಂದಲೇ ಅನ್ವಯವಾಗುವಂತೆ ರದ್ದುಗೊಳಿಸಲಾಗಿದೆ. ಆದರೂ, ಕಾನೂನು ಬಾಹಿರವಾಗಿ ಕಾರ್ಯಕ್ರಮ ಪ್ರಸಾರ ಮಾಡಲಾಗುತ್ತಿದೆ. ಹೀಗಾಗಿ, ಏಕಸದಸ್ಯ ನ್ಯಾಯಪೀಠದ ಆದೇಶ ಸೂಕ್ತವಾಗಿಯೇ ಇದೆ' ಎಂದು ಸಮರ್ಥಿಸಿದರು. ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ ಇದೇ 3ಕ್ಕೆ (ಬುಧವಾರ) ತೀರ್ಪು ಪ್ರಕಟಿಸುವುದಾಗಿ ತಿಳಿಸಿತು.

ಗೌರಿ ಲಂಕೇಶ್ ಹತ್ಯೆ ಆರೋಪಿಗಳ ಅರ್ಜಿ ವಜಾ

ಬೆಂಗಳೂರು: 'ಗೌರಿ ಲಂಕೇಶ್ ಹತ್ಯೆ ಪ್ರಕರಣದಲ್ಲಿ ಪೊಲೀಸರು ನಮ್ಮನ್ನು ಬಂಧಿಸಿದ ನಂತರ ವಿಚಾರಣೆ ಸಂದರ್ಭದಲ್ಲಿ ಸಾಕಷ್ಟು ದೈಹಿಕ ಹಿಂಸೆ ನೀಡಿದ್ದು, ಈ ಬಗ್ಗೆ ವಿಶೇಷ ವಿಚಾರಣೆ ನಡೆಸಿ ವರದಿ ಸಲ್ಲಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಪ್ರಕರಣದ ನಾಲ್ವರು ಆರೋಪಿಗಳು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಕುರಿತಂತೆ ಆರೋಪಿಗಳಾದ ಸುಜಿತ್ ಕುಮಾರ್, ಮನೋಹರ ಯಡವೆ, ಅಮೋಲ್ ಕಾಳೆ ಮತ್ತು ಅಮಿತ್ ರಾಮಚಂದ್ರ ದಿಗ್ವೇಕರ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎನ್.ಎಸ್.ಸಂಜಯಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಈಗಾಗಲೇ ಪ್ರಕರಣದ ತನಿಖೆ ಪೂರ್ಣಗೊಂಡು ಆರೋಪಿಗಳು ನ್ಯಾಯಾಂಗ ಬಂಧನದಲ್ಲಿದ್ದಾರೆ. ಆದ ಕಾರಣ ಅವರ ಮನವಿ ಪರಿಗಣಿಸಲಾಗದು' ಎಂದು ತಿಳಿಸಿ ಅರ್ಜಿ ವಿಲೇವಾರಿ ಮಾಡಿದೆ.

'ನಮ್ಮನ್ನು ಬಂಧಿಸಿದ ವೇಳೆ ಪೊಲೀಸರು ಕಾನೂನಿನ ರೀತ್ಯಾ ನಮ್ಮ ಕುಟುಂಬ ಸದಸ್ಯರಿಗಾಗಲೀ ಅಥವಾ ಹತ್ತಿರದವರಿಗಾಗಲೀ ಯಾವುದೇ ಮಾಹಿತಿ ನೀಡಿಲ್ಲ. ಬಂಧನದ ನಂತರ ಪೊಲೀಸ್ ಕಸ್ಟಡಿಯಲ್ಲಿ ನಮ್ಮನ್ನು ಅತ್ಯಂತ ನಿಕೃಷ್ಟವಾಗಿ ನಡೆಸಿಕೊಂಡು ದೈಹಿಕವಾಗಿ ಚಿತ್ರಹಿಂಸೆ ನೀಡಲಾಗಿದೆ. ಪೊಲೀಸರ ಈ ಕಾನೂನುಬಾಹಿರ ಕ್ರಮದ ಬಗ್ಗೆ ತೆ ವಿಶೇಷ ವಿಚಾರಣೆ ನಡೆಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಲು ರಾಜ್ಯ ಗೃಹ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

ಮಂಜುನಾಥ ಸ್ವಾಮೀಜಿ ವಿರುದ್ಧದ ವಿಚಾರಣೆಗೆ ತಡೆ

ಬೆಂಗಳೂರು: 'ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಹೊತ್ತ ಪ್ರಕರಣದಲ್ಲಿನ ಸಂತ್ರಸ್ತೆಗೆ ಬೆದರಿಕೆ ಹಾಕಿದ್ದಾರೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಕುಣಿಗಲ್ ತಾಲ್ಲೂಕಿನ ಹುಲಿಯೂರು ದುರ್ಗ ಹೋಬಳಿ ಹಂಗರಹಳ್ಳಿಯ ಶ್ರೀವಿದ್ಯಾ ಚೌಡೇಶ್ವರಿ ದೇವಸ್ಥಾನದ (ಶ್ರೀ ಮಠ) ಬಾಲ ಮಂಜುನಾಥ ಸ್ವಾಮೀಜಿ (36) ವಿರುದ್ಧದ ವಿಚಾರಣಾ ಕೋರ್ಟ್‌ನ ನ್ಯಾಯಿಕ ಪ್ರಕ್ರಿಯೆಗೆ ಹೈಕೋರ್ಟ್ ತಡೆ ನೀಡಿದೆ.

ಈ ಕುರಿತಂತೆ ಬಾಲ ಮಂಜುನಾಥ ಸ್ವಾಮೀಜಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿತು. ವಿಚಾರಣೆ ವೇಳೆ ಅರ್ಜಿದಾರ ಸ್ವಾಮೀಜಿ ಪರ ವಕೀಲೆ ಲೀಲಾ ಪಿ.ದೇವಾಡಿಗ, 'ಸ್ವಾಮೀಜಿ ವಿರುದ್ಧ ಹುಲಿಯೂರು ದುರ್ಗ ಪೊಲೀಸ್ ಠಾಣೆಯಲ್ಲಿ ದಾಖಲಾದ ಎಫ್‌ಐಆರ್ ಆಧಾರರಹಿತ ಮತ್ತು ಕಾನೂನುಬಾಹಿರವಾಗಿದೆ. ಮೇಲ್ನೋಟಕ್ಕೆ ಇದು ದುರುದ್ದೇಶಪೂರಿತ ಮತ್ತು ಸುಳ್ಳು ಅಂಶಗಳಿಂದ ಕೂಡಿದೆ. ಸ್ವಾಮೀಜಿಯ ವ್ಯಕ್ತಿತ್ವ, ಕೀರ್ತಿಗೆ ಧಕ್ಕೆ ತರುವಂತಿದೆ' ಎಂದು ಆಕ್ಷೇಪಿಸಿದರು.

'ಸಂತ್ರಸ್ತ ಬಾಲಕಿಗೆ ಸ್ವಾಮೀಜಿ ಬೆದರಿಕೆ ಹಾಕಿದ್ದಾರೆ ಎಂಬ ಬಗ್ಗೆ ದೂರಿನಲ್ಲಿ ಎಲ್ಲೂ ಪ್ರಸ್ತಾಪಿಸಿಲ್ಲ. ಪ್ರಾಸಿಕ್ಯೂಷನ್ ವಿನಾಕಾರಣ ದೂರಿನ ವ್ಯಾಪ್ತಿಯಿಂದ ಆಚೆಗೆ, ಸಲ್ಲದ ಆರೋಪಗಳನ್ನು ಹೊರಿಸುತ್ತಿದೆ. ಆದ್ದರಿಂದ, ಎಫ್‌ಐಆರ್ ರದ್ದುಪಡಿಸಬೇಕು ಮತ್ತು ಕುಣಿಗಲ್‌ನ ಹೆಚ್ಚುವರಿ ಸಿವಿಲ್ ಜಡ್ಜ್ (ಹಿರಿಯ ವಿಭಾಗ) ಮತ್ತು ಸಿಜೆಎಂ ಕೋರ್ಟ್‌ನಲ್ಲಿ ಇರುವ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣಾ ಕೋರ್ಟ್ ಪ್ರಕ್ರಿಯೆಗೆ ಮಧ್ಯಂತರ ತಡೆ ನೀಡಿ ಆದೇಶಿಸಿತು.

ಅಭಿವೃದ್ಧಿ ಕಾಮಗಾರಿ ಪರಿಶೀಲಿಸಿದ ಬಿಡಿಎ ಅಧ್ಯಕ್ಷ ಎನ್‌.ಎ. ಹ್ಯಾರಿಸ್

ಕೊಮ್ಮಘಟ್ಟ: ಫ್ಲ್ಯಾಟ್ ಹಂಚಿಕೆ ಶೀಘ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ನಿರ್ಮಿಸಲಾಗುತ್ತಿರುವ ಕೊಮ್ಮಘಟ್ಟ ವಸತಿ ಸಮುಚ್ಚಯದ ಫ್ಲ್ಯಾಟ್‌ಗಳನ್ನು ಶೀಘ್ರವೇ ಹಂಚಿಕೆ ಮಾಡಲಾಗುವುದು ಎಂದು ಬಿಡಿಎ ಅಧ್ಯಕ್ಷ ಎನ್‌.ಎ. ಹ್ಯಾರಿಸ್ ತಿಳಿಸಿದರು.

ಬಿಡಿಎ ಅಭಿವೃದ್ಧಿ ಕಾಮಗಾರಿಗಳನ್ನು ಮಂಗಳವಾರ ಪರಿಶೀಲಿಸಿದ ಅವರು, ಕೊಮ್ಮಘಟ್ಟ ವಸತಿ ಸಮುಚ್ಚಯಕ್ಕೆ ನಾನಾ ಸಂಸ್ಥೆಗಳಿಂದ ನಿರಾಕ್ಷೇಪಣಾ ಪತ್ರಗಳು ಸದ್ಯವೇ ಲಭ್ಯವಾಗಲಿವೆ. ಮೂರು ಬ್ಲಾಕ್‌ಗಳಲ್ಲಿ 1,176 ಫ್ಲ್ಯಾಟ್‌ಗಳು ಲಭ್ಯವಿವೆ. ಒಂದು ಎಂಎಲ್‌ಡಿ ತ್ಯಾಜ್ಯ ನೀರು ಸಂಸ್ಕರಣೆ ಘಟಕ, ಮಳೆ ನೀರು ಸಂಗ್ರಹ, 924 ಕಾರುಗಳ ನಿಲುಗಡೆ ವ್ಯವಸ್ಥೆ ಹೊಂದಿದೆ ಎಂದರು.

ಕೊಮ್ಮಘಟ್ಟ ವಸತಿ ಸಮುಚ್ಚಯದಲ್ಲಿ 3 ಬಿಎಚ್‌ಕೆ ಫ್ಲ್ಯಾಟ್‌ಗೆ (1,314 ಚದರಡಿ) ₹65.70 ಲಕ್ಷ, 2 ಬಿಎಚ್‌ಕೆಗೆ (978 ಚದರಡಿ) ₹54.3 ಲಕ್ಷ, 2 ಬಿಎಚ್‌ಕೆಗೆ (904 ಚದರಡಿ) ₹49.15 ಲಕ್ಷ ದರ ನಿಗದಿ ಮಾಡಲಾಗಿದೆ ಎಂದು ಮಾಹಿತಿ ನೀಡಿದರು. ಇದಲ್ಲದೆ, ಬಿಡಿಎಯ ಹಲವು ವಸತಿ ಸಮುಚ್ಚಯಗಳಲ್ಲಿ 1,170 ಫ್ಲ್ಯಾಟ್‌ಗಳು ಮಾರಾಟಕ್ಕೆ ಲಭ್ಯವಿವೆ ಎಂದರು.



ಕೊಮ್ಮಘಟ್ಟ ವಸತಿ ಸಮುಚ್ಚಯದ ಕಾಮಗಾರಿಯನ್ನು ಬಿಡಿಎ ಅಧ್ಯಕ್ಷ ಎನ್‌.ಎ. ಹ್ಯಾರಿಸ್ ಅವರು ಮಂಗಳವಾರ ಪರಿಶೀಲಿಸಿದರು

ಕೆಂಪೇಗೌಡ ಬಡಾವಣೆಯ ವೀಕ್ಷಣೆ ಸಂದರ್ಭದಲ್ಲಿ ಮನೆಗಳು ನಿರ್ಮಾಣವಾಗದ ಬಗ್ಗೆ ಪ್ರತಿಕ್ರಿಯಿಸಿದ ಅಧ್ಯಕ್ಷರು, 'ಮೂಲಸೌಕರ್ಯಗಳನ್ನು ಒದಗಿಸಿ ನಿವೇಶನ ಹಂಚಲಾಗಿದೆ. ಮನೆಗಳನ್ನೇ ಕಟ್ಟಿಲ್ಲ. 25 ಲಕ್ಷ ಲೀಟರ್ ನೀರಿನ ಎಸ್‌ಟಿಪಿಗಳು ಸಿದ್ಧವಾಗಿವೆ. ವಿದ್ಯುತ್ ಉಪಕೇಂದ್ರ ಸಿದ್ಧವಾಗಿವೆ. ಮಾಗಡಿ ರಸ್ತೆ- ಮೈಸೂರು ರಸ್ತೆ ಸಂಪರ್ಕವಿದೆ. ಮನೆಗಳನ್ನು ಕಟ್ಟಿಕೊಳ್ಳಿ, ಬಾಕಿ ಸೌಲಭ್ಯ ಕಲ್ಪಿಸುತ್ತೇವೆ' ಎಂದು ಸ್ಥಳೀಯರಿಗೆ ಹೇಳಿದರು.

'ಕೆಂಪೇಗೌಡ ಬಡಾವಣೆಯಲ್ಲಿ 70ಕ್ಕೂ ಹೆಚ್ಚು ನಿವೇಶನದಾರರು ಕಟ್ಟಡ ನಕ್ಷೆ ಮಂಜೂರಾತಿಗೆ ಅರ್ಜಿ ಸಲ್ಲಿಸಿದ್ದಾರೆ. 25 ಮಂದಿ ನಕ್ಷೆ ಪಡೆದು ಮನೆ ಕಟ್ಟಿದ್ದಾರೆ' ಎಂದರು.

ಕೆಂಪೇಗೌಡ ಬಡಾವಣೆ ಮತ್ತು ಕೊಮ್ಮಘಟ್ಟ ವಸತಿ ಸಮುಚ್ಚಯದ ನಿವಾಸಿಗಳಿಗೆ ನಾಗರಿಕ ಸೌಲಭ್ಯ ನಿವೇಶನದಲ್ಲಿ ಬಹೂಪಯೋಗಿ ವಾಣಿಜ್ಯ ಸಂಕೀರ್ಣ ಒಳಗೊಂಡಂತೆ ಕ್ಲಬ್ ಹೌಸ್, ಈಜುಕೊಳ, ಶಾಪಿಂಗ್ ಮಳಿಗೆಗಳು, ವ್ಯಾಯಾಮ ಶಾಲೆ, ಮಿನಿ ಥಿಯೇಟರ್, ಒಳ ಕ್ರೀಡಾಂಗಣ ನಿರ್ಮಿಸಲು ಉದ್ದೇಶಿಸಲಾಗಿದೆ ಎಂದರು.

'ಕೆಂಪೇಗೌಡ ಬಡಾವಣೆಯಲ್ಲಿ 26 ಸಾವಿರ ನಿವೇಶನ ಹಂಚಿಕೆಯಾಗಿದ್ದರೂ, 26 ಮನೆಗಳನ್ನು ಮಾತ್ರ ನಿರ್ಮಿಸಲಾಗಿದೆ. ಮನೆ ಏಕೆ ಕಟ್ಟುತ್ತಿಲ್ಲ ಎಂಬುದಕ್ಕೆ ಅಧ್ಯಕ್ಷರು ನಿವೇಶನದಾರರೊಂದಿಗೆ ಬಡಾವಣೆಯ ಪ್ರವಾಸ ಮಾಡಬೇಕು' ಎಂದು ನಾಡಪ್ರಭು ಕೆಂಪೇಗೌಡ ಮುಕ್ತ ವೇದಿಕೆ ಅಧ್ಯಕ್ಷ ಚನ್ನಬಸವರಾಜು ಸಲಹೆ ನೀಡಿದರು.

ಬೆಂಗಳೂರಿಗೆ ವಂದೇ ಭಾರತ್ ಸ್ಲೀಪರ್ ರೈಲು

ಪ್ರಜಾವಾಣಿ ವಾರ್ತೆ

ನವದೆಹಲಿ: ವಂದೇ ಭಾರತ್ ಸ್ಲೀಪರ್ ರೈಲುಗಳು ಓಡಾಟಕ್ಕೆ ಸಿದ್ಧವಾಗಿದ್ದು, ಬೆಂಗಳೂರು, ಗೋವಾ, ಮುಂಬೈ, ಕೋಲ್ಕತ್ತ ಮತ್ತಿತರ ನಗರಗಳಿಗೆ ಸಂಪರ್ಕ ಕಲ್ಪಿಸುವ ಉದ್ದೇಶದಿಂದ 10 ಮಾರ್ಗಗಳಲ್ಲಿ ನೂತನ ಮಾದರಿಯ ರೈಲುಗಳ ಸಂಚಾರವನ್ನು ಆರಂಭಿಸಲು ಭಾರತೀಯ ರೈಲ್ವೆ ಕಾರ್ಯನಿರತವಾಗಿದೆ.

ಮೊದಲ ಎರಡು ರೈಲುಗಳು ಮುಂಬೈ ಮತ್ತು ಕೋಲ್ಕತ್ತದಲ್ಲಿ ಸಂಚರಿಸಲಿದ್ದು, ಅದಕ್ಕಾಗಿ ರೈಲು ಹಳಿಗಳು ಮತ್ತು ಸಿಗ್ನಲ್ ವ್ಯವಸ್ಥೆಯನ್ನು ಮೇಲ್ದರ್ಜೆಗೆ ಏರಿಸಲಾಗುತ್ತಿದೆ.



ವಂದೇ ಭಾರತ್ ರೈಲು

ಅತ್ಯುತ್ತಮ ಸೌಕರ್ಯಗಳನ್ನು ಹೊಂದಿರುವ ವಂದೇ ಭಾರತ್ ಸ್ಲೀಪರ್ ರೈಲುಗಳ ಸೇವೆಯನ್ನು ದೂರದ ರಾತ್ರಿ ಪ್ರಯಾಣಕ್ಕೆ ಮೀಸಲಿಡಲಾಗುತ್ತದೆ.

10 ವಂದೇ ಭಾರತ್ ಸ್ಲೀಪರ್ ರೈಲುಗಳನ್ನು ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ (ಬಿಇಎಂಎಲ್) ನಿರ್ಮಿಸುತ್ತಿದೆ.

ಈಗಿನ ವಂದೇ ಭಾರತ್‌ಗಿಂತಲೂ ವಿಶೇಷ ಸೌಲಭ್ಯಗಳನ್ನು ಸ್ಲೀಪರ್ ರೈಲು ಹೊಂದಿರಲಿದೆ. ಹವಾನಿಯಂತ್ರಣ ವ್ಯವಸ್ಥೆ, ವೈರಸ್ ನಿಯಂತ್ರಣ ತಂತ್ರಜ್ಞಾನ ಇರಲಿದೆ. ಅಗ್ನಿ ಅವಘಡ ನಿಯಂತ್ರಣ ಸೇರಿ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ.

ಜೆಟಿಒ ಆಯ್ಕೆ ಪಟ್ಟಿ: 'ಸುಪ್ರೀಂ' ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: 2021ರಲ್ಲಿ ಪ್ರಕಟಿಸಿದ್ದ ಕಿರಿಯ ತರಬೇತಿ ಅಧಿಕಾರಿಗಳ (ಜೆಟಿಒ) ಆಯ್ಕೆ ಪಟ್ಟಿಯನ್ನು ಪರಿಷ್ಕರಿಸುವಂತೆ ಕರ್ನಾಟಕ ಲೋಕ ಸೇವಾ ಆಯೋಗಕ್ಕೆ (ಕೆಪಿಎಸ್‌ಸಿ) ನಿರ್ದೇಶನ ನೀಡಿದ್ದ ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆ ನೀಡಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರನ್ನು ಒಳಗೊಂಡ ಪೀಠವು ಈ ಸಂಬಂಧ ಕರ್ನಾಟಕ ಸರ್ಕಾರ ಮತ್ತು ಇತರರಿಗೆ ನೋಟಿಸ್ ಜಾರಿ ಮಾಡಿದೆ.

ರಾಜ್ಯದಲ್ಲಿ ಬಿಎಸ್‌ಪಿ ಪುನಶ್ಚೇತನಕ್ಕೆ ಸಂಕಲ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬಿಎಸ್‌ಪಿಯನ್ನು ತಳಮಟ್ಟದಿಂದ ಸದೃಢಗೊಳಿಸುವ ಸಂಬಂಧ ರಾಷ್ಟ್ರೀಯ ಅಧ್ಯಕ್ಷರ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ತೀರ್ಮಾನಿಸಲಾಯಿತು ಎಂದು ಪಕ್ಷದ ರಾಜ್ಯ ಘಟಕವು ತಿಳಿಸಿದೆ.

ಪಕ್ಷದ ಕಚೇರಿಯಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಈ ವಿಚಾರಗಳನ್ನು ಚರ್ಚಿಸಲಾಯಿತು. ವಿಧಾನಸಭೆ ಮತ್ತು ಲೋಕಸಭಾ ಚುನಾವಣೆಗಳಲ್ಲಿ ಪಕ್ಷಕ್ಕೆ ನಿರೀಕ್ಷಿಸಿದ್ದಷ್ಟು ಫಲಿತಾಂಶ ಬಂದಿಲ್ಲ. ಅದಕ್ಕೆ ಕಾರಣಗಳೇನು ಎಂಬುದರ ಬಗ್ಗೆ ಮತ್ತು ಪಕ್ಷವನ್ನು ಬಲಿಷ್ಠಗೊಳಿಸುವ ಬಗ್ಗೆ ಚರ್ಚಿಸಲಾಯಿತು ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

ಸಭೆಯಲ್ಲಿ ರಾಜ್ಯ ಉಸ್ತುವಾರಿ ಡಾ.ಅಶೋಕ್ ಸಿದ್ದಾರ್ಥ, ರಾಜ್ಯ ಸಂಯೋಜಕರುಗಳಾದ ನಿತಿನ್ ಸಿಂಗ್, ಎಂ.ಗೋಪಿನಾಥ್, ಎಂ. ಕೃಷ್ಣಮೂರ್ತಿ, ರಾಜ್ಯ ಅಧ್ಯಕ್ಷರಾದ ಮಾರಸಂದ್ರ ಮುನಿಯಪ್ಪ ಇದ್ದರು.



ಬಿಎಸ್‌ಪಿ ಸಭೆಯಲ್ಲಿ ಬಿ.ಆರ್‌.ಅಂಬೇಡ್ಕರ್ ಮತ್ತು ಕಾನ್ಶಿರಾಂ ಅವರ ಭಾವಚಿತ್ರಗಳಿಗೆ ಮಾಲಾರ್ಪಣೆ ಮಾಡಲಾಯಿತು

ಡ್ರಗ್ಸ್: ಕೃಪಾನಿಧಿ ವಿದ್ಯಾರ್ಥಿಗಳಿಂದ ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಪೊಲೀಸರ ಸಹಕಾರದಲ್ಲಿ ಕೃಪಾನಿಧಿ ಸಮೂಹ ಸಂಸ್ಥೆಗಳ ವಿದ್ಯಾರ್ಥಿಗಳು ನಗರದಲ್ಲಿ ಡ್ರಗ್ಸ್ ವಿರುದ್ಧ ಜಾಗೃತಿ ಮೂಡಿಸಿದರು.

ನಗರದಲ್ಲಿ ನಡೆದ ಡ್ರಗ್ಸ್ ಮುಕ್ತ ಸಮಾಜ ಕಾರ್ಯಕ್ರಮದಲ್ಲಿ ಜಾಗೃತಿ ನಡಿಗೆ ನಡೆಸಿ, ಡ್ರಗ್ಸ್‌ನ ಅಪಾಯದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಯಿತು. ರಂಗೋಲಿ, ಚಿತ್ರಕಲೆ ಸೇರಿ ವಿವಿಧ ಸ್ಪರ್ಧೆಗಳನ್ನೂ ಹಮ್ಮಿಕೊಳ್ಳಲಾಗಿತ್ತು. ಮಾದಕವಸ್ತು ಸೇವನೆಯ ವ್ಯಸನದ ಅಪಾಯದ ಕುರಿತಾದ ಕಲಾಕೃತಿಗಳ ಪ್ರದರ್ಶನವೂ ನಡೆಯಿತು.

'ಮಾದಕ ವಸ್ತುಗಳ ಬಳಕೆಯ ವಿರುದ್ಧದ ಹೋರಾಟದಲ್ಲಿ ಸಮುದಾಯದ ಪಾತ್ರ'ದ ಬಗ್ಗೆ ವೈಟ್‌ಫೀಲ್ಡ್ ಉಪ ವಿಭಾಗದ ಎಸಿಪಿಗಳಾದ ಶಿವಕುಮಾರ್ ಹಾಗೂ ಪ್ರಿಯದರ್ಶಿನಿ ಈಶ್ವರ್ ಸಾನಿಕೋಪ್ ವಿವರಿಸಿದರು.



ಕಾರ್ಯಕ್ರಮದಲ್ಲಿ ಬೆಂಗಳೂರು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ ಅವರನ್ನು ಕೃಪಾನಿಧಿ ಸಮೂಹ ಸಂಸ್ಥೆಗಳ ನಿರ್ದೇಶಕ ಸ್ಯಾಮ್‌ಪಾಲ್ ಗೌರವಿಸಿದರು

ಡ್ರಗ್ಸ್ ಬಳಕೆಯ ಅಪಾಯದ ಬಗ್ಗೆ ಕೃಪಾನಿಧಿ ಕಾಲೇಜಿನ ವಿದ್ಯಾರ್ಥಿಗಳು ನೃತ್ಯ ಮತ್ತು ಕಿರುನಾಟಕಗಳ ಪ್ರದರ್ಶನ ನೀಡಿದರು. ಈ ಕಾರ್ಯಕ್ರಮದ ಭಾಗವಾಗಿ ಬೆಂಗಳೂರು ನಗರ ಪೊಲೀಸ್ (ಮಾರತಹಳ್ಳಿ ಉಪವಿಭಾಗ) ಮತ್ತು ಕೃಪಾನಿಧಿ ವಿದ್ಯಾ ಸಂಸ್ಥೆಯ ಸಿಬ್ಬಂದಿ, ವಿದ್ಯಾರ್ಥಿಗಳ ನಡುವೆ ಕ್ರಿಕೆಟ್ ಪಂದ್ಯಾವಳಿ ನಡೆಯಿತು. ಬಳಿಕ ಮಾರತಹಳ್ಳಿ ಉಪವಿಭಾಗ ವ್ಯಾಪ್ತಿಯ ಪೊಲೀಸ್ ಠಾಣೆಗಳ ಮಧ್ಯೆ ಕ್ರಿಕೆಟ್ ಪಂದ್ಯಾವಳಿ ಹಮ್ಮಿಕೊಳ್ಳಲಾಗಿತ್ತು.

ವರ್ತೂರು ಪೊಲೀಸ್ ಠಾಣೆ ತಂಡ ಅಗ್ರಸ್ಥಾನ ಪಡೆದರೆ, ಎಚ್‌ಎಎಲ್ ಪೊಲೀಸ್ ಠಾಣೆ ರನ್ನರ್ ಅಪ್ ಆಗಿ ಹೊರಹೊಮ್ಮಿತು. ಸಮಾರೋಪ ಸಮಾರಂಭದಲ್ಲಿ ಬೆಂಗಳೂರು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ ಬಹುಮಾನ ವಿತರಿಸಿದರು. ಕೃಪಾನಿಧಿ ಸಮೂಹ ಸಂಸ್ಥೆಗಳ ನಿರ್ದೇಶಕ ಸ್ಯಾಮ್ ಪಾಲ್ ಪಾಲ್ಗೊಂಡಿದ್ದರು.

ಸಿ.ಎಂ. ನಿವಾಸಕ್ಕೆ ಮುತ್ತಿಗೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ನಡೆದ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇರವಾಗಿ ಶಾಮೀಲಾಗಿದ್ದು, ತಕ್ಷಣ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌.ಅಶೋಕ ಒತ್ತಾಯಿಸಿದ್ದಾರೆ.

ಹಗರಣದಲ್ಲಿ ಮಾಜಿ ಸಚಿವ ಬಿ.ನಾಗೇಂದ್ರ ನೆಪ ಮಾತ್ರ. ಇದರ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇರ ಪಾತ್ರವಿದೆ. ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿಯ ಗಮನಕ್ಕೆ ಬಾರದೆ ₹187 ಕೋಟಿ ಮೊತ್ತದ ಹಗರಣ ನಡೆಯಲು ಸಾಧ್ಯವಿಲ್ಲ. ತಮ್ಮ ಕುರ್ಚಿ ಉಳಿಸಿಕೊಳ್ಳಲು, ಲೋಕಸಭಾ ಚುನಾವಣೆಗಾಗಿ ರಾಹುಲ್ ಗಾಂಧಿ ಬಳಗಕ್ಕೆ ಈ ಹಣ ತಲುಪಿಸಲು ಪ್ರಯತ್ನ ಮಾಡಿದ್ದಾರೆ. ಹಣ ನೀಡದೇ ಇದ್ದಿದ್ದರೆ ಡಿ.ಕೆ. ಶಿವಕುಮಾರ್‌ಗೆ ಕುರ್ಚಿ ಬಿಟ್ಟು ಹೋಗಬೇಕಿತ್ತು. ಪ್ರಾಮಾಣಿಕ ಅಧಿಕಾರಿಯ ಆತ್ಮಹತ್ಯೆಯಿಂದಾಗಿ ಹಗರಣ ಹೊರಬಂದಿದೆ. ಈಗ ಮುಚ್ಚಿ ಹಾಕಲು ಎಲ್ಲ ಬಗೆಯ ಪ್ರಯತ್ನಗಳನ್ನು ಮಾಡಲಾಗಿದೆ ಎಂದು ಆರೋಪಿಸಿದ್ದಾರೆ.

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ, ಮೈಸೂರಿನ ನಗರಾಭಿವೃದ್ಧಿ ಪ್ರಾಧಿಕಾರದ ಹಗರಣ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡುವವರೆಗೂ ಹೋರಾಟ ನಿಲ್ಲುವುದಿಲ್ಲ. ಜೂನ್ 3 ರಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಜೂನ್ 3ರಂದು ಬೆಳಿಗ್ಗೆ 9.30ಕ್ಕೆ ಕುಮಾರಕೃಪಾ ಅತಿಥಿ ಗೃಹದಿಂದ ಮೆರವಣಿಗೆಯಲ್ಲಿ ಹೊರಟು ಮುಖ್ಯಮಂತ್ರಿ ನಿವಾಸಕ್ಕೆ ಮುತ್ತಿಗೆ ಹಾಕಲಾಗುವುದು ಮಾಹಿತಿ ನೀಡಿದ್ದಾರೆ.

ಪತಂಜಲಿ ಆಯುರ್ವೇದ್ ವ್ಯವಹಾರ ಸ್ವಾಧೀನಕ್ಕೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತಂಜಲಿ ಆಯುರ್ವೇದ್ ಲಿಮಿಟೆಡ್‌ನ (ಪಿಎಎಲ್) ಗೃಹ ಮತ್ತು ವೈಯಕ್ತಿಕ ಬಳಕೆ ವಸ್ತುಗಳ (ಎಚ್‌ಪಿಸಿ) ವ್ಯವಹಾರದ ಸ್ವಾಧೀನ ಪ್ರಸ್ತಾವನೆಗೆ, ಪತಂಜಲಿ ಫುಡ್ಸ್ ಲಿಮಿಟೆಡ್‌ನ ಆಡಳಿತ ಮಂಡಳಿಯು ಅನುಮೋದನೆ ನೀಡಿದೆ.

ಪಿಎಎಲ್ ಪ್ರಸ್ತುತ ಡೆಂಟಲ್ ಕೇರ್, ಸ್ಕಿನ್ ಕೇರ್, ಹೋಮ್ ಕೇರ್ ಮತ್ತು ಹೇರ್ ಕೇರ್ ವಿಭಾಗದಲ್ಲಿ ವಹಿವಾಟು ಹೊಂದಿದೆ. ಈ ಸ್ವಾಧೀನದಿಂದ ಕಂಪನಿಯ ಎಫ್‌ಎಂಸಿಜಿ ಉತ್ಪನ್ನಗಳ ವಿಭಾಗವು ಸದೃಢಗೊಳ್ಳಲಿದೆ. ಜೊತೆಗೆ, ವರಮಾನವು ಹೆಚ್ಚಲಿದೆ ಎಂದು ಪತಂಜಲಿ ಫುಡ್ಸ್ ಲಿಮಿಟೆಡ್ ತಿಳಿಸಿದೆ.

ಈ ಸ್ವಾಧೀನವು ಪಿಎಎಲ್‌ನ ಎಲ್ಲಾ ಆಸ್ತಿ, ಸಾಲ, ಉದ್ಯೋಗಿಗಳು, ವಿತರಣೆಯ ಜಾಲ, ಒಪ್ಪಂದ, ಪರವಾನಗಿಗಳನ್ನು ಒಳಗೊಂಡಿರುತ್ತದೆ. ಇದರ ವರ್ಗಾವಣೆಯ ಮೌಲ್ಯ ₹1,100 ಕೋಟಿ ಆಗಿದೆ. ಕಂಪನಿ ಮತ್ತು ಪಿಎಎಲ್ ನಡುವೆ ಇತರೆ ಷರತ್ತುಗಳೊಂದಿಗೆ ಶೇ 3ರಷ್ಟು ವಹಿವಾಟು ಆಧಾರಿತ ಶುಲ್ಕ ಪಾವತಿ ಒಪ್ಪಂದಕ್ಕೆ ಸಮ್ಮತಿಸಲಾಗಿದೆ ಎಂದು ತಿಳಿಸಿದೆ.

ಈ ಸ್ವಾಧೀನವು ಪತಂಜಲಿ ಬ್ರ್ಯಾಂಡ್‌ನ ಎಫ್‌ಎಂಸಿಜಿ ಉತ್ಪನ್ನಗಳನ್ನು ಒಟ್ಟುಗೂಡಿಸಲಿದೆ. ಬ್ರ್ಯಾಂಡ್ ಇಕ್ವಿಟಿ, ಉತ್ಪನ್ನದ ನಾವೀನ್ಯ, ವೆಚ್ಚ ಇಳಿಕೆ, ಮೂಲಸೌಕರ್ಯ ಮತ್ತು ಕಾರ್ಯಾಚರಣೆಯ ದಕ್ಷತೆ ಹೆಚ್ಚಿಸಲಿದೆ.

ಮಾರುಕಟ್ಟೆ ಮೇಲೂ ಸಕಾರಾತ್ಮಕ ಪರಿಣಾಮ ಬೀರಲಿದೆ. ಕಂಪನಿಯು ಷೇರು ಮಾರಾಟ ಪ್ರಕ್ರಿಯೆ (ಎಫ್‌ಪಿಒ) ಸಮಯದಲ್ಲಿ ತನ್ನ ಷೇರುದಾರರಿಗೆ ಬದ್ಧವಾಗಿ ಪ್ರಮುಖ ಎಫ್‌ಎಂಸಿಜಿ ಕಂಪನಿಯಾಗಿ ತನ್ನ ಸ್ಥಾನ ಉಳಿಸಿಕೊಳ್ಳಲಿದೆ ಎಂದು ತಿಳಿಸಿದೆ.

ಮಂಡಳಿಯ ಅನುಮೋದನೆಗೆ ಅನುಸಾರವಾಗಿ, ಕಂಪನಿಯು ಈಗ ಸ್ವಾಧೀನಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಒಪ್ಪಂದಗಳನ್ನು ಕಾರ್ಯಗತಗೊಳಿಸಲು ಅಗತ್ಯ ಕ್ರಮವನ್ನು ಕೈಗೊಳ್ಳಲಿದೆ ಎಂದು ತಿಳಿಸಿದೆ.

ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿಕೆ

'ಮಳೆ ಹಾನಿ: ಕೇಂದ್ರದ ಪರಿಹಾರ ಸದ್ಯ ಅಗತ್ಯವಿಲ್ಲ'

ಪ್ರಜಾವಾಣಿ ವಾರ್ತೆ

ಮೈಸೂರು: 'ರಾಜ್ಯದಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದ್ದು, ಇದುವರೆಗೂ 20 ಮಂದಿ ಮೃತಪಟ್ಟಿದ್ದಾರೆ. ಮಳೆ ಹಾನಿಗೆ ಪರಿಹಾರ ಕೊಡುವಷ್ಟು ಹಣ ನಮ್ಮಲ್ಲಿದ್ದು, ಕೇಂದ್ರದಿಂದ ಪರಿಹಾರ ಕೇಳುವ ಸ್ಥಿತಿ ಇಲ್ಲ. ಮಳೆ ಹೆಚ್ಚಾಗಿ, ನಷ್ಟವಾದರೆ ಪರಿಹಾರ ಕೇಳುತ್ತೇವೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ನಗರದಲ್ಲಿ ಮಂಗಳವಾರ ಕಂದಾಯ ಇಲಾಖೆ ಮೈಸೂರು ವಿಭಾಗದ ಪ್ರಗತಿ ಪರಿಶೀಲನಾ ಸಭೆಗೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿ, 'ಅತಿವೃಷ್ಟಿಯಾಗುವ 1,763 ಸಂಭವನೀಯ ಗ್ರಾಮಗಳನ್ನು ಗುರುತಿಸಲಾಗಿದ್ದು, ಆಯಾ ಜಿಲ್ಲಾಡಳಿತಕ್ಕೆ ಪಟ್ಟಿ ನೀಡಲಾಗಿದೆ. ವಿಪತ್ತು ನಿರ್ವಹಿಸಲು ಟಾಸ್ಕ್‌ಫೋರ್ಸ್ ರಚನೆಗೆ ಸೂಚಿಸಲಾಗಿದೆ' ಎಂದರು.

> **ಮುಖ್ಯಮಂತ್ರಿ ಹುದ್ದೆ ಕುರಿತು ಸ್ವಾಮೀಜಿ ಮಠದಲ್ಲಿ ಹೇಳಿಕೆ ಕೊಡಬಹುದಿತ್ತು. ಸರ್ಕಾರಿ ಕಾರ್ಯಕ್ರಮದಲ್ಲಿ ರಾಜಕೀಯ ಬೆರೆಸುವುದು ಉಚಿತವಲ್ಲ**
>
> **ಕೃಷ್ಣ ಬೈರೇಗೌಡ,** ಕಂದಾಯ ಸಚಿವ

'ಪಂಚಾಯಿತಿ, ಕಂದಾಯ ಇಲಾಖೆ ಅಧಿಕಾರಿಗಳು, ಎಂಜಿನಿಯರುಗಳು, ಅಗ್ನಿಶಾಮಕ ದಳ, ಪೊಲೀಸ್ ಹಾಗೂ ಸಣ್ಣ ನೀರಾವರಿ ಇಲಾಖೆ ಸಿಬ್ಬಂದಿ ಟಾಸ್ಕ್‌ಫೋರ್ಸ್‌ನಲ್ಲಿ ಇರಲಿದ್ದಾರೆ. ಸಂಭವನೀಯ ಅತಿವೃಷ್ಟಿ ಗ್ರಾಮಗಳಿಗೆ ಭೇಟಿ ನೀಡಿ ಅಣಕು ಕಾರ್ಯಾಚರಣೆ ಮಾಡಲಿದ್ದಾರೆ' ಎಂದರು.

₹ 777 ಕೋಟಿ ಬಿಡುಗಡೆ: 'ವಿಪತ್ತು ನಿರ್ವಹಣೆಗಾಗಿ ₹777 ಕೋಟಿ ಹಣವನ್ನು ಜಿಲ್ಲಾಧಿಕಾರಿ ಹಾಗೂ ತಹಶೀಲ್ದಾರ್ ಖಾತೆಗಳಿಗೆ ವಿತರಿಸಲಾಗಿದೆ. ಎರಡ್ಮೂರು ದಿನ ಸತತ ಮಳೆಯಾಗುವ ಮುನ್ಸೂಚನೆ ಬಂದಾಗ ಗ್ರಾಮದಲ್ಲಿಯೇ ತಂಡವು ಮೊಕ್ಕಾಂ ಹೂಡಲು ಹಾಗೂ ಅವಶ್ಯಕತೆ ಇದ್ದರೆ ಕಾಳಜಿ ಕೇಂದ್ರ ತೆರೆಯಲು ಸೂಚಿಸಲಾಗಿದೆ' ಎಂದು ಹೇಳಿದರು.

'ದಕ್ಷಿಣ ಕನ್ನಡ, ಕೊಡಗು, ಬೆಳಗಾವಿ, ಬೆಂಗಳೂರಿನಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ತುಕಡಿ ಹಾಗೂ ಬೆಂಗಳೂರು, ದಾವಣಗೆರೆ, ಬೆಳಗಾವಿ, ಕಲಬುರಗಿ, ಮೈಸೂರಿನಲ್ಲಿ ಎಸ್‌ಟಿಆರ್‌ಎಫ್ ತುಕಡಿಗಳನ್ನು ಇರಿಸಲಾಗಿದೆ. ಜವಾಬ್ದಾರಿಯುತ ಸರ್ಕಾರವಾಗಿ ಮುನ್ನೆಚ್ಚರಿಕಾ ಕ್ರಮ ವಹಿಸಲಾಗಿದೆ' ಎಂದರು.

ಜುಲೈ ಅಂತ್ಯಕ್ಕೆ ಸರ್ವೆ ಪೂರ್ಣ: 'ರಾಜ್ಯದಲ್ಲಿ ಸರ್ಕಾರಿ ಜಾಗಗಳ ರಕ್ಷಿಸಲು ಸರ್ವೆ ಆರಂಭಿಸಲಾಗಿದ್ದು, ಒಟ್ಟು 14 ಲಕ್ಷ ಸರ್ಕಾರಿ ಜಾಗಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ ಒತ್ತುವರಿ ಎಷ್ಟಾಗಿದೆಯೆಂಬ ಸರ್ವೆ ಶುರುವಾಗಿದೆ. ಇದೇ ತಿಂಗಳಾಂತ್ಯಕ್ಕೆ ಪೂರ್ಣಗೊಳ್ಳಲಿದೆ. ಒತ್ತುವರಿ ತೆರವು ನಂತರ ನಡೆಸಲಾಗುವುದು' ಎಂದರು.

ವಿಶ್ವದಾಖಲೆ ಪಟ್ಟಿಗೆ ಯಕ್ಷನೃತ್ಯ ಕಲಾವಿದೆ ತುಳಸಿ ಸೇರ್ಪಡೆ

ಪ್ರಜಾವಾಣಿ ವಾರ್ತೆ



ತುಳಸಿ ಹೆಗಡೆ

ಶಿರಸಿ: ಕಿರಿಯ ವಯಸ್ಸಿನಿಂದ ಯಕ್ಷನೃತ್ಯದ ಮೂಲಕ ವಿಶ್ವಶಾಂತಿಗೆ ಕೊಡುಗೆ ನೀಡುತ್ತಿರುವ ಬಾಲ ಕಲಾವಿದೆ ಶಿರಸಿಯ ತುಳಸಿ ಹೆಗಡೆ ಅವರ ಹೆಸರು ಲಂಡನ್‌ನ ಪ್ರತಿಷ್ಠಿತ ವರ್ಲ್ಡ್ ರೆಕಾರ್ಡ್ ಸಂಸ್ಥೆ ವಿಶ್ವದಾಖಲೆ ಪಟ್ಟಿಯಲ್ಲಿ ಸೇರ್ಪಡೆಯಾಗಿದೆ.

ಯಕ್ಷಗಾನ ಕಲಾ ಪ್ರಕಾರದ ಮೂಲಕ ವಿಶ್ವಶಾಂತಿಗೆ ಈವರೆಗೆ 9 ಸರಣಿ ನೃತ್ಯ ಪ್ರದರ್ಶಿಸುತ್ತಿರುವುದನ್ನು ಗಮನಿಸಿ ಮಕ್ಕಳ ವಿಭಾಗದ ತನ್ನ ದಾಖಲಾತಿಯಲ್ಲಿ ಸೇರಿಸಿಕೊಂಡಿದೆ. ಶಿರಸಿ ಮಾರಿಕಾಂಬಾ ಸರ್ಕಾರಿ ಪ್ರೌಢಶಾಲೆಯಲ್ಲಿ 10ನೇ ತರಗತಿ ಓದುತ್ತಿರುವ ತುಳಸಿ ಹೆಗಡೆ ತನ್ನ ಮೂರನೇ ವರ್ಷದಿಂದಲೇ ಯಕ್ಷಗಾನ ಕ್ಷೇತ್ರಕ್ಕೆ ಬಾಲ ಹೆಜ್ಜೆ ಇಟ್ಟವಳು. ಐದೂವರೆ ವರ್ಷದಿಂದ ವಿಶ್ವ ಶಾಂತಿ ರೂಪಕಗಳನ್ನು ಪ್ರಸ್ತುತಗೊಳಿಸುತ್ತಿದ್ದಾಳೆ.

ಈಗಾಗಲೇ ಇಂಡಿಯಾ ಬುಕ್ ಆಫ್ ರೆಕಾರ್ಡ್‌ನಲ್ಲಿಯೂ ದಾಖಲಾಗಿದ್ದು, ಕರ್ನಾಟಕ ಬಾಲ ವಿಕಾಸ ಅಕಾಡೆಮಿ ನೀಡುವ ರಾಜ್ಯ ಮಟ್ಟದ ಬಾಲ ಗೌರವ ಪ್ರಶಸ್ತಿ ಸೇರಿ ಅನೇಕ ಪ್ರಶಸ್ತಿ, ಪುರಸ್ಕಾರಗಳು ಸಂದಿವೆ.

ರಘುನಾಥ ಚ.ಹ, ವಿಲಾಸ್ ನಾಂದೋಡ್ಕರ್‌ಗೆ ಪುರಸ್ಕಾರ

ಪ್ರಜಾವಾಣಿ ವಾರ್ತೆ



ರಘುನಾಥ ಚ.ಹ.



ವಿಲಾಸ್ ನಾಂದೋಡ್ಕರ್

ಗದಗ: ಮುಂಡರಗಿ ತಾಲ್ಲೂಕಿನ ಡಂಬಳ ಗ್ರಾಮದ ತೋಂಟದಾರ್ಯ ಪುರಸ್ಕಾರ ಸಮಿತಿಯು ಲಿಂ. ತೋಂಟದ ಸಿದ್ಧಲಿಂಗ ಶ್ರೀಗಳ ನೆನಪಿನಲ್ಲಿ ನೀಡುವ ರಾಜ್ಯಮಟ್ಟದ ಡಾ.ತೋಂಟದ ಸಿದ್ಧಲಿಂಗಶ್ರೀ ಪುರಸ್ಕಾರಕ್ಕೆ 'ಸುಧಾ' ವಾರಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ ಮತ್ತು ಟಿವಿ 9 ವಾಹಿನಿಯ ಇನ್‌ಪುಟ್ ಮುಖ್ಯಸ್ಥ ವಿಲಾಸ್ ನಾಂದೋಡ್ಕರ್ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ₹5 ಸಾವಿರ ನಗದು ಮತ್ತು ಫಲಕ ಒಳಗೊಂಡಿದೆ.

ಗದಗದ ತೋಂಟದಾರ್ಯ ಮಠದಲ್ಲಿ ಜುಲೈ ಮೂರನೇ ವಾರದಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ.

27ಕ್ಕೆ ಇಮ್ಮಡಿ ಸಿದ್ದರಾಮೇಶ್ವರರ ದೀಕ್ಷಾ ರಜತ ಮಹೋತ್ಸವ

ಪ್ರಜಾವಾಣಿ ವಾರ್ತೆ



ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ

ಬೆಂಗಳೂರು: ಚಿತ್ರದುರ್ಗದಲ್ಲಿ ಜುಲೈ 27ರಂದು ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಅವರ ದೀಕ್ಷಾ ರಜತ ಮಹೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಈ ಕುರಿತು ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ಮಾಜಿ ಸಚಿವ ಅರವಿಂದ ಲಿಂಬಾವಳಿ, ದೀಕ್ಷಾ ರಜತಮಹೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು. ದೇಶದ ಎಲ್ಲೆಡೆ ನೆಲೆಸಿರುವ ಸಮಾಜದ ಜನರು ಭಾಗವಹಿಸುವರು. ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮ ಉದ್ಘಾಟಿಸುವರು. ಮಂತ್ರಾಲಯದ ಸುಭುದೇಂದ್ರ ತೀರ್ಥರು ಉಪಸ್ಥಿತರಿರುವರು ಎಂದು ಮಾಹಿತಿ ನೀಡಿದರು.

ರಾಜ್ಯದಲ್ಲಿ ಭೋವಿ ಸಮಾಜ ಸಂಘಟನೆಯಾಗಿದೆ. ಏಳು ಶಾಸಕರು, ಒಬ್ಬ ಸಂಸದರು ಇದ್ದಾರೆ. ರಾಷ್ಟ್ರಮಟ್ಟದಲ್ಲಿ ಸಮಾಜವನ್ನು ಸಂಘಟಿಸಲು ಶ್ರಮಿಸಲಾಗುತ್ತಿದೆ. ಹಲವರು ಉನ್ನತ ಹುದ್ದೆಯಲ್ಲಿದ್ದಾರೆ. ಎಸ್‌ಎಸ್‌ಎಲ್‌ಸಿ, ಪಿಯುಸಿ ಸೇರಿದಂತೆ ಉತ್ತಮ ಅಂಕ ಗಳಿಸಿದ ಸಮಾಜದ ಮಕ್ಕಳೂ ಸೇರಿದಂತೆ ಎಲ್ಲ ಸಾಧಕರನ್ನೂ ಅಂದು ಸನ್ಮಾನಿಸಲಾಗುತ್ತಿದೆ ಎಂದರು.

ಸಮಾಜಕ್ಕೆ ಭೋವಿ ಸಮುದಾಯದ ಕೊಡುಗೆ ಅಪಾರ. ಕೆರೆ, ಕಟ್ಟೆ, ಬಾವಿ, ಗುಡಿ, ಗೋಪುರ ಕಟ್ಟಿದ್ದು ಸಮಾಜದ ಹಿರಿಯರು. ಆದರೆ, ಸಮಾಜದ ಜನರು ಇಂದಿಗೂ ಸಂಕಷ್ಟದಲ್ಲೇ ಜೀವನ ಸಾಗಿಸುತ್ತಿದ್ದಾರೆ. ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಭೋವಿ ಗುರುಪೀಠ ಏರಿದ ನಂತರ ಜನರ ಶ್ರೇಯೋಭಿವೃದ್ಧಿಗೆ ನಿರಂತರವಾಗಿ ಶ್ರಮಿಸುತ್ತಿದ್ದಾರೆ ಎಂದು ಶ್ಲಾಘಿಸಿದರು.

ಸುದ್ದಿಗೋಷ್ಠಿಯಲ್ಲಿ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್. ರವಿಕುಮಾರ್, ಸಮಾಜದ ಮುಖಂಡರಾದ ರಾಮಪ್ಪ, ನಾಗರಾಜ್, ದುರ್ಗಪ್ಪ ಉಪಸ್ಥಿತರಿದ್ದರು.

ಶ್ರುತಿ ಹೆಗಡೆಗೆ 'ಭುವನ ಸುಂದರಿ' ಕಿರೀಟ

ಪ್ರಜಾವಾಣಿ ವಾರ್ತೆ



ಡಾ. ಶ್ರುತಿ ಹೆಗಡೆ

ಹುಬ್ಬಳ್ಳಿ: ಇತ್ತೀಚೆಗೆ ಅಮೆರಿಕದ ಫ್ಲಾರಿಡಾದಲ್ಲಿ ನಡೆದ ವಿಶ್ವ ಭುವನ ಸುಂದರಿ ಸ್ಪರ್ಧೆಯಲ್ಲಿ ಡಾ. ಶ್ರುತಿ ಹೆಗಡೆ ವಿಜೇತರಾಗಿದ್ದಾರೆ. 5.6 ಅಡಿಗಿಂತ ಕಡಿಮೆ ಎತ್ತರದ ಯುವತಿಯರಿಗಾಗಿ ನಡೆದ ಸ್ಪರ್ಧೆಯಲ್ಲಿ 40 ದೇಶಗಳ ಸುಂದರಿಯರು ಪಾಲ್ಗೊಂಡಿದ್ದರು.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಮುಂಡಿಗೇಸರದ ಶ್ರುತಿ ಅವರು 2018ರಿಂದ ಸ್ಪರ್ಧೆಗೆ ಸಿದ್ಧತೆ ನಡೆಸಿದ್ದರು.

ಮಿಸ್ ಧಾರವಾಡ, ಮಿಸ್ ಕರ್ನಾಟಕ 2018ರ ರನ್ನರ್ ಅಪ್, ಮಿಸ್ ಸೌತ್ ಇಂಡಿಯಾ, ಮಿಸ್ ಐಡಿಯಲ್ ವುಮೆನ್, ಮಿಸ್ ಏಷಿಯಾ ಇಂಟರ್‌ನ್ಯಾಷನಲ್, ಮಿಸ್ ಇಂಡಿಯಾ ಬಳಿಕ ಈಗ ಭುವನ ಸುಂದರಿಯಾಗಿ ವಿಜೇತರಾಗಿದ್ದಾರೆ.

ಅವರು ತುಮಕೂರಿನಲ್ಲಿ ಚರ್ಮ ಶಾಸ್ತ್ರದ ಬಗ್ಗೆ ಅಧ್ಯಯನ ಮಾಡುತ್ತಿದ್ದಾರೆ.

'ಪೆನ್‌ಡ್ರೈವ್ ಪ್ರಕರಣ: ಶೀಘ್ರ ಒಳ್ಳೆ ಸುದ್ದಿ'

ಪ್ರಜಾವಾಣಿ ವಾರ್ತೆ



ಹಾಸನ: 'ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿ ಅತೀ ಶೀಘ್ರದಲ್ಲೇ ಒಳ್ಳೆಯ ಸುದ್ದಿ ಹೊರ ಬರಲಿದೆ' ಎಂದು ವಕೀಲ ದೇವರಾಜೇಗೌಡ ಹೇಳಿದರು.

ಮಂಗಳವಾರ ಸಂಜೆ ಜೈಲಿನಿಂದ ಬಿಡುಗಡೆಯಾದ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿದ ತನಿಖೆಯನ್ನು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಮಾಡುತ್ತಿಲ್ಲ. ಹಾಸನದಲ್ಲಿ ಒಳ್ಳೆಯ ಪೊಲೀಸರು ತನಿಖೆ ಮಾಡುತ್ತಿದ್ದಾರೆ. ತಾರ್ಕಿಕವಾಗಿ ಅಂತ್ಯವಾಗುತ್ತದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಪೆನ್‌ಡ್ರೈವ್ ಪ್ರಕರಣದಲ್ಲಿ ಸಾಕ್ಷಿಯಾಗಿದ್ದೇನೆ. ಎಲ್ಲ ರೀತಿಯ ಸಹಕಾರ ಕೊಟ್ಟಿದ್ದೇನೆ. ತನಿಖೆ ಮುಗಿದ ಮೇಲೆ ಸತ್ಯಾಂಶ ಹೊರ ಬರುತ್ತದೆ. ಡಿ.ಕೆ. ಶಿವಕುಮಾರ್ ಜೊತೆ ಮಾತನಾಡಿರುವ ಆಡಿಯೊ ಬಗ್ಗೆ ಎಫ್‌ಎಸ್‌ಎಲ್‌ನಿಂದ ಸತ್ಯ ಹೊರಗೆ ಬರುತ್ತದೆ' ಎಂದರು.

'ನಾನು ಹೊರ ಬಂದರೆ ಸರ್ಕಾರ ಪತನ' ಎಂದು ಜೈಲಿನಲ್ಲಿದ್ದಾಗ ಹೇಳಿದ್ದ ಬಗ್ಗೆ ಉತ್ತರಿಸಿದ ಅವರು, 'ಕಾದು ನೋಡಿ' ಎಂದಷ್ಟೇ ಹೇಳಿದರು.

ಹೊಳೆನರಸೀಪುರ ಠಾಣೆಯಲ್ಲಿ ಮಹಿಳೆಯೊಬ್ಬರು ಅತ್ಯಾಚಾರ ಪ್ರಕರಣ ದಾಖಲಿಸಿದ್ದರಿಂದ, ಮೇ 10 ರಂದು ಅವರನ್ನು ಪೊಲೀಸರು ಬಂಧಿಸಿದ್ದರು.

ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್

ಯುಎಇಯಲ್ಲಿ NUWA ವಜ್ರಾಭರಣ ಸಂಗ್ರಹ ಬಿಡುಗಡೆ



ಯುಎಇಯಲ್ಲಿ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ 'ನುವಾ' ಆಭರಣ ಕಲೆಕ್ಷನ್ ಅನ್ನು ನಟಿ ಕರೀನಾ ಕಪೂರ್ ಖಾನ್ ಅನಾವರಣಗೊಳಿಸಿದರು. ಮಲಬಾರ್ ಸಮೂಹದ ಅಧ್ಯಕ್ಷ ಎಂ.ಪಿ. ಅಹ್ಮದ್ ಇತರರು ಉಪಸ್ಥಿತರಿದ್ದರು.

ಬೆಂಗಳೂರು: ವಿಶ್ವದ ಆರನೇ ಅತಿ ದೊಡ್ಡ ರೀಟೈಲರ್ ಆಭರಣ ಕಂಪನಿ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ತನ್ನ ಗ್ರಾಹಕರಿಗೆ ಹೊಸತನ ನೀಡುವ ಉದ್ದೇಶದಿಂದ 'NUWA' ಹೆಸರಿನ ವಜ್ರಾಭರಣ ಸಂಗ್ರಹವನ್ನು ಬಿಡುಗಡೆ ಮಾಡಿದೆ.

13 ದೇಶಗಳಲ್ಲಿ 350ಕ್ಕೂ ಅಧಿಕ ಮಳಿಗೆಗಳನ್ನು ಹೊಂದಿರುವ ಮಲಬಾರ್ ಗೋಲ್ಡ್ ಇತ್ತೀಚೆಗೆ ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ)ನಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ ಬಾಲಿವುಡ್ ಖ್ಯಾತ ನಟಿ ಕರೀನಾ ಕಪೂರ್ ಖಾನ್ ಅವರು 'ನುವಾ' ಹೊಸ ಆಭರಣ ಕಲೆಕ್ಷನ್ ಅನ್ನು ಬಿಡುಗಡೆ ಮಾಡಿದರು.

ಸೊಬಗು ಹಾಗೂ ಸೌಂದರ್ಯಕ್ಕೆ ಹೆಸರುವಾಸಿಯಾಗಿರುವ ಕರೀನಾ ಅವರನ್ನು ಮಲಬಾರ್ ಗೋಲ್ಡ್ ಸಂಸ್ಥೆ ನೂತನ ವಜ್ರಾಭರಣದ ಸಂಗ್ರಹದ ಅಧಿಕೃತ ರಾಯಭಾರಿಯನ್ನಾಗಿ ನೇಮಕ ಮಾಡಿದೆ. ವಿಶಿಷ್ಟ ಹಾಗೂ ನವೀನ ಕಲೆಕ್ಷನ್‌ಗಳಾದ ನುವಾ ಆಭರಣಗಳು ಭಾರತದ ಎಲ್ಲ ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ಸ್ಟೋರ್‌ಗಳಲ್ಲಿ ಲಭ್ಯವಿರಲಿವೆ ಎಂದು ಕಂಪನಿ ತಿಳಿಸಿದೆ.

'ನುವಾ' ಸಂಗ್ರಹ: ನುವಾ ಸಂಗ್ರಹದಲ್ಲಿ ವಿನೂತನ ವಿನ್ಯಾಸಗಳು, ವೇವ್ಸ್, ಫಾರ್ಮ್ಸ್, ಫ್ಲೋಲ್ಡ್ ಮತ್ತು ಟೆಕ್ಚರ್‌ಗಳು ಒಳಗೊಂಡಿವೆ. ಈ ಐಷಾರಾಮಿ ವಜ್ರಾಭರಣದ ತುಣುಕುಗಳನ್ನು ಅತ್ಯಂತ ಕುಶಲತೆಯಿಂದ ತಯಾರಿಸಲಾಗಿದೆ. ನಿಸರ್ಗದ ಸೊಬಗಿನಿಂದ ಸ್ಫೂರ್ತಿ ಪಡೆದು ಪ್ರತಿಯೊಂದು ನುವಾ ಆಭರಣವನ್ನು ರಚಿಸಲಾಗಿದೆ. ಮಹಿಳೆಯರ ಮನಸ್ಸನ್ನು ವಿಶೇಷವಾಗಿ ಸೆಳೆಯುವ ಅದ್ಭುತ ಹಾಗೂ ಸಂಕೀರ್ಣ ಕಲಾಕೃತಿ ಆಭರಣಗಳಾಗಿ ನುವಾ ಮೂಡಿಬಂದಿವೆ. ಆಭರಣದ ಪ್ರತಿಯೊಂದು ತುಣುಕು ಸುಂದರವಾಗಿದ್ದು, ಮಹಿಳೆಯರು ಸಾಕಾರಗೊಳಿಸುವ ಸೊಬಗು, ಶಕ್ತಿ ಮತ್ತು ಅನುಗ್ರಹಕ್ಕೆ ಸಾಕ್ಷಿಯಾಗಿದೆ.


ಈ ಬಗ್ಗೆ ಮಲಬಾರ್ ಸಮೂಹದ ಅಧ್ಯಕ್ಷ ಎಂ.ಪಿ. ಅಹ್ಮದ್ ಮಾತನಾಡಿ, ನುವಾ ಸಂಗ್ರಹವನ್ನು ಪರಿಚಯಿಸಲು ನಮಗೆ ಅತ್ಯಂತ ಹೆಮ್ಮೆ ಎನಿಸುತ್ತದೆ. ಇದು ಪ್ರಕೃತಿ ಮತ್ತು ಸ್ತ್ರೀಯರ ಅದಮ್ಯ ಮನೋಭಾವಗಳ ಸಂಗಮವನ್ನು ಸೂಚಿಸುತ್ತದೆ. ನುವಾ ಸಂಗ್ರಹದಲ್ಲಿರುವ ಪ್ರತಿಯೊಂದು ಆಭರಣ ಅಪಾರ ಕಾಳಜಿ ಮತ್ತು ನಿಖರತೆಯಿಂದ ರಚಿಸಲಾಗಿದೆ. ಚಿತ್ರನಟಿ ಕರೀನಾ ಕಪೂರ್ ಖಾನ್ ಅವರು 'ನುವಾ' ವಜ್ರಾಭರಣ ಸಂಗ್ರಹವನ್ನು ಪ್ರತಿನಿಧಿಸುತ್ತಿರುವ ಕಾರಣ ಈ ಆಕರ್ಷಕ ಒಡವೆಗಳ ಕಲೆಕ್ಷನ್ ಅನ್ನು ಅನಾವರಣಗೊಳಿಸಿರುವುದು ನಮಗೆ ಗೌರವ ತಂದಿದೆ ಎಂದಿದ್ದಾರೆ.

ಭರವಸೆಗಳು: ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ನ NUWA ಸಂಗ್ರಹ ಶ್ರೇಷ್ಠತೆ ಮತ್ತು ಬದ್ಧತೆಗೆ ರುಜುವಾತಾಗಿವೆ. ಎಲ್ಲ ವಜ್ರಾಭರಣಗಳ ರೀತಿಯಲ್ಲೇ ನುವಾ ಸಂಗ್ರಹ ಸಹ ಮಲಬಾರ್ ಸಂಸ್ಥೆಯ ಭರವಸೆಗಳೊಂದಿಗೆ ಗ್ರಾಹಕರ ಕೈಸೇರಲಿವೆ. ಉದಾ: ಜವಾಬ್ದಾರಿಯುತ ಮೂಲದ ನೈಸರ್ಗಿಕ ವಜ್ರಗಳು, ಪರೀಕ್ಷಿಸಿದ ಹಾಗೂ ಪ್ರಮಾಣೀಕರಿಸಿದ ವಜ್ರಗಳು, ಶೇ.100 ರಷ್ಟು ವಿನಿಮಯ ಮೌಲ್ಯ, ಶೇ.100 ರಷ್ಟು ಪಾರದರ್ಶಕತೆ, ಗ್ಯಾರಂಟಿ ಮರುಖರೀದಿ ಇತ್ಯಾದಿ ಭರವಸೆಗಳು ಇದರಲ್ಲಿ ಒಳಗೊಂಡಿವೆ.

ಗ್ರಾಹಕರು ತಮ್ಮ ನೆಚ್ಚಿನ ಆಭರಣಗಳನ್ನು ಆನ್‌ಲೈನ್ ಸ್ಟೋರ್ www.malabargoldanddiamonds.com ಮೂಲಕ ಖರೀದಿಸುವ ಅವಕಾಶವನ್ನು ಕಂಪನಿ ಕಲ್ಪಿಸಿದೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ತಂತ್ರಜ್ಞಾನ





ಭುಜದ ರಿಪೇರಿಗೆ ‘ಹಲ್ಲು’

ಅಮೃತೇಶ್ವರಿ ಬಿ.

ಹೆಬ್ಬಾವುಗಳು ಎಂದಾಕ್ಷಣ ನಮಗೆಲ್ಲಾ ನೆನಪಾಗುವುದು ಅವು ತನ್ನ ಬೇಟೆ ಪ್ರಾಣಿಯನ್ನು ಭದ್ರವಾಗಿ ಉಸಿರುಗಟ್ಟಿಸುವಂತೆ ಹಿಡಿದು ನಂತರ ಪೂರ್ತಿಯಾಗಿ ನುಂಗಿಬಿಡುವುದು! ಆದರೆ ಅವು ಮೊದಲಿಗೆ ಬೇಟೆಯನ್ನು ತಮ್ಮ ಚೂಪಾದ, ಹಿಮ್ಮುಖವಾಗಿ ಬಾಗಿದ ಹಲ್ಲುಗಳಿಂದ ಬಂಧಿಸಿಕೊಂಡು, ಇತರೆ ಪ್ರಾಣಿಗಳಂತೆ ಹಿಂಸಿಸದೆ, ಅವು ಬಹುತೇಕ ಉಸಿರುಗಟ್ಟಿ ಪ್ರಜ್ಞೆ ತಪ್ಪಿದಾಗ ಗುಳುಂ ಮಾಡಿಬಿಡುತ್ತವೆ. ಹೆಬ್ಬಾವುಗಳ ಹಲ್ಲಿನ ರಚನೆ ಅಷ್ಟು ವಿಶೇಷ, ಸೂಕ್ಷ್ಮ ಮತ್ತು ಬಲಶಾಲಿ. ಇದನ್ನು ತಿಳಿದಿದ್ದ ವೈದ್ಯಕೀಯ ವಿಜ್ಞಾನಿಗಳು ಈ ಹಲ್ಲುಗಳು ಮೃದುವಾದ ಅಂಗಾಂಶಗಳನ್ನು ಕತ್ತರಿಸದಂತೆ ಹಿಡಿದಿಟ್ಟುಕೊಳ್ಳಲು ಸೂಕ್ತವಾಗಿದೆಯೆಂದು ಯೋಚಿಸಿದರು. ಅವರ ಆ ಯೋಚನೆಯೇ ಆ ಹಲ್ಲುಗಳನ್ನು ವೈದ್ಯಕೀಯ ಕ್ಷೇತ್ರದಲ್ಲಿ ಬಳಸಿಕೊಳ್ಳುವಂತೆ ಮಾಡಿತು. ಇದನ್ನೇ ‘ಬಯೋಮಿಮಿಕಿಂಗ್’ ಅಥವಾ ‘ಜೈವಿಕ ಅನುಕರಣೆ’ ಎನ್ನುತ್ತೇವೆ. ಹೌದು. ಕೊಲಂಬಿಯಾದ ಇಂಜಿನಿಯರಿಂಗ್ ಮತ್ತು ವೆಜೆಲೊಸ್ ಕಾಲೇಜ್ ಆಫ್ ಫಿಸಿಶಿಯನ್ಸ್ ಅಂಡ್ ಸರ್ಜನ್ಸ್‌ನ ಸಂಶೋಧಕರು ಹೆಬ್ಬಾವಿನ ಹಲ್ಲಿನ ರಚನೆಯಂತಹ ವೈದ್ಯಕೀಯ ಸಾಧನವೊಂದನ್ನು ರೂಪಿಸಿದ್ದಾರೆ. ಇದನ್ನು ಮೊನ್ನೆ ‘ಸೈನ್ಸ್ ಅಡ್ವಾನ್ಸಸ್’ ಪತ್ರಿಕೆಯಲ್ಲಿ ವರದಿ ಮಾಡಲಾಗಿದೆ.

ನಮ್ಮ ಭುಜಗಳ ತುದಿಯಲ್ಲಿ ಬುರುಡೆಯಂತಿರುವ ಭಾಗವನ್ನು ‘ರೊಟೇಟರ್ ಕಫ್’ ಎನ್ನುತ್ತೇವೆ. ನಮಗೆ ಕೈಗಳನ್ನು ಆಡಿಸಲು, ಮೇಲೆ ಎತ್ತಲು, ತಿರುಗಿಸಲು ನೆರವಾಗುವ ಈ ಭಾಗದಲ್ಲಿ ಸ್ನಾಯು ಮತ್ತು ನರಗಳು ಕೂಡಿಕೊಂಡು ಮೂಳೆಗೆ ಹೊಂದಿಕೊಂಡಿರುತ್ತವೆ. ವಯಸ್ಸಾಗುತ್ತಿದ್ದಂತೆ ಅಥವಾ ಭುಜಗಳನ್ನು ಹೆಚ್ಚು ಬಳಸುವ ಮರಗೆಲಸ ಮಾಡುವವರು, ಮನೆಗಳಿಗೆ ಬಣ್ಣ ಹಚ್ಚುವವರು, ಟೆನ್ನಿಸ್, ಬೇಸ್ ಬಾಲ್ ಆಡುವವರ ಹಾಗೆ ಹೆಚ್ಚಾಗಿ ತೋಳುಗಳನ್ನು ಬಳಸುತ್ತಿದ್ದಂತೆ ಕ್ರಮೇಣ ಅಲ್ಲಿ ನೋವು ಕಾಣಿಸಿಕೊಳ್ಳುವುದು ಸಹಜ. ಅರ್ಥಾತ್, ರೊಟೇಟರ್ ಕಫ್‌ನಲ್ಲಿರುವ ಸ್ನಾಯು ಹಾಗೂ ನರಗಳು ದುರ್ಬಲವಾಗಿ ಹರಿದು ಹೋಗುತ್ತದೆ. ಲಿಗಮೆಂಟ್ ಟೇರ್ ಕೇಳಿರಬೇಕಲ್ಲಾ? ಹಾಗೆ ‘ರೊಟೇಟರ್ ಕಫ್ ಟೇರ್’.

ರೊಟೇಟರ್ ಕಫ್ ಸ್ನಾಯುವಿನ ಈ ತೊಂದರೆಯನ್ನು ಶಸ್ತ್ರಚಿಕಿತ್ಸೆ ಮಾಡಿ ಹರಿದು ಹೋಗಿರುವ ನರ-ಸ್ನಾಯುವನ್ನು ಮೂಳೆಗೆ ಜೋಡಿಸಿ ದುರಸ್ತಿ ಮಾಡಲಾಗುತ್ತದೆ. ಕೆಲವು ದಿನಗಳ ನಂತರ ಅದು ಪುನಶ್ಚೇತನಗೊಂಡು ಪುನರ್ನಿರ್ಮಾಣ ಆಗುತ್ತದೆ. ಆದರೆ ಇಲ್ಲಿ ಒಂದು ಸಮಸ್ಯೆ ಇತ್ತು. ರೊಟೇಟರ್ ಕಫ್ ಟೇರ್ ತೊಂದರೆಯನ್ನು ಗುಣಪಡಿಸುವಲ್ಲಿ ಎಷ್ಟೋ ಆಧುನಿಕ ತಂತ್ರಗಳು ಅಭಿವೃದ್ಧಿಯಾಗಿದ್ದರೂ, ಅಂಗಾಂಶ ಅಥವಾ ಸ್ನಾಯುಗಳನ್ನು ಹೊಲಿಯುವುದು ಇಂದಿನವರೆಗೂ ಒಂದು ಮೂಲಭೂತ ಹಂತವೇ ಸರಿ. ಶಸ್ತ್ರಚಿಕಿತ್ಸೆ ಮಾಡಿ ಅವನ್ನು ಕೂಡಿಸಿದ ನಂತರ ಕೆಲವು ತಿಂಗಳುಗಳಲ್ಲಿಯೇ ಸ್ನಾಯು ಮತ್ತೆ ಹರಿಯುವ ಸಾಧ್ಯತೆ ಹೆಚ್ಚು. ಈ ಸ್ನಾಯುವನ್ನು ಹರಿಯದಂತೆ ಸುರಕ್ಷಿತವಾಗಿ ಮೂಳೆಗೆ ಶಾಶ್ವತವಾಗಿ ಜೋಡಿಸಲು ಸಾಧನವೊಂದನ್ನು ರೂಪಿಸಬೇಕಿತ್ತು. ಹೀಗೆ ಯೋಚಿಸುತ್ತಿದ್ದಾಗ ತೊಮೊಪೊಲಸ್ ಮತ್ತು ಸಂಗಡಿಗರಿಗೆ ನೆನಪಾದದ್ದು, ಹೆಬ್ಬಾವಿನ ಹಲ್ಲಿನ ರಚನೆ. ಹಾಗಾಗಿ ಅಂತಹುದೇ ಸಾಧನವೊಂದನ್ನು ತೊಮೊಪೊಲಸ್ ಮತ್ತು ಸಂಗಡಿಗರು ವಿನ್ಯಾಸ ಮಾಡಿದ್ದಾರೆ. ಇದು ಸ್ನಾಯು ಮತ್ತು ನರವನ್ನು ಹರಿಯದೆ, ಅದರೊಳಗೆ ತೂರಿಕೊಳ್ಳದೆ, ಮೃದುವಾಗಿ, ಸುರಕ್ಷಿತವಾಗಿ ಮೂಳೆಗೆ ಹೊಂದಿಸಿಡುತ್ತದೆ. ಹೆಬ್ಬಾವು ಹಲ್ಲಿನಲ್ಲಿ ತನ್ನ ಬೇಟೆಯನ್ನು ಹಿಡಿದಿಡುವ ಹಾಗೆ. ಅಲ್ಲದೇ ಈ ಸಾಧನವು ದುರಸ್ತಿಯ ವೇಗವನ್ನೂ ದುಪ್ಪಟ್ಟು ಮಾಡುತ್ತದಂತೆ. ಹಾಗೂ ರೊಟೇಟರ್ ಕಫ್ ಸ್ನಾಯು ಮತ್ತೆ ಹರಿಯುವ ಸಾಧ್ಯತೆ ತೀರಾ ಕಡಿಮೆ ಎನ್ನುತ್ತಾರೆ, ಸಂಶೋಧಕ ತೊಮೊಪೊಲಸ್.

ಈ ಸಾಧನವನ್ನು ರಚಿಸುವಾಗ ‘3D ಪ್ರಿಂಟಿಂಗ್’, ‘ಸಿಮ್ಯುಲೇಶನ್’ ಹಾಗೂ ‘ಎಕ್ಸ್ ವಿವೊ’ ಪ್ರಯೋಗಗಳನ್ನು ಬಳಸಿಕೊಂಡು ಹೆಬ್ಬಾವಿನ ಹಲ್ಲಿನ ರಚನೆಯಿರುವ ವಿವಿಧ ಬಗೆಯ ಸಾಧನಗಳನ್ನು ರೂಪಿಸಿದ್ದಾರೆ. ಅದು ಹೇಗೆ ಸ್ನಾಯುವನ್ನು ಹಿಡಿದಿಡುತ್ತದೆ ಎಂದು ಪರೀಕ್ಷಿಸಿದ್ದಾರೆ. ಇಂತಹ ಅನೇಕ ಸಾಧನಗಳನ್ನು ರಚಿಸಿ, ಪರೀಕ್ಷಿಸಿ, ಕೊನೆಗೆ ರೊಟೇಟರ್ ಕಫ್‌ಗೆ ಸೂಕ್ತವೆನಿಸುವ ಆಕಾರದ, ಸ್ನಾಯುವನ್ನು ಸುರಕ್ಷಿತವಾಗಿ ಹಿಡಿದಿಡುವ, ಬಾಗಿದ ಆದರೆ ಸ್ನಾಯು ಅಥವಾ ನರವನ್ನು ಕತ್ತರಿಸದ ಸಾಧನವನ್ನು ವಿನ್ಯಾಸ ಮಾಡಿದ್ದಾರೆ. ಇದು ಸುಮಾರು ನಾವು ಬಳಸುವ ಸ್ಟೇಪಲ್‌ನ ಅರ್ಧದಷ್ಟು ಉದ್ದವಿರುತ್ತದೆಯಂತೆ. ರೊಟೇಟರ್ ಕಫ್‌ನ ಬಾಗುವಿಕೆಯ ಆಧಾರದ ಮೇಲೆ ರೋಗಿಗೆ ಸರಿಹೊಂದುವಂತೆ 3D ಪ್ರಿಂಟಿಂಗ್ ಮೂಲಕ ಇದನ್ನು ‘ಕಸ್ಟಮೈಸ್’ ಮಾಡಿಕೊಳ್ಳಬಹುದಂತೆ. ಇದನ್ನು ‘ಬಯೋ-ಕಂಪ್ಯಾಟಿಬಲ್ ರೆಸಿನ್’, ಎಂದರೆ, ಜೈವಿಕವಾಗಿ ಹೊಂದಿಕೊಳ್ಳುವ ರಾಳದಿಂದ ತಯಾರಿಸಲಾಗುತ್ತದೆ. ಹಾಗಾಗಿ ಯಾವುದೋ ಸಾಧನವನ್ನು ದೇಹದೊಳಗೆ ಹೊತ್ತುಕೊಂಡಿರುವ ಅನುಭವವಾಗುವುದಿಲ್ಲ. ಜೊತೆಗೆ ಶಸ್ತ್ರಚಿಕಿತ್ಸಕರು ಅನುಸರಿಸುತ್ತಿದ್ದ ಯಾವುದೇ ರೀತಿಯ ಚಿಕಿತ್ಸಾ ವಿಧಾನವನ್ನು ತ್ಯಜಿಸುವ ಅಥವಾ ವ್ಯತ್ಯಾಸ ಮಾಡಿಕೊಳ್ಳುವ ಅಗತ್ಯವಿಲ್ಲದೆ, ಶಸ್ತ್ರಚಿಕಿತ್ಸೆ ಮಾಡಿದ ನಂತರ ಕೊನೆಯಲ್ಲಿ ಈ ಸಾಧನವನ್ನು ಜೋಡಿಸಬೇಕಷ್ಟೇ. ಮುಂದೆ ತನ್ನಷ್ಟಕ್ಕೆ ದುರಸ್ತಿಯ ಕೆಲಸ ಸುಲಭವಾಗುತ್ತದೆ; ಶಕ್ತಿ ದುಪ್ಪಟ್ಟಾಗುತ್ತದೆ. ರೊಟೇಟರ್ ಕಫ್ ಎಂದಿನಂತೆ ಮರಳಿ ಕಾರ್ಯನಿರತವಾಗುತ್ತದೆ ಎನ್ನುತ್ತಾರೆ, ತಂಡದ ಮತ್ತೊಬ್ಬ ಸಂಶೋಧಕರಾದ ಕುರ್ಟಲಿಯರ್‌ಯು.

ಇದನ್ನು ಪರೀಕ್ಷಿಸಲು ಇವರು ಎರಡು ಮಾನವಶವದ ರೊಟೇಟರ್ ಕಫ್ ಮಾದರಿಗಳನ್ನು ತೆಗೆದುಕೊಂಡಿದ್ದಾರೆ. ಪರೀಕ್ಷೆಗೆ ಸೂಕ್ತವಾದ ತಯಾರಿಗಳನ್ನು ಪ್ರಯೋಗಾಲಯದಲ್ಲಿ ಮಾಡಿಕೊಂಡು ರೊಟೇಟರ್ ಕಫ್ ಸ್ನಾಯುವನ್ನು ಹರಿದು, ನಂತರ ಡಬಲ್‌ರೋಸ್ಯೂಚರ್‌ಟೆಕ್ನಿಕ್‌ನಿಂದ ದುರಸ್ತಿ ಮಾಡಿದ್ದಾರೆ. ಎಂದರೆ ನರ-ಸ್ನಾಯುವನ್ನು ಹೊಲಿದು ಮೂಳೆಯೊಂದಿಗೆ ಕೂಡಿಸಿದ್ದಾರೆ. ನಂತರ ಅವರು ವಿನ್ಯಾಸ ಮಾಡಿರುವ ಸಾಧನವನ್ನು ಜೋಡಿಸಿ ಪರೀಕ್ಷೆ ಮಾಡಿದ್ದಾರೆ. ಸಾಧನವು ಸುರಕ್ಷಿತವಾಗಿ ಸ್ನಾಯು-ನರ-ಮೂಳೆಯನ್ನು ಜೋಡಿಸಿಟ್ಟಿತ್ತಂತೆ. ಬಹುದಿನಗಳವರೆಗೆ ಬಳಕೆ ಮಾಡಿದರೂ ಹರಿಯಲಿಲ್ಲವಂತೆ ಹಾಗಾಗಿ ಮತ್ತೆ ಮತ್ತೆ ಹರಿಯುವ ರೊಟೇಟರ್ ಕಫ್ ಟೇರ್ ಅನ್ನು ಗುಣಪಡಿಸಲು ಈ ಸಾಧನವು ಅತ್ಯುತ್ತಮ ಆಯ್ಕೆ ಎನ್ನುವುದು ಸಂಶೋಧಕರ ಅಭಿಪ್ರಾಯ. ಹಾಗೇ, ಮುಂದಿನ ಸಂಶೋಧನೆಗಳಲ್ಲಿ ಈ ಸಾಧನವು ಅಂಗಾಂಶದೊಂದಿಗೇ ಬೆರೆತುಕೊಂಡು ಮೂಳೆಗಳನ್ನು ಬಲಪಡಿಸುವ ಸಾಧ್ಯತೆಗಳ ಬಗ್ಗೆ ಪರೀಕ್ಷೆ ನಡೆಸಲಿದ್ದೇವೆ ಎನ್ನುತ್ತಾರೆ, ಸಂಶೋಧಕರು. ಈಗ ಅಭಿವೃದ್ಧಿಪಡಿಸಿರುವ ಸಾಧನವು ದೇಹದೊಳಗೆ ಒಂದು ಸಾಧನವಾಗಿ ತನ್ನ ಕೆಲಸ ಮಾಡುತ್ತಲಿರುತ್ತದೆ. ಆದರೆ ಅದು ದೇಹದೊಂದಿಗೇ, ದೇಹದ ಭಾಗವಾಗಿ ಬೆರೆತುಹೋಗಿ, ಶಕ್ತಿಯನ್ನು ನೀಡಿ ಕೆಲಸ ಮಾಡುವಂತಾದರೆ ಇನ್ನೂ ಒಳಿತಲ್ಲವೇ? ❖



ಫಿಲ್ಟರ್ ನೀರು ಲಾಭ ಎಷ್ಟು? ನಷ್ಟ ಎಷ್ಟು?

ಅವಿನಾಶ್ ಬಿ.

ವೈದ್ಯರು ಔಷಧವನ್ನು ಬರೆದು ಕೊಡುವಾಗ ‘ಇದರಿಂದೇನಾದರೂ ಅಡ್ಡಪರಿಣಾಮಗಳಿವೆಯೇ’ ಎಂದು ಪ್ರಶ್ನಿಸುವ ನಾವು, ‘ಹೋಟೆಲೂಟ, ಬೀದಿಬದಿ ತಿಂಡಿ ಅಥವಾ ಜಂಕ್ ಫುಡ್ ಅನ್ನು ಸೇವಿಸುವಾಗ ಇದೇ ಪ್ರಶ್ನೆಯನ್ನು ಕೇಳುವುದಿಲ್ಲ’ ಎಂದು ವ್ಯಂಗ್ಯಭರಿತ ಕಟುಸತ್ಯದ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಚರ್ಚೆಯಾಗುತ್ತಿದೆ. ಅಷ್ಟರ ಮಟ್ಟಿಗೆ ಜನರಲ್ಲಿ ಆರೋಗ್ಯದ ಬಗೆಗಿನ ಜಾಗೃತಿ ಹೆಚ್ಚಿದೆ. ಆದರೆ ಅತಿಯಾದ ಕಾಳಜಿಯ ಆತಂಕವನ್ನೇ ವಿವಿಧ ಕಂಪನಿಗಳು ಲಾಭಕ್ಕೆ ಬಳಸಿಕೊಳ್ಳುವುದು ಮಾರುಕಟ್ಟೆ ತಂತ್ರಗಳಲ್ಲೊಂದು. ಇದಕ್ಕೆ ಕುಡಿಯುವ ನೀರನ್ನು ಶುದ್ಧೀಕರಿಸುವ ಕ್ಷೇತ್ರವೂ ಹೊರತಾಗಿಲ್ಲ. ನೀರನ್ನು ಜೀವಜಲ ಎನ್ನುವುದು ನಿಜವೇ ಆದರೂ, ನೀರಿನಲ್ಲಿರುವ ಆರೋಗ್ಯಕರ ಅಂಶಗಳನ್ನು ಉಳಿಸಿಕೊಂಡು ಕುಡಿಯುವುದೇ ಇಂದಿನ ದಿನದ ಸವಾಲು.

ಶುದ್ಧೀಕರಿಸಿದ ನೀರು ಎಂದು ಪ್ರಸ್ತಾಪಿಸಿದರೆ ‘ಆರ್‌ಒ ವಾಟರ್ ಫಿಲ್ಟರ್’ ಈಗ ಹೆಚ್ಚು ಪ್ರಚಾರದಲ್ಲಿದೆ. ಕಲುಷಿತ ನೀರನ್ನು ಕುಡಿದು ಸಾವಿಗೀಡಾದ ಪ್ರಕರಣಗಳೂ ಅಲ್ಲಲ್ಲಿ ವರದಿಯಾಗಿವೆ. ಈ ಕುರಿತು ಒಂದಿಷ್ಟು ಜನಜಾಗೃತಿಯೂ ಹೆಚ್ಚಾಗಿದೆ ಮತ್ತು ಫಿಲ್ಟರ್ ಬಳಕೆಯೂ ಹೆಚ್ಚಿದೆ. ಅಲ್ಲದೆ, ‘ಪಕ್ಕದ ಮನೆಯವರು ಅಥವಾ ಬಂಧುಗಳು ಚಂದದ ಆರ್‌ಒ ಫಿಲ್ಟರ್ ಹಾಕಿಸಿಕೊಂಡಿದ್ದಾರೆ, ನಾವೂ ಹಾಕಿಸಿಕೊಳ್ಳಬೇಕು’ ಎಂಬುದು ಪ್ರತಿಷ್ಠೆಯ ವಿಷಯವೂ ಆಗುತ್ತಿದೆ. ಈ ಹಂತದಲ್ಲಿ, RO ಫಿಲ್ಟರ್ ಅಳವಡಿಸಿಕೊಳ್ಳುವ ಬಗ್ಗೆ ಯೋಚಿಸುವ ಮುನ್ನ, ಅದರ ಬಗ್ಗೆ ನಾವು ತಿಳಿದುಕೊಳ್ಳಲೇಬೇಕಾದ ಒಂದಿಷ್ಟು ಮಾಹಿತಿ ಇಲ್ಲಿದೆ.

ಏನಿದು ಶುದ್ಧೀಕರಣ ಪ್ರಕ್ರಿಯೆ?

‘RO’ ಎಂದರೆ ‘ರಿವರ್ಸ್ ಆಸ್ಮೋಸಿಸ್’ (Reverse Osmosis ಅಂದರೆ ಪ್ರತಿ-ಪರಾಸರಣ) ಎಂಬ ಜೀವರಾಸಾಯನಿಕ ಕ್ರಿಯೆ. ಅತ್ಯಂತ ತೆಳುವಾದ ಅಥವಾ ಸೂಕ್ಷ್ಮವಾದ ಪೊರೆಯ (‘ಮೆಂಬ್ರೇನ್’) ಮೂಲಕ ನೀರನ್ನು ಹಾಯಿಸಿ ಶುದ್ಧೀಕರಣ ಮಾಡುವ ಕ್ರಿಯೆಯಿದು. ಈ ಪೊರೆಯು ಅತ್ಯಂತ ಸೂಕ್ಷ್ಮವಾದ ಕಣಗಳನ್ನಷ್ಟೇ ತನ್ನ ಮೂಲಕ ಹಾದುಹೋಗಲು ಅನುಕೂಲ ಮಾಡಿಕೊಡುತ್ತದೆ. ಅಂದರೆ, ಇದರಲ್ಲಿರುವ ರಂಧ್ರದ ಗಾತ್ರವು 0.0001 ಮೈಕ್ರಾನ್‌ನಷ್ಟು ಸೂಕ್ಷ್ಮವಾಗಿರುತ್ತದೆ. ತ್ಯಾಜ್ಯ, ಸಾವಯವ, ಲೋಹ, ಖನಿಜ ಮುಂತಾದವುಗಳ, ನೀರಿಗಿಂತ ದೊಡ್ಡ ಗಾತ್ರದ ಅಣುಗಳಂತೂ ಹಾದು ಹೋಗುವುದು ಅಸಾಧ್ಯ. ಅಂತಿಮವಾಗಿ ಶುದ್ಧೀಕೃತ ನೀರು ದೊರೆಯುತ್ತದೆ.

ಪ್ರಯೋಜನಗಳು

ಬಾವಿಯ ನೀರಿಗಿಂತ ಶುದ್ಧ ನೀರು ಬೇರೆ ಇಲ್ಲ. ಈಗ ಅದರ ಬದಲಾಗಿ ನಾವಿಂದು ಬೋರ್‌ವೆಲ್ ನೀರನ್ನು ಅಥವಾ ನಗರಗಳಲ್ಲಿ ನದಿಯಿಂದ ಸಂಗ್ರಹಿತವಾಗಿ ಬರುವ ನೀರನ್ನೇ ಬಳಕೆಗೆ ನೆಚ್ಚಿಕೊಂಡಿರುತ್ತೇವೆ. ಈ ನೀರಿನಲ್ಲಿ, ವಿಶೇಷವಾಗಿ ಬೋರ್‌ವೆಲ್ ನೀರಿನಲ್ಲಿ ಅನಾರೋಗ್ಯಕರವಾದ ‘ಸಂಪೂರ್ಣವಾಗಿ ಕರಗಿರುವ ಘನವಸ್ತು’ (TDS) ನಿರ್ದಿಷ್ಟ ಪ್ರಮಾಣಕ್ಕಿಂತ ಹೆಚ್ಚಿರುತ್ತದೆ. ರೋಗಕಾರಕವಾದ ಮಲಿನಾಂಶಗಳು, ಸೀಸ (‘ಲೆಡ್’) ಮುಂತಾದ ಅಪಾಯಕಾರಿ ಲೋಹದ ಅಂಶಗಳು, ಲವಣಾಂಶಗಳು, ಬ್ಯಾಕ್ಟೀರಿಯಾ, ವೈರಸ್, ಕೀಟನಾಶಕಗಳು ಮತ್ತು ಕರಗಿರುವ ಇತರ ಘನವಸ್ತುಗಳು RO ಫಿಲ್ಟರ್‌ನಲ್ಲಿ ಸೋಸಿ ಹೋಗುತ್ತವೆ. ಈ ನೀರು ಅನಾರೋಗ್ಯಕರ ಅಂಶಗಳಿಂದ ಮುಕ್ತವಾಗಿರುತ್ತದೆ.

ಸಮಸ್ಯೆ ಏನು?

ಆದರೆ, ಈ ರೀತಿ ಸೂಕ್ಷ್ಮಾತಿಸೂಕ್ಷ್ಮ ಕಣಗಳಷ್ಟೇ ಹಾದುಹೋಗುವಾಗ, ಸೂಕ್ಷ್ಮವಾದ ಹಾನಿಕಾರಕ ವಸ್ತುಗಳೇನೋ ಫಿಲ್ಟರ್ ಆಗುತ್ತವೆ. ಆದರೆ ದೇಹಕ್ಕೆ, ಬೆಳವಣಿಗೆಗೆ, ಮೆದುಳಿಗೂ ಅಗತ್ಯವಿರುವ ತಾಮ್ರ, ಮೆಗ್ನೀಷಿಯಂ ಮುಂತಾದ ಖನಿಜಾಂಶಗಳು ಕೂಡ ಸೋಸಲ್ಪಡುತ್ತವೆ. ನೀರಿನಲ್ಲಿ ಕರಗಿರುವ ಅವಶ್ಯ ಖನಿಜಾಂಶಗಳು ಈ ನೀರಿನಲ್ಲಿ ಇಲ್ಲದಿರುವುದರಿಂದ ಇದು ಆರೋಗ್ಯಕ್ಕೆ ಪೂರಕವಲ್ಲ. ಒಳ್ಳೆಯದು ಕೆಟ್ಟದ್ದು ಎನ್ನದೇ ಎಲ್ಲ ರೀತಿಯ ಖನಿಜಾಂಶಗಳನ್ನೂ ‘ರಿವರ್ಸ್ ಆಸ್ಮೋಸಿಸ್’ ನಿವಾರಿಸಿಬಿಡುತ್ತದೆ. ನೀರಿನಲ್ಲಿರುವ ಕ್ಷಾರೀಯ ಖನಿಜಗಳಾದ ಕ್ಯಾಲ್ಸಿಯಂ, ಮೆಗ್ನೀಷಿಯಂಗಳು ಇಲ್ಲದಿರುವುದರಿಂದ ಈ ‘ತಟಸ್ಥ’ ನೀರು ಕೊಂಚ ಆಮ್ಲೀಯವೇ ಆಗಿರುತ್ತದೆ. ರಾಸಾಯನಿಕ ವಿಜ್ಞಾನದ ಪ್ರಕಾರ ಇದರ ಪಿಎಚ್ ಮೌಲ್ಯವು 7ಕ್ಕಿಂತ ಸ್ವಲ್ಪ ಕೆಳಗಿರುತ್ತದೆ ಎಂದು ಸಂಶೋಧನೆಗಳು ಹೇಳುತ್ತವೆ. ಆರ್‌ಒ ಫಿಲ್ಟರ್‌ನ ನಿರ್ವಹಣಾ ವೆಚ್ಚವೂ ಅಧಿಕ. ಲಭ್ಯ ನೀರಿನ ಗುಣಮಟ್ಟವನ್ನು ಹೊಂದಿಕೊಂಡು ಆಗಾಗ್ಗೆ ಫಿಲ್ಟರ್ ಬದಲಾಯಿಸಬೇಕಾಗುತ್ತದೆ. ಈ ಫಿಲ್ಟರ್‌ಗಳು ದುಬಾರಿ. ಇಷ್ಟೇ ಅಲ್ಲ, ಇದರಲ್ಲಿ ಜಲಕ್ಷಾಮದ ಕಾಲದಲ್ಲಿಯೂ ಅಮೂಲ್ಯವಾದ ನೀರು ಸಿಕ್ಕಾಪಟ್ಟೆ ಎನಿಸುವಷ್ಟು ವ್ಯರ್ಥವಾಗುತ್ತದೆ. ಸೂಕ್ಷ್ಮ ಪೊರೆಯ ಮೂಲಕ ಬಳಕೆಗೆ ಲಭ್ಯವಾಗುವ ನೀರನ್ನು ಪಡೆಯಬೇಕಿದ್ದರೆ ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ವ್ಯಯಿಸಬೇಕಾಗುತ್ತದೆ. ಬೇರೆಯೇ ಪೈಪ್ ಮೂಲಕ ಹೊರಹೋಗುವ, ತ್ಯಾಜ್ಯಯುಕ್ತ ಅಂಶಗಳಿರುವ ಈ ಗಡುಸು ನೀರನ್ನು ಪಾತ್ರೆ ತೊಳೆಯಲು, ಬಟ್ಟೆ ಒಗೆಯಲು, ಗಿಡಗಳಿಗೆ ಉಣಿಸಲು ವ್ಯವಸ್ಥೆ ಮಾಡಬಹುದಾದರೂ ಅದು ಗಡುಸಾಗಿರುವುದರಿಂದ ಮತ್ತು ತ್ಯಾಜ್ಯವನ್ನು ಒಳಗೊಂಡಿರುವುದರಿಂದ ಪರಿಸರಕ್ಕೆ ಪೂರಕವಲ್ಲ. RO ನೀರು ಸೇವಿಸಿದರೆ ಅಗತ್ಯ ಖನಿಜ, ಲವಣಾಂಶಗಳು ಸಿಗುವುದಿಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆಯೇ ಎಚ್ಚರಿಸಿದೆ. ದೀರ್ಘಕಾಲ ಈ ನೀರು ಸೇವಿಸುತ್ತಾ ಹೋದಲ್ಲಿ ದೇಹದಲ್ಲಿ ಖನಿಜಾಂಶಗಳ ಕೊರತೆಯಿಂದಾಗಿ ಕಾಣಿಸಿಕೊಳ್ಳುವ ಕಾಯಿಲೆಗಳ ಅಪಾಯ ಹೆಚ್ಚಾಗುತ್ತದೆ ಎಂಬುದು ಜೆಕ್ ಗಣರಾಜ್ಯದಲ್ಲಿ ನಡೆಸಲಾದ ಸಂಶೋಧನೆಯಲ್ಲಿ ಕಂಡುಬಂದಿದೆ. ಗಮನಿಸಬೇಕಾದ ವಿಚಾರವೆಂದರೆ, ಆರ್‌ಒ ಫಿಲ್ಟರ್ ನೀರಿನಲ್ಲಿ ಹಾನಿಕಾರಕ, ಸೋಂಕುಕಾರಕ ಅಥವಾ ವಿಷಕಾರಕ ಅಂಶಗಳು ಇರುವುದಿಲ್ಲ. ಆದರೆ, ಅದರಲ್ಲಿ ದೇಹಕ್ಕೆ ಅಗತ್ಯವಿರುವ ಜೀವಸತ್ವ ಇರುವುದಿಲ್ಲ.

ಪರಿಹಾರ ಏನು?

ಮೊದಲನೆಯದಾಗಿ, ಆರ್‌ಒ ಶುದ್ಧೀಕರಣದ ನೀರಿನ ಸೇವನೆಯಿಂದ ದೇಹಕ್ಕೆ ಕೊರತೆಯಾಗುವ ಪೋಷಕಾಂಶಗಳನ್ನು ಸರಿದೂಗಿಸಿಕೊಳ್ಳಬೇಕಿದ್ದರೆ ಸತ್ವಭರಿತವಾದ ಆಹಾರ ಪದಾರ್ಥಗಳನ್ನು ಸೇವಿಸಬೇಕಾಗುತ್ತದೆ. ಇದಕ್ಕೆ ಹೊರತಾಗಿ, ಈಗ ಕೆಲವು RO ಸಿಸ್ಟಂಗಳಲ್ಲಿ ನೀರು ಶುದ್ಧೀಕರಣವಾದ ಬಳಿಕ, ಅದಕ್ಕೆ ಖನಿಜಾಂಶ ಮರುಪೂರಣ ಮಾಡುವ ವ್ಯವಸ್ಥೆಯೂ ಬಂದಿದೆ. ಇದಲ್ಲದೆ, ಅಲ್ಟ್ರಾ ಮತ್ತು ನ್ಯಾನೋ ಫಿಲ್ಟರ್‌ಗಳು ಬಂದಿವೆ. ಉಳಿದಂತೆ ಸೂಕ್ತವಾದ ಡಿಸ್ಟಿಲರ್‌ಗಳ ಮೂಲಕ ನೀರನ್ನು ಸೋಸುವುದು, ನೀರನ್ನು ಕುದಿಸಿ ಆರಿಸುವುದು, ಬಾವಿಯ ನೀರನ್ನೇ ಬಳಸುವುದು ಮುಂತಾದ ಪರ್ಯಾಯ ಮಾರ್ಗಗಳಿವೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ವಿಜ್ಞಾನ

ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣ

4) ಯಾವುದನ್ನು ಉತ್ಕರ್ಷಣ ಮತ್ತು ಅಪಕರ್ಷಣ ಕ್ರಿಯೆ ಎನ್ನುವರು?

ಉತ್ತರ:– ರಾಸಾಯನಿಕ ಕ್ರಿಯೆಯಲ್ಲಿ ವಸ್ತುವೊಂದು ಆಕ್ಸಿಜನ್ ಪಡೆದುಕೊಂಡರೆ ಅದು ಉತ್ಕರ್ಷಣಗೊಂಡಿದೆ ಎನ್ನುತ್ತೇವೆ.

ರಾಸಾಯನಿಕ ಕ್ರಿಯೆಯಲ್ಲಿ ವಸ್ತುವೊಂದು ಆಕ್ಸಿಜನ್ ಕಳೆದುಕೊಂಡರೆ ಅದು ಅಪಕರ್ಷಣಗೊಂಡಿದೆ ಎನ್ನುತ್ತೇವೆ.

5) ರೆಡಾಕ್ಸ್ ಕ್ರಿಯೆಗಳ ಬಗ್ಗೆ ಬರೆಯಿರಿ

ಉತ್ತರ:– ರಾಸಾಯನಿಕ ಕ್ರಿಯೆಯಲ್ಲಿ ಒಂದು ಪ್ರತಿವರ್ತಕವು ಉತ್ಕರ್ಷಣಗೊಂಡರೆ ಮತ್ತೊಂದು ಪ್ರತಿವರ್ತಕವು ಅಪಕರ್ಷಣಗೊಳ್ಳುತ್ತದೆ ಇಂತಹ ಕ್ರಿಯೆಗಳನ್ನು ಉತ್ಕರ್ಷಣ–ಅಪಕರ್ಷಣ ಅಥವಾ ರೆಡಾಕ್ಸ್ ಕ್ರಿಯೆಗಳು ಎನ್ನುವರು

6) ಒಂದೊಂದು ಉದಾಹರಣೆಯೊಂದಿಗೆ ಇವುಗಳನ್ನು ವಿವರಿಸಿ

ಅ) ನಶಿಸುವಿಕೆ ಬ) ಕಮಟುವಿಕೆ

ಉತ್ತರ:–

ನಶಿಸುವಿಕೆ:– ಲೋಹಗಳು ತಮ್ಮ ಸುತ್ತಲಿನ ತೇವಾಂಶ, ಆಮ್ಲಗಳ ಪರಿಣಾಮ ತಮ್ಮ ಹೊಳಪನ್ನು ಕಳೆದುಕೊಂಡು ಕ್ರಮೇಣ ನಾಶವಾಗಲು ಆರಂಭಿಸುತ್ತವೆ ಈ ಪ್ರಕ್ರಿಯೆಗೆ ನಶಿಸುವಿಕೆ ಎನ್ನುವರು. ಉದಾ:– ಕಬ್ಬಿಣ ತುಕ್ಕು ಹಿಡಿಯುವುದು

ಕಮಟುವಿಕೆ:– ಕೊಬ್ಬು ಮತ್ತು ಎಣ್ಣೆ ಪದಾರ್ಥಗಳು ಉತ್ಕರ್ಷಣೆಗೆ ಒಳಗಾಗಿ ವಾಸನೆ ಮತ್ತು ರುಚಿಯಲ್ಲಿ ಬದಲಾವಣೆ ಹೊಂದುವುದನ್ನು ಕಮಟುವಿಕೆ ಎನ್ನುವರು. ಉದಾ:– ಹಲವು ದಿನಗಳಿಂದ ಸಂಗ್ರಹಿಸಿಟ್ಟ ಎಣ್ಣೆಯಿಂದ ತಯಾರಿಸಿದ ಪದಾರ್ಥಗಳು ಕಮಟುವಿಕೆಗೆ ಒಳಗಾಗಿ ತನ್ನ ಮೂಲ ರುಚಿ ಹಾಗೂ ವಾಸನೆಯನ್ನು ಕಳೆದುಕೊಂಡು ತಿನ್ನಲು ಯೋಗ್ಯವಲ್ಲದವುಗಳಾಗಿ ಬದಲಾಗುತ್ತದೆ

7) ಮೆಗ್ನೀಷಿಯಂ ಪಟ್ಟಿಯನ್ನು ಗಾಳಿಯಲ್ಲಿ ಉರಿಸುವ ಮೊದಲು ಸ್ವಚ್ಛಗೊಳಿಸಬೇಕು. ಏಕೆ?

ಉತ್ತರ:– ಮೆಗ್ನೀಷಿಯಂ ಪಟ್ಟಿಯನ್ನು ಗಾಳಿಗೆ ತೆರೆದಿಟ್ಟಾಗ ಆಕ್ಸಿಜನ್ನೊಡನೆ ವರ್ತಿಸಿ ಮೇಲ್ಪದರವು ಮೆಗ್ನೀಷಿಯಂ ಆಕ್ಸೈಡ್ ಆಗಿರುತ್ತದೆ. ಆದ್ದರಿಂದ ಅದನ್ನು ಸ್ವಚ್ಛಗೊಳಿಸಬೇಕು

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) …………ಯಲ್ಲಿ ಎರಡು ವಿಭಿನ್ನ ಅಣುಗಳು ಅಥವಾ ಅಣುಗಳ ಗುಂಪುಗಳು(ಅಯಾನುಗಳು) ವಿನಿಮಯಗೊಳ್ಳುತ್ತವೆ

ಎ) ದ್ವಿಸ್ಥಾನ ಪಲ್ಲಟ ಕ್ರಿಯೆ ಬಿ) ಅಂತರುಷ್ಣಕ ಕ್ರಿಯೆ

ಸಿ) ಪ್ರಕ್ಷೇಪನ ಕ್ರಿಯೆ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– (ಎ) ದ್ವಿಸ್ಥಾನ ಪಲ್ಲಟ ಕ್ರಿಯೆ

2) ಪ್ರಕ್ಷೇಪನ ಕ್ರಿಯೆಗಳು ವಿಲೀನಗೊಳ್ಳದ ……………… ಗಳನ್ನು ಉತ್ಪತ್ತಿ ಮಾಡುತ್ತವೆ.

ಎ) ಕಿಣ್ವ ಬಿ) ಲವಣ

ಸಿ) ನರ ತಂತು ಡಿ) ಯಾವುದೂ ಅಲ್ಲ

ಉತ್ತರ:– (ಬಿ) ಲವಣ

3) ಸಂಯೋಗ ಕ್ರಿಯೆಯಲ್ಲಿ ಎರಡು ಅಥವಾ ಹೆಚ್ಚು ವಸ್ತುಗಳು. ಸಂಯೋಗವಾಗಿ ಒಂದೇ ಹೊಸ……………… ಉಂಟಾಗುತ್ತದೆ

ಎ) ಜವ ಬಿ) ಉದ್ದ

ಸಿ) ತೂಕ ಡಿ) ವಸ್ತು

ಉತ್ತರ:– (ಡಿ) ವಸ್ತು

4) "ರಾಸಾಯನಿಕ ಕ್ರಿಯೆಯಲ್ಲಿ ರಾಶಿಯನ್ನು ಸೃಷ್ಟಿಸಲು ಅಥವಾ ಲಯಗೊಳಿಸಲು ಸಾಧ್ಯವಿಲ್ಲ." ಇದು ಯಾವ ನಿಯಮ?

ಎ) ಗುರುತ್ವಾಕರ್ಷಣ ನಿಯಮ

ಬಿ) ನ್ಯೂಟನನ ಮೊದಲ ನಿಯಮ

ಸಿ) ರಾಶಿ ಸಂರಕ್ಷಣೆ ನಿಯಮ ಡಿ) ಹೊಸ ವಿಕಿರಣ ನಿಯಮ

ಉತ್ತರ:– (ಸಿ) ರಾಶಿ ಸಂರಕ್ಷಣೆ ನಿಯಮ

5) ಯಾವ ರಾಸಾಯನಿಕ ಕ್ರಿಯೆಯಲ್ಲಿ ಎರಡು ಅಥವಾ ಹೆಚ್ಚು ಪ್ರತಿವರ್ತಕಗಳು ಸೇರಿ ಒಂದೇ ಉತ್ಪನ್ನ ಉಂಟಾಗುತ್ತದೆಯೋ ಅಂತಹ ಕ್ರಿಯೆಗೆ …………………… ಎನ್ನುವರು

ಎ) ಸಂಯೋಗ ಬಿ) ಕುಂಬಕ

ಸಿ) ವಿಭಜನ ಡಿ) ಸ್ಥಾನಪಲ್ಲಟ ಕ್ರಿಯೆ

ಉತ್ತರ:– (ಎ) ಸಂಯೋಗ

6) ಬೆಳ್ಳಿಯ ಕ್ಲೋರೈಡ್‌ನ ಬಿಳಿ ಬಣ್ಣವು ಸೂರ್ಯನ ಬೆಳಕಿನಲ್ಲಿ ಬೂದು ಬಣ್ಣಕ್ಕೆ ತಿರುಗಿಸುತ್ತದೆ, ಇದಕ್ಕೆ ಕಾರಣ ಬೆಳಕು, ಬೆಳ್ಳಿಯ ಕ್ಲೋರೈಡ್ ಅನ್ನು …………… ಮತ್ತು ………… ಆಗಿ ವಿಭಜಿಸುವುದು

ಎ) ಬೆಳ್ಳಿ ಮತ್ತು ಆಕ್ಸಿಡ್ ಬಿ) ಚಿನ್ನ ಮತ್ತು ತಾಮ್ರ

ಸಿ) ಬೆಳ್ಳಿ ಮತ್ತು ಕಬ್ಬಿಣದ ಆಕ್ಸೈಡ್

ಡಿ) ಬೆಳ್ಳಿ ಮತ್ತು ಕ್ಲೋರಿನ್

ಉತ್ತರ:– (ಡಿ) ಬೆಳ್ಳಿ ಮತ್ತು ಕ್ಲೋರಿನ್

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಮಿಂಚು ಹುಳು ರಾತ್ರಿವೇಳೆಯಲ್ಲಿ ಮಿಂಚಲು ಕಾರಣವೇನು?

ಉತ್ತರ: ಮಿಂಚು ಹುಳುವಿನಲ್ಲಿರುವ ಪ್ರೋಟೀನ್ ಆಕ್ಸಿಜನ್‌ನೊಂದಿಗೆ ಅಪಕರ್ಷಿಸಿ ಬೆಳಕು ಬಿಡುಗಡೆ ಮಾಡುವ ರಾಸಾಯನಿಕ ಕ್ರಿಯೆ ನಡೆಯುವುದರಿಂದ ಅದು ರಾತ್ರಿ ವೇಳೆ ಮಿಂಚುತ್ತದೆ.

2) ಈ ಕೆಳಗಿನ ಯಾವುದೆಲ್ಲವೂ ಭೌತಿಕ ಕ್ರಿಯೆ ಅಥವಾ ರಾಸಾಯನಿಕ ಕ್ರಿಯೆಗಳಾಗಿವೆ ಎಂಬುದನ್ನು ತಿಳಿಸಿ

1) ಪೆಟ್ರೋಲಿಯಂ ಅನಿಲ ದಹನ

2) ಪೆಟ್ರೋಲ್ ಬಾಷ್ಪೀಕರಿಸುವಿಕೆ

3) ಕಬ್ಬಿಣವನ್ನು ಕೆಂಪಗೆ ತ್ಕಾಯಿಸುವುದು

4) ಹಾಲು ಮೊಸರಾಗುವಿಕೆ

5) ಅಮೋನಿಯಂ ಕ್ಲೋರೈಡ್‌ನ ಸಂಸ್ಕರಣೆ

6) ನೀರು ಮಂಜುಗಡ್ಡೆಯಾಗುವುದು

ಉತ್ತರ: ಭೌತಿಕ ಕ್ರಿಯೆ: (1) ಪೆಟ್ರೋಲ್ ಬಾಷ್ಪೀಕರಿಸುವಿಕೆ
(2) ಕಬ್ಬಿಣ ಕೆಂಪಗೆ ಕಾಯಿಸುವುದು
(3) ನೀರು ಮಂಜುಗಡ್ಡೆಯಾಗುವುದು

ರಾಸಾಯನಿಕ ಕ್ರಿಯೆ: (1) ಪೆಟ್ರೋಲಿಯಂ ಅನಿಲದ ದಹನ
(2) ಹಾಲು ಮೊಸರಾಗುವಿಕೆ
(3) ಅಮೋನಿಯಂಅ ಕ್ಲೋರೈಡ್‌ನ ಸಂಸ್ಕರಣೆ

3) ರಾಸಾಯನಿಕ ಸ್ಥಾನಪಲ್ಲಟ ಕ್ರಿಯೆ ಮತ್ತು ದ್ವಿಸ್ಥಾನಪಲ್ಲಟ ಕ್ರಿಯೆಗಳ ನಡುವಿನ ವ್ಯತ್ಯಾಸವನ್ನು ಬರೆಯಿರಿ

ಉತ್ತರ:– ರಾಸಾಯನಿಕ ಸ್ಥಾನಪಲ್ಲಟ ಕ್ರಿಯೆ ಎಂದರೆ ಹೆಚ್ಚು ಕ್ರಿಯಾಪಟುವಾದ ಲೋಹವು ಸಂಯುಕ್ತದಿಂದ ಕಡಿಮೆ ಕ್ರಿಯಾಪಟುವಾದ ಲೋಹವನ್ನು ಸ್ಥಾನಪಲ್ಲಟಗೊಳಿಸುವ ಕ್ರಿಯೆಯಾಗಿದೆ

ಆದರೆ ಎರಡು ಪ್ರತಿವರ್ತಕಗಳ ನಡುವೆ ಆಯಾನುಗಳ ವಿನಿಯಮ ನಡೆಯುವುದೋ ಅದನ್ನು ದ್ವಿಸ್ಥಾನಪಲ್ಲಟ ಕ್ರಿಯೆ ಎನ್ನುವರು.

4) ನೈಸರ್ಗಿಕ ಅನಿಲದ ದಹನವನ್ನು ರಾಸಾಯನಿಕ ಕ್ರಿಯೆ ಎಂದು ಹೇಗೆ ತಿಳಿಯುವಿರಿ?

(ಮುಂದುವರಿಯುವುದು….)

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC BIOLOGY


MOLECULAR BASIS OF INHERITANCE

11. Write a note on autosomal disorders.


Ans:- (……..Contd)

The defective males must be given either blood transfusion or the required clotting factor if they are to lead a normal life. Otherwise even a small cut will cause loss of blood from the whole body so as to kill the individual.

(i) Marriage between a carrier woman (XX^h) and a normal man (XY) will produce normal girl, carrier girl, normal boy and haemophiliac boy in the ratio of 1 : 1 : 1 : 1.




(ii) The marriage between haemophiliac man (X^hY) and normal woman (XX) will produce normal boys and carrier girls.



(iii) A marriage between a haemophiliac man (X^hY) and a carrier woman (XX^h) will produce haemophiliac girl, carrier girl, haemophiliac boy and normal boy in the ratio of 1 : 1 : 1 : 1. But, haemophiliac girl dies in the foetus state.

∴ all the girls will be carrier girls as below –



(g) Red Green Colour Blindness - It is a **recessive** sex linked disorder in which the patient cannot distinguish red-green colours. The defect is not lethal in homozygous state. Therefore, it occurs in women also. Hemizygous condition is enough for the occurrence of defect in males. The famous scientist Dalton suffered from disorder. Because of his association with the genetic defect, red-green colour blindness is also known as **Daltonism.** Colour blindness is, actually, of three types - (i) Protanopia-**red colour blindness,**

(ii) **Tritanopia**- blue colour blindness,

(iii) **Deuternopia**- green colour blindnes


(i) Sex Chromosome Aberrations

(a) Turner's Syndrome (44 + XO)

That is undeveloped breasts, sparse pubic hair, small uterus, absence of menstrual cycle), reduced ovaries, sterility, broad chest with widely spaced nipples, abnormal jaw formation and often subnormal intelligence.

(b) Klinefelter's Syndrome(44 + XXY/XXXY)

The individuals are phenotypically male. The defect appears due to fusion of egg having unreduced sex complement (A + XX) with normal androsperm (A + Y) or sperm with unreduced sex complement (A + XY) and a normal (A + X) or abnormal egg (A + XX). Total number of chromosomes is 47 or 48. Individuals with Klinefelter's syndrome have long legs, sparse body hair, small prostate gland, small testes, azospermia, reduced mental intelligence and enlarged breasts in more than 50% of the cases. A barr body is present in the nuclei. Incidence of leg ulcers, osteoporosis and breast carcinoma are common.



Tall stature with feminised character (A) Short stature and under developed feminine character (B)

A. Klinefelter's syndrome

B. Turner's syndrome

(c) Supermales - The individuals have more than one Y-chromosome (44 + XYY). They are exceptionally tall. Intelligence is subnormal. They produce excess testosterone. Criminal tendencies may occur in many.

(d) Superfemales - They have more than two X–chromosomes (44+ XXX/XXXX). Nuclei possess two or more barr bodies. Mental development is less than normal. Development of sex characters is normal. Fertility may or may not be affected. *(Contd……)*

ಕೊಡಗಿನಲ್ಲಿ ಮಳೆ, ತುಂಬಿದ ಚಿಕ್ಲಿಹೊಳೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಮಂಗಳವಾರವೂ ಮಳೆ ಮುಂದುವರಿದಿದ್ದು, ಅಬ್ಬರ ತುಸು ತಗ್ಗಿದೆ. ಅರಣ್ಯ ಹಾಗೂ ಗುಡ್ಡಗಾಡು ಪ್ರದೇಶಗಳಲ್ಲಿ ಮಳೆ ಸುರಿದಿದ್ದು, ಹಾರಂಗಿ ಜಲಾಶಯದ ಒಳಹರಿವು ಮಂಗಳವಾರ 3,441 ಕ್ಯುಸೆಕ್‌ಗೆ ಹೆಚ್ಚಿದೆ. ಸೋಮವಾರ 1,673 ಕ್ಯುಸೆಕ್ ಒಳ ಹರಿವಿತ್ತು.

ಕುಶಾಲನಗರ ತಾಲ್ಲೂಕಿನಲ್ಲಿರುವ ಚಿಕ್ಲಿಹೊಳೆ ಜಲಾಶಯ ಸಂಪೂರ್ಣ ತುಂಬಿದ್ದು, ಅರ್ಧ ಚಂದ್ರಾಕೃತಿಯ ತಡೆಗೋಡೆ ಮೇಲಿಂದ ಹಾಲು ನೊರೆಯಂತೆ ಹರಿಯುತ್ತಿರುವ ದೃಶ್ಯ ಕಣ್ಮನ ಸೆಳೆಯುತ್ತಿದೆ.

ಗೋಣಿಕೊಪ್ಪಲು ಸಮೀಪದ ನಿಟ್ಟೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾರ್ಮಾಡು ಕುದನೆಕೊಡಿರ ಮಣಿ ಬೆಳ್ಳಿಯಪ್ಪ ಅವರ ಮನೆ ಗೋಡೆ ಮಳೆಯಿಂದ ಕುಸಿದಿದೆ.

ಮಂಗಳವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆಗಳ ಅವಧಿಯಲ್ಲಿ ಭಾಗಮಂಡಲ ಹೋಬಳಿ ವ್ಯಾಪ್ತಿಯಲ್ಲಿ 5 ಸೆಂ.ಮೀ ಮಳೆಯಾಗಿದೆ. ಮಡಿಕೇರಿ ತಾಲ್ಲೂಕಿನ ನಾಪೋಕ್ಲು ಹೋಬಳಿ ಹಾಗೂ ಸೋಮವಾರಪೇಟೆ ತಾಲ್ಲೂಕಿನ ಶಾಂತಳ್ಳಿ ಹೋಬಳಿ ವ್ಯಾಪ್ತಿಯಲ್ಲಿ ತಲಾ 5 ಸೆಂ.ಮೀ ಮಳೆಯಾಗಿದೆ.



ಕೊಡಗು ಜಿಲ್ಲೆಯ ಕುಶಾಲನಗರ ತಾಲ್ಲೂಕಿನ ರಂಗಸಮುದ್ರ ಬಳಿ ಭರ್ತಿಯಾಗಿರುವ ಚಿಕ್ಲಿಹೊಳೆ ಜಲಾಶಯದ ತಡೆಗೋಡೆ ಮೇಲಿಂದ ಅರ್ಧಚಂದ್ರಾಕೃತಿಯಲ್ಲಿ ನೀರು ಧುಮ್ಮಿಕ್ಕುತ್ತಿರುವ ನಯನ ಮನೋಹರ ದೃಶ್ಯ ಮಂಗಳವಾರ ಕಂಡುಬಂದಿತು

ಪ್ರಜಾವಾಣಿ ಚಿತ್ರ/ರಘು ಹೆಬ್ಬಾಲೆ

ಕಲಬುರಗಿ, ಬೀದರ್‌ನಲ್ಲಿ ಮಳೆ (ಕಲಬುರಗಿ ವರದಿ): ಕಲಬುರಗಿ ಹಾಗೂ ಬೀದರ್ ಜಿಲ್ಲೆಯಲ್ಲಿ ಮಂಗಳವಾರ ಉತ್ತಮವಾಗಿ ಮಳೆಯಾಗಿದೆ.

ಕಲಬುರಗಿ ನಗರದಲ್ಲಿ ಸಂಜೆ ಕೆಲ ಕಾಲ ತುಂತುರು ಮಳೆಯಾಗಿತ್ತು. ರಾತ್ರಿ ಸುಮಾರು ಒಂದು ಗಂಟೆ ಕಾಲ ಉತ್ತಮವಾಗಿ ಮಳೆ ಸುರಿಯಿತು. ಚಿಂಚೋಳಿ ತಾಲ್ಲೂಕಿನಲ್ಲೂ ಕೆಲ ಕಾಲ ಮಳೆ ಅಬ್ಬರಿಸಿತು.

ಬೀದರ್, ಬಸವಕಲ್ಯಾಣ, ಹುಮನಾಬಾದ್, ಭಾಲ್ಕಿ, ಹುಲಸೂರ, ಕಮಲನಗರ ಹಾಗೂ ಔರಾದ್ ತಾಲ್ಲೂಕುಗಳಲ್ಲೂ ಸಂಜೆ ಉತ್ತಮ ಮಳೆಯಾಗಿದೆ.

ಹುಲಿಕಲ್‌ನಲ್ಲಿ 13.8 ಸೆಂ.ಮೀ ಮಳೆ

ಶಿವಮೊಗ್ಗ: ಮಲೆನಾಡಿನಲ್ಲಿ ಆರಿದ್ರಾ ಮಳೆಯ ಅಬ್ಬರ ಮುಂದುವರಿದಿದೆ. ಜಿಲ್ಲೆಯ ಹೊಸನಗರ ತಾಲ್ಲೂಕಿನಲ್ಲಿ ಲಿಂಗನಮಕ್ಕಿ ಜಲಾನಯನ ಪ್ರದೇಶದಲ್ಲಿ ಭಾರಿ ಮಳೆ ಬೀಳುತ್ತಿದೆ. ಇದರಿಂದ ಜಲಾಶಯದ ಒಳಹರಿವಿನ ಪ್ರಮಾಣ 8,000 ಕ್ಯುಸೆಕ್‌ಗೆ ಏರಿಕೆಯಾಗಿದೆ.

ಸೋಮವಾರ ಜಲಾಶಯಕ್ಕೆ 13,704 ಕ್ಯುಸೆಕ್ ನೀರು ಹರಿದು ಬರುತ್ತಿತ್ತು. ಮಂಗಳವಾರ ಬೆಳಿಗ್ಗೆ 8 ಗಂಟೆಯ ವೇಳೆ ಒಳಹರಿವಿನ ಪ್ರಮಾಣ 20,951 ಕ್ಯುಸೆಕ್‌ಗೆ ಹೆಚ್ಚಿದೆ.

ಕಳೆದ 24 ಗಂಟೆಗಳ ಅವಧಿಯಲ್ಲಿ ಹೊಸನಗರ ತಾಲ್ಲೂಕಿನ ಹುಲಿಕಲ್‌ನಲ್ಲಿ ಅತಿಹೆಚ್ಚು 13.8 ಸೆಂ.ಮೀ, ಮಾಸ್ತಿಕಟ್ಟೆಯಲ್ಲಿ 13.3 ಸೆಂ.ಮೀ, ಮಾಣಿಯಲ್ಲಿ 11.4 ಸೆಂ.ಮೀ, ಯಡೂರು 10.8, ಹೊಸನಗರ 6.85, ಹುಂಚ 3.94, ಅರಸಾಳು 2.16 ಸೆಂ.ಮೀ ಹಾಗೂ ಸಾಗರ ತಾಲ್ಲೂಕಿನ ಕಾರ್ಗಲ್‌ನಲ್ಲಿ 6.45 ಸೆಂ.ಮೀ. ಮಳೆ ಸುರಿದಿದೆ.

ಲಿಂಗನಮಕ್ಕಿ ಜಲಾಶಯದಲ್ಲಿ ನೀರಿನಮಟ್ಟ ಏರಿಕೆಯಾಗಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ, 13 ಅಡಿ ಹೆಚ್ಚು ನೀರು ಸಂಗ್ರಹವಾಗಿದೆ.

ಭದ್ರಾ ಒಳಹರಿವು ಹೆಚ್ಚಳ: ಲಕ್ಕವಳ್ಳಿ ಬಳಿಯ ಭದ್ರಾ ಜಲಾಶಯಕ್ಕೂ ಒಳಹರಿವು ಹೆಚ್ಚಿದೆ. ಸೋಮವಾರ ಜಲಾಶಯಕ್ಕೆ 4,665 ಕ್ಯುಸೆಕ್ ಒಳಹರಿವು ಇತ್ತು. 24 ಗಂಟೆಗಳಲ್ಲಿ ಅದು 5,243 ಕ್ಯುಸೆಕ್‌ಗೆ ಏರಿಕೆಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್ ಎಸ್ *	124.80	96.50	8,787	526
ಹಾರಂಗಿ	2,859	2,841.09	3,441	200
ಕಬಿನಿ	2284.00	2,279	10,534	3,000
ಹೇಮಾವತಿ	2,922	2,891.05	10,137	250
ಲಿಂಗನಮಕ್ಕಿ	1,819	1,753.20	20,951	2,758.29
ಸೂಪಾ (ಮೀ)	564	526.25	8,452.12	964.03
ಮಾಣಿ	594	573.62	3,643	000
ತುಂಗಭದ್ರಾ	1,633	1,585.87	11,595	297
ಮಲಪ್ರಭಾ	2079.5	2,041.75	000	194
ಘಟಪ್ರಭಾ	2175	2,102.80	6,190	103
ಭದ್ರಾ	186	125.5	5,243	347
ಆಲಮಟ್ಟಿ (ಮೀ)	519.6	511.70	24,761	430
ನಾರಾಯಣಪುರ (ಮೀ)	492.25	489.20	206	95.81

* ನೆಲಮಟ್ಟದಿಂದ

ಒಂದು ವಾರ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ಕರಾವಳಿಯ ಎಲ್ಲ ಜಿಲ್ಲೆಗಳು ಹಾಗೂ ದಕ್ಷಿಣ ಒಳನಾಡಿನ ಕೆಲ ಜಿಲ್ಲೆಗಳಲ್ಲಿ ಮುಂದಿನ ಒಂದು ವಾರ ಭಾರಿ ಮಳೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗೆ ಬುಧವಾರ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಈ ಜಿಲ್ಲೆಗಳಲ್ಲಿ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ.

ಉತ್ತರ ಒಳನಾಡಿನ ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ 30ರಿಂದ 40 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಂಭವವಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ದಕ್ಷಿಣ ಒಳನಾಡಿನ ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಹಾಸನ, ಕೋಲಾರ, ಕೊಡಗು, ಮಂಡ್ಯ, ಮೈಸೂರು, ರಾಮನಗರ, ತುಮಕೂರು ಹಾಗೂ ವಿಜಯನಗರ ಜಿಲ್ಲೆಯ ಕೆಲವೆಡೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಹೇಳಿದೆ.

ಕರಾವಳಿಯಲ್ಲಿ ತೀವ್ರ ಬಿರುಗಾಳಿಯಿಂದ ಕೂಡಿದ ಹವಾಮಾನ ಇರಲಿದ್ದು, ಗಂಟೆಗೆ 35 ಕಿ.ಮೀ.ಯಿಂದ 55 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದೆ. ಆದ್ದರಿಂದ ಮೀನುಗಾರರು ಎಚ್ಚರಿಕೆ ವಹಿಸಬೇಕು.

ಸಮುದ್ರದಲ್ಲಿ ಎತ್ತರದ ಅಲೆಗಳು ಏಳುವ ಮುನ್ಸೂಚನೆ ಇರುವುದರಿಂದ ದಡದಲ್ಲಿ ಮನೋರಂಜನೆ ಚಟುವಟಿಕೆ ನಡೆಸುವಾಗ ಜಾಗರೂಕವಾಗಿ ಇರಬೇಕು ಎಂದು ಇಲಾಖೆ ತಿಳಿಸಿದೆ.

ಕರಾವಳಿಯ ಬಹುತೇಕ ಕಡೆ ಮಳೆ

ರಾಜ್ಯದಲ್ಲಿ ಮಂಗಳವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ಕರಾವಳಿಯ ಬಹುತೇಕ ಕಡೆ, ದಕ್ಷಿಣ ಒಳನಾಡಿನ ಹಲವು ಕಡೆ ಹಾಗೂ ಉತ್ತರ ಒಳನಾಡಿನ ಕೆಲವೆಡೆ ಮಳೆಯಾಗಿದೆ. ಉಡುಪಿಯ ಕೊಲ್ಲೂರು, ಉತ್ತರ ಕನ್ನಡದ ಸಿದ್ದಾಪುರ ಹಾಗೂ ಚಿಕ್ಕಮಗಳೂರಿನ ಕೊಟ್ಟಿಗೆಹಾರದಲ್ಲಿ ತಲಾ 9 ಸೆಂ.ಮೀ. ಮಳೆಯಾಗಿದೆ. ಉಡುಪಿಯ ಕೋಟ, ಶಿವಮೊಗ್ಗದ ಆಗುಂಬೆಯಲ್ಲಿ ತಲಾ 8 ಸೆಂ.ಮೀ., ದಕ್ಷಿಣ ಕನ್ನಡದ ಧರ್ಮಸ್ಥಳ, ಉಡುಪಿ ಹಾಗೂ ಶಿವಮೊಗ್ಗದ ಲಿಂಗನಮಕ್ಕಿಯಲ್ಲಿ ತಲಾ 7 ಸೆಂ.ಮೀ. ಮಳೆ ಸುರಿದಿದೆ. ಉಳಿದೆಡೆ ಇದಕ್ಕಿಂತ ಕಡಿಮೆ ಪ್ರಮಾಣದಲ್ಲಿ ಮಳೆಯಾಗಿದೆ.

'ಹಾಲು ಉತ್ಪಾದನೆ– ಕೆಎಂಎಫ್ ಮೈಲಿಗಲ್ಲು'

ರೈತರಿಗೆ ವರ್ಷಕ್ಕೆ ₹1,800 ಕೋಟಿ ಪ್ರೋತ್ಸಾಹಧನ– ಸಿ.ಎಂ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಂದು ಕೋಟಿ ಲೀಟರ್ ಹಾಲು ಉತ್ಪಾದನೆಯಾದರೆ ದಿನವೊಂದಕ್ಕೆ ₹5 ಕೋಟಿ ಪ್ರೋತ್ಸಾಹಧನವನ್ನು ರೈತರಿಗೆ ರಾಜ್ಯ ಸರ್ಕಾರ ಕೊಡುತ್ತದೆ. ಆ ಮೊತ್ತ ತಿಂಗಳಿಗೆ ₹150 ಕೋಟಿ, ವರ್ಷಕ್ಕೆ ₹1,800 ಕೋಟಿ ಆಗುತ್ತದೆ. ಇದರಿಂದ ರೈತರಿಗೆ ಸಹಾಯವಾಗುತ್ತದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಒಂದು ಕೋಟಿ ಲೀಟರ್ ಹಾಲು ಸಂಗ್ರಹದ ಸಂಭ್ರಮಾಚರಣೆಯ ಅಂಗವಾಗಿ ಗೋ ಪೂಜೆ ಸಲ್ಲಿಸಿ ಮಾತನಾಡಿದ ಅವರು, 'ಕೆಎಂಎಫ್ ವತಿಯಿಂದ ಪ್ರತಿದಿನ ಒಂದು ಕೋಟಿ ಲೀಟರ್ ಹಾಲು ಉತ್ಪಾದನೆಯಾಗುತ್ತಿದ್ದು, ಇದೊಂದು ಮೈಲಿಗಲ್ಲು. ಕಳೆದ ವರ್ಷ ಜೂನ್‌ನಲ್ಲಿ ದಿನವೊಂದಕ್ಕೆ 90 ಲಕ್ಷ ಲೀಟರ್ ಹಾಲು ಉತ್ಪಾದನೆ ಆಗಿತ್ತು' ಎಂದರು.

'ರಾಜ್ಯದಲ್ಲಿ ಸುಮಾರು 16 ಸಾವಿರ ಸೊಸೈಟಿಗಳು, 15 ಹಾಲು ಒಕ್ಕೂಟಗಳಿವೆ. ಕೆಲವೆಡೆ 2-3 ಜಿಲ್ಲೆ ಸೇರಿ ಒಕ್ಕೂಟ ಮಾಡಿಕೊಂಡಿದ್ದಾರೆ. 15 ಮದರ್ ಡೇರಿಗಳಿವೆ. ಒಂದು ಕೋಟಿ ಲೀಟರ್ ಹಾಲು ಉತ್ಪಾದನೆ ಆಗುತ್ತಿದ್ದು, ಸಂಗ್ರಹವಾಗುವ ಹಾಲನ್ನು ಮಾರಾಟ ಮಾಡಬೇಕಿದೆ. ರೈತರಿಗೆ ಮತ್ತು ಸೊಸೈಟಿಗಳಿಗೆ ಹಾಲು ಬೇಡ ಎಂದು ನಾವು ಹೇಳಲು ಆಗುವುದಿಲ್ಲ. ಈ ಕಾರಣಕ್ಕೆ ಅರ್ಧ ಲೀಟರ್ ಹಾಲಿನ ಪ್ಯಾಕೆಟ್‌ನಲ್ಲಿ 50 ಮೀ.ಲೀಟರ್ ಹಾಲು ಹೆಚ್ಚು ಮಾಡಲಾಗಿದೆ. ರೈತರಿಗೆ ಸಹಾಯ ಮಾಡಲು ನಂದಿನಿ ಹಾಲಿನ ಪ್ರಮಾಣ ಹೆಚ್ಚಿಸಲಾಗಿದೆ. ಹೆಚ್ಚಾಗಿರುವ ಪ್ರಮಾಣಕ್ಕೆ ₹2 ಹೆಚ್ಚಿಸಲಾಗಿದೆ' ಎಂದರು.



ಒಂದು ಕೋಟಿ ಲೀಟರ್ ಹಾಲು ಸಂಗ್ರಹದ ಸಂಭ್ರಮಾಚರಣೆಯ ಅಂಗವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ಗೋ ಪೂಜೆ ಸಲ್ಲಿಸಿದರು. ಸಹಕಾರ ಸಚಿವ ಕೆ.ಎನ್. ರಾಜಣ್ಣ, ಕೆಎಂಎಫ್ ಅಧ್ಯಕ್ಷ ಭೀಮಾ ನಾಯ್ಕ, ವಸತಿ ಸಚಿವ ಬಿ.ಜೆಡ್. ಜಮೀರ್ ಅಹಮದ್ ಖಾನ್, ಪಶು ಸಂಗೋಪನೆ ಸಚಿವ ಕೆ. ವೆಂಕಟೇಶ್ ಇದ್ದರು

ವಿಪಕ್ಷದ ಅಪಪ್ರಚಾರ: 'ವಿರೋಧ ಪಕ್ಷದವರು ವಿಷಯ ಅರ್ಥ ಮಾಡಿಕೊಳ್ಳದೆ, ಹಾಲಿನ ಬೆಲೆ ಹೆಚ್ಚು ಮಾಡಿದ್ದಾರೆಂದು ಅಪಪ್ರಚಾರ ಮಾಡುತ್ತಿದ್ದಾರೆ. ರೈತರ ಬಗ್ಗೆ ಅವರಿಗೆ ಕಾಳಜಿ ಇಲ್ಲ. ಹಾಲು ಉತ್ಪಾದನೆ ಹೆಚ್ಚಾದರೆ ಆದಾಯ ಹೆಚ್ಚಾಗಲಿದೆ. ರೈತರಿಗೆ ನೀಡುತ್ತಿದ್ದ ₹2 ಪ್ರೋತ್ಸಾಹಧನವನ್ನು ₹5 ಮಾಡಿದವನು ನಾನು. ವಿರೋಧ ಪಕ್ಷದ ನಾಯಕ ಆರ್. ಅಶೋಕ ಈ ಬಗ್ಗೆ ತಿಳಿಯದೆ ಮಾತನಾಡುತ್ತಾರೆ' ಎಂದರು.

'ಹಾಲಿನ ಬೆಲೆ ಹೆಚ್ಚಾದರೂ ಕೊಳ್ಳುವವರಿಗೆ ಭಾರವಾಗುತ್ತದೆಯೇ ಹೊರತು, ರೈತರಿಗಲ್ಲ. ರೈತರಿಗೆ ಸಹಾಯವಾಗುತ್ತದೆ. ಹಾಲಿನ ಬೆಲೆ ಹೆಚ್ಚು ಮಾಡಿಲ್ಲ' ಎಂದು ಮುಖ್ಯಮಂತ್ರಿ ಪುನರುಚ್ಚರಿಸಿದರು.

ಡೆಂಗಿ; ಸಮುದಾಯ ಆರೋಗ್ಯಾಧಿಕಾರಿ ಸಾವು

ಹುಣಸೂರು (ಮೈಸೂರು ಜಿಲ್ಲೆ): ಡೆಂಗಿ ಜ್ವರದಿಂದ ಬಳಲುತ್ತಿದ್ದ ತಾಲ್ಲೂಕಿನ ಗುರುಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ಸಮುದಾಯ ಆರೋಗ್ಯಾಧಿಕಾರಿ ನಾಗೇಂದ್ರ (28) ಮಂಗಳವಾರ ಮೈಸೂರಿನ ಆಸ್ಪತ್ರೆಯಲ್ಲಿ ನಿಧನರಾದರು.

ನಂಜನಗೂಡು ತಾಲ್ಲೂಕಿನವರಾದ ಅವರು, ಮೈಸೂರಿನಲ್ಲಿ ಶುಶ್ರೂಷಕಿ ಆಗಿರುವ ಜ್ಯೋತಿ ಅವರನ್ನು ವಿವಾಹ ಆಗಿದ್ದರು.

ಕೆಎಂಎಫ್: ಹಾಲಿನ ದರ ಹೆಚ್ಚಳ ತಾತ್ಕಾಲಿಕ?

• ಸ್ನೇಹಾ ರಮೇಶ್

ಬೆಂಗಳೂರು: ರಾಜ್ಯದಲ್ಲಿ ಮುಂದಿನ ದಿನಗಳಲ್ಲಿ ಹಾಲಿನ ಉತ್ಪಾದನೆಯಲ್ಲಿ ಕುಸಿತವಾದರೆ ಪ್ರತಿ ಲೀಟರ್ ಮತ್ತು ಅರ್ಧ ಲೀಟರ್ ಪ್ಯಾಕೆಟ್‌ಗಳಲ್ಲಿ 50 ಮಿಲಿ ಲೀಟರ್ ಹೆಚ್ಚುವರಿ ಹಾಲನ್ನು ನೀಡಿ, ತಲಾ ₹2 ಹೆಚ್ಚಿನ ದರ ಪಡೆಯುತ್ತಿರುವ ನಿರ್ಧಾರವನ್ನು ಕರ್ನಾಟಕ ಹಾಲು ಮಹಾಮಂಡಳ (ಕೆಎಂಎಫ್) ಹಿಂಪಡೆಯುವ ಸಾಧ್ಯತೆ ಇದೆ.

'ಮುಂದಿನ ಕೆಲವು ದಿನಗಳಲ್ಲಿ ಹಾಲಿನ ಉತ್ಪಾದನೆ ಇಳಿಮುಖವಾಗುವ ಸಾಧ್ಯತೆ ಇದೆ. ಮುಂದಿನ ಎರಡರಿಂದ ಮೂರು ತಿಂಗಳಲ್ಲಿ ಹಾಲಿನ ಉತ್ಪಾದನೆ ಕುರಿತು ಪರಿಶೀಲನೆ ನಡೆಸಿ ಹೆಚ್ಚುವರಿ ಹಾಲನ್ನು ನೀಡಿ, ಹೆಚ್ಚಿನ ದರ ವಿಧಿಸುತ್ತಿರುವ ವ್ಯವಸ್ಥೆಯನ್ನು ಮುಂದುವರಿಸುವ ಬಗ್ಗೆ ತೀರ್ಮಾನಕ್ಕೆ ಬರಲಾಗುವುದು' ಎಂದು ಕೆಎಂಎಫ್ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ಹಾಲಿನ ಉತ್ಪಾದನೆ ಹೆಚ್ಚಾದ ಕಾರಣದಿಂದಾಗಿಯೇ ಹಾಲು ಮತ್ತು ದರ ಎರಡನ್ನೂ ಹೆಚ್ಚಿಸುವ ನಿರ್ಧಾರಕ್ಕೆ ಬರಲಾಗಿದೆ. ಆದರೆ, ಎಲ್ಲ ಸಮಯದಲ್ಲೂ ಇದೇ ಪರಿಸ್ಥಿತಿ ಇರುವುದಿಲ್ಲ' ಎಂದು ಮೂಲಗಳು ಹೇಳಿವೆ.

'ಕೆಲವು ತಿಂಗಳಿಂದ ಉತ್ತಮ ಮಳೆ ಆಗುತ್ತಿರುವುದರಿಂದ ಮೇವಿನ ಉತ್ಪಾದನೆ ಹೆಚ್ಚಿದೆ. ಇದೂ ಸೇರಿದಂತೆ ಹಲವು ಕಾರಣಗಳಿಂದ ರಾಜ್ಯದಲ್ಲಿ ಹಾಲಿನ ಉತ್ಪಾದನೆಯಲ್ಲಿ ಹೆಚ್ಚಳವಾಗಿದೆ. ಆದರೆ, ಇದೇ ಪರಿಸ್ಥಿತಿ ಮುಂದುವರಿಯುವುದಿಲ್ಲ ಎಂಬುದು ನಮಗೆ ತಿಳಿದಿದೆ. ಮುಂದಿನ ದಿನಗಳಲ್ಲಿ ಹಾಲಿನ ಉತ್ಪಾದನೆಯಲ್ಲಿ ಇಳಿಕೆಯಾಗುವ ಸಾಧ್ಯತೆ ಇದೆ. ಈ ಕಾರಣದಿಂದಾಗಿಯೇ ಎರಡರಿಂದ ಮೂರು ತಿಂಗಳಲ್ಲಿ ಪರಿಶೀಲನೆ ನಡೆಸಲು ಕೆಎಂಎಫ್ ಯೋಚಿಸಿದೆ' ಎಂದು ಸಂಸ್ಥೆಯ ಮೂಲಗಳು ಹೇಳುತ್ತವೆ.

ಜೂನ್ 28ರಂದು ರಾಜ್ಯದಲ್ಲಿ ದಾಖಲೆಯ ಒಂದು ಕೋಟಿ ಲೀಟರ್ ಹಾಲಿನ ಉತ್ಪಾದನೆಯಾಗಿತ್ತು. ನಿಧಾನಕ್ಕೆ ಹಾಲಿನ ಉತ್ಪಾದನೆ ಇಳಿಮುಖವಾಗಿದೆ. ಮಂಗಳವಾರ (ಜುಲೈ 2) ಹಾಲಿನ ಉತ್ಪಾದನೆ ಪ್ರಮಾಣ 98 ಲಕ್ಷ ಲೀಟರ್‌ಗೆ ಕುಸಿದಿದೆ. ಕಳೆದ ವರ್ಷ ಚರ್ಮ ಗಂಟು ರೋಗ ಸೇರಿದಂತೆ ಹಲವು ಕಾರಣಗಳಿಂದ ಹಾಲಿನ ಉತ್ಪಾದನೆಯಲ್ಲಿ ಗಣನೀಯ ಕುಸಿತವಾಗಿತ್ತು.

ಶೀಘ್ರದಲ್ಲಿ ಮೊಸರಿನ ದರ ಏರಿಕೆ ಸಾಧ್ಯತೆ: ಹಾಲಿನ ದರದ ಮಾದರಿಯಲ್ಲೇ ಮೊಸರಿನ ಪ್ರಮಾಣವನ್ನೂ ಹೆಚ್ಚಿಸಿ ದರ ಏರಿಕೆ ಮಾಡಲು ಕೆಎಂಎಫ್ ಚಿಂತನೆ ನಡೆಸಿದೆ.

ಬೀದರ್: ಅಕ್ರಮ ಗಣಿಗಾರಿಕೆಯ 'ದೂಳು'

ಒಂದನೇ ಪುಟದಿಂದ...

200 ಹೆಕ್ಟೇರ್‌ನಲ್ಲಿ ಗಣಿಗಾರಿಕೆ: ಒಂದು ಅಂದಾಜಿನ ಪ್ರಕಾರ, ಜಿಲ್ಲೆಯ ಬೀದರ್, ಹುಮನಾಬಾದ್ ತಾಲ್ಲೂಕುಗಳ ವಿವಿಧ ಕಡೆಗಳಲ್ಲಿ ಸುಮಾರು 200 ಹೆಕ್ಟೇರ್‌ಗೂ ಅಧಿಕ ಪ್ರದೇಶದಲ್ಲಿ ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿದೆ.

ಗಣಿ ವಿಜ್ಞಾನಿಗಳ ಪ್ರಕಾರ, ಬೀದರ್ ಜಿಲ್ಲೆಯ ಮಣ್ಣಿನಲ್ಲಿ ಮೈಕಾ, ಬಾಕ್ಸೈಟ್, ಪೆರಸ್‌ನಂತಹ ಕಬ್ಬಿಣಾಂಶ ಯಥೇಚ್ಛವಾಗಿದೆ. ಮುರಂ ಸಂಸ್ಕರಿಸಿ ಕಚ್ಚಾ ಪದಾರ್ಥಗಳನ್ನು ತಯಾರಿಸಲಾಗುತ್ತದೆ. ಇದನ್ನು ಹೈದರಾಬಾದ್, ಮುಂಬೈ ಸೇರಿದಂತೆ ಇತರ ಕಡೆಗಳಿಗೆ ಕದ್ದು ಮುಚ್ಚಿ ಸಾಗಣೆ ಮಾಡಲಾಗುತ್ತಿದೆ. ಕೆಳದರ್ಜೆಯ ಮುರಂ ಅನ್ನು ಸ್ಥಳೀಯವಾಗಿ ಖಾಸಗಿ ಲೇಔಟ್‌ಗಳ ನಿರ್ಮಾಣ, ಖಾಸಗಿಯವರ ರಸ್ತೆ ನಿರ್ಮಾಣಕ್ಕೆ ದೊಡ್ಡ ಪ್ರಮಾಣದಲ್ಲಿ ಬಳಸಲಾಗುತ್ತಿದೆ.

'ಬೀದರ್ ಜಿಲ್ಲೆ 'ಲ್ಯಾಟ್‌ರೈಟ್' ಗುಡ್ಡಗಳಿಂದ ಕೂಡಿದೆ. ಡೆಕ್ಕನ್ ಪ್ರಸ್ಥಭೂಮಿಯಲ್ಲಿರುವ ಜಿಲ್ಲೆಯ ಅಂತರ್ಜಲ, ಕೆರೆ, ನದಿಗಳ ನಾಲೆಗಳಿಗೆ ನೀರು ಹರಿಯುತ್ತದೆ. ಖನಿಜಾಂಶ ಹೊಂದಿರುವ ಗುಡ್ಡಗಳು ಸಹ 'ನ್ಯಾಚುರಲ್ ಹೆರಿಟೇಜ್'ನ ಭಾಗ. ಅಷ್ಟೂರಿನಲ್ಲಿ ದೊಡ್ಡ ಪ್ರಮಾಣದಲ್ಲಿ ಗಣಿಗಾರಿಕೆ ನಡೆಯುತ್ತಿರುವುದರಿಂದ ಚೌಖಂಡಿ ಸ್ಮಾರಕಕ್ಕೆ ಧಕ್ಕೆ ಉಂಟಾಗುವ ಸಾಧ್ಯತೆ ಹೆಚ್ಚಿದೆ. ಈಗಾಗಲೇ ಸೋಲಪುರ ಕೆರೆಗೆ ನೀರು ಹರಿದು ಹೋಗುವುದು ಕಡಿಮೆಯಾಗಿದೆ. ಗುಡ್ಡಗಳೆಲ್ಲ ಹೋದರೆ ಭಾರಿ ಮಳೆ ಸುರಿದರೆ ದೊಡ್ಡ ಆಪತ್ತು ಎದುರಾಗುತ್ತದೆ. ಜಿಲ್ಲೆಯವರೇ ಆದ ಅರಣ್ಯ ಸಚಿವ ಖಂಡ್ರೆಯವರು ಇತ್ತ ಬಗ್ಗೆ ಗಮನಹರಿಸಿ ಕಡಿವಾಣ ಹಾಕಬೇಕು' ಎಂದು ಪರಿಸರ ಹೋರಾಟಗಾರ ವಿನಯ್ ಮಾಳಗೆ ಆಗ್ರಹಿಸುತ್ತಾರೆ.

ಚೌಖಂಡಿ ಸ್ಮಾರಕದ ಸಮೀಪ ಗಣಿಗಾರಿಕೆ ನಡೆಯುತ್ತಿರುವ ವಿಷಯ ಗೊತ್ತಿಲ್ಲ. ಸ್ಥಳಕ್ಕೆ ಭೇಟಿ ಕೊಟ್ಟು ಪರಿಶೀಲಿಸಿ ಕ್ರಮ ಜರುಗಿಸಲಾಗುವುದು

ಅನಿರುದ್ಧ್ ದೇಸಾಯಿ, ಸಹಾಯಕ ಸಂರಕ್ಷಣಾಧಿಕಾರಿ, ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ

ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿದ್ದವರ ಮೇಲೆ ದಂಡ ಹಾಕಿ ನಿಲ್ಲಿಸಲಾಗಿತ್ತು. ಪುನಃ ಆರಂಭಿಸಿದರೆ ಪರಿಶೀಲಿಸಿ ಕಾನೂನು ಕ್ರಮ ಕೈಗೊಳ್ಳಲಾಗುವುದು

ವಿಶ್ವನಾಥ, ಹಿರಿಯ ಭೂವಿಜ್ಞಾನಿ, ಗಣಿ ಇಲಾಖೆ

ಮುಡಾ ನಿವೇಶನಗಳ ಅಕ್ರಮ ಹಂಚಿಕೆ: ಬಗೆದಷ್ಟೂ ಬಯಲಾಗುತ್ತಿವೆ ಅಕ್ರಮ ಪ್ರಕರಣಗಳು

‘50:50’ ನಿಯಮವೇ ಅಧಿಕಾರಿಗಳಿಗೆ ಅಸ್ತ್ರ

• ಆರ್. ಜಿತೇಂದ್ರ

ಮೈಸೂರು: ರಾಜ್ಯ ಸರ್ಕಾರದ ಶೇ 50:50 ನಿಯಮವನ್ನೇ ಅಸ್ತ್ರವನ್ನಾಗಿಸಿಕೊಂಡ ಮುಡಾ ಅಧಿಕಾರಿಗಳು ಅರ್ಹರಲ್ಲದವರಿಗೂ ಕೋಟ್ಯಂತರ ರೂಪಾಯಿ ಮೌಲ್ಯದ ನಿವೇಶನಗಳನ್ನು ಹಂಚಿ ಅಕ್ರಮ ಎಸಗಿರುವ ಪ್ರಕರಣಗಳು ಒಂದೊಂದಾಗಿ ಬೆಳಕಿಗೆ ಬರುತ್ತಿವೆ.

ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ನಿರ್ಮಾಣವಾಗುವ ಬಡಾವಣೆಗಳಿಗೆ ಜಮೀನು ನೀಡಿದ ರೈತರಿಗೆ ಈ ಮೊದಲು ಶೇ 60:40ರ ಅನುಪಾತದಲ್ಲಿ ನಿವೇಶನ ಗಳನ್ನು ನೀಡಲಾಗು ತ್ತಿತ್ತು. ಭೂಸ್ವಾಧೀನವಾದ ಜಮೀನಿಗೆ ಹಣದ ರೂಪದಲ್ಲಿ ಪರಿಹಾರ ನೀಡದ ಪಕ್ಷದಲ್ಲಿ, ಸಂತ್ರಸ್ತರಿಗೆ ಒಟ್ಟು ಅಭಿವೃದ್ಧಿಪಡಿಸಲಾದ ನಿವೇಶನಗಳ ಪೈಕಿ ಶೇ 40 ರಷ್ಟು ನಿವೇಶನ ಸಿಗುತ್ತಿತ್ತು. 2020ರಲ್ಲಿ ಬಿಜೆಪಿ ಸರ್ಕಾರ ಅದನ್ನು ಶೇ 50:50ರ ಅನುಪಾತಕ್ಕೆ ಮರುನಿಗದಿಪಡಿಸಿ, ಸಂತ್ರಸ್ತರಿಗೆ ಒಟ್ಟು ನಿವೇಶನದ ಶೇ 50ರಷ್ಟನ್ನು ಬಿಟ್ಟುಕೊಡುವ ನಿಯಮ ರೂಪಿಸಿತು.

2020ರ ನಂತರದಲ್ಲಿ ಹಂಚಿಕೆಯಾಗುವ ನಿವೇಶನಗಳಿಗೆ ಮಾತ್ರ ನಿಯಮ ಇರಬೇಕಿತ್ತು. ಆದರೆ ಮುಡಾ ಅಧಿಕಾರಿಗಳು 30–40 ವರ್ಷದ ಹಿಂದೆ ಜಮೀನು ಕೊಟ್ಟವರಿಗೂ ಅದೇ ನಿಯಮದ ಅಡಿ ನಿವೇಶನಗಳನ್ನು ಹಂಚಿಕೆ ಮಾಡಿ ಲಾಭ ಮಾಡಿಕೊಂಡಿದ್ದಾರೆ.

56 ವರ್ಷಗಳ ನಂತರ ನಿವೇಶನ ಹಂಚಿಕೆ!: 1968ರಲ್ಲಿ ಮೈಸೂರು ತಾಲ್ಲೂಕಿನ ಕಸಬಾ ಹೋಬಳಿಯ ಮಾರಗೌಡನಹಳ್ಳಿಯ ಸರ್ವೆ ಸಂಖ್ಯೆ 57ರಲ್ಲಿ 4 ಎಕರೆ 17 ಗುಂಟೆ ಹಾಗೂ ಸರ್ವೆ ಸಂಖ್ಯೆ 77/2 ರಲ್ಲಿ 3 ಎಕರೆ 31 ಗುಂಟೆ ಸೇರಿದಂತೆ ಒಟ್ಟು 8 ಎಕರೆ 14 ಗುಂಟೆ ಜಮೀನನ್ನು ಪ್ರಾಧಿಕಾರವು ಗೋಕುಲಂ ಬಡಾವಣೆಗಾಗಿ ವಶಪಡಿಸಿಕೊಂಡಿತ್ತು.

ಆದರೆ ಭೂ ಪರಿಹಾರ ನೀಡಿರಲಿಲ್ಲ. ಅದಾದ 56 ವರ್ಷದ ಬಳಿಕ ಭೂಮಾಲೀಕರ ವಾರಸುದಾರರು ನೀಡಿದ ಪ್ರಮಾಣಪತ್ರದ ಆಧಾರದಲ್ಲಿ ಬರೋಬ್ಬರಿ 98,205 ಚ.ಅಡಿ ಅಳತೆಯ ನಿವೇಶನವನ್ನು ನಗರದ ಪ್ರಮುಖ ಬಡಾವಣೆಯಲ್ಲಿ ಅವರಿಗೆ ಬಿಟ್ಟುಕೊಡಲು ಮುಡಾ ಆಯುಕ್ತರು 2024ರ ಜೂನ್ 15ರಂದು ಆದೇಶಿಸಿದ್ದಾರೆ. ಆ ನಿವೇಶನಗಳ ಮೌಲ್ಯ ಹತ್ತಾರು ಕೋಟಿಗಳನ್ನು ದಾಟಲಿದ್ದು, ಇಲ್ಲಿ ಅಕ್ರಮದ ವಾಸನೆ ಕಂಡುಬಂದಿದೆ.

ಮನವಿಗೆ ಮುನ್ನವೇ ಪರಿಹಾರ!: ‘ಮೈಸೂರು ನಗರದ ಸರ್ವೆ ಸಂಖ್ಯೆ 86ರಲ್ಲಿ ಚಂದ್ರಶೇಖರ್ ಎಂಬುವರಿಗೆ ಸೇರಿದ ಒಟ್ಟು 7 ಎಕರೆ 3 ಗುಂಟೆ ಜಮೀನನ್ನು ಪ್ರಾಧಿಕಾರವು 1988ರಲ್ಲಿ ವಶಪಡಿಸಿಕೊಂಡಿದ್ದು, ಪರಿಹಾರ ನೀಡಿರಲಿಲ್ಲ. ಅದಕ್ಕೆ ಸರ್ಕಾರದ ಶೇ 50:50 ಯೋಜನೆ ಅಡಿ ಪರಿಹಾರ ನೀಡಬೇಕು ಎಂದು ಕೋರಿ ಚಂದ್ರಶೇಖರ್ ಪತ್ನಿ ಶಾಂತಮ್ಮ 2023ರ ಅಕ್ಟೋಬರ್ 20ರಂದು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿದ್ದರು.

‘ಅವರು ಅರ್ಜಿ ಸಲ್ಲಿಸುವ 13 ದಿನ ಮುನ್ನವೇ, ಅಂದರೆ ಅ. 7ರಂದೇ ಮುಡಾ ಆಯುಕ್ತರು ಶಾಂತಮ್ಮ ಅವರಿಗೆ ಭೂಪರಿಹಾರವಾಗಿ ಒಟ್ಟು 81,670 ಚದರ ಅಡಿ ನಿವೇಶನ ನೀಡುವಂತೆ ಆದೇಶಿಸಿದ್ದಾರೆ. ಇದು ಅಕ್ರಮಕ್ಕೆ ಹಿಡಿದ ಕೈಗನ್ನಡಿ’ ಎಂದು ಆರೋಪಿಸುತ್ತಾರೆ ಮುಡಾ ಸದಸ್ಯರೂ ಆಗಿರುವ ಶಾಸಕ ಟಿ.ಎಸ್. ಶ್ರೀವತ್ಸ.

ಪ್ರತಿಷ್ಠಿತ ಬಡಾವಣೆಗಳಲ್ಲಿ ಬದಲಿ ನಿವೇಶನ

10–20 ವರ್ಷಗಳ ಹಿಂದೆ ವಶಪಡಿಸಿಕೊಳ್ಳಲಾದ ಜಮೀನಿಗೆ ಪ್ರತಿಯಾಗಿ ನಗರದ ಪ್ರತಿಷ್ಠಿತ ಬಡಾವಣೆಗಳಲ್ಲಿ ದುಬಾರಿ ಮೌಲ್ಯದ ನಿವೇಶನಗಳನ್ನು ಹಂಚಿಕೆ ಮಾಡಲಾಗಿದ್ದು, ಅದರಲ್ಲೂ ಶೇ 50:50ರ ಅನುಪಾತದಲ್ಲಿ ನಿವೇಶನ ನೀಡಿರುವುದು ಈಗ ವಿವಾದಕ್ಕೆ ಕಾರಣವಾಗಿದೆ.

ಮೈಸೂರು ತಾಲ್ಲೂಕಿನ ಕೆಸರೆ ಗ್ರಾಮದ ಸರ್ವೆ ಸಂಖ್ಯೆ 464ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭಾಮೈದ ಮಲ್ಲಿಕಾರ್ಜುನ ಸ್ವಾಮಿ 2005ರಲ್ಲಿ 3 ಎಕರೆ 16 ಗುಂಟೆ ಜಮೀನು ಖರೀದಿಸಿದ್ದರು. 2010ರಲ್ಲಿ ಅದನ್ನು ತಮ್ಮ ಸಹೋದರಿ, ಸಿದ್ದರಾಮಯ್ಯರ ಪತ್ನಿ ಪಾರ್ವತಮ್ಮ ಅವರಿಗೆ ದಾನಪತ್ರವಾಗಿ ನೀಡಿದ್ದರು. ನಂತರದಲ್ಲಿ ಮುಡಾ ಈ ಜಮೀನನ್ನು ಸ್ವಾಧೀನಕ್ಕೆ ಪಡೆದು ಬಡಾವಣೆ ನಿರ್ಮಿಸಿತ್ತು.

ಅದಕ್ಕೆ ಪರ್ಯಾಯವಾಗಿ ಮುಡಾ ನಗರದ ಪ್ರತಿಷ್ಠಿತ ಬಡಾವಣೆಯಾದ ವಿಜಯನಗರದಲ್ಲಿ ಒಟ್ಟು 38,284 ಚದರಿ ಅಡಿ ವಿಸ್ತೀರ್ಣದ 14 ನಿವೇಶನಗಳನ್ನು ಪಾರ್ವತಮ್ಮ ಅವರಿಗೆ 2021ರಲ್ಲಿ ನೀಡಿದೆ. ಕೆಸರೆಗೆ ಹೋಲಿಸಿದರೆ ವಿಜಯನಗರದಲ್ಲಿ ನಿವೇಶನದ ಮಾರುಕಟ್ಟೆ ದರ ದುಪ್ಪಟ್ಟು ಇದೆ.

ಪರ್ಯಾಯ ನಿವೇಶನ ನೀಡಿದೆ: ಸಿಎಂ

ಬೆಂಗಳೂರು: ‘ನನ್ನ ಪತ್ನಿಗೆ ಸೇರಿದ ಜಮೀನನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಸ್ವಾಧೀನಪಡಿಸಿಕೊಂಡಿತ್ತು. ಅದಕ್ಕೆ ಪರ್ಯಾಯವಾಗಿ 50:50 ಅನುಪಾತದಲ್ಲಿ ಬೇರೆ ಕಡೆ ನಿವೇಶನಗಳನ್ನು ಬಿಜೆಪಿ ಅಧಿಕಾರದಲ್ಲಿದ್ದಾಗ ನೀಡಲಾಗಿತ್ತು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಮುಡಾ ನಿವೇಶನ ಹಂಚಿಕೆ ಕುರಿತು ಸುದ್ದಿಗಾರರಿಗೆ ಮಂಗಳವಾರ ಪ್ರತಿಕ್ರಿಯಿಸಿದ ಅವರು, ‘ನನ್ನ ಪತ್ನಿಗೆ ಸೇರಿದ್ದ 3 ಎಕರೆ 16 ಗಂಟೆ ಜಮೀನು ವರ್ತುಲ ರಸ್ತೆಯ ಪಕ್ಕದ ಕೆಸರೆಯಲ್ಲಿದೆ. ಅದನ್ನು ನನ್ನ ಭಾವಮೈದುನ ಪಡೆದಿದ್ದು, ನನ್ನ ಪತ್ನಿಗೆ ದಾನವಾಗಿ ಕೊಟ್ಟಿದ್ದಾರೆ. ನಾನು ಅಧಿಕಾರದಲ್ಲಿದ್ದಾಗ ತೆಗೆದುಕೊಳ್ಳಲು ಹೋಗಿಲ್ಲ. ಮುಡಾ ಸ್ವಾಧೀನಪಡಿಸಿಕೊಂಡರೆ ಪರ್ಯಾಯವಾಗಿ 50:50 ಅನುಪಾತದಲ್ಲಿ ನಿವೇಶನ ನೀಡಬೇಕು ಎಂದು ಕಾನೂನು ಮಾಡಿದ್ದು ಬಿಜೆಪಿಯವರು’ ಎಂದರು.

‘ನಮ್ಮ ಜಮೀನನ್ನು ಸ್ವಾಧೀನ ಮಾಡಿಕೊಳ್ಳದೇ ಮುಡಾದವರು ನಿವೇಶನಗಳನ್ನು ಮಾಡಿ ಹಂಚಿದ್ದರು. ಹಂಚಿದ ಮೇಲೆ ನಮಗೆ ಕಾನೂನು ಬದ್ಧವಾಗಿ ನಿವೇಶನ ಕೊಡಬೇಕು. ಅದರಂತೆ 50:50 ಕೊಡಲು ಒಪ್ಪಿದರು’ ಎಂದರು. ‘ಸರ್ಕಾರದ ನಿಯಮಾವಳಿ, ಆದೇಶದ ಪ್ರಕಾರ ಕೊಡಿ ಎಂದು ಬಿಜೆಪಿ ಅಧಿಕಾರದಲ್ಲಿದ್ದಾಗ ಕೇಳಿಕೊಂಡಿದ್ದೆವು. ಆಗ ಅವರು ಬೇರೆ ಬೇರೆ ಸ್ಥಳಗಳಲ್ಲಿ ಸಮಾನಾಂತರ ನಿವೇಶನಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ತಪ್ಪೇನಿದೆ’ ಎಂದೂ ಮುಖ್ಯಮಂತ್ರಿ ಪ್ರಶ್ನಿಸಿದರು.

ನಾನು ಸದಸ್ಯನಾಗಿದ್ದರೂ ಮುಡಾದಲ್ಲಿ ಎಷ್ಟು ನಿವೇಶನಗಳನ್ನು ಯಾರು ಯಾರಿಗೆ ಹಂಚಿಕೆ ಮಾಡಲಾಗಿದೆ ಎಂಬ ಮಾಹಿತಿ ನೀಡಿಲ್ಲ
ಎಚ್. ವಿಶ್ವನಾಥ್ ವಿಧಾನ ಪರಿಷತ್ ಸದಸ್ಯ

ಮುಡಾ ವ್ಯಾಪ್ತಿಯಲ್ಲಿ 5 ಸಾವಿರದಷ್ಟು ನಿವೇಶನಗಳ ಹಂಚಿಕೆಯಲ್ಲಿ ವ್ಯತ್ಯಾಸವಾಗಿದೆ. ಸಮಗ್ರ ತನಿಖೆ ನಡೆಸಿ ಎಲ್ಲ ಆರೋಪಿಗಳನ್ನು ಬಂಧಿಸಬೇಕು
ರಘು ಕೌಟಿಲ್ಯ ಬಿಜೆಪಿ ಮುಖಂಡ

ಸಿದ್ದರಾಮಯ್ಯ ಪತ್ನಿ ಪಾರ್ವತಮ್ಮ ಅವರಿಗೆ ಮುಡಾ ಕಾನೂನಾತ್ಮಕವಾಗಿ ಭೂಪರಿಹಾರದ ರೂಪದಲ್ಲಿ ನಿವೇಶನ ನೀಡಿದೆ. ಇದರಲ್ಲಿ ಯಾರೂ ಪ್ರಭಾವ ಬೀರಿಲ್ಲ
ಎಂ. ಲಕ್ಷ್ಮಣ ಕಾಂಗ್ರೆಸ್ ವಕ್ತಾರ

ರಘುನಂದನ್ ಅಧಿಕಾರ ಸ್ವೀಕಾರ



ನಗರಾಭಿವೃದ್ಧಿ ಇಲಾಖೆಯ ಉಪ ಕಾರ್ಯದರ್ಶಿ ಎ.ಎನ್. ರಘುನಂದನ್ ಅವರನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನೂತನ ಆಯುಕ್ತರನ್ನಾಗಿ ಸರ್ಕಾರ ವರ್ಗಾಯಿಸಿದ್ದು, ಮಂಗಳವಾರ ಸಂಜೆಯೇ ಅವರು ಮುಡಾ ಕಚೇರಿಯಲ್ಲಿ ಅಧಿಕಾರ ಸ್ವೀಕರಿಸಿದರು. ಕರ್ನಾಟಕ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ನಿಗಮದ ಪ್ರಧಾನ ವ್ಯವಸ್ಥಾಪಕ ವಿ.ಕೆ. ಪ್ರಸನ್ನ ಕುಮಾರ್ ಅವರನ್ನು ಮುಡಾ ಕಾರ್ಯದರ್ಶಿಯಾಗಿ ಸರ್ಕಾರ ವರ್ಗಾಯಿಸಿದೆ.

ಸರ್ಕಾರ, ಅಧ್ಯಕ್ಷರ ಪತ್ರಕ್ಕೂ ಕಿಮ್ಮತ್ತಿಲ್ಲ!

ಶೇ 50:50 ಅನುಪಾತದಲ್ಲಿ ನಿವೇಶನಗಳ ಹಂಚಿಕೆ ಸಂಬಂಧ ಮುಡಾದ ಅಧ್ಯಕ್ಷರು ಹಾಗೂ ಆಯುಕ್ತರಿಗೆ ಹಲವು ಬಾರಿ ಪತ್ರ ಸಮರ ನಡೆದಿರುವ ಬಗ್ಗೆ ದಾಖಲೆಗಳು ‘ಪ್ರಜಾವಾಣಿ’ಗೆ ಲಭ್ಯವಾಗಿವೆ.

‘ನಿವೇಶನಗಳ ಹಂಚಿಕೆ ಸಂಬಂಧ ಸಲ್ಲಿಕೆಯಾಗುವ ಎಲ್ಲ ಅರ್ಜಿಗಳನ್ನೂ ಆಯುಕ್ತರ ಹಂತದಲ್ಲಿ ನಿರ್ಣಯಿಸದೆಯೇ ವಿಷಯವನ್ನು ಅಧ್ಯಕ್ಷರ ಮುಖಾಂತರ ಪ್ರಾಧಿಕಾರದ ಸಭೆಗೆ ಮಂಡಿಸಿ, ನಂತರವಷ್ಟೇ ತೀರ್ಮಾನಿಸಬೇಕು’ ಎಂದು ಪ್ರಾಧಿಕಾರದ ಹಿಂದಿನ ಅಧ್ಯಕ್ಷ ಎಚ್.ವಿ. ರಾಜೀವ್ ಆಯುಕ್ತರಿಗೆ ಹಲವು ಬಾರಿ ಪತ್ರ ಬರೆದಿದ್ದರು. ಈಗಿನ ಅಧ್ಯಕ್ಷ ಕೆ. ಮರಿಗೌಡ ಸಹ ಪತ್ರ ಬರೆದಿದ್ದರು.

ಭೂಸ್ವಾಧೀನ ಮಾಡದೇ ನೇರವಾಗಿ ಬಡಾವಣೆ ನಿರ್ಮಿಸಿದ್ದಲ್ಲಿ ಅಂತಹ ಭೂಮಾಲೀಕರಿಗೆ ಶೇ 50ರಷ್ಟು ನಿವೇಶನ ನೀಡುವ ಕುರಿತು 2020ರಂದು ಸೆ.22ರಂದು ಪ್ರಾಧಿಕಾರದ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿತ್ತು. ರಾಜ್ಯ ಸರ್ಕಾರವು ಈ ಆದೇಶವನ್ನು ರದ್ದುಗೊಳಿಸಿದ್ದು, ಆ ರೀತಿಯ ಯಾವುದೇ ಹಂಚಿಕೆ ಮಾಡದಿರುವಂತೆ 2023ರ ಅಕ್ಟೋಬರ್‌ನಲ್ಲಿ ಮುಡಾ ಆಯುಕ್ತರಿಗೆ ನಿರ್ದೇಶನ ನೀಡಿತ್ತು. ಈ ಆದೇಶವನ್ನೂ ಧಿಕ್ಕರಿಸಿ ಅಧಿಕಾರಿಗಳು ನಿವೇಶನ ಹಂಚಿಕೆ ಮಾಡಿರುವುದು ಕಂಡುಬಂದಿದೆ.

ಸುದ್ದಿ 2 ನಿಮಿಷ

ವಿಜಯೇಂದ್ರ ಟೀಕೆ ಪಲಾಯನ ವಾದದ ಸಂಕೇತ: ರಮೇಶ ಬಾಬು

ಬೆಂಗಳೂರು: ‘ರಾಜ್ಯದಲ್ಲಿ ತಮ್ಮ ಪಕ್ಷದ ಶಾಸಕ ಬಸನಗೌಡ ಪಾಟೀಲ ಯತ್ನಾಳರಂಥ ನಾಯಕರಿಗೆ ಉತ್ತರ ನೀಡಲು ಸಾಧ್ಯವಾಗದೆ ಕದ್ದು ಓಡಾಡುವ ಬಿಜೆಪಿ ಅಧ್ಯಕ್ಷ ಬಿ.ವೈ ವಿಜಯೇಂದ್ರ ಅವರು ರಾಹುಲ್ ಗಾಂಧಿಯವರನ್ನು ಟೀಕಿಸಲು ಮುಂದಾಗಿರುವುದು, ಅವರ ಪಲಾಯನ ವಾದದ ಸಂಕೇತ’ ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶ ಬಾಬು ಅಭಿಪ್ರಾಯಪಟ್ಟಿದ್ದಾರೆ.



‘ವಿಜಯೇಂದ್ರ ಅವರ ನಾಯಕತ್ವದಲ್ಲಿ ಬಿಜೆಪಿಯಲ್ಲಿ ಗುಂಪುಗಾರಿಕೆ ಮಿತಿಮೀರಿದೆ. ಅವರು ಮತ್ತು ವಿರೋಧ ಪಕ್ಷದ ನಾಯಕ ಆರ್. ಅಶೋಕ ತಮ್ಮ ಸ್ಥಾನಗಳನ್ನು ಉಳಿಸಿಕೊಳ್ಳಲು ಪೊಳ್ಳು ಟೀಕೆಗಳನ್ನು ಮಾಡುತ್ತಿದ್ದಾರೆ’ ಎಂದು ದೂರಿದ್ದಾರೆ.

‘ರಾಷ್ಟ್ರಪತಿಯವರ ಭಾಷಣದ ಮೇಲಿನ ವಂದನಾ ನಿರ್ಣಯದ ಸಂದರ್ಭದಲ್ಲಿ, ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ವೈಫಲ್ಯಗಳನ್ನು ಅತ್ಯಂತ ಸಮರ್ಥವಾಗಿ ಎಳೆ ಎಳೆಯಾಗಿ ರಾಹುಲ್ ಗಾಂಧಿ ಬಿಡಿಸಿಟ್ಟಿದ್ದಾರೆ. ರಾಹುಲ್ ಗಾಂಧಿ ಅವರು ಸರ್ಕಾರದ ವೈಫಲ್ಯಗಳನ್ನು ಬೆತ್ತಲೆಗೊಳಿಸಿದರೆ, ಉತ್ತರಿಸಲಾಗದ ಮೋದಿ ಸರ್ಕಾರ ಧರ್ಮದ ಹೆಸರಿನಲ್ಲಿ ರಕ್ಷಣೆ ಪಡೆದುಕೊಳ್ಳಲು ಮುಂದಾಗಿದೆ’ ಎಂದೂ ಹೇಳಿದ್ದಾರೆ.

ರಾಹುಲ್ ಗಾಂಧಿ ಕ್ಷಮೆಯಾಚನೆಗೆ ವಿಜಯೇಂದ್ರ ಒತ್ತಾಯ

ಬೆಂಗಳೂರು: ಲೋಕಸಭೆ ವಿರೋಧ ಪಕ್ಷದ ನಾಯಕರಾಗಿ ರಾಹುಲ್ ಗಾಂಧಿ ಸಂಸತ್‌ನಲ್ಲಿ ಮಾಡಿದ ಭಾಷಣದಲ್ಲಿ ಹಿಂದೂಗಳನ್ನು ಅವಹೇಳನ ಮಾಡಿದ್ದಾರೆ. ಅವರು ಕ್ಷಮೆ ಕೇಳಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ನರೇಂದ್ರ ಮೋದಿ ಅವರು ಸತತ ಮೂರನೇ ಬಾರಿ ಪ್ರಧಾನಿಯಾಗಿದ್ದಾರೆ. ಮೂರೂ ಬಾರಿ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ವಿಫಲರಾಗಿರುವ ರಾಹುಲ್ ಗಾಂಧಿ ಇದೇ ಮೊದಲ ಬಾರಿ ವಿರೋಧ ಪಕ್ಷದ ನಾಯಕರಾಗಿದ್ದಾರೆ. ತಮ್ಮ ಸ್ಥಾನದ ಜವಾಬ್ದಾರಿ ಮರೆತು ಮೊದಲ ಭಾಷಣದಲ್ಲೇ ಸುಳ್ಳು, ನಿರಾಶೆ, ಆಧಾರರಹಿತ ಆರೋಪ ಮಾಡಿದ್ದಾರೆ. ಅವರ ನಡವಳಿಕೆ ಸಂಸತ್ತಿನ ನಿಯಮಗಳಿಗೆ ಧಕ್ಕೆ ತರುವಂತೆ ಇತ್ತು ಎಂದು ದೂರಿದರು.

ರಾಹುಲ್ ತಮ್ಮ ಭಾಷಣದಲ್ಲಿ ‘ಹಿಂದೂಗಳು ಹಿಂಸಾಚಾರ ಮತ್ತು ದ್ವೇಷದಲ್ಲಿ ಹಗಲಿರುಳು ನಿರತರು’ ಎಂಬ ಮಾತನ್ನು ಉಲ್ಲೇಖಿಸಿದ್ದಾರೆ. ದೇಶದ ಅಸಂಖ್ಯಾತ ಹಿಂದೂಗಳಿಗೆ ಅವಮಾನ ಮಾಡಿದ್ದಾರೆ. ಅಗ್ನಿವೀರರು, ರೈತರು, ಅಯೋಧ್ಯೆ ವಿಚಾರಗಳ ಬಗ್ಗೆ ಮಾತನಾಡಿದ್ದಾರೆ. ಎಲ್ಲ ಮಾತುಗಳಲ್ಲೂ ಸುಳ್ಳು ಹೇಳಿದ್ದಾರೆ ಎಂದರು.

ಸಿಖ್ ಹತ್ಯಾಕಾಂಡ, ತುರ್ತು ಪರಿಸ್ಥಿತಿಗೆ ಯಾರು ಕಾರಣ ಎಂದು ರಾಹುಲ್ ಸ್ಪಷ್ಟಪಡಿಸಬೇಕು. ದೇಶದ ಹಿಂದೂಗಳ ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದರು.

ರಾಹುಲ್ ಗಾಂಧಿಯವರು ಮತಾಂತರ ಮಾಫಿಯಾದ ಕೈಗೊಂಬೆಯಾಗಿ ಸದನದಲ್ಲಿ ಹಿಂದೂ ವಿರೋಧಿಯಾಗಿ ಹೇಳಿಕೆ ಕೊಟ್ಟಿರುವ ಸಾಧ್ಯತೆ ಇದೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಆರೋಪಿಸಿದರು.

ಸದನದ ಘನತೆ ಕುಸಿತ: ಹೊರಟ್ಟಿ ಬೇಸರ

ಶಿಕ್ಷಕರ ಕ್ಷೇತ್ರದಿಂದ ಸತತ 8 ಬಾರಿ ಮೇಲ್ಮನೆಗೆ ಆಯ್ಕೆ • ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್‌ಗೆ ಸೇರ್ಪಡೆ

• ಶ್ರೀಕಾಂತ ಕಲ್ಲಮ್ಮನವರ

ಹುಬ್ಬಳ್ಳಿ: ಪ್ರಾಥಮಿಕ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ಹುದ್ದೆಯಿಂದ ವಿಧಾನ ಪರಿಷತ್ತಿನ ಸಭಾಪತಿ ಸ್ಥಾನಕ್ಕೇರಿದವರು ಬಸವರಾಜ ಹೊರಟ್ಟಿ. ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಯಡಹಳ್ಳಿ ಗ್ರಾಮದಿಂದ ಹುಬ್ಬಳ್ಳಿಗೆ ಬಂದು ಲ್ಯಾಮಿಂಗ್ಟನ್ ಶಾಲೆಯಲ್ಲಿ 1975ರಲ್ಲಿ ಶಿಕ್ಷಕರಾದರು. ಶಿಕ್ಷಕರ ಸಂಕಷ್ಟ ಕೊನೆಗಾಣಿಸಲು ಸಮಾನ ಮನಸ್ಕರ ಜೊತೆಗೆ ‘ಕರ್ನಾಟಕ ಮಾಧ್ಯಮಿಕ ಶಾಲಾ ನೌಕರರ ಸಂಘ’ ಅಸ್ತಿತ್ವಕ್ಕೆ ತಂದರು. ರಾಜಕಾರಣದತ್ತ ಹೊರಳಿದ ಅವರು 1980ರಲ್ಲಿ ಮೊದಲ ಬಾರಿಗೆ ವಿಧಾನ ಪರಿಷತ್ ಸದಸ್ಯರಾದರು. ನಂತರದ ವರ್ಷಗಳಲ್ಲಿ ಅವರು ಶಿಕ್ಷಣ ಸೇರಿ ವಿವಿಧ ಖಾತೆಗಳ ಸಚಿವರಾಗಿ ಕಾರ್ಯನಿರ್ವಹಿಸಿದರು. ಸದ್ಯಕ್ಕೆ ವಿಧಾನ ಪರಿಷತ್ತಿಗೆ ಎರಡನೇ ಬಾರಿ ಸಭಾಪತಿ ಆಗಿದ್ದಾರೆ.

ಪಶ್ಚಿಮ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ಸತತ ಎಂಟು ಚುನಾವಣೆಗಳನ್ನು ಗೆದ್ದಿರುವ ಅವರ ಸಾಧನೆಯು ‘ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್’ನಲ್ಲಿ ದಾಖಲಾಗಿದೆ. ವಿಧಾನ ಪರಿಷತ್‌ಗೆ ಸದಸ್ಯರಾಗಿ ಜೂನ್ 30ಕ್ಕೆ 44 ವರ್ಷ ಸಂದಿದವು. ಈ ಸಂದರ್ಭದಲ್ಲಿ ‘ಪ್ರಜಾವಾಣಿ’ಗೆ ನೀಡಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ.

• ಶಾಲಾ ಶಿಕ್ಷಕನಿಂದ ವಿಧಾನ ಪರಿಷತ್ತಿನ ಸಭಾಪತಿಯವರೆಗಿನ 44 ವರ್ಷಗಳ ಪಯಣ ಹೇಗೆ ಅನ್ನಿಸುತ್ತದೆ?

ಹೊರಟ್ಟಿ: ಶಿಕ್ಷಕರ ಹಿತಕ್ಕಾಗಿ ಆರಂಭಿಸಿದ ಹೋರಾಟ ಇಲ್ಲಿಯವರೆಗೆ ಕರೆತಂದಿದೆ. ಶಿಕ್ಷಕರ ಧ್ವನಿ ಆಗಿರುವೆ. ಪರಿಷತ್ ಸದಸ್ಯ, ಸಚಿವ ಮತ್ತು ಸಭಾಪತಿಯಾಗಿ ಅವರ ಹಿತ ಕಾಪಾಡಿರುವೆ. ಸದಸ್ಯನಾಗಿ ಪ್ರವೇಶಿಸಿದ ದಿನ ಭಾವುಕನಾಗಿದ್ದೆ. ಆಗಿನ ಸಭಾಪತಿ ಬಸವರಾಜ ನನಗೆ ಮಾತನಾಡಲು ಅವಕಾಶ ನೀಡಿದರು. ಶಿಕ್ಷಕರ ಸಮಸ್ಯೆ ಬಗ್ಗೆ 10 ನಿಮಿಷ ಮಾತನಾಡಿದೆ. ಎಲ್ಲರೂ ಶ್ಲಾಘಿಸಿದರು. ಇದು ಪವಿತ್ರ ಸ್ಥಳ, ಇಲ್ಲಿ ಪ್ರಾಮಾಣಿಕವಾಗಿ ಇರಲು ನಿರ್ಧರಿಸಿದೆ.

• ಅಂದಿನ ಮತ್ತು ಇಂದಿನ ಕಲಾಪಗಳಿಗೂ ವ್ಯತ್ಯಾಸವಿದೆಯೇ?

ಹೊರಟ್ಟಿ: ಹಿಂದೆ ಪರಿಷತ್‌ನಲ್ಲಿ ರಾಜಗೋಪಾಲ, ಎಸ್.ವೆಂಕಟರಾಮಣ, ಎ.ಕೆ. ಸುಬ್ಬಯ್ಯ, ಎಚ್. ನರಸಿಂಹಯ್ಯ, ಖಾದ್ರಿ ಶಾಮಣ್ಣ ರಂತಹ ಘಟನಾಘಟಿಗಳು ಇದ್ದರು. ಅವರ ಮಾತು ಆಲಿಸುವುದೇ ಸುದೈವವಾಗಿತ್ತು. ಆದರೆ, ಈಗ ಮುಖ್ಯಮಂತ್ರಿ ಮಾತನಾಡಿದರೂ ಯಾರೂ ಆಲಿಸಲ್ಲ. ಟೀಕೆ, ಗದ್ದಲಕ್ಕೆ ಹೆಚ್ಚು ಪ್ರಾಶಸ್ತ್ಯ ಸಿಗುತ್ತಿದೆ. ಘನತೆ, ಗೌರವ ಕುಸಿದಿದೆ.

• ವಿಧಾನ ಪರಿಷತ್ತು ಎಂಬುದು ರಾಜಕೀಯ ಪುನರ್ವಸತಿ ಕಲ್ಪಿಸುವ ತಾಣವಾಗಿದೆ ಎಂಬ ಮಾತಿದೆ. ನಿಜವೇ?

ಹೊರಟ್ಟಿ: ವಿವಿಧ ಕ್ಷೇತ್ರಗಳ ತಜ್ಞರು, ಚಿಂತಕರು ವಿಧಾನ ಪರಿಷತ್ ಪ್ರವೇಶಿಸಬೇಕು ಮತ್ತು ಅವರ ವಿದ್ವತ್ತು ಸದ್ಬಳಕೆ ಆಗಬೇಕು ಎಂಬುದು ಉದ್ದೇಶ. ಆದರೆ, ವಿಧಾನಸಭೆ ಚುನಾವಣೆಯಲ್ಲಿ ಸೋತವರು ಅಥವಾ ಯಾವುದೋ ಒಂದು ಪುಸ್ತಕ ಬರೆದವರು ಲಾಬಿ ನಡೆಸಿ, ಪರಿಷತ್ತಿನ ಸದಸ್ಯತ್ವ ಗಿಟ್ಟಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಅಂಥವರ ಬಗ್ಗೆ ಸರ್ಕಾರ ಮಾಡುವ ಶಿಫಾರಸನ್ನು ರಾಜ್ಯಪಾಲರು ತಿರಸ್ಕರಿಸಿದರೂ ಸರ್ಕಾರವು ಅವರನ್ನೇ ನೇಮಿಸುತ್ತದೆ. ಅದರ ಬಗ್ಗೆ ಬೇಸರವಿದೆ.


• ಕಲಾಪ ಹಾಗೂ ಸದಸ್ಯರ ನಡವಳಿಕೆ ಸುಧಾರಿಸುವುದು ಹೇಗೆ?

ಹೊರಟ್ಟಿ: ಕಲಾಪವನ್ನು ಸರಿಯಾದ ಸಮಯಕ್ಕೆ ಆರಂಭಿಸುವುದರ ಜೊತೆಗೆ ಸದಸ್ಯರ ನಡವಳಿಕೆ ಸುಧಾರಿಸಲು ತರಬೇತಿ ಕೊಡಿಸಲು ಪ್ರಯತ್ನಿಸಿದ್ದೇವೆ. ಆದರೆ, ಹಿಂದಿನ ಸದನಗಳ ಘನತೆ, ಗೌರವ ವಾಪಸ್ ಬರುವುದಿಲ್ಲ.

• ಅವ್ವ ಸೇವಾ ಟ್ರಸ್ಟ್ ಸ್ಥಾಪಿಸಿ 12 ವರ್ಷಗಳಿಂದ ನೀವು ಕೈಗೊಂಡಿರುವ ಸಾಮಾಜಿಕ ಕಾರ್ಯಗಳು ಯಾವ್ಯಾವು?

ಹೊರಟ್ಟಿ: ಸಾಮಾಜಿಕ ಕಾರ್ಯಗಳಲ್ಲಿ ತೊಡಗಿರುವವರನ್ನು ಗುರುತಿಸಿ ಪ್ರಶಸ್ತಿ ನೀಡುತ್ತೇನೆ. ಬಡವರು, ವೃದ್ಧರಿಗೆ ನೆರವಾಗುತ್ತೇನೆ. ನನ್ನ ಸ್ವಗ್ರಾಮ ಯಡಹಳ್ಳಿಯಲ್ಲಿ ಸರ್ಕಾರಿ ಶಾಲೆ ಆರಂಭಿಸಿದೆ. ಸಾವಿರಾರು ಮಕ್ಕಳಿಗೆ ಶಿಕ್ಷಣ ಸಿಗುತ್ತಿದೆ.

‘ಶಿಕ್ಷಕರಿಗೆ, ಶಿಕ್ಷಣ ಕ್ಷೇತ್ರಕ್ಕೆ ಹಲವು ಕೊಡುಗೆ’



‘ನಾನು ಶಿಕ್ಷಣ ಸಚಿವನಾದಾಗ, ಶಿಕ್ಷಕರ ನೇಮಕಾತಿ ಜೊತೆಗೆ ಉತ್ತರ ಕರ್ನಾಟಕದ ಸಾವಿರಕ್ಕೂ ಹೆಚ್ಚು ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಿದೆ. ಶಿಕ್ಷಕರ ವರ್ಗಾವಣೆ ನೀತಿ ಸುಧಾರಿಸಿದೆ. ಅನುದಾನಿತ ಶಾಲೆಗಳಿಗೂ ಬಿಸಿಯೂಟ ಯೋಜನೆ ವಿಸ್ತರಿಸಿದೆ. ಕಾನೂನು ಸಚಿವನಾಗಿ ಹುಬ್ಬಳ್ಳಿಯಲ್ಲಿ ರಾಜ್ಯ ಕಾನೂನು ವಿಶ್ವವಿದ್ಯಾಲಯ ಮತ್ತು ಧಾರವಾಡಕ್ಕೆ ವಿಜ್ಞಾನ ಕೇಂದ್ರ ಮಂಜೂರು ಮಾಡಿದೆ. ಪಂಚಾಯತ್ ರಾಜ್ ಸಚಿವನಾಗಿ ಪಂಚಾಯಿತಿಗಳಿಗೆ ನೇರವಾಗಿ ಅನುದಾನ ಹಂಚಿಕೆ ಮಾಡಿದೆ’

ನಿಂಬಾಳ್ಕರ್ ವಾರ್ತಾ ಇಲಾಖೆ ಆಯುಕ್ತ

ಬೆಂಗಳೂರು: ಹಿರಿಯ ಐಪಿಎಸ್ ಅಧಿಕಾರಿ ಹೇಮಂತ್ ಎಂ. ನಿಂಬಾಳ್ಕರ್ ಅವರನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರನ್ನಾಗಿ ನೇಮಿಸಿ ಸರ್ಕಾರ ಆದೇಶಿಸಿದೆ. ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಹುದ್ದೆಗೆ ಸುರಳ್ಕರ್ ವಿಕಾಸ್ ಕಿಶೋರ್ ಹಾಗೂಎಂ. ಕನಗವಲ್ಲಿ ಅವರನ್ನು ಸಾರ್ವಜನಿಕ ಗ್ರಂಥಾಲಯಗಳ ಇಲಾಖೆ ಆಯುಕ್ತರಾಗಿ ನಿಯೋಜಿಸಲಾಗಿದೆ.



ಬಣ್ಣದ ಕೊಡೆ

ಕಲಬುರಗಿಯ ಕೋಟೆ ಬಳಿ ಮಂಗಳವಾರ ಮಹಿಳೆಯೊಬ್ಬರು ಮಾರಾಟಕ್ಕಾಗಿ ಬಣ್ಣ ಬಣ್ಣದ ಕೊಡೆಗಳನ್ನು ಜೋಡಿಸಿದರು –ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಮಲಹೊರುವ ಪದ್ಧತಿ ನಿಷೇಧ: ಮಾಹಿತಿ ಒದಗಿಸಲು ಹೈಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮಲ ಹೊರುವ ಪದ್ಧತಿಯ ಆಮೂಲಾಗ್ರ ನಿರ್ಮೂಲನೆಗಾಗಿ ಅನುಷ್ಠಾನಗೊಳಿಸಲಾಗಿರುವ, ‘ಮಲಹೊರುವ ಜಾಡಮಾಲಿಗಳ ನಿಯೋಜನೆ ನಿಷೇಧ ಮತ್ತು ಪುನರ್ವಸತಿ ಕಾಯ್ದೆಯ ಅನುಸಾರ ಕೈಗೊಂಡಿರುವ ಕ್ರಮಗಳ ಮಾಹಿತಿ ಒದಗಿಸಿ’ ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಕುರಿತಂತೆ, ‘ಆಲ್ ಇಂಡಿಯನ್ ಸೆಂಟ್ರಲ್ ಕೌನ್ಸಿಲ್ ಟ್ರೇಡ್ ಯೂನಿಯನ್ಸ್’ ಅಧ್ಯಕ್ಷೆ ಮೈತ್ರೇಯಿ ಕೃಷ್ಣನ್ ಮತ್ತು ಹೈಕೋರ್ಟ್ ಕಾನೂನು ಸೇವೆಗಳ ಪ್ರಾಧಿಕಾರದ ಮುಖಾಂತರ ದಾಖಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ಕಾಯ್ದೆಯ ಅನುಸಾರ ರೂಪಿಸಲಾಗಿರುವ ನಿಯಮಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಸರ್ಕಾರ ವಿಫಲವಾಗಿದೆ. ಕಲಂ 26ರ ಪ್ರಕಾರ ಮುಖ್ಯಮಂತ್ರಿ ನೇತೃತ್ವದ ಉನ್ನತ ಮಟ್ಟದ ಸಮಿತಿಯು ವರ್ಷದಲ್ಲಿ ಎರಡು ಬಾರಿ ರಾಜ್ಯಮಟ್ಟದ ಸಭೆಗಳನ್ನು ನಡೆಸಬೇಕು. ಆದರೆ, ಪ್ರಸಕ್ತ ವರ್ಷದಲ್ಲಿ ಆರು ತಿಂಗಳು ಕಳೆದರೂ ಒಂದೇ ಒಂದು ಸಭೆ ನಡೆಸಿಲ್ಲ’ ಎಂದು ಆಕ್ಷೇಪಿಸಿದರು.

ಇದಕ್ಕೆ ಸರ್ಕಾರದ ಪರ ವಕೀಲರು, ‘ಲೋಕಸಭೆ ಚುನಾವಣೆ ನಿಗದಿಯಾಗಿದ್ದ ಕಾರಣ ಸಭೆ ನಡೆಸಲು ಸಾಧ್ಯವಾಗಿಲ್ಲ. ಶೀಘ್ರದಲ್ಲೇ ಸಭೆ ನಡೆಸಲಾಗುವುದು. ಅದಕ್ಕಾಗಿ ಇನ್ನಷ್ಟು ಕಾಲಾವಕಾಶ ನೀಡಬೇಕು. ಈ ಸಂಬಂಧ ಸರ್ಕಾರದಿಂದ ಅಗತ್ಯ ಮಾಹಿತಿ ಪಡೆದು ತಿಳಿಸಲಾಗುವುದು’ ಎಂದು ನ್ಯಾಯಪೀಠಕ್ಕೆ ಉತ್ತರಿಸಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಮಾಹಿತಿ ಒದಗಿಸುವಂತೆ ತಿಳಿಸಿ ವಿಚಾರಣೆಯನ್ನು ಇದೇ 9ಕ್ಕೆ ಮುಂದೂಡಿತು.

ವಿಸ್ತೃತ ಚರ್ಚೆ ನಂತರ ಜಾತಿ ಗಣತಿ ವರದಿ ಅನುಷ್ಠಾನ: ತಂಗಡಗಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ವಿಸ್ತೃತ ಚರ್ಚೆ ನಡೆಸಿದ ನಂತರ ಯಾವ ಸಮಾಜಕ್ಕೂ ಅನ್ಯಾಯವಾಗದಂತೆ ಜಾತಿ ಗಣತಿ ವರದಿ ಅನುಷ್ಠಾನಗೊಳಿಸಲು ಮುಖ್ಯಮಂತ್ರಿ ಚಿಂತನೆ ನಡೆಸಿದ್ದಾರೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ್ ತಂಗಡಗಿ ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವರದಿಯನ್ನು ಈಗಾಗಲೇ ಸ್ವೀಕರಿಸಿದ್ದಾರೆ. ಪೂರ್ಣ ಪ್ರಮಾಣದ ಚರ್ಚೆಯ ನಂತರ ಸದನದಲ್ಲಿ ಮಂಡಿಸುವ ಕುರಿತು ಮುಖ್ಯಮಂತ್ರಿ ನಿರ್ಧರಿಸುವರು ಎಂದರು.

‘ನಾನು ಕೆಪಿಸಿಸಿ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಲ್ಲ. ಪಕ್ಷದಲ್ಲಿ ನನಗಿಂತ ಹಿರಿಯ ನಾಯಕರು ಸಾಕಷ್ಟು ಸಂಖ್ಯೆಯಲ್ಲಿ ಇದ್ದಾರೆ. ಪಕ್ಷವು ನನಗೆ ಕೊಟ್ಟಿರುವ ಅವಕಾಶವನ್ನು ಸಮರ್ಥವಾಗಿ ನಿಭಾಯಿ ಸುತ್ತಿದ್ದೇನೆ. ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್ ಅವರು ಪಕ್ಷವನ್ನು ಉತ್ತಮವಾಗಿ ಮುನ್ನಡೆಸುತ್ತಿದ್ದಾರೆ. ಬದಲಾವಣೆಯ ಪ್ರಸ್ತಾಪವಾಗಿಲ್ಲ. ಅಂತಹ ವಿಷಯಗಳನ್ನು ಹೈಕಮಾಂಡ್ ನಿರ್ಧರಿಸುತ್ತದೆ’ ಎಂದು ಹೇಳಿದರು.

ರೋಗ ನಿಯಂತ್ರಣದ ಬಗ್ಗೆ ಅಧಿಕಾರಿಗಳೊಂದಿಗೆ ಸಚಿವ ದಿನೇಶ್ ಗುಂಡೂರಾವ್ ಸಭೆ

ಡೆಂಗಿ: ಖಾಸಗಿ ಆಸ್ಪತ್ರೆಗೆ ದರ ನಿಗದಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೆಂಗಿ ಪರೀಕ್ಷೆಗೆ ಸಂಬಂಧಿಸಿದಂತೆ ಖಾಸಗಿ ಆಸ್ಪತ್ರೆಗಳಿಗೂ ದರ ನಿಗದಿಪಡಿಸಿ, ಬುಧವಾರವೇ ಸುತ್ತೋಲೆ ಹೊರಡಿಸಬೇಕು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಡೆಂಗಿ ನಿಯಂತ್ರಣದ ಬಗ್ಗೆ ಬಿಬಿಎಂಪಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳೊಂದಿಗೆ ಮಂಗಳವಾರ ಸಭೆ ನಡೆಸಿದ ಅವರು, ‘ಖಾಸಗಿ ಆಸ್ಪತ್ರೆಗಳು ಕಡ್ಡಾಯವಾಗಿ ಡೆಂಗಿ ದೃಢ ಪ್ರಕರಣಗಳ ಬಗ್ಗೆ ಸರ್ಕಾರಕ್ಕೆ ಮಾಹಿತಿ ನೀಡಬೇಕು. ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ರಾಜ್ಯದಲ್ಲಿ ಕಳೆದ ಸಾಲಿಗೆ ಹೋಲಿಸಿದರೆ ಈ ಬಾರಿ ಡೆಂಗಿ ಪರೀಕ್ಷೆ ಪ್ರಮಾಣ ಶೇ 42ರಷ್ಟು ಹೆಚ್ಚಳವಾಗಿದೆ. ಸಾಧ್ಯವಾದಷ್ಟು ಮುಂಚಿತವಾಗಿ ಡೆಂಗಿ ಪ್ರಕರಣಗಳು ದೃಢಪಟ್ಟರೆ ರೋಗಿಗಳ ಪ್ರಾಣಕ್ಕೆ ಅಪಾಯವಾಗುವುದನ್ನು ತಡೆಯಬಹುದು. ಈ ದಿಸೆಯಲ್ಲಿ ಆರೋಗ್ಯ ಇಲಾಖೆ ಹಾಗೂ ಬಿಬಿಎಂಪಿ ಅಧಿಕಾರಿಗಳು ಹೆಚ್ಚು ನಿಗಾ ವಹಿಸಬೇಕು’ ಎಂದು ಸೂಚನೆ ನೀಡಿದರು.



ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಡೆಂಗಿ ನಿಯಂತ್ರಣ ಕುರಿತು ಬಿಬಿಎಂಪಿ, ಗ್ರಾಮೀಣಾಭಿವೃದ್ಧಿ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳ ಜತೆಗೆ ಬೆಂಗಳೂರಿನಲ್ಲಿ ಮಂಗಳವಾರ ಸಭೆ ನಡೆಸಿದರು – ಪ್ರಜಾವಾಣಿ ಚಿತ್ರ

ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ರಾಜ್ಯದಲ್ಲಿ ಜನವರಿ ತಿಂಗಳಿನಿಂದ ಜೂನ್ ಅಂತ್ಯದವರೆಗೆ 6,187 ಡೆಂಗಿ ಪ್ರಕರಣಗಳು ಪತ್ತೆಯಾಗಿವೆ. ಶೇ 66ರಷ್ಟು ಪ್ರಕರಣಗಳು ಗ್ರಾಮೀಣ ಪ್ರದೇಶದಲ್ಲಿ ವರದಿಯಾದರೆ, ಶೇ 44ರಷ್ಟು ಪ್ರಕರಣಗಳು ನಗರ ಪ್ರದೇಶದಲ್ಲಿ ದೃಢಪಟ್ಟಿವೆ. ಡೆಂಗಿಯಿಂದ ಈವರೆಗೆ ಆರು ಜನರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ಶೇ 0.09ರಷ್ಟಿದೆ. ಸಾವು ತಡೆಯಲು ಹೆಚ್ಚಿನ ನಿಗಾ ವಹಿಸಲು ಸೂಚಿಸಲಾಗಿದೆ. ಬೆಂಗಳೂರು, ಚಿಕ್ಕಮಗಳೂರು, ಮೈಸೂರು, ಹಾವೇರಿ, ಚಿತ್ರದುರ್ಗ, ಶಿವಮೊಗ್ಗ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಕರಣಗಳು ಹೆಚ್ಚಾಗಿ ವರದಿಯಾಗಿವೆ. ಬಸ್ ಡಿಪೊಗಳಲ್ಲಿ ಬಿದ್ದಿರುವ ಟಯರ್‌ಗಳಲ್ಲಿ ನೀರು ನಿಂತು, ಲಾರ್ವಾ ಉತ್ಪತ್ತಿಯಾಗುತ್ತಿರುವುದು ಪರೀಕ್ಷೆಯಿಂದ ದೃಢಪಟ್ಟಿದೆ. ಎಲ್ಲ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ಅಗತ್ಯ ವ್ಯವಸ್ಥೆ ಕಲ್ಪಿಸಲಾಗಿದೆ’ ಎಂದರು.

ಡೆಂಗಿ ಬಗ್ಗೆ ಜಾಗೃತಿ: ಡೆಂಗಿ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಈಡಿಸ್ ಸೊಳ್ಳೆ ಹಾಗೂ ಲಾರ್ವಾದ ಬಗ್ಗೆ ಜನರಿಗೆ ಮಾಹಿತಿ ನೀಡಿ, ಜಾಗೃತಿ ಮೂಡಿಸುವಂತೆ ಸಭೆಯಲ್ಲಿ ಅಧಿಕಾರಿಗಳಿಗೆ ದಿನೇಶ್ ಗುಂಡೂರಾವ್ ಸೂಚಿಸಿದರು.

ಬಿಬಿಎಂಪಿ ಅಧಿಕಾರಿಗಳು ಹಾಗೂ ಆಶಾ ಕಾರ್ಯಕರ್ತೆಯರು ಪ್ರತಿ ಮನೆಗೂ ಭೇಟಿ ನೀಡಿ, ಡೆಂಗಿ ಬಗ್ಗೆ ಜನರಿಗೆ ತಿಳಿ ಹೇಳಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ಪ್ರತಿಯೊಂದು ಶಾಲೆಗೂ ಭೇಟಿ ನೀಡಿ, ಮಕ್ಕಳಲ್ಲಿ ಡೆಂಗಿ ಬಗ್ಗೆ ಜಾಗೃತಿ ಮೂಡಿಸಬೇಕು. ಶಿಕ್ಷಕರು ಮುಂಜಾಗೃತಾ ಕ್ರಮಗಳನ್ನು ಕೈಗೊಂಡಿರುವ ಬಗ್ಗೆ ವೈದ್ಯಾಧಿಕಾರಿಗಳೇ ಮೇಲ್ವಿಚಾರಣೆ ಮಾಡಬೇಕು ಎಂಬ ನಿರ್ಧಾರವನ್ನು ಸಭೆಯಲ್ಲಿ ಕೈಗೊಳ್ಳಲಾಯಿತು.

ಪ್ರತಿ ಶುಕ್ರವಾರ ಡೆಂಗಿ ನಿಯಂತ್ರಣ ಅಭಿಯಾನ ನಡೆಸಬೇಕು. ಬಿಬಿಎಂಪಿ ಹಾಗೂ ಆರೋಗ್ಯ ಇಲಾಖೆಯ ಎಲ್ಲ ಅಧಿಕಾರಿಗಳು ಪ್ರತಿ ಶುಕ್ರವಾರ ಕಾರ್ಯಕ್ಷೇತ್ರ ದಲ್ಲಿ ಇರಬೇಕು ಎಂದು ಸಚಿವರು ಸೂಚಿಸಿದರು.

ಸಂಕ್ಷಿಪ್ತ ಸುದ್ದಿ

ಎಲ್ಲ ತರಗತಿಗಳಿಗೂ ಮತ್ತೆ ಮೌಲ್ಯಾಂಕನ

ಬೆಂಗಳೂರು: 5, 8 ಹಾಗೂ 9ನೇ ತರಗತಿಗಳ ಬೋರ್ಡ್ ಪರೀಕ್ಷೆಗಳನ್ನು ಕೋರ್ಟ್ ರದ್ದು ಮಾಡಿರುವ ಕಾರಣ ಶಾಲೆಗಳಲ್ಲಿ ಹಿಂದೆ ಇದ್ದಂತೆ ಎಲ್ಲ ತರಗತಿಗಳಿಗೂ ಮೌಲ್ಯಾಂಕನ ಮುಂದುವರಿಸಬೇಕು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸುತ್ತೋಲೆ ಹೊರಡಿಸಿದೆ.

ರಾಜ್ಯ ಪಠ್ಯಕ್ರಮ ಅನುಸರಿಸುವ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಶಾಲೆಗಳು 2024–25ನೇ ಶೈಕ್ಷಣಿಕ ಸಾಲಿನಿಂದ ಒಂದರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಭಾಗ–1 ಮತ್ತು ಭಾಗ–2ರ ಆಧಾರದಲ್ಲಿ ಮೌಲ್ಯಾಂಕನ ಪೂರ್ಣಗೊಳಿಸಬೇಕು. ಶಾಲಾ ಬ್ಯಾಗ್ ಹೊರೆ ತಗ್ಗಿಸಲು ಮೊದಲಾರ್ಧ ಶೇ 50ರಷ್ಟು ಪಠ್ಯ ಹಾಗೂ ನಂತರದ ಅರ್ಧ ಶೇ 50ರಷ್ಟು ಪಠ್ಯದ ನಿಯಮ ಅನುಸರಿಸಬೇಕು ಎಂದು ಸೂಚಿಸಲಾಗಿದೆ.

ಬಿಜೆಪಿ ರಾಜ್ಯ ವಿಶೇಷ ಕಾರ್ಯಕಾರಿಣಿ ನಾಳೆ

ಬೆಂಗಳೂರು: ನಗರದ ಅರಮನೆ ಮೈದಾನದಲ್ಲಿ ಇದೇ 4ರಂದು ಬಿಜೆಪಿ ರಾಜ್ಯ ವಿಶೇಷ ಕಾರ್ಯಕಾರಿಣಿ ನಡೆಯಲಿದ್ದು, 1,745 ಆಹ್ವಾನಿತರು ಉಪಸ್ಥಿತರಿರುವರು ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ನಂದೀಶ್ ರೆಡ್ಡಿ ಹೇಳಿದರು.

ಈ ಕುರಿತು ಮಂಗಳವಾರ ಸುದ್ದಿಗಾರರಿಗೆ ಮಾಹಿತಿ ನೀಡಿದ ಅವರು, ಪಕ್ಷದ ಮಂಡಲದ ಅಧ್ಯಕ್ಷರು ಹಾಗೂ ಮೇಲ್ಪಟ್ಟದ ಎಲ್ಲ ಪದಾಧಿಕಾರಿಗಳು, ಜಿಲ್ಲಾ ಹಾಗೂ ರಾಜ್ಯ ಪದಾಧಿಕಾರಿಗಳು ಭಾಗವಹಿಸುವರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅಧ್ಯಕ್ಷತೆ ವಹಿಸುವರು. ಕೇಂದ್ರ ಸಚಿವ ನಿತಿನ್ ಗಡ್ಕರಿ, ರಾಜ್ಯದ ಚುನಾವಣಾ ಉಸ್ತುವಾರಿ ರಾಧಾಮೋಹನ್ ಅಗರ್‌ವಾಲ್ ಉಪಸ್ಥಿತರಿರುವರು ಎಂದರು.

ಹೊಸ ಖಾಸಗಿ ವಿ.ವಿಗಳಿಗೆ ಸದ್ಯಕ್ಕಿಲ್ಲ ಅನುಮತಿ: ಡಾ.ಎಂ.ಸಿ. ಸುಧಾಕರ್

ಬೆಂಗಳೂರು: ಯಾವುದೇ ಖಾಸಗಿ ವಿಶ್ವವಿದ್ಯಾಲಯ ಸ್ಥಾಪನೆಗೆ ಸದ್ಯಕ್ಕೆ ಅನುಮೋದನೆ ನೀಡದಿರಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ರಾಜ್ಯದಲ್ಲಿ ಪ್ರಸ್ತುತ 27 ಖಾಸಗಿ ವಿಶ್ವವಿದ್ಯಾಲಯಗಳಿವೆ. ವಿಜಯಪುರದಲ್ಲಿ ಅಲ್ ಅಮೀನ್ ವಿಶ್ವವಿದ್ಯಾಲಯ, ಚಿಕ್ಕಬಳ್ಳಾಪುರದಲ್ಲಿ ಬಿಆರ್‌ಎಸ್ ವಿಶ್ವವಿದ್ಯಾಲಯ, ಮಂಗಳೂರಿನ ಲಕ್ಷ್ಮೀ ಸ್ಮಾರಕ ಶಿಕ್ಷಣ ಟ್ರಸ್ಟ್‌ನ ಎಜೆ ವಿಶ್ವವಿದ್ಯಾಲಯ, ಬೆಂಗಳೂರಿನ ಎಂ.ಜಿ ಚಾರಿಟೆಬಲ್ ಟ್ರಸ್ಟ್‌ನ ಈಸ್ಟ್ ಪಾಯಿಂಟ್ ವಿಶ್ವವಿದ್ಯಾಲಯ, ಗೋಪಾಲನ್ ವಿಶ್ವವಿದ್ಯಾಲಯ, ರಾಮನಗರದಲ್ಲಿ ಸೆಂಟರ್ ಫಾರ್ ಮುಸ್ಲಿಂ ಅಸೋಸಿಯೇಷನ್ ಆಫ್ ಕರ್ನಾಟಕದ ಸಿಎಂಎ ವಿಶ್ವವಿದ್ಯಾಲಯ, ಆರ್.ಎನ್.ಶೆಟ್ಟಿ ವಿಶ್ವವಿದ್ಯಾಲಯ, ಮೈಸೂರಿನಲ್ಲಿ ಮಹಾರಾಜ ವಿಶ್ವವಿದ್ಯಾಲಯ, ಕಣಚೂರ್ ಇಸ್ಲಾಮಿಕ್ ಎಜುಕೇಶನ್ ಟ್ರಸ್ಟ್ ವಿಶ್ವವಿದ್ಯಾಲಯ ಸ್ಥಾಪನೆ ಕೋರಿ ಸರ್ಕಾರಕ್ಕೆ ಒಟ್ಟು ಒಂಬತ್ತು ಅರ್ಜಿಗಳು ಸಲ್ಲಿಕೆಯಾಗಿವೆ.

‘ಖಾಸಗಿ ವಿಶ್ವವಿದ್ಯಾನಿಲಯಗಳ ನಿಯಂತ್ರಣ, ಮೇಲ್ವಿಚಾರಣೆಗೆ ಏಕರೂಪದ ಕಾನೂನಿನ ಅಗತ್ಯವಿದೆ. ಹಾಗಾಗಿ, ಸದ್ಯಕ್ಕೆ ಯಾವುದೇ ಹೊಸ ವಿಶ್ವವಿದ್ಯಾಲಯ ಸ್ಥಾಪನೆಗೆ ಅನುಮತಿ ನೀಡುವುದು ಬೇಡ ಎಂದು ಮುಖ್ಯಮಂತ್ರಿ ಸೂಚಿಸಿದ್ದಾರೆ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಹೇಳಿದರು.

ನ್ಯಾನೊ ತಂತ್ರಜ್ಞಾನ ಸಂಶೋಧನೆಗೆ ಆದ್ಯತೆ: ಬೋಸರಾಜು

ಬೆಂಗಳೂರು: ‘ರಾಜ್ಯದಲ್ಲಿ ನ್ಯಾನೊ ತಂತ್ರಜ್ಞಾನ ಕ್ಷೇತ್ರದಲ್ಲಿ ಸಂಶೋಧನೆಗೆ ಒತ್ತು ನೀಡಲಾಗುವುದು. ಇದಕ್ಕಾಗಿ ‘ಬೆಂಗಳೂರು– ಇಂಡಿಯಾ ನ್ಯಾನೊ–2024’ ಸಮಾವೇಶವನ್ನು ಆಯೋಜಿಸಲಾಗುತ್ತಿದೆ’ ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ತಿಳಿಸಿದರು.

ಸಮಾವೇಶದ ಅಂಗವಾಗಿ ಆಯೋಜಿಸಲಾಗಿದ್ದ ಪೂರ್ವಬಾವಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ‘ರಾಜ್ಯದಲ್ಲಿ ನವೋದ್ಯಮಗಳ ಆರಂಭ ಮತ್ತು ನೂತನ ಉತ್ಪನ್ನಗಳ ಅಭಿವೃದ್ಧಿ ಹಾಗೂ ಉತ್ಪಾದನೆಗೆ ಪೂರಕ ವಾತಾವರಣ ನಿರ್ಮಾಣ ಮಾಡಲಾಗುತ್ತಿದೆ. ಕರ್ನಾಟಕ ರಾಜ್ಯ ಸಂಶೋಧನಾ ಪ್ರತಿಷ್ಠಾನವನ್ನೂ ಸ್ಥಾಪಿಸಿದ್ದೇವೆ’ ಎಂದು ಹೇಳಿದರು.

‘ಮುಖ್ಯಮಂತ್ರಿ ಸ್ಥಾನ ಕಡ್ಲೇಪುರಿನಾ?’

ಬೆಂಗಳೂರು: ಮುಖ್ಯಮಂತ್ರಿ ಸ್ಥಾನವನ್ನು ಅವರಿಗೆ ಕೊಡಿ, ಇವರಿಗೆ ಕೊಡಿ ಎನ್ನಲು ಅದೇನು ಕಡ್ಲೇಪುರಿನಾ’ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಮಂಗಳವಾರ ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಸಿದ್ದರಾಮಯ್ಯ ಅವರು ಹೆಚ್ಚು ಶಾಸಕರ ಬೆಂಬಲ ಪಡೆದು ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿದ್ದಾರೆ’ ಎಂದು ಹೇಳಿದರು.

ಹಾಥರಸ್ ಕಾಲ್ತುಳಿತ ದುರಂತದ ಭೀಕರತೆಯನ್ನು ವಿವರಿಸಿದ ಪ್ರತ್ಯಕ್ಷದರ್ಶಿಗಳು

ಶವಗಳ ರಾಶಿ, ಸಂಬಂಧಿಕರ ಆಕ್ರಂದನ

ಪ್ರಜಾವಾಣಿ ವಾರ್ತೆ

ಲಖನೌ: ಆಸ್ಪತ್ರೆಯ ಆವರಣದಲ್ಲಿ ಸಾಲಾಗಿ ಇರಿಸಿದ್ದ ಶವಗಳ ಬಳಿ ಕುಟುಂಬ ಸದಸ್ಯರ ಆಕ್ರಂದನ, ಶವಗಳ ಸಾಲಿನಲ್ಲಿ ತಮ್ಮವರು ಇದ್ದಾರೆಯೇ ಎಂದು ಹುಡುಕಾಡುತ್ತಿದ್ದ ಸಂಬಂಧಿಕರು, ಗಾಯಾಳುಗಳನ್ನು ಹೊತ್ತು ಬರುವ ಆಂಬುಲೆನ್ಸ್‌ಗಳು...

ಉತ್ತರ ಪ್ರದೇಶದ ಹಾಥರಸ್ ಜಿಲ್ಲೆಯ ಫೂಲರಾಯ್ ಗ್ರಾಮದಲ್ಲಿ ಸಂಭವಿಸಿದ ಕಾಲ್ತುಳಿತ ಘಟನೆಯ ಭಯಾನಕತೆಯನ್ನು ಪ್ರತ್ಯಕ್ಷದರ್ಶಿಗಳು ವಿವರಿಸಿದ್ದು ಹೀಗೆ. ಮಂಗಳವಾರ ಆಯೋಜಿಸಿದ್ದ 'ಸತ್ಸಂಗ' ಕಾರ್ಯಕ್ರಮವು ಹಲವರಿಗೆ ದುರಂತಮಯವಾಗಿ ಪರಿಣಮಿಸಿದೆ.

'ಆಸ್ಪತ್ರೆಯ ನೆಲದಲ್ಲಿ ಶವಗಳನ್ನು ಸಾಲಾಗಿ ಇಡಲಾಗಿದ್ದರೆ, ತಮ್ಮವರನ್ನು ಕಳೆದುಕೊಂಡವರ ಗೋಳಾಟ ಮುಗಿಲುಮುಟ್ಟಿತ್ತು. ಶವಗಳು ಮತ್ತು ಗಾಯಾಳುಗಳನ್ನು ಹೊತ್ತು ತಂದ ಆಂಬುಲೆನ್ಸ್‌ಗಳ ಸೈರನ್ ಕೂಡಾ ಅವರ ಆಕ್ರಂದನದ ಮುಂದೆ ಯಾರಿಗೂ ಕೇಳಿಸುತ್ತಿರಲಿಲ್ಲ' ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

'ವಿಶ್ವಹರಿ ಭೋಲೆಬಾಬಾ ಅವರ ಕಾರ್ಯಕ್ರಮದಲ್ಲಿ ಒಂದು ಲಕ್ಷಕ್ಕೂ ಅಧಿಕ ಭಕ್ತರು ಪಾಲ್ಗೊಂಡಿದ್ದರು. ಅಷ್ಟೊಂದು ಜನರು ಒಂದೆಡೆ ಸೇರುವಷ್ಟು ಸ್ಥಳಾವಕಾಶ ಅಲ್ಲಿರಲಿಲ್ಲ. ಇದರಿಂದ ಸಲೀಸಾಗಿ ಅತ್ತಿತ್ತ ನಡೆದಾಡಲೂ ಅವಕಾಶವಿರಲಿಲ್ಲ' ಎಂದು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮಹಿಳೆಯೊಬ್ಬರು ತಿಳಿಸಿದರು. ಹರಿಯಾಣ, ರಾಜಸ್ಥಾನ ಮತ್ತು ಮಧ್ಯಪ್ರದೇಶದಿಂದಲೂ ಭಕ್ತರು ಬಂದಿದ್ದರು ಎಂದು ಅವರು ಹೇಳಿದರು.

ಕಾಲ್ತುಳಿತ ಹೇಗೆ ಸಂಭವಿಸಿತು ಎಂಬುದಕ್ಕೆ ವಿಭಿನ್ನ ಕಾರಣಗಳನ್ನು ನೀಡಿದ್ದಾರೆ. ಕಾರ್ಯಕ್ರಮದ ತಾಣದಲ್ಲಿ ಅತಿಯಾದ ಸೆಖೆಯಿದ್ದ ಕಾರಣ ಹಲವರು ಹೊರಹೋಗಲು ಪ್ರಯತ್ನಿಸಿದ್ದು ಕಾಲ್ತುಳಿತಕ್ಕೆ ಕಾರಣ ಎಂದು ಕೆಲವರು ಹೇಳಿದ್ದಾರೆ. 'ಸತ್ಸಂಗ' ನಡೆಯುತ್ತಿದ್ದ ಸಂದರ್ಭದಲ್ಲೇ ಕೆಲವರು ಬಿಸಿಲಿನ ಝಳಕ್ಕೆ ಬಳಲಿ ಮೂರ್ಛೆ ಹೋದರು. ಇದರಿಂದ ಆತಂಕಕ್ಕೆ ಒಳಗಾದ ಇತರರು ಒಮ್ಮೆಲೇ ಹೊರಹೋಗಲು ನಿರ್ಧರಿಸಿದ್ದು ಕಾಲ್ತುಳಿತಕ್ಕೆ ಕಾರಣವಾಯಿತು' ಎಂದಿದ್ದಾರೆ.



ಹಾಥರಸ್ ಜಿಲ್ಲೆಯಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ ಮೃತಪಟ್ಟವರ ಶವಗಳನ್ನು ಆಂಬುಲೆನ್ಸ್‌ನಲ್ಲಿ ಸಿಕಂದ್ರ ರಾವ್ ಆಸ್ಪತ್ರೆಗೆ ಸಾಗಿಸಲಾಯಿತು —ಪಿಟಿಐ ಚಿತ್ರ

ಜಿಲ್ಲಾಡಳಿತವು ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆಯನ್ನು ತಕ್ಷಣ ಪ್ರಾರಂಭಿಸಲಿಲ್ಲ ಎಂಬ ದೂರುಗಳೂ ಕೇಳಿಬಂದಿವೆ. ಕಾರ್ಯಕ್ರಮಕ್ಕೆ ಅನುಮತಿ ಇತ್ತಾದರೂ, ಅಲ್ಲಿ ಇತರ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗಿತ್ತೇ ಎಂಬುದು ಸ್ಪಷ್ಟವಾಗಿಲ್ಲ. ಈ ಕಾರ್ಯಕ್ರಮಕ್ಕೆ ಬರುವ ಭಕ್ತರ ಸಂಖ್ಯೆಯ ಬಗ್ಗೆ ಸ್ಥಳೀಯ ಆಡಳಿತಕ್ಕೆ ಯಾವುದೇ ಮಾಹಿತಿ ಇರಲಿಲ್ಲ ಎನ್ನಲಾಗಿದೆ.

'ಕಾಲ್ತುಳಿತಕ್ಕೆ ನಿಖರ ಕಾರಣ ಏನು ಎಂಬುದು ತನಿಖೆಯ ಬಳಿಕವೇ ಸ್ಪಷ್ಟವಾಗಲಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹೊರಹೋಗದಂತೆ ಭಕ್ತರನ್ನು ತಡೆದಿರಿಸಲಾಗಿತ್ತು: 'ಸತ್ಸಂಗ' ಕಾರ್ಯಕ್ರಮ ನಡೆಸಿದ ಭೋಲೆ ಬಾಬಾ ಅವರ ಕಾರು ಸ್ಥಳದಿಂದ ಹೊರಡುವವರೆಗೂ ಭಕ್ತರನ್ನು ಸ್ಥಳದಿಂದ ಹೋಗದಂತೆ ತಡೆದಿರಿಸಲಾಗಿತ್ತು. ಕಿರಿದಾದ ಜಾಗದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಸಣ್ಣ ಜಾಗದಲ್ಲಿ ನೂರಾರು ಮಂದಿ ಸೇರಿದ್ದರಿಂದ ನೂಕುನುಗ್ಗಲು ಉಂಟಾಯಿತು ಎಂದು ಮೂಲಗಳು ತಿಳಿಸಿವೆ.

ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಘಟನೆ ಬಗ್ಗೆ ಆಘಾತ ವ್ಯಕ್ತಪಡಿಸಿದ್ದು, ಗಾಯಾಳುಗಳ ಚಿಕಿತ್ಸೆಗೆ ಸೂಕ್ತ ವ್ಯವಸ್ಥೆ ಕಲ್ಪಿಸುವಂತೆ ಜಿಲ್ಲಾಡಳಿತಕ್ಕೆ ನಿರ್ದೇಶನ ನೀಡಿದ್ದಾರೆ.



'ಸತ್ಸಂಗ'ದಲ್ಲಿ ಪಾಲ್ಗೊಂಡಿದ್ದ ಭಕ್ತರು —ಪಿಟಿಐ ಚಿತ್ರ

ರಾಜಕಾರಣಿಗಳ ಜತೆ ನಂಟು

ವಿಶ್ವಹರಿ ಭೋಲೆಬಾಬಾ ಅವರು ಹಲವು ಪ್ರಭಾವಿ ರಾಜಕಾರಣಿಗಳ ಜತೆ ನಂಟು ಹೊಂದಿದ್ದಾರೆ ಎಂದು ಮೂಲಗಳು ತಿಳಿಸಿವೆ. ರಾಜಕಾರಣಿಗಳ ಜತೆ ಇರುವ ಫೋಟೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ಅವರು ಪ್ರತಿ ಮಂಗಳವಾರ ಇದೇ ರೀತಿಯ ಕಾರ್ಯಕ್ರಮ ಆಯೋಜಿಸುತ್ತಾ ಬಂದಿದ್ದಾರೆ.

ಉತ್ತರ ಪ್ರದೇಶದ ಎಟಾ ಜಿಲ್ಲೆಯವರಾದ ಭೋಲೆಬಾಬಾ, ಅಂಗರಕ್ಷಕರ ದೊಡ್ಡ 'ಸೇನೆ'ಯನ್ನೇ ಹೊಂದಿದ್ದಾರೆ. ಉತ್ತರ ಪ್ರದೇಶ ಪೊಲೀಸ್ ಇಲಾಖೆಯಲ್ಲಿದ್ದ ಅವರು ಸ್ವಯಂ ನಿವೃತ್ತಿ ಪಡೆದು 'ಕಥಾವಾಚಕ' ಆಗಿ ಬದಲಾಗಿದ್ದರು.

ಕಾಲ್ತುಳಿತ ಘಟನೆ ನಡೆದ ಬಳಿಕ ಅವರು ಹಾಗೂ ಕಾರ್ಯಕ್ರಮದ ಆಯೋಜಕರು ತಲೆಮರೆಸಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ಈ ಹಿಂದೆ ನಡೆದಿದ್ದ ಘಟನೆಗಳು

ಮಾರ್ಚ್ 31, 2023: ಇಂದೋರ್‌ನಲ್ಲಿ ರಾಮನವಮಿ ವೇಳೆ ನಡೆದ ದುರ್ಘಟನೆಯಲ್ಲಿ 36 ಮಂದಿ ಸಾವು. ಹಳೆಯ ಕಾಲದ ಬಾವಿಯ ಮೆಟ್ಟಿಲು ಕುಸಿದಾಗ, ಭಕ್ತರು ಬಾವಿಗೆ ಬಿದ್ದು ದುರಂತ ಸಂಭವಿಸಿತ್ತು.

ಜನವರಿ 1, 2022: ಜಮ್ಮು ಮತ್ತು ಕಾಶ್ಮೀರದ ವೈಷ್ಣೋದೇವಿ ಮಂದಿರದಲ್ಲಿ ಉಂಟಾದ ನೂಕುನುಗ್ಗಲು ಹಾಗೂ ಕಾಲ್ತುಳಿತದಲ್ಲಿ 12 ಮಂದಿ ಸಾವು.

ಜುಲೈ 14, 2015: ಆಂಧ್ರಪ್ರದೇಶದ ರಾಜಮಂಡ್ರಿಯಲ್ಲಿ 'ಪುಷ್ಕರಂ' ಉತ್ಸವದ ಸಮಯದಲ್ಲಿ ಗೋದಾವರಿ ನದಿ ದಡದ ಸ್ನಾನಘಟ್ಟದಲ್ಲಿ ಕಾಲ್ತುಳಿತ ಸಂಭವಿಸಿ 27 ಮಂದಿ ಸಾವನ್ನಪ್ಪಿ, 20 ಮಂದಿಗೆ ಗಾಯ.

ಅಕ್ಟೋಬರ್ 3, 2014: ಪಟ್ನಾದ ಗಾಂಧಿ ಮೈದಾನದಲ್ಲಿ ದಸರಾ ಉತ್ಸವದ ವೇಳೆ ಕಾಲ್ತುಳಿತ ಸಂಭವಿಸಿ 32 ಮಂದಿ ಸಾವು. 26ಕ್ಕೂ ಅಧಿಕ ಮಂದಿಗೆ ಗಾಯ.

ಅಕ್ಟೋಬರ್ 13, 2013: ಮಧ್ಯಪ್ರದೇಶದ ದತಿಯಾ ಜಿಲ್ಲೆಯ ರತ್ನಗಢ ದೇವಾಲಯದ ಸಮೀಪ ನವರಾತ್ರಿ ಉತ್ಸವದ ವೇಳೆ ಸಂಭವಿಸಿದ ಕಾಲ್ತುಳಿತದಲ್ಲಿ 115 ಮಂದಿ ಮೃತಪಟ್ಟು, 100ಕ್ಕೂ ಅಧಿಕ ಮಂದಿಗೆ ಗಾಯ. ನೂರಾರು ಭಕ್ತರು ಇದ್ದ ಸೇತುವೆ ಕುಸಿಯಲಿದೆ ಎಂಬ ವದಂತಿ ಹಬ್ಬಿದ್ದು ದುರ್ಘಟನೆಗೆ ಕಾರಣ.

ನವೆಂಬರ್ 19, 2012: ಪಟ್ನಾ ಸಮೀಪ ಗಂಗಾ ನದಿ ದಡದ ಅದಾಲತ್ ಘಾಟ್‌ನಲ್ಲಿ ಛಠ್ ಪೂಜೆ ಸಮಯದಲ್ಲಿ ಕಾಲ್ತುಳಿತ ಘಟನೆಯಲ್ಲಿ 20 ಮಂದಿ ಸಾವು. ತಾತ್ಕಾಲಿಕ ಸೇತುವೆ ಕುಸಿದದ್ದರಿಂದ ನೂಕುನುಗ್ಗಲು ಉಂಟಾಗಿತ್ತು.

ನವೆಂಬರ್ 8, 2011: ಹರಿದ್ವಾರದಲ್ಲಿ ಗಂಗಾ ನದಿ ದಡದ ಹರ್–ಕೀ–ಪೌಢೀ ಘಾಟ್‌ನಲ್ಲಿ ಕಾಲ್ತುಳಿತದಿಂದ 20 ಮಂದಿ ಸಾವು.

ಜನವರಿ 14, 2011: ಶಬರಿಮಲೆ ದೇವಸ್ಥಾನದ ಬಳಿ ಉಂಟಾದ ನೂಕುನುಗ್ಗಲು, ಕಾಲ್ತುಳಿತದಿಂದ 104 ಯಾತ್ರಿಕರು ಮೃತಪಟ್ಟು, 40ಕ್ಕೂ ಅಧಿಕ ಮಂದಿಗೆ ಗಾಯ. ಕೇರಳದ ಇಡುಕ್ಕಿ ಜಿಲ್ಲೆಯ ಪುಲ್‌ಮೇಡ್ ಅರಣ್ಯಪ್ರದೇಶದ ರಸ್ತೆ ಮೂಲಕ ಹಿಂದಿರುಗುತ್ತಿದ್ದ ಭಕ್ತರ ಮೇಲೆ ಜೀಪೊಂದು ನುಗ್ಗಿದ್ದರಿಂದ ನೂಕುನುಗ್ಗಲು ಉಂಟಾಗಿತ್ತು.

ಮಾರ್ಚ್ 4, 2010: ಉತ್ತರ ಪ್ರದೇಶದ ಪ್ರತಾಪಗಢ ಜಿಲ್ಲೆಯ ರಾಮ್ ಜಾನಕಿ ದೇವಾಲಯದಲ್ಲಿ ಕಾಲ್ತುಳಿತದಿಂದ 63 ಭಕ್ತರ ಸಾವು. 'ಸ್ವಯಂಘೋಷಿತ ದೇವಮಾನ'ರೊಬ್ಬರು ಉಚಿತವಾಗಿ ವಿತರಿಸಿದ ಬಟ್ಟೆ ಹಾಗೂ ಆಹಾರ ಪಡೆಯಲು ಭಕ್ತರು ಸೇರಿದ್ದ ಜಾಗದಲ್ಲಿ ನಡೆದ ದುರಂತ.

ಸೆಪ್ಟೆಂಬರ್ 30, 2008: ರಾಜಸ್ಥಾನದ ಜೋಧಪುರ ಜಿಲ್ಲೆಯ ಚಾಮುಂಡಾ ದೇವಿ ದೇವಾಲಯದಲ್ಲಿ ಬಾಂಬ್ ಸ್ಫೋಟದ ವದಂತಿ ಹರಡಿದ್ದರಿಂದ ಕಾಲ್ತುಳಿತ ಉಂಟಾಗಿ ಸುಮಾರು 250 ಭಕ್ತರು ಮೃತಪಟ್ಟು, 60ಕ್ಕೂ ಅಧಿಕ ಮಂದಿಗೆ ಗಾಯ.

ಆಗಸ್ಟ್ 3, 2008: ಹಿಮಾಚಲ ಪ್ರದೇಶದ ಬಿಲಾಸಪುರ ಜಿಲ್ಲೆಯ ನೈನಾದೇವಿ ದೇವಾಲಯದಲ್ಲಿ ಕಾಲ್ತುಳಿತ ದುರಂತದಲ್ಲಿ 162 ಮಂದಿ ಬಲಿಯಾಗಿ, 47 ಮಂದಿಗೆ ಗಾಯ. ಬಂಡೆ ಕುಸಿಯಲಿದೆ ಎಂಬ ವದಂತಿ ಹರಡಿದ್ದು ದುರ್ಘಟನೆಗೆ ಕಾರಣ.

ಜನವರಿ 25, 2005: ಮಹಾರಾಷ್ಟ್ರದ ಸಾತಾರಾ ಜಿಲ್ಲೆಯ ಮಾಂಧರದೇವಿ ದೇವಾಲಯದಲ್ಲಿ ವಾರ್ಷಿಕ ತೀರ್ಥಯಾತ್ರೆ ವೇಳೆ ಸಂಭವಿಸಿದ ಕಾಲ್ತುಳಿತದಲ್ಲಿ 340 ಮಂದಿ ಸಾವಿಗೀಡಾಗಿ ನೂರಾರು ಮಂದಿಗೆ ಗಾಯ. ಭಕ್ತರು ತೆಂಗಿನಕಾಯಿ ಒಡೆಯುವ ಜಾಗದಲ್ಲಿ ನಿರ್ಮಿಸಿದ್ದ ಮೆಟ್ಟಿಲುಗಳಿಂದ ಕೆಲವರು ಜಾರಿಬಿದ್ದದ್ದು ಘಟನೆಗೆ ಕಾರಣ.

ಆಗಸ್ಟ್ 27, 2003: ಮಹಾರಾಷ್ಟ್ರದ ನಾಶಿಕ್ ಜಿಲ್ಲೆಯಲ್ಲಿ ಕುಂಭಮೇಳದ ಪುಣ್ಯ ಸ್ನಾನದ ವೇಳೆ ಉಂಟಾದ ಕಾಲ್ತುಳಿತದಲ್ಲಿ 39 ಮಂದಿ ಸಾವಿಗೀಡಾಗಿ, ಸುಮಾರು 140 ಜನರು ಗಾಯ.

ತನಿಖೆಗೆ ಒತ್ತಾಯಿಸಿ ಪಾನ್ಸರೆ ಕುಟುಂಬದಿಂದ ಎಟಿಎಸ್‌ಗೆ ಪತ್ರ

ಪ್ರಜಾವಾಣಿ ವಾರ್ತೆ

ಮುಂಬೈ: ವಿಚಾರವಾದಿ, ಎಡಪಂಥೀಯ ನಾಯಕ ಗೋವಿಂದ ಪಾನ್ಸರೆ ಅವರ ಕುಟುಂಬ ಸದಸ್ಯರು ಮಹಾರಾಷ್ಟ್ರ ಪೊಲೀಸ್ ಇಲಾಖೆಯ ಭಯೋತ್ಪಾದನೆ ನಿಗ್ರಹ ಪಡೆಗೆ (ಎಟಿಎಸ್) ಪತ್ರ ಬರೆದಿದ್ದು, ಪಾನ್ಸರೆ ಹತ್ಯೆ ಕೃತ್ಯಕ್ಕೆ ಸಂಬಂಧಿಸಿದಂತೆ ಸನಾತನ ಸಂಸ್ಥಾ ಸಂಘಟನೆಯ ಪಾತ್ರ ಕುರಿತು ತನಿಖೆ ನಡೆಸಬೇಕು ಎಂದು ಒತ್ತಾಯಿಸಿದೆ.

ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ವಿಚಾರವಾದಿಗಳ ಹತ್ಯೆಗೆ ಹಿಂದುತ್ವ ಪರ ಸಂಘಟನೆಯಾದ ಸನಾತನ ಸಂಸ್ಥೆಯು ಕಾರ್ಯತಂತ್ರ ಹಾಗೂ ಪೂರ್ವಯೋಜನೆಯನ್ನು ರೂಪಿಸುತ್ತಿತ್ತು ಎಂಬ ಅಂಶವು ಪೊಲೀಸರ ತನಿಖೆಯಿಂದ ಬಯಲಾಗಿದೆ ಎಂಬುದನ್ನೂ ಈ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಸನಾತನ ಸಂಸ್ಥೆಯ ಸ್ಥಾಪಕ ಡಾ.ಜಯಂತ್ ಅಠವಳೆ ಅವರ ಪಾತ್ರ ಕುರಿತಂತೆಯೂ ತನಿಖೆ ನಡೆಸಬೇಕು ಎಂದು ಎಟಿಎಸ್ ವರಿಷ್ಠಾಧಿಕಾರಿ ಜಯಂತ್ ಮೀನಾ ಅವರಿಗೆ ಬರೆದಿರುವ 68 ಪುಟಗಳ ಪತ್ರದಲ್ಲಿ ಒತ್ತಾಯಿಸಿದೆ. ಕುಟುಂಬದ ಸದಸ್ಯರಾದ ಡಾ. ಮೇಘಾ ಪಾನ್ಸರೆ, ಸ್ಮಿತಾ ಪಾನ್ಸರೆ, ಕಬೀರ್ ಪಾನ್ಸರೆ ಅವರ ಪತ್ರ ಬರೆದಿದ್ದಾರೆ.

ಕಾಮ್ರೇಡ್ ಪಾನ್ಸರೆ ಅವರನ್ನು ಅವರ ಜಾತ್ಯತೀತ ವಿಚಾರಪರತೆ, ಸಮಾನತೆ, ನಿರ್ಲಕ್ಷಿತ ವರ್ಗದ ಏಳಿಗೆಗಾಗಿ ತೋರುತ್ತಿದ್ದ ಆಸಕ್ತಿಯ ಹಿನ್ನೆಲೆಯಲ್ಲಿ ಸನಾತನ ಸಂಸ್ಥಾ, ಹಿಂದೂ ಜಾಗೃತಿ ಸಮಿತಿಯಂತಹ ಬಲಪಂಥೀಯ ಚಿಂತನೆಯ ಹಿಂದುತ್ವ ಸಂಘಟನೆಗಳು ಕಟುವಾಗಿ ವಿರೋಧಿಸುತ್ತಿದ್ದವು ಎಂಬುದನ್ನು ಉಲ್ಲೇಖಿಸಲಾಗಿದೆ.

ಪಾನ್ಸರೆ ಹತ್ಯೆ ಪ್ರಕರಣದ ವಿಚಾರಣೆಯನ್ನು ಬಾಂಬೆ ಹೈಕೋರ್ಟ್ ಆರಂಭಿಸುವುದರ ಪೂರ್ವದಲ್ಲಿ ಈ ಪತ್ರ ಬರೆಯಲಾಗಿದೆ. ಬಾಂಬೆ ಹೈಕೋರ್ಟ್ ಪ್ರಕರಣದ ತನಿಖೆಯನ್ನು ಎಟಿಎಸ್‌ಗೆ ವಹಿಸಿತ್ತು.

ಸನಾತನ ಸಂಸ್ಥಾದ ಸ್ಥಾಪಕ ಡಾ. ಜಯಂತ ಅಠವಳೆ, ಅದರ ನಾಯಕ ವೀರೇಂದ್ರ ಮರಾಠೆ ಹಾಗೂ ಪದಾಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು ಎಂದು ಕೋರಿದ್ದಾರೆ.

ಪಾನ್ಸರೆ, ಡಾ. ನರೇಂದ್ರ ದಾಬೋಲ್ಕರ್, ಪ್ರೊ.ಎಂ.ಎಂ. ಕಲಬುರ್ಗಿ ಮತ್ತು ಗೌರಿ ಲಂಕೇಶ್ ಹತ್ಯೆ ಪ್ರಕರಣಗಳಿಗೆ ಪರಸ್ಪರ ಸಂಬಂಧವಿದೆ ಎಂಬುದನ್ನು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

'ಬಾಲಕ ಬುದ್ಧಿಯ ರಾಹುಲ್'

ಒಂದನೇ ಪುಟದಿಂದ...

'ಹಿಂದೂಗಳು ಹಿಂಸಾತ್ಮಕರು ಎಂದು ಹೇಳಲಾಗಿದೆ. ಇದು ನಿಮ್ಮ ಮೌಲ್ಯವೇ? ಇದು ನಿಮ್ಮ ಗುಣವೇ? ಇದು ಈ ದೇಶದ ಹಿಂದೂಗಳ ಮೇಲಿನ ನಿಮ್ಮ ದ್ವೇಷವೇ? ಈ ದೇಶ ಇದನ್ನು ಶತಮಾನಗಳವರೆಗೆ ಮರೆಯುವುದಿಲ್ಲ. ಅವರ ಮಿತ್ರರು ಹಿಂದೂ ಧರ್ಮವನ್ನು ಡೆಂಗಿ, ಮಲೇರಿಯಾ ಇತ್ಯಾದಿಗಳೊಂದಿಗೆ ಹೋಲಿಸಲು ಪ್ರಯತ್ನಿಸಿದ್ದರು. ಇದು ಕಾಕತಾಳೀಯವೋ ಅಥವಾ ಸಂಚಿನ ಭಾಗವೋ' ಎಂದು ಅವರು ಪ್ರಶ್ನಿಸಿದರು.

'ತಾನು ಮಾಡಿದ ತಪ್ಪುಗಳನ್ನು ಬಹಿರಂಗಪಡಿಸದೆ ಸಹಾನುಭೂತಿ ಪಡೆಯಲು ಪ್ರಯತ್ನಿಸಿದ 'ಬಾಲಕ ಬುದ್ಧಿ'ಯ ವ್ಯಕ್ತಿಯ ರೋದನೆಗೆ ಸದನ ಸಾಕ್ಷಿಯಾಗಿದೆ' ಎಂದು ಛೇಡಿಸಿದ ಪ್ರಧಾನಿ, 'ಸ್ಪೀಕರ್ ಸರ್... ನೀವು ಎಲ್ಲವನ್ನೂ ನಗುಮುಖದಿಂದ ಸಹಿಸಿಕೊಳ್ಳುತ್ತೀರಿ. ಆದರೆ, ಸೋಮವಾರ ಇಲ್ಲಿ ನಡೆದದ್ದಕ್ಕೆ ಏನಾದರೂ ಮಾಡಬೇಕು. ಇಲ್ಲದಿದ್ದರೆ ಅದು ಸಂಸತ್ತಿಗೆ ಒಳ್ಳೆಯದಲ್ಲ. ಅಂತಹ ಪ್ರಯತ್ನಗಳನ್ನು ಬಾಲಿಶತನದ ವರ್ತನೆಯೆಂದು ಕರೆದು ನಿರ್ಲಕ್ಷಿಸಬಾರದು. ಇದರ ಹಿಂದೆ ಆಳವಾದ ಪಿತೂರಿ ಇದೆ' ಎಂದು ಹೇಳಿದರು.

ಪ್ರಧಾನಿ ಭಾಷಣಕ್ಕೆ ಪ್ರತಿಪಕ್ಷಗಳು ಅಡ್ಡಿಪಡಿಸಿದ್ದನ್ನು ಖಂಡಿಸುವ ನಿರ್ಣಯವನ್ನು ಲೋಕಸಭೆ ಅಂಗೀಕರಿಸಿತು. ಬಳಿಕ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು.

'ಸೋರಿಕೆ ತಡೆಗೆ ಯುದ್ಧೋಪಾದಿ ಕೆಲಸ'

ಪರೀಕ್ಷಾ ವ್ಯವಸ್ಥೆ ಬಲಗೊಳಿಸಲಾಗುವುದು: ಲೋಕಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭರವಸೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳನ್ನು ತಡೆಯಲು ಕೇಂದ್ರ ಸರ್ಕಾರ ಯುದ್ಧೋಪಾದಿಯಲ್ಲಿ ಕೆಲಸ ಮಾಡುತ್ತಿದೆ ಎಂದು ಲೋಕಸಭೆಗೆ ಮಂಗಳವಾರ ತಿಳಿಸಿದ ಪ್ರಧಾನಿ ನರೇಂದ್ರ ಮೋದಿ, 'ಯುವಕರ ಭವಿಷ್ಯದ ಜತೆಗೆ ಚೆಲ್ಲಾಟವಾಡುವವರನ್ನು ಬಿಡುವುದಿಲ್ಲ' ಎಂದು ಕಟುವಾಗಿ ಹೇಳಿದರು.

ನೀಟ್ ಮತ್ತು ನೆಟ್‌ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಸೇರಿದಂತೆ ವಿವಿಧ ಅಕ್ರಮಗಳ ಕುರಿತು ದೇಶದಾದ್ಯಂತ ಪ್ರತಿಭಟನೆಗಳು ಹಾಗೂ ಹೋರಾಟಗಳು ನಡೆದಿರುವ ಹೊತ್ತಿನಲ್ಲಿ ಪ್ರಧಾನಿ ಅವರು ಈ ಹೇಳಿಕೆ ನೀಡಿದ್ದಾರೆ. ಸಂಸತ್ತಿನಲ್ಲಿ ಈ ವಿಷಯದ ಬಗ್ಗೆ ಚರ್ಚೆಗೆ ಅನುವು ಮಾಡಿಕೊಡಬೇಕು ಎಂದು ವಿಪಕ್ಷಗಳು ಪಟ್ಟು ಹಿಡಿದಿವೆ.

ರಾಷ್ಟ್ರಪತಿಗಳ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಎರಡು ದಿನಗಳ ಚರ್ಚೆಗೆ ಉತ್ತರ ನೀಡಿದ ಮೋದಿ, 'ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ ವಿಷಯಕ್ಕೆ ಸಂಬಂಧಿಸಿದಂತೆ ದೇಶಾದ್ಯಂತ ಹಲವಾರು ಮಂದಿಯನ್ನು ಬಂಧಿಸಲಾಗಿದೆ. ಪ್ರಶ್ನೆಪತ್ರಿಕೆ ಸೋರಿಕೆ ತಡೆಯಲು ಕೆಲಸ ಮಾಡಲು ಪ್ರತಿಯೊಬ್ಬ ನಾಯಕರಿಗೂ ಹೇಳುತ್ತೇನೆ' ಎಂದರು.

'ನಾವು ಈಗಾಗಲೇ ಈ ಬಗ್ಗೆ ಕಠಿಣ ಕಾನೂನು ಜಾರಿಗೆ ತಂದಿದ್ದೇವೆ. ಪರೀಕ್ಷಾ ವ್ಯವಸ್ಥೆ ಬಲಪಡಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ' ಎಂದು ಅವರು ಹೇಳಿದರು.

ಸುಳ್ಳೇ ಕೈ ಅಸ್ತ್ರ–ಮೋದಿ: 'ಕಾಂಗ್ರೆಸ್ ಪಕ್ಷವು ಸುಳ್ಳನ್ನೇ ರಾಜಕೀಯದ ಅಸ್ತ್ರವನ್ನಾಗಿಸಿಕೊಂಡಿದೆ' ಎಂದು ಅವರು ಆರೋಪಿಸಿದರು.

ಪ್ರತಿ ಮಹಿಳೆಗೆ ತಿಂಗಳಿಗೆ ₹8,500 ಆರ್ಥಿಕ ನೆರವು ನೀಡುವುದಾಗಿ ಕಾಂಗ್ರೆಸ್ ಪ್ರಚಾರದ ಭರವಸೆಗೆ ತಿರುಗೇಟು ನೀಡಿದ ಮೋದಿ, 'ಇವಿಎಂ, ಸಂವಿಧಾನ, ಮೀಸಲಾತಿ, ರಫೇಲ್, ಎಚ್‌ಎಎಲ್, ಎಲ್‌ಐಸಿ ಮತ್ತು ಬ್ಯಾಂಕ್‌ಗಳ ಬಗ್ಗೆ ಕಾಂಗ್ರೆಸ್ ಸುಳ್ಳು ಹೇಳಿದೆ' ಎಂದು ಕಿಡಿಕಾರಿದರು.

'ಅಗ್ನಿವೀರರ ಬಗ್ಗೆ ಸದನಕ್ಕೆ ಸುಳ್ಳು ಹೇಳಲಾಗಿದೆ. ಎಂಎಸ್‌ಪಿಗಳ ಬಗ್ಗೆಯೂ ಅದೇ ಹೇಳಿದರು. ಸದನದ ಘನತೆಗೆ ಧಕ್ಕೆಯಾಗುತ್ತಿರುವುದು ಸದನದ ದುರಾದೃಷ್ಟ. ಇದು ದೇಶಕ್ಕಾಗಿ ಎಲ್ಲವನ್ನೂ ತ್ಯಾಗ ಮಾಡಿದ ನಮ್ಮ ಸ್ವಾತಂತ್ರ್ಯ ಹೋರಾಟಗಾರರಿಗೆ ಮಾಡಿದ ಅವಮಾನವಾಗಿದೆ' ಎಂದು ಅವರು ವ್ಯಾಖ್ಯಾನಿಸಿದರು.

ದೇಶವು ಅಭಿವೃದ್ಧಿಯ ಹಾದಿಯನ್ನು ಆರಿಸಿಕೊಂಡಿದ್ದರೂ ಕಾಂಗ್ರೆಸ್ ಗಲಭೆ ಹರಡಲು ಮುಂದಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

'ದಕ್ಷಿಣದಲ್ಲಿ ಉತ್ತರದ ವಿರುದ್ಧ ಮತ್ತು ಉತ್ತರದಲ್ಲಿ ಪಶ್ಚಿಮದ ವಿರುದ್ಧ ಅವರು ಮಾತನಾಡುತ್ತಾರೆ. ಅವರು ಧರ್ಮದ ಆಧಾರದ ಮೇಲೆ ವಿಭಜನೆಗೆ ಪ್ರಯತ್ನಿಸಿದ್ದಾರೆ ಮತ್ತು ದೇಶ ವಿಭಜನೆಯನ್ನು ಪ್ರತಿಪಾದಿಸಿದವರಿಗೆ ಚುನಾವಣೆ ಟಿಕೆಟ್ ನೀಡಿದ್ದಾರೆ. ಅವರು ಜನರನ್ನು ಜಾತಿಯ ಮೇಲೆ ವಿಭಜಿಸಲು ವದಂತಿಗಳನ್ನು ಹರಡುತ್ತಿದ್ದಾರೆ. ಅವರು ಇಡೀ ದೇಶವನ್ನು ಆರ್ಥಿಕ ಬಿಕ್ಕಟ್ಟಿನತ್ತ ಕೊಂಡೊಯ್ಯುತ್ತಿದ್ದಾರೆ. ತಮ್ಮ ರಾಜಕೀಯ ಉದ್ದೇಶಗಳನ್ನು ಈಡೇರಿಸಲು ದೇಶದಲ್ಲಿ ಗಲಭೆಗಳನ್ನು ಪ್ರಚೋದಿಸಲು ಪ್ರಯತ್ನಿಸಿದರು' ಎಂದು ಅವರು ಆರೋಪಿಸಿದರು.

'ಕಾಂಗ್ರೆಸ್ ಪಕ್ಷವು ಮಿತ್ರಪಕ್ಷಗಳ ಬೆಂಬಲದಿಂದ 99 ಸ್ಥಾನಗಳನ್ನು ಗೆದ್ದಿದೆ. ಅವರು ಸೋಲನ್ನು ಒಪ್ಪಿಕೊಳ್ಳುವ ಬದಲು ದುರಹಂಕಾರದಿಂದ ವರ್ತಿಸುತ್ತಿದ್ದಾರೆ. ಅವರು ನಮ್ಮನ್ನು ಸೋಲಿಸಿದರು ಎಂಬ ಕಥನಗಳನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆ. ನಕಲಿ ವಿಜಯೋತ್ಸವ ಬೇಡ' ಎಂದು ಕಿವಿಮಾತು ಹೇಳಿದ ಅವರು, 'ಕಾಂಗ್ರೆಸ್ ಪಕ್ಷವು 2014ರ ನಂತರ ಪರಾವಲಂಬಿ ಪಕ್ಷವಾಗಿದೆ ಮತ್ತು ಅದರ ಮಿತ್ರಪಕ್ಷಗಳ ಮತಗಳನ್ನು ಅವಲಂಬಿಸಿದೆ' ಎಂದು ವ್ಯಂಗ್ಯವಾಡಿದರು.

'ಲೋಕಸಭೆ ಚುನಾವಣೆ ಜತೆಗೆ ನಾಲ್ಕು ರಾಜ್ಯಗಳ ಚುನಾವಣೆಗಳು ನಡೆದಿವೆ. ನಾಲ್ಕು ರಾಜ್ಯಗಳಲ್ಲಿ ಎನ್‌ಡಿಎ ಅಭೂತಪೂರ್ವ ಯಶಸ್ಸು ಕಂಡಿದೆ. ಮಹಾಪ್ರಭು ಜಗನ್ನಾಥನ ನಾಡು ಒಡಿಶಾ ನಮಗೆ ಆಶೀರ್ವಾದ ಮಾಡಿದೆ. ಆಂಧ್ರಪ್ರದೇಶದಲ್ಲಿ ಎನ್‌ಡಿಎ ಕ್ಲೀನ್ ಸ್ವೀಪ್ ಆಗಿದೆ. ಅರುಣಾಚಲ ಪ್ರದೇಶ ಮತ್ತು ಸಿಕ್ಕಿಂನಲ್ಲಿ ಗೆದ್ದಿದ್ದೇವೆ. ಕೇರಳದಲ್ಲಿ ಖಾತೆ ತೆರೆದಿದ್ದೇವೆ. ತಮಿಳುನಾಡು ಹಾಗೂ ಪಂಜಾಬ್‌ನಲ್ಲಿ ಮತ ಪ್ರಮಾಣ ಹಿಗ್ಗಿಸಿಕೊಂಡು ಉತ್ತಮ ಸಾಧನೆ ಮಾಡಿದ್ದೇವೆ' ಎಂದು ಅವರು ಹೇಳಿದರು.

ಮೂರನೇ ಅವಧಿಗೆ ಎನ್‌ಡಿಎ ಅಧಿಕಾರದ ಚುಕ್ಕಾಣಿ ಹಿಡಿದಿರುವುದು ಐತಿಹಾಸಿಕ ಸಾಧನೆ. ಸ್ವಾತಂತ್ರ್ಯದ ನಂತರ, ಇದು ಎರಡನೇ ಬಾರಿಗೆ ಹಾಗೂ 60 ವರ್ಷಗಳ ನಂತರ ಸಂಭವಿಸಿದೆ. ಜನರ ಆಶೀರ್ವಾದದಿಂದ ಈ ಸಾಧನೆ ಆಗಿದೆ. ಸ್ಥಿರತೆಗಾಗಿ ನಮಗೆ ಜನಾದೇಶ ಸಿಕ್ಕಿದೆ' ಎಂದು ಅವರು ಬಣ್ಣಿಸಿದರು.

ಪ್ರಧಾನಿ ಮೋದಿ ಹೇಳಿದ್ದೇನು?

- ಭ್ರಷ್ಟಾಚಾರ ಪ್ರಕರಣದಲ್ಲಿ ರಾಹುಲ್ ಗಾಂಧಿ ಜಾಮೀನಿನ ಮೇಲೆ ಹೊರಗಿದ್ದಾರೆ. ಒಬಿಸಿ ಸಮುದಾಯವನ್ನು ಅವಮಾನಿಸಿದ ಆರೋಪದಲ್ಲಿ ಅವರು ದೋಷಿಯಾಗಿದ್ದಾರೆ. ಹಲವಾರು ಮಾನನಷ್ಟ ಮೊಕದ್ದಮೆಗಳನ್ನು ಎದುರಿಸುತ್ತಿದ್ದಾರೆ. ಮಹಾನ್ ಸ್ವಾತಂತ್ರ್ಯ ಹೋರಾಟಗಾರ ಸಾವರ್ಕರ್ ಅವರನ್ನು ಅವಮಾನಿಸಿದ್ದಾರೆ.
- ನಮ್ಮ ವೈಯಕ್ತಿಕ ರಾಜಕೀಯ ಹಿತಾಸಕ್ತಿಗಳಿಗಾಗಿ ದೇವರ ಚಿತ್ರಗಳನ್ನು ಬಳಸುವುದು ಸರಿಯಲ್ಲ.
- ಪ್ರತಿಪಕ್ಷ ಸ್ಥಾನದಲ್ಲಿ ಕುಳಿತುಕೊಳ್ಳಲು ಕಾಂಗ್ರೆಸ್‌ಗೆ ಜನರು ಈ ಸಲ ಜನಾದೇಶ ನೀಡಿದ್ದಾರೆ. ಸತತ ಮೂರನೇ ಬಾರಿ 100ರ ಗಡಿ ದಾಟಲು ಕಾಂಗ್ರೆಸ್‌ಗೆ ಸಾಧ್ಯವಾಗಲಿಲ್ಲ. ಸತತ ಮೂರು ಬಾರಿ 100 ಸ್ಥಾನಗಳನ್ನು ದಾಟಲು ಸಾಧ್ಯವಾಗದೇ ಇರುವುದು ಕಾಂಗ್ರೆಸ್ ಇತಿಹಾಸದಲ್ಲಿ ಇದೇ ಮೊದಲು.
- ಅನೇಕ ರಾಜ್ಯಗಳಲ್ಲಿ ಕಾಂಗ್ರೆಸ್ ಕಿರಿಯ ಪಾಲುದಾರ ಪಕ್ಷವಾಗಿದೆ. ಮಿತ್ರಪಕ್ಷಗಳ ಊರುಗೋಲಿನಿಂದ ಕಾಂಗ್ರೆಸ್‌ಗೆ 99 ಸ್ಥಾನಗಳನ್ನು ಗೆದ್ದಿದೆ. 13 ರಾಜ್ಯಗಳಲ್ಲಿ ಕೈ ಪಾಳಯಕ್ಕೆ ಖಾತೆಯನ್ನೇ ತೆರೆಯಲು ಸಾಧ್ಯವಾಗಲಿಲ್ಲ. ದೊಡ್ಡ ರಾಜ್ಯಗಳಾದ ಮಧ್ಯಪ್ರದೇಶ, ಗುಜರಾತ್ ಹಾಗೂ ಛತ್ತೀಸಗಢದಲ್ಲಿ ಪಕ್ಷ ಗೆದ್ದಿರುವುದು 2 ಸೀಟುಗಳಷ್ಟೇ. ಅಂತಹವರು ಹೀರೋ ಆಗಲು ಸಾಧ್ಯವೇ?
- 25 ಕೋಟಿಗೂ ಹೆಚ್ಚು ಜನರನ್ನು ಬಡತನದಿಂದ ಮೇಲೆತ್ತುವ ನಮ್ಮ ದೊಡ್ಡ ಅಭಿಯಾನವು ಚುನಾವಣೆಯ ಸಮಯದಲ್ಲಿ ನಮಗೆ ಆಶೀರ್ವಾದ ನೀಡಿತು.
- ವಿಶ್ವದ ಅತಿದೊಡ್ಡ ಚುನಾವಣೆಯಲ್ಲಿ ಜನರು ನಮ್ಮನ್ನು ಆಯ್ಕೆ ಮಾಡಿದ್ದಾರೆ. ನಿರಂತರವಾಗಿ ಸುಳ್ಳುಗಳನ್ನು ಹರಡಿ ಕೆಟ್ಟದಾಗಿ ಸೋತವರ ನೋವನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ.
- ಭ್ರಷ್ಟಾಚಾರದ ವಿರುದ್ಧ ನಮ್ಮ ಶೂನ್ಯ ಸಹಿಷ್ಣುತೆಗೆ ಜನರ ಬೆಂಬಲ ಸಿಕ್ಕಿದೆ.
- 2014ರಲ್ಲಿ ದೇಶವು ಹತಾಶೆಯ ಸ್ಥಿತಿಯಲ್ಲಿತ್ತು. ಜನರು ನಮ್ಮನ್ನು ಆಯ್ಕೆ ಮಾಡಿದರು ಮತ್ತು ಪರಿವರ್ತನೆಯ ಯುಗ ಪ್ರಾರಂಭವಾಯಿತು.
- ವಿಕಸಿತ ಭಾರತಕ್ಕಾಗಿ ನಮ್ಮ ಸಂಕಲ್ಪ ಈಡೇರಿಸಲು ನಾವು ದಣಿವರಿಯದ, ಪ್ರಾಮಾಣಿಕ, ಬದ್ಧ ಪ್ರಯತ್ನಗಳನ್ನು ಮಾಡುತ್ತೇವೆ.
- ನಮ್ಮ ಮೂರನೇ ಅವಧಿಯಲ್ಲಿ, ನಾವು ಮೂರು ಪಟ್ಟು ವೇಗದಲ್ಲಿ ಕೆಲಸ ಮಾಡುತ್ತೇವೆ. ನಮ್ಮ ಮೂರನೇ ಅವಧಿಯಲ್ಲಿ ನಾವು ಮೂರು ಪಟ್ಟು ಫಲಿತಾಂಶವನ್ನು ಖಚಿತಪಡಿಸುತ್ತೇವೆ.

ಪೀಠದ ಎದುರು ವಿಪಕ್ಷ ಧರಣಿ

ಪ್ರಧಾನಿ ಉತ್ತರಕ್ಕೆ ಮೊದಲು ಮಣಿಪುರದ ಬಗ್ಗೆ ಮಾತನಾಡಲು ಅಲ್ಲಿನ ಸಂಸದರಿಗೆ ಅವಕಾಶ ನೀಡಬೇಕು ಎಂದು ಲೋಕಸಭಾಧ್ಯಕ್ಷ ಓಂಬಿರ್ಲಾ ಅವರನ್ನು ವಿಪಕ್ಷಗಳ ಸದಸ್ಯರು ಕೋರಿದರು. ಈಶಾನ್ಯ ರಾಜ್ಯದ ಸದಸ್ಯರು ಸೋಮವಾರವೇ ಸದನದಲ್ಲಿ ಮಾತನಾಡಿದ್ದಾರೆ ಎಂದು ಸಭಾಧ್ಯಕ್ಷರು ಸ್ಪಷ್ಟಪಡಿಸಿದರು. ಇದನ್ನು ಖಂಡಿಸಿ ವಿಪಕ್ಷ ಸದಸ್ಯರು ಸಭಾಧ್ಯಕ್ಷರ ಪೀಠದ ಎದುರು ಧರಣಿ ಆರಂಭಿಸಿ ಘೋಷಣೆಗಳನ್ನು ಕೂಗಿದರು. ಪ್ರಧಾನಿ ಭಾಷಣ ಮುಗಿಸುವ ತನಕವೂ ಧರಣಿ ಮುಂದುವರಿಸಿದರು. ಲೋಕಸಭಾಧ್ಯಕ್ಷರು ಸದಸ್ಯರಿಗೆ ಎಚ್ಚರಿಕೆ ನೀಡಿದರು.

ಭಾಷಣದ ಭಾಗ ತೆಗೆದಿದ್ದಕ್ಕೆ ಆಕ್ಷೇಪ

ಪ್ರಜಾವಾಣಿ ವಾರ್ತೆ



ಮೋದಿ ಅವರ ಜಗತ್ತಿನಲ್ಲಿ ಸತ್ಯವನ್ನು ತೆಗೆದುಹಾಕಬಹುದು. ಆದರೆ ವಾಸ್ತವದಲ್ಲಿ ಸತ್ಯವನ್ನು ಅಳಿಸಿಹಾಕಲು ಸಾಧ್ಯವಿಲ್ಲ, ನಾನು ಹೇಳಬೇಕಾದ್ದನ್ನು ಹೇಳಿದ್ದು, ಅವೆಲ್ಲವೂ ಸತ್ಯವೇ ಆಗಿದೆ

ರಾಹುಲ್ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ

ನವದೆಹಲಿ: ಲೋಕಸಭೆಯಲ್ಲಿ ತಾವು ಮಾಡಿದ ಭಾಷಣದ ಕೆಲವು ಭಾಗಗಳನ್ನು ತೆಗೆದುಹಾಕಿರುವ ಕ್ರಮಕ್ಕೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, 'ತೆಗೆದುಹಾಕಿರುವ ಭಾಗಗಳನ್ನು ಮತ್ತೆ ಸೇರಿಸಬೇಕು' ಎಂದು ಸ್ಪೀಕರ್‌ಗೆ ಪತ್ರ ಬರೆದಿದ್ದಾರೆ.

ರಾಹುಲ್ ಅವರು ವಿರೋಧ ಪಕ್ಷದ ನಾಯಕರಾಗಿ ಲೋಕಸಭೆಯಲ್ಲಿ ಸೋಮವಾರ ತಮ್ಮ ಚೊಚ್ಚಲ ಭಾಷಣ ಮಾಡಿದ್ದರು. ಈ ವೇಳೆ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದ ಅವರು, 'ಆಡಳಿತ ಪಕ್ಷದ ನಾಯಕರು ಜನರಲ್ಲಿ ಕೋಮು ಭಾವನೆ ಕೆರಳಿಸಿ, ಸಮಾಜದಲ್ಲಿ ಒಡಕು ಉಂಟುಮಾಡುತ್ತಿದ್ದಾರೆ' ಎಂದು ಆರೋಪಿಸಿದ್ದರು.

ರಾಷ್ಟ್ರಪತಿಗಳ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ರಾಹುಲ್ ಮಾಡಿದ ಭಾಷಣದ ಕೆಲವು ಭಾಗಗಳನ್ನು ಆ ಬಳಿಕ ದಾಖಲೆಯಿಂದ ತೆಗೆದುಹಾಕಲಾಗಿದೆ. ಹಿಂದುತ್ವ ಮತ್ತು ಬಿಜೆಪಿ ಕುರಿತು ನೀಡಿದ ಹೇಳಿಕೆಗಳು, ಕೆಲವು ಉದ್ಯಮಿಗಳ ಬಗ್ಗೆ ಆಡಿದ ಮಾತುಗಳು, ಅಗ್ನಿಪಥ ಯೋಜನೆ ಮತ್ತು ಕೋಟಾದಲ್ಲಿರುವ ಸ್ಪರ್ಧಾತ್ಮಕ ಪರೀಕ್ಷೆಗಳ ಕೋಚಿಂಗ್ ಸೆಂಟರ್‌ಗಳ ಕುರಿತ ಮಾತುಗಳನ್ನು ಕಡತದಿಂದ ತೆಗೆದುಹಾಕಲಾಗಿದೆ.

'ಸದನದಲ್ಲಿ ಆಡಿದ ಮಾತುಗಳನ್ನು ಕಡತದಿಂದ ತೆಗೆದುಹಾಕುವ ಅಧಿಕಾರ ಸ್ಪೀಕರ್‌ಗೆ ಮಾತ್ರ ಇರುವಂತಹದ್ದು. ಅಂತಹ ಮಾತುಗಳ ಸ್ವರೂಪವನ್ನು ಲೋಕಸಭೆಯ ನಡಾವಳಿಗೆ ಸಂಬಂಧಿಸಿದ ನಿಯಮ 380ರಲ್ಲಿ ಸ್ಪಷ್ಟಪಡಿಸಲಾಗಿದೆ. ಆದರೆ ನನ್ನ ಭಾಷಣದ ಪ್ರಮುಖ ಭಾಗಗಳನ್ನು ತೆಗೆದುಹಾಕಿರುವುದು ತಿಳಿದು ಅಚ್ಚರಿ ಉಂಟಾಯಿತು' ಎಂದು ಸ್ಪೀಕರ್ ಓಂ ಬಿರ್ಲಾ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

'ತೆಗೆದುಹಾಕಲಾದ ಭಾಗಗಳು ನಿಯಮ 380ರ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂಬುದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ನೆಲದ ವಾಸ್ತವತೆಯನ್ನು ನಾನು ಸದನದ ಮೂಲಕ ಜನರಿಗೆ ತಿಳಿಸಲು ಬಯಸಿದ್ದೆ' ಎಂದಿದ್ದಾರೆ.

'ಸಂವಿಧಾನದ 105(1)ನೇ ವಿಧಿಯಲ್ಲಿ ಪ್ರತಿಪಾದಿಸಿರುವಂತೆ ಜನರ ಧ್ವನಿಯನ್ನು ವ್ಯಕ್ತಪಡಿಸುವುದು ಸದನದ ಪ್ರತಿಯೊಬ್ಬ ಸದಸ್ಯನ ವಾಕ್ ಸ್ವಾತಂತ್ರ್ಯ ಆಗಿದೆ. ಈ ಸ್ವಾತಂತ್ರ್ಯವನ್ನು ಎಲ್ಲಾ ಜನಪ್ರತಿನಿಧಿಗಳು ಹೊಂದಿದ್ದಾರೆ. ಜನರ ಸಮಸ್ಯೆಗಳನ್ನು ಸದನದ ಮುಂದಿಡುವುದು ಪ್ರತಿಯೊಬ್ಬ ಸದಸ್ಯರ ಹಕ್ಕು. ಆ ಹಕ್ಕನ್ನು ನಾನು ಚಲಾಯಿಸಿದ್ದೇನೆ. ನನ್ನ ಹೇಳಿಕೆಗಳನ್ನು ತೆಗೆದುಹಾಕಿರುವುದು ಸಂಸದೀಯ ಪ್ರಜಾಪ್ರಭುತ್ವದ ತತ್ವಗಳಿಗೆ ವಿರುದ್ಧವಾಗಿದೆ' ಎಂದು ಹೇಳಿದ್ದಾರೆ.

'ಈ ಸಂದರ್ಭದಲ್ಲಿ ನಾನು ಬಿಜೆಪಿ ಸಂಸದ ಅನುರಾಗ್ ಠಾಕೂರ್ ಅವರ ಭಾಷಣದ ಬಗ್ಗೆ ಉಲ್ಲೇಖ ಮಾಡಲು ಬಯಸುತ್ತೇನೆ. ಅನುರಾಗ್ ಅವರ ಭಾಷಣ ಕೇವಲ ಆರೋಪಗಳಿಂದ ತುಂಬಿತ್ತು. ಆದರೆ ಅವರ ಭಾಷಣದ ಕೇವಲ ಒಂದು ಪದವನ್ನು ಮಾತ್ರ ತೆಗೆದುಹಾಕಲಾಗಿದೆ. ಆಯ್ದ ಕೆಲವರ ಮಾತುಗಳನ್ನು ಮಾತ್ರ ಕಡತದಿಂದ ತೆಗೆದುಹಾಕುವ ಕ್ರಮವನ್ನು ಒಪ್ಪಲಾಗದು' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ–ಧನಕರ್ ವಾಕ್ಸಮರ

ಒಂದನೇ ಪುಟದಿಂದ...

'ದೃಢೀಕರಿಸದ ಸಂಗತಿಗಳನ್ನು ಭಾಷಣದಲ್ಲಿ ಹೇಳಬೇಡಿ' ಎಂದು ತಿವಾರಿ ಅವರಿಗೆ ಧನಕರ್ ಕೇಳಿದಾಗ ವಾಗ್ವಾದ ಪ್ರಾರಂಭವಾಯಿತು. ಈ ವೇಳೆ ಮಧ್ಯಪ್ರವೇಶಿಸಿದ ಜೈರಾಮ್ ರಮೇಶ್, ತಿವಾರಿ ಅವರು ತಾವಾಡಿದ ಮಾತುಗಳನ್ನು ದೃಢೀಕರಿಸುತ್ತಾರೆ ಎಂದರು.

ಅದಕ್ಕೆ ಪ್ರತಿಕ್ರಿಯಿಸಿದ ಧನಕರ್, 'ತುಂಬಾ ಬುದ್ಧಿವಂತ ಮತ್ತು ಪ್ರತಿಭಾವಂತರಾಗಿರುವ ನೀವು ಖರ್ಗೆ ಅವರ ಸ್ಥಾನವನ್ನು ತುಂಬಬೇಕು ಎಂದು ನಾನು ಭಾವಿಸುತ್ತೇನೆ. ತಕ್ಷಣವೇ ಖರ್ಗೆ ಅವರ ಸ್ಥಾನದಲ್ಲಿ ಕುಳಿತುಕೊಳ್ಳಬೇಕು. ಅವರು ಮಾಡಬೇಕಿರುವ ಕೆಲಸವನ್ನು ನೀವು ಮಾಡುತ್ತಿದ್ದೀರಿ' ಎಂದು ಚುಚ್ಚುವಂತೆ ಹೇಳಿದರು.

'ನೀವು ವರ್ಣ (ಜಾತಿ) ವ್ಯವಸ್ಥೆಯನ್ನು ಇಲ್ಲಿ ತರಬೇಡಿ. ಜಾತಿ ವ್ಯವಸ್ಥೆ ಇನ್ನೂ ನಿಮ್ಮ ಮನಸ್ಸಿನಲ್ಲಿದೆ. ಅದಕ್ಕೆ ರಮೇಶ್ ತುಂಬಾ ಬುದ್ಧಿವಂತ ಎಂದು ಹೇಳುತ್ತಿದ್ದೀರಿ. ನಾನು ಚುರುಕಿಲ್ಲದ ಕಾರಣ ನನ್ನನ್ನು ಬದಲಾಯಿಸಬೇಕು ಎನ್ನುತ್ತಿದ್ದೀರಿ' ಎಂದು ದಲಿತ ಸಮುದಾಯಕ್ಕೆ ಸೇರಿದ ಖರ್ಗೆ ತಕ್ಷಣ ತಿರುಗೇಟು ನೀಡಿದರು.

'ನಾನು ಹೇಳಿದ್ದು ಖರ್ಗೆ ಅವರಿಗೆ ಅರ್ಥವಾಗಿಲ್ಲ' ಎಂದು ಪ್ರತಿಕ್ರಿಯಿಸಿದ ಧನಕರ್, 'ನಾನು ಹೇಳಿದ್ದು ಏನು? ಮೊದಲ ಸಾಲಿನಲ್ಲಿ ಕುಳಿತಿರುವ ನಿಮಗೆ 56 ವರ್ಷಗಳ ರಾಜಕೀಯ ಅನುಭವ ಇದೆ. ಆದರೆ ಎಲ್ಲಾ ಸಂದರ್ಭಗಳಲ್ಲಿ ಜೈರಾಮ್ ರಮೇಶ್ ಅವರು ಹೇಳಿಕೆಗಳನ್ನು ಕೊಡುತ್ತಾರೆ. ಈ ಸಮಸ್ಯೆಯನ್ನು ನೀವು ಬಗೆಹರಿಸಬೇಕಿದೆ. ನೀವು ವಿಷಯವನ್ನು ತಿರುಚಬೇಡಿ' ಎಂದು ಹೇಳಿದರು.

ಲೋಕಸಭೆ: ಎನ್‌ಡಿಎ ಸರ್ಕಾರದ ವಿರುದ್ಧ ಹರಿಹಾಯ್ದ ವಿಪಕ್ಷಗಳು

'ಕೇಂದ್ರಕ್ಕೆ ಜೆಡಿಯು, ಟಿಡಿಪಿಯೇ ಊರುಗೋಲು'

ನವದೆಹಲಿ(ಪಿಟಿಐ): ಲೋಕಸಭಾ ಚುನಾವಣೆ ವೇಳೆ ಬಿಜೆಪಿ ನಾಯಕರು ಪ್ರದರ್ಶಿಸಿದ 'ದುರಹಂಕಾರ' ಮತ್ತು 'ಪ್ರತೀಕಾರ ಮನೋಭಾವ' ಪ್ರಧಾನಿ ನರೇಂದ್ರ ಮೋದಿ ಅವರ ಜನಪ್ರಿಯತೆ ಮಂಕಾಗುವಂತೆ ಮಾಡಿತು. ಈಗ ಅವರು ಸ್ಥಿರ ಸರ್ಕಾರಕ್ಕಾಗಿ ಮಿತ್ರಪಕ್ಷಗಳನ್ನು ಅವಲಂಬಿಸಬೇಕಾಗಿದೆ ಎಂದು ವಿರೋಧ ಪಕ್ಷಗಳು ಸಂಸತ್‌ನಲ್ಲಿ ಮಂಗಳವಾರ ಹೇಳಿವೆ.

ರಾಷ್ಟ್ರಪತಿಗಳ ಭಾಷಣದ ವಂದನಾ ನಿರ್ಣಯದ ಮೇಲೆ ಲೋಕಸಭೆಯಲ್ಲಿ ನಡೆದ ಚರ್ಚೆ ವೇಳೆ ವಿರೋಧ ಪಕ್ಷಗಳ ನಾಯಕರು ಆಡಳಿತಾರೂಢ ಬಿಜೆಪಿಯನ್ನು ಕುಟುಕಿದರು.

ಟಿಎಂಸಿ ಸದಸ್ಯ ಕಲ್ಯಾಣ ಬ್ಯಾನರ್ಜಿ, 'ಈ ಬಾರಿಯ ಲೋಕಸಭಾ ಚುನಾವಣೆ ದೇಶದಲ್ಲಿ ಬದಲಾವಣೆ ತಂದಿದೆ. ದೇಶದಲ್ಲಿ ಈಗ ಅಸ್ಥಿರ ಸರ್ಕಾರ ಮತ್ತು ಪ್ರಬಲ ವಿರೋಧ ಪಕ್ಷ ಇದೆ' ಎಂದರು.



ಲೋಕಸಭೆಯಲ್ಲಿ ಮಂಗಳವಾರ ಟಿಎಂಸಿ ಸಂಸದ ಕಲ್ಯಾಣ ಬ್ಯಾನರ್ಜಿ ಮಾತನಾಡಿದರು —ಪಿಟಿಐ ಚಿತ್ರ

'ಟಿಡಿಪಿಯ ಚಂದ್ರಬಾಬು ನಾಯ್ಡು ಹಾಗೂ ಜೆಡಿಯುನ ನಿತೀಶ್ ಕುಮಾರ್ ಎಂಬ ಎರಡು ಊರುಗೋಲುಗಳ ನೆರವಿನಿಂದ ಪ್ರಧಾನಿ ನರೇಂದ್ರ ಮೋದಿ ಈಗ ಸರ್ಕಾರ ನಡೆಸುತ್ತಿದ್ದಾರೆ' ಎಂದೂ ಬ್ಯಾನರ್ಜಿ ಹೇಳಿದರು.

'ಕಳೆದ 10 ವರ್ಷಗಳ ಅವಧಿಯಲ್ಲಿ ವಿರೋಧ ಪಕ್ಷಗಳ ನಾಯಕರು ಅಥವಾ ಬಿಜೆಪಿಯೇತರ ಸರ್ಕಾರವಿರುವ ರಾಜ್ಯಗಳ ಮುಖ್ಯಮಂತ್ರಿಗಳ ಕುರಿತು ಪ್ರಧಾನಿ ಮೃದು ಭಾಷೆ ಇಲ್ಲವೇ ಉತ್ತಮ ಪದಗಳನ್ನು ಬಳಸಿದ್ದನ್ನು ಕೇಳಿಲ್ಲ. ಪಶ್ಚಿಮ ಬಂಗಾಳದಲ್ಲಿ ನೀವು ನಮ್ಮ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ದ್ವೇಷಿಸುತ್ತೀರಿ. ತಮಿಳುನಾಡಿನಲ್ಲಿ ಎಂ.ಕೆ.ಸ್ಟಾಲಿನ್, ಜಾರ್ಖಂಡ್‌ನಲ್ಲಿ ಹೇಮಂತ ಸೋರೇನ್ ಹಾಗೂ ದೆಹಲಿಯಲ್ಲಿ ಅರವಿಂದ ಕೇಜ್ರಿವಾಲ್, ಮಹಾರಾಷ್ಟ್ರದಲ್ಲಿ ಉದ್ಧವ್ ಠಾಕ್ರೆ, ಉತ್ತರ ಪ್ರದೇಶದಲ್ಲಿ ಅಖಿಲೇಶ್ ಯಾದವ್ ಹಾಗೂ ಕರ್ನಾಟಕದಲ್ಲಿ ಸಿದ್ದರಾಮಯ್ಯ ಅವರನ್ನು ದ್ವೇಷಿಸುತ್ತೀರಿ' ಎಂದು ಟೀಕಿಸಿದರು.

'ನೀವು ದುರಹಂಕಾರಿಯಾಗಿದ್ದರೆ ನಾವೇನೂ ತಲೆಕೆಡಿಸಿಕೊಳ್ಳುವುದಿಲ್ಲ. ಈಗ ನಿಮ್ಮ ಬಗ್ಗೆ ನೀವೇ ಮರುಚಿಂತನೆ ಮಾಡಬೇಕಾದ ಸಮಯ ಬಂದಿದೆ. ಈ ದುರಹಂಕಾರ, ದ್ವೇಷ ಹಾಗೂ ಹಗೆತನಗಳೇ ನರೇಂದ್ರ ಮೋದಿ ಅವರ ಜನಪ್ರಿಯತೆಯನ್ನು ಕುಗ್ಗಿಸಿವೆ' ಎಂದೂ ಹೇಳಿದರು.

ಕಾಂಗ್ರೆಸ್ ಸದಸ್ಯ ಕೆ.ಸಿ. ವೇಣುಗೋಪಾಲ್ ಮಾತನಾಡಿ,'ಬಿಜೆಪಿ ನಾಯಕರು ಹಿಂದುತ್ವದಲ್ಲಿ ನಂಬಿಕೆ ಹೊಂದಿಲ್ಲ. ಆದರೆ, ಚುನಾವಣೆಯಲ್ಲಿ ಗೆಲ್ಲುವುದಕ್ಕಾಗಿ ಮತದಾರರ ಧ್ರುವೀಕರಣಕ್ಕಾಗಿ ಮಾತ್ರ ಧರ್ಮವನ್ನು ಬಳಸಿಕೊಂಡರು' ಎಂದು ವಾಗ್ದಾಳಿ ನಡೆಸಿದರು.

> ಬಿಜೆಪಿಯು ಪ್ರಧಾನಿ ನರೇಂದ್ರ ಮೋದಿ ಅವರನ್ನು ದೇವರಿಗಿಂತ ದೊಡ್ಡವರು ಎಂಬಂತೆ ಬಿಂಬಿಸಿದ್ದೇ ಪ್ರಬಲ ಹಿಂದೂ ವಿರೋಧಿ ಹೇಳಿಕೆ. ಹಿಂದೂ ಧರ್ಮದ ಪ್ರಕಾರ ದೇವರಿಗಿಂತ ದೊಡ್ಡವರು ಯಾರೂ ಇಲ್ಲ. ಇದೇ ಕಾರಣಕ್ಕಾಗಿಯೇ ಚುನಾವಣೆಯಲ್ಲಿ ದೇವರು ನಿಮ್ಮನ್ನು ಶಿಕ್ಷಿಸಿದ್ದಾನೆ
>
> **ಕೆ.ಸಿ.ವೇಣುಗೋಪಾಲ್,** ಕಾಂಗ್ರೆಸ್ ಸಂಸದ

> ನಿಮ್ಮಿಂದ ನಮಗೆ ಏನೂ ಬೇಕಿಲ್ಲ. ನಮಗೆ ಏನು ಬೇಕೋ ಅದನ್ನು ಪಡೆಯುವುದಕ್ಕಾಗಿ ಹೋರಾಡುತ್ತೇವೆ. ಆದರೆ, ವಿರೋಧ ಪಕ್ಷಗಳ ಬಗ್ಗೆ ವಿನಮ್ರರಾಗಿ ಎಂದು ಪ್ರಧಾನಿಗೆ ಹೇಳಲು ಇಚ್ಛಿಸುತ್ತೇವೆ. ವಿಪಕ್ಷಗಳ ಕುರಿತು ಇಷ್ಟೊಂದು ದ್ವೇಷ, ಪ್ರತೀಕಾರ ಭಾವನೆ ಇಟ್ಟುಕೊಂಡು ಅದು ಹೇಗೆ ಅವರು (ಪ್ರಧಾನಿ) ನಿದ್ರಿಸುತ್ತಾರೆ?
>
> **ಕಲ್ಯಾಣ ಬ್ಯಾನರ್ಜಿ,** ಟಿಎಂಸಿ ಸಂಸದ

'ಶೂಟಿಂಗ್ ವೇಳೆ ಸಲ್ಮಾನ್ ಖಾನ್ ಮೇಲೆ ದಾಳಿಗೆ ನಡೆದಿತ್ತು ಸಂಚು'

ಮುಂಬೈ(ಪಿಟಿಐ): 'ಬಾಲಿವುಡ್ ನಟ ಸಲ್ಮಾನ್ ಖಾನ್ ಹತ್ಯೆಗೆ ಸಂಚು ರೂಪಿಸಿದ್ದ ಆರೋಪಿಗಳು ಸಿನಿಮಾ ಶೂಟಿಂಗ್ ವೇಳೆ ದಾಳಿ ನಡೆಸಲು ಯೋಜನೆ ರೂಪಿಸಿದ್ದರು' ಎಂದು ಆರೋಪ ಪಟ್ಟಿ ಉಲ್ಲೇಖಿಸಿ ಪೊಲೀಸ್ ಅಧಿಕಾರಿಯೊಬ್ಬರು ಮಂಗಳವಾರ ಮಾಹಿತಿ ನೀಡಿದ್ದಾರೆ.

'ನಟನ ಮೇಲೆ ದಾಳಿ ನಡೆಸಲು ಜೈಲಿನಲ್ಲಿರುವ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯಿ, ತನ್ನ ಗ್ಯಾಂಗ್ ಸದಸ್ಯರಿಗೆ ₹25 ಲಕ್ಷ ಸುಪಾರಿ (ಒಪ್ಪಂದ) ನೀಡಿದ್ದರು ಎಂದು ಈ ಪ್ರಕರಣದ ತನಿಖೆ ವೇಳೆ ಕಂಡುಬಂದಿದೆ' ಎಂದಿದ್ದಾರೆ.

'ದಾಳಿಗೆ ಪಾಕಿಸ್ತಾನದಿಂದ ತಂದಿದ್ದ ಎ.ಕೆ–47 ಸೇರಿದಂತೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಬಳಸಲು ತಂಡವು ಯೋಜನೆ ಹೊಂದಿತ್ತು' ಎಂದರು.

'ಈ ಪ್ರಕರಣದಲ್ಲಿ ಬಂಧಿತರಾದ ಧನಂಜಯ್ ತಾಪ್ಸಿಂಗ್ ಅಲಿಯಾಸ್ ಅಜಯ್ ಕಶ್ಯಪ್ (28), ಗೌತಮ್ ಭಾಟಿಯಾ(29)ವಾಸ್ಪಿ ಮೆಹಮ್ಮೂದ್ ಖಾನ್ ಅಲಿಯಾಸ್ ಚೈನಾ (36) ರಿಜ್ವಾನ್ ಹುಸೇನ್ ಅಲಿಯಾಸ್ ಜಾವೇದ್ ಖಾನ್ (25) ದೀಪಕ್ ಹವಸಿಂಗ್ ಅಲಿಯಾಸ್ ಜಾನ್(30) ವಿರುದ್ಧ ನವಿ ಮುಂಬೈನ ಪನ್ವೇಲ್ ಟೌನ್ ಪೊಲೀಸರು 350 ಪುಟಗಳ ಆರೋಪ ಪಟ್ಟಿಯನ್ನು ಜೂನ್ 21ರಂದು ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ' ಎಂದು ಅವರು ತಿಳಿಸಿದರು.

'ಜೈಲಿನಲ್ಲಿರುವ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯಿ, ಆತನ ಸಹೋದರ ಅನ್ಮೋಲ್ ಬಿಷ್ಣೋಯಿ, ಸಂಪತ್ ನೆಹ್ರಾ, ಗೋಲ್ಡಿ ಬ್ರಾರ್ ಅನ್ನು ಈ ಪ್ರಕರಣದಲ್ಲಿ ಬೇಕಾದ ಆರೋಪಿಗಳು ಎಂದು ತೋರಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ಸಲ್ಮಾನ್ ಶೂಟಿಂಗ್‌ನಲ್ಲಿ ತೊಡಗಿದ್ದ ವೇಳೆ ಅಥವಾ ಪನ್ವೇಲ್‌ನಲ್ಲಿರುವ ತನ್ನ ಫಾರ್ಮ್‌ಹೌಸ್‌ನಿಂದ ಹೊರಡುವ ವೇಳೆ ದಾಳಿಗೆ ಯೋಜಿಸಿದ್ದರು. ಸಂಚು ರೂಪಿಸಿದ ಮಾಹಿತಿಯನ್ನು ಆರೋಪಪಟ್ಟಿಯಲ್ಲಿ ವಿವರವಾಗಿ ದಾಖಲಿಸಿದ್ದು, ದಾಳಿ ನಡೆಸಿ ಅಲ್ಲಿಂದ ಪರಾರಿಯಾಗಿರುವ ಮಾರ್ಗದ ವಿವರ, ಗುಪ್ತಚರ ಮಾಹಿತಿ, ಆರೋಪಿಗಳ ಫೋನ್ ದಾಖಲೆಗಳು, ವಾಟ್ಸ್‌ಆ್ಯಪ್ ಚಾಟ್ಸ್, ಆಡಿಯೊ, ವಿಡಿಯೊ ಕಾಲ್‌ಗಳ ವಿವರ, ಟವರ್ ಲೋಕೇಷನ್‌ಗಳನ್ನು ದಾಖಲಿಸಲಾಗಿದೆ' ಎಂದರು.

ಬಿಷ್ಣೋಯಿ ಗ್ಯಾಂಗ್ ಸದಸ್ಯರು ನಟ ಸಲ್ಮಾನ್ ಹತ್ಯೆಗೆ ಸಂಚು ರೂಪಿಸಿದ್ದನ್ನು ಕಳೆದ ಏಪ್ರಿಲ್‌ನಲ್ಲಿ ಪನ್ವೇಲ್ ಟೌನ್ ಪೊಲೀಸರು ಬಯಲಿಗೆ ಎಳೆದಿದ್ದರು.



ಸುಭಾಷಿತ

ನಾವು ಯಾವ ರೀತಿ ಬದುಕುವುದಿಲ್ಲವೋ ಆ ರೀತಿ ಬೇರೆಯವರು ಬದುಕಲಿ ಎಂದು ಹೇಳುವ ಅಧಿಕಾರ ನಮಗ್ಯಾರಿಗೂ ಇಲ್ಲ.

-ಕೆ.ಪಿ. ಪೂರ್ಣಚಂದ್ರ ತೇಜಸ್ವಿ

ಕ್ರಿಮಿನಲ್ ಅಪರಾಧಕ್ಕೆ ಹೊಸ ಕಾನೂನು ಐತಿಹಾಸಿಕವೂ ಹೌದು, ಕಳವಳವೂ ಇದೆ

ಕ್ರಿಮಿನಲ್ ಅಪರಾಧಗಳ ವಿರುದ್ಧ ಕ್ರಮ ಜರುಗಿಸಲು ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮವನ್ನು ಅನುಷ್ಠಾನಕ್ಕೆ ತಂದಿರುವುದು ದೇಶದ ನ್ಯಾಯದಾನ ವ್ಯವಸ್ಥೆಯ ಪಾಲಿಗೆ ಐತಿಹಾಸಿಕ. ಈ ಮೂರು ಕಾನೂನುಗಳು ಭಾರತೀಯ ದಂಡ ಸಂಹಿತೆ, ಅಪರಾಧ ದಂಡಪ್ರಕ್ರಿಯಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಕಾಯ್ದೆಯ ಬದಲಿಗೆ ಜಾರಿಗೆ ಬಂದಿವೆ. ಕೆಲವು ದಶಕಗಳಿಂದ ಅಥವಾ ಶತಮಾನದಿಂದ ಜಾರಿಯಲ್ಲಿ ಇದ್ದ ಕೆಲವು ಕಾನೂನುಗಳನ್ನು ಬದಲಾಯಿಸುವ ಅಗತ್ಯ ಇದೆ ಎಂಬ ವಿಚಾರದಲ್ಲಿ ಒಮ್ಮತ ಇತ್ತು. ಆದರೆ, ನಿರ್ದಿಷ್ಟ ಕಾಯ್ದೆಗಳಲ್ಲಿ ಅಗತ್ಯ ಇದ್ದೆಡೆ ತಿದ್ದುಪಡಿ ತಂದಿದ್ದರೆ ಸಾಕಾಗಿತ್ತಾದರೂ ಕೇಂದ್ರ ಸರ್ಕಾರವು ಕಾನೂನುಗಳನ್ನು ಸಂಪೂರ್ಣವಾಗಿ ಬದಲಾಯಿಸಿದೆ ಎಂಬ ಅಭಿಪ್ರಾಯವೊಂದು ಬಲವಾಗಿದೆ. ಹೊಸ ವ್ಯವಸ್ಥೆಯ ಮೇಲೆ ತನ್ನದೊಂದು ಮುದ್ರೆ ಇರಬೇಕು ಎಂಬ ಇಚ್ಛೆಯಿಂದ ಕೇಂದ್ರ ಸರ್ಕಾರವು ಹೀಗೆ ಮಾಡಿರಬಹುದು. ಆದರೆ, ಹೊಸ ಕಾನೂನುಗಳ ಹೆಸರು ಹಿಂದಿಯಲ್ಲಿ ಮಾತ್ರವೇ ಏಕಿದೆ ಎಂಬ ಪ್ರಶ್ನೆಗೆ ಸರ್ಕಾರ ಉತ್ತರ ನೀಡಿಲ್ಲ. ಹೊಸ ಕಾನೂನು ರೂಪಿಸುವ ಮೊದಲು ರಾಜ್ಯ ಸರ್ಕಾರಗಳು ಹಾಗೂ ಇತರ ಭಾಗೀದಾರರ ಜೊತೆಗಿನ ಚರ್ಚೆಗಳು ಪೂರ್ಣ ಪ್ರಮಾಣದಲ್ಲಿ ಆಗಿಲ್ಲ. ಈಗ ಕರ್ನಾಟಕ ಸೇರಿದಂತೆ ಕೆಲವು ರಾಜ್ಯಗಳು ಹೊಸ ಕಾನೂನಿಗೆ ರಾಜ್ಯ ಮಟ್ಟದಲ್ಲಿ ತಿದ್ದುಪಡಿ ತರುವ ಚಿಂತನೆಯಲ್ಲಿವೆ. ಇವೆಲ್ಲಕ್ಕಿಂತ ಹೆಚ್ಚಾಗಿ, ಕೇಂದ್ರ ಸರ್ಕಾರವು ಈ ಕಾನೂನುಗಳ ಬಗ್ಗೆ ಸಂಸತ್ತಿನಲ್ಲಿ ವಿಸ್ತೃತ ಚರ್ಚೆ ನಡೆಸದೆ, ವಿರೋಧ ಪಕ್ಷಗಳ 146 ಸಂಸದರು ಅಮಾನತಾಗಿದ್ದಾಗ, ಧ್ವನಿಮತದ ಮೂಲಕ ಅಂಗೀಕಾರ ಪಡೆದುಕೊಂಡಿತು.



ಹೊಸ ಕಾನೂನುಗಳು ಕೆಲವು ಪ್ರಕ್ರಿಯೆಗಳನ್ನು ಸರಳಗೊಳಿಸಿವೆ. ಆದರೆ, ಪೊಲೀಸರಿಗೆ ಹೆಚ್ಚಿನ ಅಧಿಕಾರ ನೀಡಿವೆ ಎಂಬ ಕಳವಳ ಕೂಡ ಇದೆ

ಈ ಕಾನೂನುಗಳಲ್ಲಿ ಒಂದಿಷ್ಟು ಒಳ್ಳೆಯ ಅಂಶಗಳೂ ಇವೆ. ಹೊಸ ಕಾನೂನುಗಳು ಕೆಲವು ಪ್ರಕ್ರಿಯೆಗಳನ್ನು ಸರಳಗೊಳಿಸಿವೆ, ನ್ಯಾಯದಾನವು ತ್ವರಿತವಾಗಿ ಹಾಗೂ ಹೆಚ್ಚು ದಕ್ಷವಾಗಿ ಆಗುತ್ತದೆ ಎಂಬ ಭರವಸೆಯನ್ನು ನೀಡಿವೆ. ಅಪರಾಧ ನಡೆದಿರುವ ಬಗ್ಗೆ ಎಲೆಕ್ಟ್ರಾನಿಕ್ ಸಂವಹನ ಮಾಧ್ಯಮದ ಮೂಲಕವೂ ಮಾಹಿತಿ ನೀಡಬಹುದು. ವ್ಯಕ್ತಿಗಳು ಈಗ ಯಾವುದೇ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಬಹುದು. ಗಂಭೀರ ಸ್ವರೂಪದ ಅಪರಾಧ ಪ್ರಕರಣಗಳಲ್ಲಿ ವಿಧಿವಿಜ್ಞಾನ ಪರೀಕ್ಷೆಯನ್ನು ಕಡ್ಡಾಯಗೊಳಿಸಲಾಗಿದೆ. ದೋಷಾರೋಪ ನಿಗದಿಗೆ, ವಿಚಾರಣೆ ಮುಂದೂಡುವುದಕ್ಕೆ ಹಾಗೂ ಆದೇಶ ನೀಡುವುದಕ್ಕೆ ಕಾಲಮಿತಿ ನಿಗದಿ ಮಾಡಲಾಗಿದೆ. ಇವೆಲ್ಲವೂ ಸಂತ್ರಸ್ತರ ಹಿತವನ್ನು ಗಮನದಲ್ಲಿ ಇರಿಸಿಕೊಂಡು ರೂಪಿಸಿರುವ ಕ್ರಮಗಳು ಎಂದು ಕೇಂದ್ರ ಸರ್ಕಾರ ಹೇಳಿಕೊಂಡಿದೆ. ಆದರೆ ಹೊಸ ಕಾನೂನುಗಳು ಪೊಲೀಸರಿಗೆ ಹೆಚ್ಚಿನ ಅಧಿಕಾರ ನೀಡಿವೆ ಎಂಬ ಕಳವಳ ಕೂಡ ವ್ಯಕ್ತವಾಗಿದೆ. ಹೊಸ ಕಾನೂನುಗಳ ಅಡಿಯಲ್ಲಿ ಪೊಲೀಸರು, ಶಂಕಿತ ವ್ಯಕ್ತಿಯೊಬ್ಬನನ್ನು ಈ ಹಿಂದಿಗಿಂತ ಹೆಚ್ಚಿನ ಅವಧಿಗೆ ತಮ್ಮ ವಶದಲ್ಲಿ ಇರಿಸಿಕೊಳ್ಳಲು ಅವಕಾಶ ಇದೆ. ಹೊಸ ಸ್ವರೂಪದ ಅಪರಾಧಗಳನ್ನು ಗುರುತಿಸುವ ಕೆಲಸ ಆಗಿದೆ. ಹಲವು ಬಗೆಯ ಅಪರಾಧಗಳಿಗೆ ಜೈಲುವಾಸ ಹಾಗೂ ದಂಡದ ರೂಪದಲ್ಲಿ ಶಿಕ್ಷೆಯನ್ನು ಹೆಚ್ಚು ಮಾಡಲಾಗಿದೆ. 'ದೇಶದ್ರೋಹ'ಕ್ಕೆ ಸಂಬಂಧಿಸಿದ ಎಲ್ಲ ಪ್ರಕರಣಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಅಮಾನತಿನಲ್ಲಿ ಇರಿಸಿದ್ದರೂ ಈ ಆರೋಪವನ್ನು ಕಾನೂನಿನ ವ್ಯಾಖ್ಯಾನದಿಂದ ಹೊರಹಾಕಲಾಗಿದೆ ಎಂದು ಸರ್ಕಾರ ಹೇಳಿದ್ದರೂ ಅದನ್ನು ಹೊಸ ರೂಪದಲ್ಲಿ ಮತ್ತೆ ಕಾನೂನಿನಲ್ಲಿ ಸೇರಿಸಲಾಗಿದೆ. ನಾಗರಿಕರ ಹಕ್ಕುಗಳನ್ನು ಇನ್ನಷ್ಟು ಹೆಚ್ಚಿನ ಪರಿಣಾಮದೊಂದಿಗೆ ಹತ್ತಿಕ್ಕಲು ಹೊಸ ಕಾನೂನುಗಳನ್ನು ಬಳಕೆ ಮಾಡಬಹುದು ಎಂಬ ಆತಂಕ ಕೂಡ ವ್ಯಕ್ತವಾಗಿದೆ.

ಜೈಲುಶಿಕ್ಷೆಯ ವಿಚಾರದಲ್ಲಿಯೂ ಕೆಲವು ಕಳವಳಗಳು ಇವೆ. ಹೊಸ ಕಾನೂನುಗಳನ್ನು ಅನುಷ್ಠಾನಕ್ಕೆ ತರುವ ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ಅಗತ್ಯ ತರಬೇತಿ ನೀಡುವ ಹಾಗೂ ಅವರನ್ನು ಹೊಸ ವ್ಯವಸ್ಥೆಗೆ ಸಜ್ಜುಗೊಳಿಸುವ ಕೆಲಸಕ್ಕಿಂತಲೂ ಕಾನೂನುಗಳ ಜಾರಿಗೆ ಸರ್ಕಾರವು ಹೆಚ್ಚಿನ ಒತ್ತು ನೀಡಿದೆ. ಪೊಲೀಸ್ ವ್ಯವಸ್ಥೆ ಹಾಗೂ ನ್ಯಾಯಾಂಗ ಸೇರಿದಂತೆ ಈ ಕಾನೂನುಗಳಿಗೆ ಸಂಬಂಧಿಸಿದ ಎಲ್ಲ ಹಂತಗಳಲ್ಲಿಯೂ ಒಂದಿಷ್ಟು ಗೊಂದಲಗಳು ಉಂಟಾಗುವ ಸಾಧ್ಯತೆ ಇದೆ. ಸದ್ಯಕ್ಕೆ ಎರಡು ಕಾನೂನು ವ್ಯವಸ್ಥೆಗಳು ಏಕಕಾಲಕ್ಕೆ ಚಾಲ್ತಿಯಲ್ಲಿ ಇರಲಿವೆ. ಏಕೆಂದರೆ, ಜೂನ್ 30ಕ್ಕೆ ಮೊದಲು ದಾಖಲಾದ ಎಲ್ಲ ಪ್ರಕರಣಗಳ ತನಿಖೆ ಹಾಗೂ ವಿಚಾರಣೆಯನ್ನು ಹಳೆಯ ಕಾನೂನುಗಳ ಅಡಿಯಲ್ಲಿ ನಡೆಸಲಾಗುತ್ತದೆ. ಜೂನ್ 30ರ ನಂತರ ದಾಖಲಾಗುವ ಪ್ರಕರಣಗಳ ತನಿಖೆ ಹಾಗೂ ವಿಚಾರಣೆಯು ಹೊಸ ಕಾನೂನುಗಳ ಅಡಿಯಲ್ಲಿ ನಡೆಯಲಿವೆ. ಮೂರು ಕೋಟಿಗೂ ಹೆಚ್ಚು ಪ್ರಕರಣಗಳು ವಿಚಾರಣೆಯ ಹಂತದಲ್ಲಿ ಬಾಕಿ ಇರುವ ಕಾರಣ, ಇದು ಬಹಳ ಸವಾಲಿನ ಕೆಲಸ ಆಗಲಿದೆ. ನ್ಯಾಯಾಂಗ ಸೇರಿದಂತೆ ಕಾನೂನು ಜಾರಿ ವ್ಯವಸ್ಥೆಯು ಅಗತ್ಯ ಮೂಲಸೌಕರ್ಯದ ಕೊರತೆಯನ್ನು ಎದುರಿಸುತ್ತಿದೆ. ಈಗ ಈ ವ್ಯವಸ್ಥೆಯು ಹೊಸ ಅಗತ್ಯಗಳಿಗೆ ಸ್ಪಂದಿಸಬೇಕಾಗಿದೆ.

ದಿನದ ಟ್ವೀಟ್

ಜಾಮೀನು ಇರುವುದಿಲ್ಲ



ಭಾರತೀಯ ನ್ಯಾಯ ಸಂಹಿತೆ: ಪೊಲೀಸ್ ವಶದಲ್ಲಿ ವ್ಯಕ್ತಿಯನ್ನು 2 ತಿಂಗಳು ಇರಿಸಿಕೊಳ್ಳಬಹುದು ಎಂದಾದರೆ, ಅಷ್ಟು ದಿನ ಜಾಮೀನು ಇರುವುದಿಲ್ಲ ಎಂಬುದೇ ನಿಯಮವಾಗುತ್ತದೆ.

ಕಪಿಲ್ ಸಿಬಲ್, ಸುಪ್ರೀಂ ಕೋರ್ಟ್ ವಕೀಲ

ಕಿಡಿನುಡಿ



ನನಗೊಂದು ಘಟನೆ ನೆನಪಾಗುತ್ತಿದೆ. ಬಾಲಕನೊಬ್ಬ 99 ಅಂಕ ಗಳಿಸಿ, ಅದನ್ನು ಎಲ್ಲರಿಗೂ ತೋರಿಸುತ್ತಿದ್ದ. 99 ಎಂಬುದನ್ನು ಕೇಳಿದ ಜನ ಆತನನ್ನು ಪ್ರೋತ್ಸಾಹಿಸುತ್ತಿದ್ದರು. ಆಗ ಶಿಕ್ಷಕರೊಬ್ಬರು ಬಂದು ಬಾಲಕನಲ್ಲಿ ನೀನು ಸಿಹಿ ಹಂಚುತ್ತಿರುವುದು ಏಕೆ ಎಂದು ಪ್ರಶ್ನಿಸಿದರು. ಆತ 100ಕ್ಕೆ 99 ಅಂಕ ಗಳಿಸಿರಲಿಲ್ಲ; ಬದಲಿಗೆ, 543ಕ್ಕೆ 99 ಅಂಕ ಗಳಿಸಿದ್ದ! ಆತನಿಗೆ, ನೀನು ವಿಫಲನಾಗುವುದರಲ್ಲಿ ವಿಶ್ವದಾಖಲೆ ನಿರ್ಮಿಸಿದ್ದೀಯ ಎಂದು ಹೇಳುವವರು ಯಾರು?

ನರೇಂದ್ರ ಮೋದಿ, ಪ್ರಧಾನಿ

25 ವರ್ಷಗಳ ಹಿಂದೆ

ಶನಿವಾರ, 3-7-1999

• ಸೆಪ್ಟೆಂಬರ್‌ನಲ್ಲೇ ಚುನಾವಣೆ: ಆಯೋಗ ನಿರ್ಧಾರ

ನವದೆಹಲಿ, ಜುಲೈ 2 (ಪಿಟಿಐ)– ಈ ಹಿಂದೆ ನಿಗದಿಪಡಿಸಿದಂತೆ ಜಮ್ಮು ಮತ್ತು ಕಾಶ್ಮೀರ ಸಹಿತ ಎಲ್ಲಾ ಲೋಕಸಭಾ ಸ್ಥಾನಗಳಿಗೆ ಸೆಪ್ಟೆಂಬರ್‌ನಲ್ಲೇ ಚುನಾವಣೆ ನಡೆಯಲಿದೆ ಎಂದು ಚುನಾವಣಾ ಆಯೋಗ ಇಂದು ಸ್ಪಷ್ಟಪಡಿಸಿದೆ.

ಈ ಮೂಲಕ ಕಾರ್ಗಿಲ್ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಲೋಕಸಭಾ ಚುನಾವಣೆ ಮುಂದೂಡುವ ಸಾಧ್ಯತೆಗಳ ಬಗ್ಗೆ ಎದ್ದ ಊಹಾಪೋಹಗಳಿಗೆ ತೆರೆಬಿದ್ದಿದೆ.

ಪ್ರಸಕ್ತ ವಿದ್ಯಮಾನದ ಹಿನ್ನೆಲೆಯಲ್ಲಿ ಚುನಾವಣೆ ನಡೆಸುವುದಕ್ಕೆ ಸರ್ಕಾರದ ಮನಃಸ್ಥಿತಿಯೇನು ಎಂಬುದನ್ನು ತಿಳಿಯುವುದಕ್ಕಾಗಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರೊಂದಿಗೆ 45 ನಿಮಿಷ ಮಾತುಕತೆ ನಡೆಸಿದ ಬಳಿಕ ಮುಖ್ಯ ಚುನಾವಣಾ ಆಯುಕ್ತ ಎಂ.ಎಸ್. ಗಿಲ್ ಈ ಸ್ಪಷ್ಟನೆ ನೀಡಿದರು.

• ನ್ಯಾಯಾಲಯದಲ್ಲಿ ಇಂಡಿ ಶಾಸಕ ಶರಣು

ಬೆಂಗಳೂರು, ಜುಲೈ 2– ಯುವತಿಯೊಬ್ಬಳನ್ನು ಅಪಹರಿಸಿ ಅತ್ಯಾಚಾರ ಎಸಗಿದ ಆರೋಪ ಎದುರಿಸುತ್ತಿರುವ ಇಂಡಿ ಶಾಸಕ ರವಿಕಾಂತ ಪಾಟೀಲ ಅವರು ಗುರುವಾರ ಮಹಾರಾಷ್ಟ್ರದ ಸೊಲ್ಲಾಪುರ ನ್ಯಾಯಾಲಯದಲ್ಲಿ ಶರಣಾಗಿದ್ದಾರೆ. ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಪಾಟೀಲ ಅವರು ಇದೇ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯ ಅದನ್ನು ತಿರಸ್ಕರಿಸಿತ್ತು.

50 ವರ್ಷಗಳ ಹಿಂದೆ

ಬುಧವಾರ, 3-7-1974

• ಕಾನೂನು ಕಾಗದದ ಮೇಲೆ ಮಾತ್ರ: ಒಡೆಯರಿಂದ ಒಕ್ಕಲುಗಳ ಬೇಟೆ

ಬೆಂಗಳೂರು, ಜುಲೈ 2– ಗೇಣಿದಾರ ಬೆಳೆದ ಬೆಳೆ, ಜಮೀನ್ದಾರರಿಂದ ಕಟಾವು. ಗೇಣಿದಾರರನ್ನು ಹತ್ತಿರದ ಕಾಡಿಗೆ ಕಾರಿನಲ್ಲಿ ಕರೆದುಕೊಂಡು ಹೋಗಿ ಅವನಿಗೆ ಹೊಡೆತ.

–ರಾಜ್ಯದಲ್ಲಿ ಭೂಸುಧಾರಣೆ ತಿದ್ದುಪಡಿ ಶಾಸನ ಜಾರಿಗೆ ಬರಲು ಆರಂಭವಾಗುತ್ತಿದ್ದಂತೆ, ಸರ್ಕಾರಕ್ಕೆ ಪ್ರತಿದಿನ ಬರುತ್ತಿರುವ ಹತ್ತಾರು ಬಗೆಯ ದೂರುಗಳಲ್ಲಿ ಇದೊಂದು. ಇದು ಕಾರ್ಕಳ ತಾಲ್ಲೂಕಿನಿಂದ ಬಂದ ದೂರು.

ತಂತಿ ಹಾಗೂ ಪತ್ರಗಳ ಮೂಲಕ ಬರುವ ದೂರುಗಳನ್ನು ಕಂದಾಯ ಸಚಿವ ಶ್ರೀ ಎನ್. ಹುಚ್ಚಮಾಸ್ತಿಗೌಡ ಅವರು ತತ್‌ಕ್ಷಣ ಅವುಗಳನ್ನು ಜಿಲ್ಲಾಧಿಕಾರಿಗಳಿಗೆ ರವಾನಿಸುತ್ತಿದ್ದಾರೆ. ದೂರುಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸೂಚನೆ ನೀಡುತ್ತಿದ್ದಾರೆ.

• ಸ್ಪಷ್ಟಗುರಿಗಾಗಿ ಒಗ್ಗಟ್ಟಿನ ದುಡಿಮೆ ಏಳಿಗೆಗೆ ಹಾದಿ: ಹಿಂದುಳಿದವರಿಗೆ ಅರಸು ಕರೆ

ಬೆಂಗಳೂರು ಜುಲೈ 2– ಹಿಂದುಳಿದವರು ತಮ್ಮ ಗೊತ್ತು ಗುರಿಗಳ ವಿಚಾರದಲ್ಲಿ ಸೂಕ್ತ ತಿಳಿವಳಿಕೆ ಹೊಂದಿ ಒಗ್ಗಟ್ಟಿನಿಂದ ದುಡಿದರೆ ಮಾತ್ರ ಅವರ ಉದ್ಧಾರ ತ್ವರಿತವಾಗಿ ಆಗುವುದು ಎಂದು ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸು ಅವರು ಇಂದು ಇಲ್ಲಿ ಹೇಳಿದರು.

ನಗರಭವನದಲ್ಲಿ ಕೆ.ಪಿ.ಸಿ.ಸಿ. ಹಿಂದುಳಿದ ಜನಾಂಗಗಳ ವಿಭಾಗವನ್ನು ಉದ್ಘಾಟಿಸಿದ ಅವರು ನಿರ್ಲಕ್ಷಿಸಲ್ಪಟ್ಟಿದ್ದ ನಾನಾ ವರ್ಗಗಳ ಹಿತ ಸಾಧನೆಗೆ ರಚಿಸಲ್ಪಟ್ಟಿರುವ ನಾನಾ ಅಂಗಸಂಸ್ಥೆಗಳು ಮಾತೃ ಸಂಸ್ಥೆಯ ಕಾರ್ಯಕ್ರಮಕ್ಕೆ ಅನುಗುಣವಾಗಿ ನಡೆಯಬೇಕೆಂದೂ ಇಲ್ಲದಿದ್ದರೆ ಅನಾರೋಗ್ಯಕರ ಬೆಳವಣಿಗೆಯಿಂದ ಅವುಗಳ ಕರ್ತವ್ಯಪಾಲನೆಗೆ ತೊಡಕಾಗುವುದೆಂದೂ ಎಚ್ಚರಿಕೆ ನೀಡಿದರು.

ಭ್ರಷ್ಟಾಚಾರವನ್ನು ಜನ ಸಹಿಸಿದ್ದಿದೆ, ಅಧಿಕಾರಸ್ಥರ ಕಚ್ಚಾಟವನ್ನು ಮಾತ್ರ ಅವರು ಕ್ಷಮಿಸುವುದಿಲ್ಲ

ಜನಾದೇಶದ ಸಂದೇಶ ಮರೆತ ಕಾಂಗ್ರೆಸ್



ಅನುರಣನ

ನಾರಾಯಣ ಎ.

ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದ 2023ರ ವಿಧಾನಸಭಾ ಚುನಾವಣೆ ಫಲಿತಾಂಶದಲ್ಲಿ ಆ ಪಕ್ಷಕ್ಕೊಂದು ಸ್ಪಷ್ಟವಾದ ಸಂದೇಶವಿತ್ತು. ಸಂದೇಶ ಎನ್ನುವುದಕ್ಕಿಂತಲೂ ಹೆಚ್ಚಾಗಿ ಅದು ಜನಸಮೂಹದ ಮೊರೆಯಾಗಿತ್ತು...

ಸ್ಪಷ್ಟವಾಗಿ ಹೇಳಬೇಕು ಎಂದರೆ ಸುಳ್ಳು, ಹಿಂಸೆ, ದ್ವೇಷ, ಭ್ರಷ್ಟಾಚಾರ ಮತ್ತು ಅಪ್ರಬುದ್ಧ ವರ್ತನೆಯ ಭಯಾನಕ ಮಿಶ್ರಣದಂತಿದ್ದ 2019-23ರ ನಡುವಣ ಬಿಜೆಪಿಯ ಆಡಳಿತದಿಂದ ಕರ್ನಾಟಕವನ್ನು ಶಾಶ್ವತವಾಗಿ ರಕ್ಷಿಸಬೇಕು ಎನ್ನುವುದಾಗಿತ್ತು ಆ ಸಂದೇಶ. ಸಮಾಜದ ಸ್ವಾಸ್ಥ್ಯ ಹಾಗೂ ಜನಜೀವನದ ನೆಮ್ಮದಿಯನ್ನು ಇನ್ನಿಲ್ಲದಂತೆ ಕೆಡಿಸಿದ ಆ ಅನರ್ಥಕಾರಿ ರಾಜಕಾರಣವು ಕರ್ನಾಟಕದ ಪಾಲಿಗೆ ಮತ್ತೊಮ್ಮೆ ವಕ್ಕರಿಸದಂತೆ ನೋಡಿಕೊಳ್ಳಿ ಎಂದಾಗಿತ್ತು ಆ ಮೊರೆ.

ಆದರೆ, ಕಾಂಗ್ರೆಸ್ಸಿನ ಆಡಳಿತವನ್ನು ಅವಲೋಕಿಸಿದರೆ ಕಾಂಗ್ರೆಸ್ ಪಕ್ಷಕ್ಕೆ ಆ ಸಂದೇಶವನ್ನು ಅರ್ಥ ಮಾಡಿಕೊಳ್ಳುವ ಪ್ರಬುದ್ಧತೆ ಇದೆ ಅಂತ ಅನ್ನಿಸುವುದಿಲ್ಲ. ಆ ಮೊರೆಯನ್ನು ಅರ್ಥಮಾಡಿಕೊಳ್ಳುವಷ್ಟು ವಿವೇಕ, ವಿವೇಚನೆ ಇದೆ ಅಂತಲೂ ಅನ್ನಿಸುವುದಿಲ್ಲ. ಜನಾದೇಶದ ಮರ್ಮ ಅರಿತು ಮುನ್ನಡೆಯುವ ಜಾಣ್ಮೆಯ ಮಾತು ಹಾಗಿರಲಿ, ಈವರೆಗಿನ ವಿದ್ಯಮಾನಗಳನ್ನು ಗಮನಿಸಿದಾಗ ಕಾಂಗ್ರೆಸ್ ಪಕ್ಷ ಮತದಾರರನ್ನು ಭಯಾನಕವಾದ ಭ್ರಮನಿರಸನಕ್ಕೆ ದೂಡುವ ಸನ್ನಾಹದಲ್ಲಿರುವಂತೆ ತೋರುತ್ತಿದೆ. ಅಧಿಕಾರ ಹಿಡಿದು ನೆಟ್ಟಗೆ ಒಂದು ವರ್ಷ ಮುಗಿಯುವುದೊರಳಗೇ 'ಅಧಿಕಾರಕ್ಕಾಗಿ ಕಚ್ಚಾಟ' ಎನ್ನುವುದು ಕಾಯಂ 'ಬ್ರೇಕಿಂಗ್ ನ್ಯೂಸ್'. ನಂಬಿ ಬೆಂಬಲಿಸಿದ ಮತದಾರರಿಗೆ ಮುಜುಗರವಾಗುವ ಸ್ಥಿತಿ.

ದುರಂತ ನೋಡಿ! ಬಿಜೆಪಿ ನೇತೃತ್ವದ ಈ ಹಿಂದಿನ ಸರ್ಕಾರಕ್ಕೆ ಸ್ಪಷ್ಟ ಬಹುಮತವೂ ಇರಲಿಲ್ಲ. ಅದು ಜನಾದೇಶವನ್ನು ಅಕ್ಷರಶಃ ಖರೀದಿಸಿತ್ತು, ಆಡಳಿತ ನಡೆಸಲು ಪ್ರಯಾಸಪಟ್ಟಿತ್ತು. ಆದರೂ ಅದಕ್ಕೆ ತನ್ನ ಕಾರ್ಯಸೂಚಿಯ ಬಗ್ಗೆ ಸ್ಪಷ್ಟತೆ ಇತ್ತು. ಆ ಕಾರ್ಯಸೂಚಿಯ ವಿನಾಶಕಾರಿ ಮುಖ ಏನೇ ಇರಲಿ, ಅದನ್ನು ಸಾಧಿಸಲು ಬಿಜೆಪಿ ಯಾವ ಬೆಲೆಯನ್ನಾದರೂ ತೆರಲು ಸಿದ್ಧವಿತ್ತು. ಕಾಂಗ್ರೆಸ್ಸಿನ ಕತೆ ನೋಡಿ. ಅದಕ್ಕೆ ಅಧಿಕಾರದಲ್ಲಿ ಮಿಂದೇಳಲು ಬೇಕಾದಷ್ಟು ಬಹುಮತವಿದೆ. ರಾಜ್ಯದ ಬಿಜೆಪಿ ನಾಯಕರಿಗಿಂತ ನೂರ್ಮಡಿ ಹೆಚ್ಚು ಸಾಮರ್ಥ್ಯ ಹಾಗೂ ವರ್ಚಸ್ಸು ಇರುವ ಹಿರಿಯ-ಕಿರಿಯ ನಾಯಕರ ಗಡಣ ಇದೆ. ಆದರೆ, ಇಷ್ಟೆಲ್ಲಾ ಇರುವ ಸರ್ಕಾರಕ್ಕೆ ಒಂದು ಗೊತ್ತು-ಗುರಿ ಇದೆ ಎನ್ನುವ ಭಾವನೆ ಮೂಡುತ್ತಿಲ್ಲ. ಒಂದು ನಿರ್ದಿಷ್ಟ ಹಾದಿಯಲ್ಲಿ ಈ ಸರ್ಕಾರ ಈ ರಾಜ್ಯವನ್ನು ಮುನ್ನಡೆಸುತ್ತದೆ ಎಂದು ಅನ್ನಿಸುತ್ತಿಲ್ಲ. ಎಲ್ಲರನ್ನೂ ನಿಯಂತ್ರಣದಲ್ಲಿಟ್ಟುಕೊಂಡು ಜನರ ಒಲವನ್ನು ಗಳಿಸಲು ಎಲ್ಲವನ್ನೂ ಮುನ್ನಡೆಸುವ ಶಕ್ತಿ ಕೇಂದ್ರವೊಂದು ಪಕ್ಷ ಅಥವಾ ಸರ್ಕಾರದೊಳಗಿದೆ ಅಂತ ಕಾಣುವುದಿಲ್ಲ.

ಬೇರೆಲ್ಲ ಬಿಟ್ಟುಬಿಡೋಣ. ಇಡೀ ದೇಶದ ಗಮನ ಸೆಳೆದಿರುವ ಗ್ಯಾರಂಟಿ ಯೋಜನೆಗಳನ್ನು ಅದು ನಿರ್ವಹಿಸುತ್ತಿರುವ ಬಗೆ ನೋಡಿ. ಸೂಕ್ಷ್ಮ ಲೋಪದೋಷಗಳೇನೇ ಇರಲಿ, ಆರ್ಥಿಕ ಅಸಮಾನತೆಯಿಂದ ಬಸವಳಿದ ಜನರಿಗೆ ಅವು ನೆರವಾಗಿವೆ. ಇಂದಿರಾ ಗಾಂಧಿ ಕಾಲದ ನಂತರ ಕಾಂಗ್ರೆಸ್ಸಿಗೆ ಅದರದ್ದೇ ಆದ ಒಂದು ಹೊಸ ಮತಬ್ಯಾಂಕ್ ಈ ಯೋಜನೆಗಳಿಂದ ಸೃಷ್ಟಿಯಾಗಿದೆ. ಆದರೆ ವಿರೋಧ ಪಕ್ಷಗಳಿಗಿಂತ ಮಿಗಿಲಾಗಿ ಕಾಂಗ್ರೆಸ್ ನಾಯಕರೇ ಈ ಯೋಜನೆಗಳ ಮೇಲೆ ಮುಗಿಬಿದ್ದಿದ್ದಾರೆ. ವಸ್ತುಸ್ಥಿತಿ ಅರಿಯುವ ಗೋಜಿಗೆ ಹೋಗದೆ ಇವುಗಳಿಂದ ರಾಜಕೀಯ ಲಾಭವಿಲ್ಲ ಎನ್ನುತ್ತ ಅಪಪ್ರಚಾರಕ್ಕೆ ಇಳಿದಿದ್ದಾರೆ. 'ಇದು ನಮ್ಮ ವಿನೂತನ ಆವಿಷ್ಕಾರ, ಅಭಿವೃದ್ಧಿಯತ್ತ ಸಾಗುವ ಮಾನವೀಯ ಮಾರ್ಗ' ಅಂತ ಯಾರೂ ಗಟ್ಟಿಧ್ವನಿಯಲ್ಲಿ ಪ್ರತಿಪಾದಿಸುತ್ತಿಲ್ಲ.

ಇನ್ನು, ಮತಾಂಧ ಶಕ್ತಿಗಳ ವಿಚಾರದಲ್ಲಿ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವುದಿರಲಿ, ಒಂದು ಗಟ್ಟಿಯಾದ ಸಂದೇಶವನ್ನು ಕೂಡ ಸರ್ಕಾರ ರವಾನಿಸಿಲ್ಲ. ಬಿಜೆಪಿಯ ರಕ್ತ-ರಾಜಕೀಯದ ಆಡುಂಬೊಲವಾಗಿರುವ ಕರಾವಳಿ ಕರ್ನಾಟಕದ ಪರಿಸ್ಥಿತಿ ಇನ್ನೂ ಅಯೋಮಯವಾಗಿಯೇ ಮುಂದುವರಿದಿದೆ. ಮತಾಂಧ ಶಕ್ತಿಗಳನ್ನು ನಿಯಂತ್ರಿಸಲು ಈ ಸರ್ಕಾರದಿಂದ ಸಾಧ್ಯ ಎನ್ನುವ ಭರವಸೆಯನ್ನು ಅಲ್ಲಿನ ಪ್ರಜ್ಞಾವಂತ ಜನ ಕಳೆದುಕೊಳ್ಳುತ್ತಿದ್ದಾರೆ. ದ್ವೇಷ ರಾಜಕಾರಣಕ್ಕೆ ಕರ್ನಾಟಕದಲ್ಲಿ ದೊಡ್ಡ ಮಾರುಕಟ್ಟೆ ಸೃಷ್ಟಿಯಾಗುತ್ತಿದೆ ಎನ್ನುವುದನ್ನು ಚುನಾವಣಾ ಫಲಿತಾಂಶಗಳು ಸಾರುತ್ತಿವೆ. ಮದ್ದು ಅರೆಯಬೇಕಾದ ಸರ್ಕಾರ ಈ ವಿಚಾರದಲ್ಲಿ ಸದಾ ಗೊಂದಲದಲ್ಲಿರುವಂತೆ ಕಾಣಿಸುತ್ತಿದೆ.

ಹಾಗೆಯೇ ಬಿಜೆಪಿಯ ಬಕಾಸುರ ಭ್ರಷ್ಟಾಚಾರದ ಬಗ್ಗೆ ಕಾವ್ಯ ಸೃಷ್ಟಿಸಿ ಚುನಾವಣಾ ಪ್ರಚಾರ ನಡೆಸಿ ಗೆದ್ದ ಕಾಂಗ್ರೆಸ್, ಭ್ರಷ್ಟಾಚಾರದ ಕುರಿತಂತೆ ತಾನು ಕಿಂಚಿತ್ತಾದರೂ ಭಿನ್ನ ಎಂದು ತೋರಿಸಿಕೊಳ್ಳುವ ರೀತಿಯಲ್ಲಿ ಸಾಗುತ್ತಿಲ್ಲ. 'ಶೇಕಡ 40 ಕಮಿಷನ್' ಆರೋಪದ ಬಗ್ಗೆ ತನಿಖೆಗೊಂದು ವಿಚಾರಣಾ ಆಯೋಗ ನೇಮಿಸಿದ ಆಚೆಗೆ ಭ್ರಷ್ಟಾಚಾರದ ವಿಷಯದಲ್ಲಿ ಈ ಸರ್ಕಾರ ಹೇಗೆ ಭಿನ್ನವಾಗಿದೆ ಎನ್ನುವ ಪ್ರಶ್ನೆಗೆ ಸರ್ಕಾರದ ನಡೆನುಡಿಗಳಿಂದ ಉತ್ತರ ದೊರಕುತ್ತಿಲ್ಲ.

ಆದರೆ 'ಎಲ್ಲ ಬಿಟ್ಟ ಮಗ, ಭಂಗಿ ನೆಟ್ಟ' ಎಂಬಂತೆ ಕೆಲ ಕಾಂಗ್ರೆಸ್ ಶಾಸಕರು ಉಪಮುಖ್ಯಮಂತ್ರಿ ಹುದ್ದೆಗಳನ್ನು ಹೆಚ್ಚುವರಿ ಸೃಷ್ಟಿಸಬೇಕೆಂದೂ ಮುಖ್ಯಮಂತ್ರಿಯ ಬದಲಾವಣೆ ಆಗಬೇಕೆಂದೂ ಚಂಡಿಹಿಡಿಯತೊಡಗಿದ್ದಾರೆ. ಹೀಗೆಲ್ಲಾ ಕೇಳಲು ಸಾವಿರ ರಾಜಕೀಯ ಸಮರ್ಥನೆಗಳಿರಬಹುದು. ಆದರೆ ಪಕ್ಷದಲ್ಲಿ ಆಂತರಿಕವಾಗಿ ಏನನ್ನು ಕೇಳಬೇಕು, ಬಹಿರಂಗವಾಗಿ ಏನನ್ನು ಹೇಳಬೇಕು ಎನ್ನುವ ಕನಿಷ್ಠ ಪ್ರಜ್ಞೆಯಾದರೂ ಬೇಕಲ್ಲ? ಜನರಿಗೆ ಸಂಬಂಧಿಸಿದ ಒಂದು ವಿಷಯವನ್ನು ಇಷ್ಟೊಂದು ಆಸ್ಥೆಯಿಂದ ಈ ಶಾಸಕರು ಎತ್ತಿಕೊಂಡ ನಿದರ್ಶನ ಇದೆಯೇ? ಮಳೆಯೇನೋ ಪ್ರಾರಂಭವಾಗಿದೆ. ಆದರೆ ಭೀಕರ ಬರದಿಂದ ತತ್ತರಿಸಿದ ಜನ ಸಾವರಿಸಿಕೊಂಡಿದ್ದಾರೆಯೇ? ಆ ಜನರ ಬದುಕಿನಲ್ಲಿ ಏನಾಗುತ್ತಿದೆ ಎನ್ನುವ ಬಗ್ಗೆ ಶಾಸಕರು ಮಾತನಾಡುತ್ತಿಲ್ಲ. ಈ ಸ್ಥಿತಿಯಲ್ಲಿ ರಾಜ್ಯಕ್ಕೆ ಅಗತ್ಯವಾಗಿ ಬೇಕಿರುವುದು ಹೆಚ್ಚುವರಿ ಉಪಮುಖ್ಯಮಂತ್ರಿಗಳು ಅಂತ ಶಾಸಕರು ಎಗ್ಗಿಲ್ಲದೆ ಹೇಳುತ್ತಿದ್ದರೆ, ಫ್ರೆಂಚ್ ಕ್ರಾಂತಿಯ ಕಾಲದಲ್ಲಿ ರಾಣಿಯೊಬ್ಬಳು 'ಬ್ರೆಡ್ ಇಲ್ಲದೆ ಹೋದರೆ ಕೇಕ್ ತಿನ್ನಿ' ಎಂದು ಜನರಿಗೆ ಹೇಳಿದ್ದು ನೆನಪಾದೀತು!



ಕರ್ನಾಟಕದ ಮತದಾರರು ಭ್ರಷ್ಟಾಚಾರವನ್ನು ತಾಳಿಕೊಂಡದ್ದಿದೆ. ಮತಾಂಧತೆಯ ರಾಜಕೀಯವನ್ನು ಪೂರ್ತಿ ತಿರಸ್ಕರಿಸದೆ ಬೆಂಬಲಿಸಿದ್ದಿದೆ. ಆದರೆ, ಅಧಿಕಾರಸ್ಥ ಪಕ್ಷಗಳ ಕಚ್ಚಾಟವನ್ನು ಮಾತ್ರ ಅವರು ಕ್ಷಮಿಸುವುದಿಲ್ಲ. ಮುಖ್ಯವಾಗಿ 1989ರ ನಂತರದ ಘಟನಾವಳಿಗಳು ಇದನ್ನು ಸಾರುತ್ತವೆ. ಈತನಕ ಆಡಳಿತ ನಡೆಸಿದ ಮೂರೂ ಪಕ್ಷಗಳು ಮತದಾರರ ಕೈಯಿಂದ ಈ ಕಾರಣಕ್ಕೆ ಶಿಕ್ಷೆ ಅನುಭವಿಸಿವೆ.

ಹಾಗೆ ನೋಡಿದರೆ, ಮಾಮೂಲಿ ಅಂತಃಕಲಹದ ಪರಂಪರೆಯಿಂದ ಹೊರಬಂದದ್ದು ಕಾಂಗ್ರೆಸ್ ಪಕ್ಷವೇ. ಮೊದಲಿಗೆ 1999-2004ರ ನಡುವಣ ಕಾಂಗ್ರೆಸ್ ಆಡಳಿತ (ಎಸ್.ಎಂ. ಕೃಷ್ಣ ನೇತೃತ್ವದ ಸರ್ಕಾರ) ಮತ್ತು 2013-18ರ ನಡುವಣ ಕಾಂಗ್ರೆಸ್ ಆಡಳಿತ (ಸಿದ್ದರಾಮಯ್ಯ ನೇತೃತ್ವದ ಮೊದಲ ಅವಧಿ) ಆಂತರಿಕ ಕಚ್ಚಾಟದಿಂದ ದೂರ ಉಳಿದು ಚಾರಿತ್ರಿಕವಾದ ಪ್ರಬುದ್ಧ ರಾಜಕೀಯ ಪರಂಪರೆಯೊಂದನ್ನು ಸೃಷ್ಟಿಸಿದ್ದವು. ಈ ವೈಶಿಷ್ಟ್ಯವನ್ನು ಉಳಿಸಿಕೊಳ್ಳುವ ಹಾದಿಯಲ್ಲಿ ಕಾಂಗ್ರೆಸ್ ಈಗ ಸಾಗುತ್ತಿಲ್ಲ. ಚರಿತ್ರೆಯ ತಪ್ಪುಗಳಿಂದ ಪಾಠ ಕಲಿಯುವುದಾಗಲೀ ಚರಿತ್ರೆಯಲ್ಲಿ ತಾವೇ ಹಾಕಿಕೊಟ್ಟ ಮಾದರಿಯಲ್ಲಿ ಮುಂದುವರಿಯುವುದಾಗಲೀ ರಾಜಕೀಯ ಪಕ್ಷಗಳಿಗೆ ಕೂಡಿಬಾರದ ವಿಚಾರ. ಚರಿತ್ರೆ ಪುನರಾವರ್ತನೆ ಆಗುತ್ತದೆ ಎನ್ನುವ ಮಾತೊಂದಿದೆ. ಅದನ್ನು ಸರಿಪಡಿಸಿಕೊಳ್ಳಬೇಕು ಅನ್ನಿಸುತ್ತದೆ. ಯಾಕೆಂದರೆ, ಒಳ್ಳೆಯ ಚರಿತ್ರೆ ಮರುಕಳಿಸುವಂತೆ ಕಾಣಿಸುತ್ತಿಲ್ಲ, ಕೆಟ್ಟ ಚರಿತ್ರೆ ಮಾತ್ರ ಪುನರಾವರ್ತನೆ ಆಗುತ್ತಿರುವುದು.

ಕಾಂಗ್ರೆಸ್‌ನ ಸ್ವಯಂಘಾತುಕತನದ ಹಾದಿಯು ಗ್ರೀಕ್ ಪುರಾಣಗಳಲ್ಲಿ ಉಲ್ಲೇಖವಾಗಿರುವ, ತನ್ನನ್ನು ತಾನೇ ನುಂಗುವ ಒರುಬರೋಸ್ ಹಾವಿನ ಕಲ್ಪನೆಯನ್ನು ನೆನಪಿಸುತ್ತದೆ. ಕಾಂಗ್ರೆಸ್ಸಿಗೆ ಸುಧಾರಿಸಿಕೊಳ್ಳಲು ಸಮಯ ಮೀರಿಲ್ಲ. ಪಕ್ಷದೊಳಗೆ ವಿವೇಕ-ವಿವೇಚನೆಯಿಂದ ಧ್ವನಿ ಎತ್ತಬಲ್ಲವರಿಗೇನೂ ಕೊರತೆ ಇಲ್ಲ. ಆದರೆ ಆ ಧ್ವನಿಗಳು ಅರಣ್ಯರೋದನ ಆಗದ ಹಾಗೆ ನೋಡಿಕೊಳ್ಳುವ ವ್ಯವಸ್ಥೆ ಪಕ್ಷದಲ್ಲಿದೆಯೇ ಎನ್ನುವುದು ಪ್ರಶ್ನೆ.

ಒಟ್ಟಿನಲ್ಲಿ, ಕರ್ನಾಟಕವನ್ನು ಬಿಜೆಪಿಯ ಭಯಾನಕ ಜೀವವಿರೋಧಿ ದ್ವೇಷ ರಾಜಕಾರಣದಿಂದ ಬಿಡುಗಡೆಗೊಳಿಸುವ ಜವಾಬ್ದಾರಿಯನ್ನು ಕಾಂಗ್ರೆಸ್ಸಿಗೆ ಹೊರಿಸಿ ಸುಮ್ಮನಾದರೆ ಅಪಾಯ ಕಾದಿದೆ. ಯಾಕೆಂದರೆ, ಕೆಲ ಕಾಂಗ್ರೆಸ್ಸಿಗರು 'ಬಿಜೆಪಿಯೇ ಮೇಲು' ಎನ್ನುವ ಭಾವನೆಯನ್ನು ಮತ್ತೆ ಮತದಾರರಲ್ಲಿ ಹುಟ್ಟಿಸುವಂತಹ ಆತ್ಮಘಾತುಕ ಪ್ರವೃತ್ತಿಯನ್ನು ಅದೆಷ್ಟು ನಿಷ್ಠೆಯಿಂದ ಪ್ರದರ್ಶಿಸುತ್ತಿದ್ದಾರೆ ಎಂದರೆ ತನ್ನನ್ನು ತಾನೇ ನುಂಗುವ ಒರುಬರೋಸ್ ಹಾವಿಗೇನೇ ಇವರು ಪೈಪೋಟಿ ನೀಡುವಂತಿದೆ.

ಚುರುಮುರಿ



ಡೆಂಗಿ ಡಾಂಗ್...

• ಮಣ್ಣೆ ರಾಜು

ಡೆಂಗಿಪೀಡಿತನಾಗಿ ಶಂಕ್ರಿ ಹಾಸಿಗೆ ಹಿಡಿದಿದ್ದ. ಮೈಕೈ ನೋವು, ಮೈತುಂಬಾ ಜ್ವರ ಆವರಿಸಿತ್ತು.

ಹೆಂಡತಿ ಸುಮಿಯಾದರೂ ಡೆಂಗಿ ಮುಕ್ತವಾಗಿರಲಿ ಎಂದು ಶಂಕ್ರಿ, 'ಈಡಿಸ್ ಈಜಿಪ್ಟಿ ಎಂಬ ಹೆಣ್ಣು ಸೊಳ್ಳೆಯಿಂದ ಡೆಂಗಿ ಹರಡುವುದಂತೆ. ಒಂದೂ ಹೆಣ್ಣು ಸೊಳ್ಳೆ ಮನೆ ಪ್ರವೇಶಿಸದಂತೆ ಎಚ್ಚರ ವಹಿಸು. ಗಂಡು ಸೊಳ್ಳೆ ಬಂದು ಒಂದು ಸಿಪ್ ರಕ್ತ ಕುಡಿದರೂ ಪರವಾಗಿಲ್ಲ, ಹೆಣ್ಣು ಸೊಳ್ಳೆಗೆ ಮಿಸಲಾತಿ ಕೊಡಬೇಡ' ಅಂದ.

'ಕೊಡೊಲ್ಲಾರೀ, ಮನೆಗೆ ಹೆಂಗಸರು ಬಂದರೆ ಕಾಫಿ ಕೊಟ್ಟು, ಕುಂಕುಮ ಕೊಟ್ಟು ಕಳಿಸ್ತೀನಿ, ಹೆಣ್ಣುನಾಯಿ ಬಂದ್ರೆ ಮಿಕ್ಕಿರುವ ಅನ್ನ ಹಾಕ್ತೀನಿ, ಹೆಣ್ಣು ಬೆಕ್ಕು ಬಂದ್ರೆ ಹಾಲು ಕುಡಿಸ್ತೀನಿ, ಹೆಣ್ಣು ಕಾಗೆ ಬಂದರೂ ಓಡಿಸಲ್ಲ, ತಿನ್ನಲು ಏನನ್ನಾದರೂ ಕೊಡ್ತೀನಿ, ಹೆಣ್ಣು ಸೊಳ್ಳೆಯನ್ನು ಮಾತ್ರ ಮನೆ ಒಳಗೆ ಬಿಟ್ಟುಕೊಳ್ಳುವುದಿಲ್ಲ... ಆದರೆ ಹೆಣ್ಣು ಸೊಳ್ಳೆಯನ್ನು ಹೇಗೆ ಗುರುತಿಸೋದು? ಅವು ಸೀರೆ, ನೈಟಿ ಉಟ್ಟುಕೊಂಡು ಬರೊಲ್ಲ...' ಸುಮಿಗೆ ಗೊಂದಲವಾಯಿತು.

'ಹೆಣ್ಣು ಸೊಳ್ಳೆಗಳಿಗೆ ಪ್ರವೇಶವಿಲ್ಲ ಎಂದು ಬಾಗಿಲಲ್ಲಿ ಬೋರ್ಡ್ ಹಾಕು'.

'ಆಂಧ್ರ, ತಮಿಳುನಾಡಿನ ಸೊಳ್ಳೆಗಳಿಗೆ ಕನ್ನಡ ಬೋರ್ಡ್ ಅರ್ಥವಾಗಲ್ಲ, ಇಂಗ್ಲಿಷಿನಲ್ಲೂ ಬರೆಯುತ್ತೇನೆ'.

'ಹೆಣ್ಣು ಸೊಳ್ಳೆಯ ಚಿತ್ರ ಅಂಟಿಸಿ ಅದರ ಮೇಲೆ ರೆಡ್ ಇಂಕಿನಲ್ಲಿ ಇಂಟೂ ಮಾರ್ಕ್ ಹಾಕು, ಅನಕ್ಷರಸ್ಥ ಸೊಳ್ಳೆಗಳಿಗೂ ಅರ್ಥವಾಗಲಿ'.

'ಹೊರಗಿನ ಸೊಳ್ಳೆ ತಡೆಯಬಹುದು, ಈಗಾಗಲೇ ಮನೆಯೊಳಗೆ ಸೇರಿಕೊಂಡಿರುವ ಸೊಳ್ಳೆಗಳನ್ನು ಮೊದಲು ಕೊಲ್ಲಬೇಕು' ಎಂದು ಸುಮಿ ವೀರಗಚ್ಚೆ ಹಾಕಿ ಸೊಳ್ಳೆ ಬ್ಯಾಟ್ ಹಿಡಿದು ಮನೆ ತುಂಬಾ ಓಡಾಡಿ ಸೊಳ್ಳೆಗಳನ್ನು ಬಡಿದು ಕೊಂದು ಹೆಣದ ರಾಶಿ ಹಾಕಿದಳು.

ವೀರವನಿತೆಯ ಶೌರ್ಯವನ್ನು ಶಂಕ್ರಿ ಶ್ಲಾಘಿಸಿದ. ಸೊಳ್ಳೆ ಸಮರದಲ್ಲಿ ಸುಮಿ ಸುಸ್ತಾಗಿ, ಮೈಕೈ ನೋವು ಮಾಡಿಕೊಂಡು ಹಾಸಿಗೆ ಹಿಡಿದಳು!

ಸಂಗತ

ದುರಂತ ಏಕೆ ಪಾಠ ಕಲಿಸುವುದಿಲ್ಲ?

ಜಲಪಾತದಂತಹ ಪ್ರವಾಸಿ ಕೇಂದ್ರಗಳಲ್ಲಿ ಪ್ರವಾಸಿಗರಿಗೆ ಬೆಂಗಾವಲಾಗಿ ಸಂರಕ್ಷಕ ಪಡೆಯನ್ನು ವ್ಯವಸ್ಥೆಗೊಳಿಸಿದರೆ ಎಷ್ಟೋ ದುರಂತಗಳನ್ನು ತಡೆಯಬಹುದು

• ಪ. ರಾಮಕೃಷ್ಣ ಶಾಸ್ತ್ರಿ

ಮಹಾರಾಷ್ಟ್ರದ ಲೋಣಾವಳದ ಜಲಪಾತದ ಬಳಿ ಈಚೆಗೆ ಒಂದೇ ಕುಟುಂಬದ ಐವರು ಕೊಚ್ಚಿಕೊಂಡು ಹೋದ ದೃಶ್ಯ ಕಲ್ಲು ಹೃದಯವನ್ನೂ ಕರಗಿಸುವಷ್ಟು ಕರುಣಾಜನಕವಾಗಿತ್ತು. ಇಹಲೋಕ ಯಾತ್ರೆಯ ಕಟ್ಟ ಕಡೆಯ ದೃಶ್ಯವನ್ನೂ ನಿರ್ವಿಕಾರ ಭಾವದಿಂದ ಮೊಬೈಲ್ ಕ್ಯಾಮೆರಾ ಮೂಲಕ ಸೆರೆಹಿಡಿದು ಜಾಲ ತಾಣಗಳಲ್ಲಿ ಹರಿಯಬಿಟ್ಟ ಜೊತೆಗಾರರ ಏಕಾಗ್ರತೆಯ ಬಗೆಗೆ ಏನೂ ಹೇಳುವಂತಿಲ್ಲ! ಆದರೆ ಪ್ರತಿವರ್ಷ ಮಳೆಗಾಲದುದ್ದಕ್ಕೂ ಒಂದಲ್ಲ ಒಂದು ಕಡೆ ಸಂಭವಿಸುವ ಇಂತಹ ದುರಂತಗಳು ಮರುಕಳಿಸಬೇಕೆ? ಯಾರದೋ ಕುಟುಂಬವನ್ನು ನಿರಂತರ ಶೋಕದ ದಳ್ಳುರಿಗೆ ದೂಡಬೇಕೇ?

ಪ್ರವಾಸಿಗರು ಭೇಟಿ ನೀಡುವ ಇಂತಹ ತಾಣಗಳಲ್ಲಿ, ನೀರಿನ ವೇಗದ ಅರಿವಿಲ್ಲದೆ ಜಲಪಾತಗಳ ಬಳಿಗೆ ಹೋಗಿ ಸಾವು ತಂದುಕೊಳ್ಳುತ್ತಿರುವಲ್ಲಿ ತಪ್ಪು ಪ್ರವಾಸಿಗರದ್ದೂ ಇದೆ, ಪ್ರವಾಸಿ ತಾಣಗಳನ್ನು ನಿರ್ವಹಿಸುವ ಹೊಣೆ ಹೊತ್ತವರದ್ದೂ ಇದೆ ಎಂಬುದು ನಿಜ. ಅಜಾಗರೂಕರಾಗಿರುವ ಪ್ರವಾಸಿಗರದು ದುರಂತದಲ್ಲಿ ಸಿಂಹಪಾಲು. ಅಲ್ಲಿ ಮುಂಜಾಗರೂಕತೆಗೆ ಕ್ರಮ ಕೈಗೊಳ್ಳದ ಸ್ಥಳೀಯ ಆಡಳಿತದ್ದೂ ಪಾತ್ರ ಇರುತ್ತದೆ. ಪಟ್ಟಣಗಳ ಬಿರು ಬೇಸಿಗೆಯ ಕಾವನ್ನು ಅನುಭವಿಸಿರುವ ಜನರಿಗೆ ನೀರು ಧುಮ್ಮಿಕ್ಕುವ ಹಿತಕರ ನೋಟ ಕಣ್ಣುಗಳಿಗೆ ಹಬ್ಬವಾಗಬಹುದು. ಇನ್ನಷ್ಟು ಹತ್ತಿರದಿಂದ ಕಾರ್ಗಾಲದ ವೈಭವವನ್ನು ಕಂಡು ಮನ ತಣಿಸಿಕೊಳ್ಳುವ ಕಾತರವೂ ದಟ್ಟವಾಗಿರಬಹುದು.

ಸರ್ಕಾರವು ಕಡಲ ತಡಿಗಳಲ್ಲಿ ಪ್ರವಾಸಿಗರ ರಕ್ಷಣೆಯನ್ನೇ ಧ್ಯೇಯವಾಗಿರಿಸಿಕೊಂಡು ಮುಳುಗು ತಜ್ಞರ ತಂಡವನ್ನು ಸನ್ನದ್ಧ ಸ್ಥಿತಿಯಲ್ಲಿರಿಸುತ್ತದೆ. ಅಲೆಗಳ ಹೊಡೆತಕ್ಕೆ ಸಿಲುಕಿ ನೀರುಪಾಲಾದವರನ್ನು ರಕ್ಷಿಸಲು ಅವರು ಶಕ್ತಿಮೀರಿ ಶ್ರಮಿಸುತ್ತಾರೆ. ವಾಯುಭಾರದ ಒತ್ತಡವಿರುವ ಸಮಯವಾಗಿದ್ದರೆ ಕಡಲಿನ ಸಮೀಪ ಹೋಗದಂತೆ ತಡೆಯುತ್ತಾರೆ.

ಜಲಪಾತದಂತಹ ಪ್ರವಾಸಿ ಕೇಂದ್ರಗಳಲ್ಲಿ ಕೂಡ ಪ್ರವಾಸಿಗರಿಗೆ ಬೆಂಗಾವಲಾಗಿ ಸಂರಕ್ಷಕ ಪಡೆಯನ್ನು ಸ್ಥಳೀಯ ಆಡಳಿತ ವ್ಯವಸ್ಥೆಗೊಳಿಸಿದ್ದರೆ ಎಷ್ಟೋ ದುರಂತಗಳನ್ನು ತಡೆಯಬಹುದು. ಇವರಿಗೆ ಕೊಡುವ ವೇತನವನ್ನು ಪ್ರವಾಸಿಗರಿಂದ ಪ್ರವೇಶ ಶುಲ್ಕದ ಹೆಸರಿನಲ್ಲಿ ಪಡೆಯಬಹುದು. ಲೋಣಾವಳದಲ್ಲಿ ದುರಂತ ಇದ್ದಕ್ಕಿದ್ದಂತೆ ಸಂಭವಿಸಿದ್ದಲ್ಲ. ಜೊತೆಗಾರರು ಅವರ ರಕ್ಷಣೆಗಾಗಿ ಕಾಡು ಬಳ್ಳಿಗಳನ್ನು ಕಿತ್ತು ತಂದು ಅವರತ್ತ ಎಸೆಯಲು ಪ್ರಯತ್ನಿಸಿದ್ದಾರೆ. ಅಲ್ಲಿದ್ದ ಯಾರಾದರೂ ಒಬ್ಬರು ಆ ಭೀಕರ ಪರಿಸ್ಥಿತಿಯಲ್ಲಿ ಅಗ್ನಿಶಾಮಕ ದಳದವರಿಗೋ ಪೊಲೀಸರಿಗೋ ಕರೆ ಮಾಡಿರಬಹುದು. ಆದರೆ ಸಾವಿನ ದವಡೆಯಿಂದ ಈ ನತದೃಷ್ಟರನ್ನು ಪಾರು ಮಾಡಲು ಯಾರಿಗೂ ಆಗಲಿಲ್ಲ.

ಎಲ್ಲಿ ಜೀವಕ್ಕೆ ಅಪಾಯವಿದೆಯೋ ಅಲ್ಲಿ ತಡೆಬೇಲಿಗಳನ್ನು ನಿರ್ಮಿಸಬೇಕಿತ್ತು. ಸಂರಕ್ಷಣಾ ವೀಕ್ಷಕರನ್ನು ನೇಮಿಸಬೇಕಿತ್ತು. ಸ್ಥಳೀಯ ಆಡಳಿತದ ಬೇಜವಾಬ್ದಾರಿತನ ಅನೇಕರ ಜೀವಗಳಿಗೆ ಬೆಲೆಯಿಲ್ಲದಂತೆ ಮಾಡಿದೆ. ವರ್ಷಗಳ ಹಿಂದೆ ಜಮಾಲಾಬಾದ್ ಕೋಟೆ ನೋಡಲು ಮೇಲಕ್ಕೇರಿದ ವಿದ್ಯಾರ್ಥಿಯೊಬ್ಬ ಕೆಳಗುರುಳಿದ್ದ ವಿಷಯ ಹಲವು ದಿನಗಳವರೆಗೂ ಗೊತ್ತಾಗಿರಲಿಲ್ಲ. ಬೆಟ್ಟದ ಬುಡದ ಪೊದೆಯೊಳಗೆ ಅವನು ಆಹಾರ, ನೀರಿಲ್ಲದೆ ಜೀವ ಉಳಿಸಿಕೊಂಡಿದ್ದುದೇ ವಿಸ್ಮಯವಾಗಿತ್ತು.

ಚಾರ್ಮಾಡಿ ಘಾಟಿಯಂತಹ ಅಪಾಯಕಾರಿ ರಸ್ತೆಗಳಲ್ಲಿ ಅಂಚಿಗೆ ಹೋಗಿ ಸೆಲ್ಫಿ ತೆಗೆದುಕೊಳ್ಳುವ ಪ್ರವಾಸಿಗರಿದ್ದಾರೆ. ನಿಸರ್ಗದ ಸುಖವನ್ನು ಅನುಭವಿಸುವ ಉತ್ಸಾಹ ಕೆಲವೊಮ್ಮೆ ಅಪಾಯಕಾರಿ ಆಗುತ್ತದೆ. ಇಲ್ಲಿ ಅಪಾಯ ಸಂಭವಿಸಿದರೆ ಕೂಡಲೇ ರಕ್ಷಣೆಗೆ ಧಾವಿಸುವ ಪಡೆಗಳಿಲ್ಲ. ಮೊಬೈಲ್ ಫೋನ್‌ಗೆ ಇಲ್ಲಿ ಸಂಪರ್ಕ ಸಿಗುವುದಿಲ್ಲ. ಮಳೆಗಾಲದಲ್ಲಿ ಅಪಾಯ ಸಂಭವಿಸಿದಾಗ ಜೀವ ರಕ್ಷಣೆಗೆ ತ್ವರಿತ ನೆರವು ಸಿಗುವ ವ್ಯವಸ್ಥೆಯಾದರೂ ಜಾಗೃತ ಸ್ಥಿತಿಯಲ್ಲಿದ್ದರೆ ಒಳ್ಳೆಯದು.



ಇಷ್ಟೆಲ್ಲ ಸಾವು– ನೋವು ತುಂಬಿದ ಸುದ್ದಿಗಳು ಪ್ರತಿದಿನ ಎಂಬಂತೆ ವರದಿಯಾಗುತ್ತಲೇ ಇದ್ದರೂ ಪ್ರವಾಸ ಮಾಡುವವರಿಗೆ ಅವು ಎಚ್ಚರಿಕೆಯ ಗಂಟೆಯಾಗುವುದಿಲ್ಲ ಎಂಬುದೇ ಸೋಜಿಗ. ಆಡಳಿತ ವ್ಯವಸ್ಥೆ ಜಡ್ಡುಗಟ್ಟಿರುವುದೂ ಇಂತಹ ದುರಂತಗಳು ಸಂಭವಿಸುವುದಕ್ಕೆ ಕಾರಣ. ಅಪಾಯಕಾರಿ ಸ್ಥಳಗಳಲ್ಲಿ 'ಇಲ್ಲಿಂದ ಮುಂದೆ ಕಾಲಿಡಬಾರದು' ಎಂಬ ಫಲಕವಾದರೂ ಇರಲಿ. ಅದರಾಚೆ ದಾಟಿದವರಿಗೆ ನಿರ್ದಯವಾಗಿ ದಂಡ ವಿಧಿಸಲು ಒಬ್ಬ ಸಿಬ್ಬಂದಿಯನ್ನು ನೇಮಿಸಲಿ. ಪ್ರವಾಸಿಗರು ದುರದೃಷ್ಟವಶಾತ್ ಸಾವಿನ ದವಡೆಗೆ ಸಿಲುಕಿದರೆ ತ್ವರಿತವಾಗಿ ರಕ್ಷಣೆಗೆ ಧಾವಿಸಲು ಬೇಕಾದ ವ್ಯವಸ್ಥೆ ಕೈಗೊಳ್ಳುವುದೂ ಇದೇ ಸಿಬ್ಬಂದಿಯ ಹೊಣೆಯಾಗಲಿ.

ವರ್ಷಗಳ ಹಿಂದೆ ಕೊಡಗಿನ ತಲಕಾವೇರಿಯಲ್ಲಿ ಬೆಟ್ಟವೇ ಕುಸಿದು ದಂಪತಿ ಸಮಾಧಿಯಾದರು. ಆದರೆ ಈ ಪ್ರದೇಶದ ಕಾಡುಗಳಲ್ಲಿದ್ದ ಆನೆಗಳು ದಿನಗಳ ಮೊದಲೇ, ರಾತ್ರಿ ಹೊತ್ತಿನಲ್ಲಿ ಜತೆಗೂಡಿ ಓಡುತ್ತ ಹಾಸನದ ಕಡೆಯ ಕಾಡುಗಳನ್ನು ಸೇರಿಕೊಂಡವಂತೆ. ಪ್ರಾಕೃತಿಕ ವಿಕೋಪ ಸಂಭವಿಸುವ ಮುನ್ಸೂಚನೆ ಅದೆಷ್ಟೋ ಪ್ರಾಣಿಗಳಿಗೆ ಬಹು ಮೊದಲೇ ತಿಳಿಯುತ್ತದೆಂಬ ಸತ್ಯಕ್ಕೆ ಈ ಘಟನೆ ಉದಾಹರಣೆ. ಆದರೆ ಮನುಷ್ಯ ಬುದ್ಧಿವಂತನೆನಿಸಿಕೊಂಡು ಮೇರೆ ಮೀರಿದರೆ ನೀರು ಮತ್ತು ಬೆಂಕಿಯಿಂದ ಪಾರಾಗಲು ಸಾಧ್ಯವಿಲ್ಲ ಎಂಬ ಅರಿವಿದ್ದರೂ ಪ್ರವಾಸದ ಮೋಜಿನ ಹುರುಪಿನಲ್ಲಿ ಜೀವ ಕಳೆದುಕೊಳ್ಳುತ್ತಿರುವುದು ವಿಪರ್ಯಾಸ.

ನಿಸರ್ಗದ ಸುಖಕರ ತಾಣಗಳು ಜೀವಹರಣದ ತಾಣಗಳಾಗದಂತೆ ವ್ಯವಸ್ಥೆಯೊಂದು ಬಹಳ ಜರೂರಾಗಿ ರೂಪುಗೊಳ್ಳಲೇಬೇಕಾಗಿದೆ.

ವಾಚಕರ ವಾಣಿ

ಮೊಬೈಲ್ ಶುಲ್ಕ ಏರಿಕೆ: ಟ್ರಾಯ್ ಪರಾಮರ್ಶಿಸಲಿ

ಖಾಸಗಿ ದೂರಸಂಪರ್ಕ ಕಂಪನಿಗಳಾದ ಜಿಯೊ, ಏರ್‌ಟೆಲ್ ಮತ್ತು ವೊಡಾಫೋನ್ ಐಡಿಯಾ ತಾವು ನೀಡುವ ಮೊಬೈಲ್ ಫೋನ್ ಕರೆ ಮತ್ತು ಇಂಟರ್ನೆಟ್ ಸೇವೆಗಳ ಶುಲ್ಕವನ್ನು ಶೇಕಡ 12ರಿಂದ ಶೇ 27ರವರೆಗೆ ಏರಿಕೆ ಮಾಡುತ್ತಿರುವುದಾಗಿ ಘೋಷಿಸಿವೆ. ಒಂದು ಕಾಲದಲ್ಲಿ ನಿಮಿಷ, ಸೆಕೆಂಡ್‌ಗಳ ಲೆಕ್ಕದಲ್ಲಿ ನಿಗದಿಯಾಗುತ್ತಿದ್ದ ಕರೆ ದರ ವ್ಯವಸ್ಥೆ ಇಂದು ಇಲ್ಲ. ಇದೇನಿದ್ದರೂ ಅನಿಯಮಿತ ಕರೆಗಳ ಕಾಲ.

ಇಂದು ಮೊಬೈಲ್ ಫೋನ್ ಸೇವೆಯ ಬಳಕೆ ಹೆಚ್ಚಾಗಿದೆ. ದೇಶದಲ್ಲಿ ಶೇ 90ರಷ್ಟು ಜನರಲ್ಲಿ ಮೊಬೈಲ್ ಫೋನ್ ಇದೆ. ಅಂದರೆ ಮೊಬೈಲ್ ಫೋನ್ ಸೇವೆಗಳು ಇಂದು ಎಲ್ಲರಿಗೂ ಅನಿವಾರ್ಯ ಎಂಬಂತೆ ಆಗಿವೆ. ದೂರಸಂಪರ್ಕ ಕ್ಷೇತ್ರದಲ್ಲಿ ಕೃತಕವಾಗಿ ಬೆಲೆ ಏರಿಕೆ ಮಾಡಲಾಗುತ್ತಿದೆ. ಈಗ ಕಂಪನಿಗಳು ಘೋಷಿಸಿರುವ ಬೆಲೆ ಏರಿಕೆಯನ್ನು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು (ಟ್ರಾಯ್) ಒಮ್ಮೆ ಪರಾಮರ್ಶಿಸುವುದು ಸೂಕ್ತವಾದೀತು.

ರಮೇಶ ವಿ. ವಂಕಲಕುಂಟಿ, ಕಾಮನೂರು, ಕೊಪ್ಪಳ

ಬೆಲೆ ಏರಿಕೆ ಆಯಿತು, ಗುಣಮಟ್ಟ ಹೆಚ್ಚಲಿ

ದೇಶದ ದೂರಸಂಪರ್ಕ ವಲಯದ ಕಂಪನಿಗಳು ಅಂತೂ ತಮ್ಮ ಸೇವಾ ಶುಲ್ಕವನ್ನು ಹೆಚ್ಚು ಮಾಡಿವೆ. ಇದು ಜನರ ಕಿಸೆಗೆ ಹೊರೆ ಎಂದು ತಕ್ಷಣಕ್ಕೆ ಅನ್ನಿಸಿದರೂ ದೂರಸಂಪರ್ಕ ವಲಯವನ್ನೂ ದೀರ್ಘಾವಧಿಯಲ್ಲಿ ಅದು ದೇಶದ ಜನರಿಗೆ ಒದಗಿಸಬೇಕಿರುವ ಸೇವೆಗಳನ್ನೂ ಗಮನಿಸಿದರೆ ಈ ಬೆಲೆ ಏರಿಕೆ ಸಮರ್ಥನೀಯ ಎಂಬುದು ಗೊತ್ತಾಗುತ್ತದೆ. ಈ ಕ್ಷೇತ್ರದಲ್ಲಿ ದರಸಮರ ಅತಿಯಾಗಿತ್ತು. ಇದು ಬಹಳ ಅನಾರೋಗ್ಯಕರವಾಗಿತ್ತು. ಸೇವಾ ಶುಲ್ಕವನ್ನು ವರ್ಷಗಳಿಂದ ಹೆಚ್ಚಿಸದೆ ಇದ್ದುದರ ಪರಿಣಾಮವಾಗಿ, ಈಗ ಮಾಡಿರುವ ಹೆಚ್ಚಳವು ತುಸು ಜಾಸ್ತಿ ಎಂದು ಅನ್ನಿಸಬಹುದು. ಆದರೆ ಬೆಳೆಯುತ್ತಿರುವ ಅರ್ಥ ವ್ಯವಸ್ಥೆಯಲ್ಲಿ ಎಲ್ಲ ಉತ್ಪನ್ನಗಳ ಹಾಗೂ ಸೇವೆಗಳ ಬೆಲೆಯಲ್ಲಿ ಕಾಲಕಾಲಕ್ಕೆ ಹೆಚ್ಚಳ ಆಗುವುದು ಸಹಜ. ಬೆಲೆಯು ವರ್ಷಗಳ ಕಾಲ ಏರಿಕೆಯೇ ಆಗದಿದ್ದರೆ ಅದು ಅಸಹಜ. ಬೆಲೆ ಏರಿಕೆಯು ಹೆಚ್ಚಿನ ಗುಣಮಟ್ಟದ ಸೇವೆಗೆ ದಾರಿ ಮಾಡಿಕೊಡಲಿ.

ರಾಮಚರಣ್ ಶೆಟ್ಟಿ, ಕುಂದಾಪುರ

ರಾಜ್ಯದ ಜನ ಇದನ್ನು ಗಮನಿಸಬೇಕಿದೆ

ರಾಜ್ಯದ ಕೆಲವು ಸ್ವಾಮೀಜಿಗಳು, ಮಠಾಧೀಶರು, 'ಅವರಿಗೆ ಮುಖ್ಯಮಂತ್ರಿ ಸ್ಥಾನ ಕೊಡಿ, ಇವರಿಗೆ ಈ ಸ್ಥಾನ ನೀಡಿ' ಎಂದೆಲ್ಲ ಹೇಳುತ್ತಿರುವುದು ಬಹಳ ವಿಷಾದಕರ. ಜಗದ್ಗುರುಗಳು ಎಂದು ಹೇಳಿಕೊಳ್ಳುತ್ತಾ ತಮ್ಮ ಜಾತಿಯನ್ನು ವಿಜೃಂಭಿಸುವ ಕೆಲವು ಮಠಾಧೀಶರಿಂದಾಗಿ ಇಂದು ಸಮಾಜದಲ್ಲಿ ಶಾಂತಿಗಿಂತ ಅಸಹನೆಯೇ ಹೆಚ್ಚಾಗುತ್ತಿರುವುದು ದುರಂತ. ಈ ಸ್ವಾಮೀಜಿಗಳೆಲ್ಲರೂ ತಮ್ಮನ್ನು ತಾವು ಏನೆಂದು ತಿಳಿದುಕೊಂಡಿದ್ದಾರೆ? ಇವರಿಗೆ ರಾಜಕೀಯದಲ್ಲಿ ಆಸಕ್ತಿ ಇದ್ದಲ್ಲಿ ಪೀಠ ತ್ಯಜಿಸಿ ನೇರ ಅಖಾಡಕ್ಕೆ ಇಳಿಯಲಿ. ಧರ್ಮ ಬೋಧನೆ (!?) ಮಾಡುವ ಮುಖ್ಯ ಕೆಲಸ ಬಿಟ್ಟು 'ಇವರು ಮುಖ್ಯಮಂತ್ರಿಯಾಗಲಿ, ಇವರು ಅಧ್ಯಕ್ಷ ಆಗಲಿ' ಎಂದು ಹೇಳಲು ಇವರಿಗೇನು ಅಧಿಕಾರ?

ಇನ್ನು, ಉಪಮುಖ್ಯಮಂತ್ರಿಯವರೇ ಮುಖ್ಯಮಂತ್ರಿ ಬಳಿ ತಮಗೆ ಸ್ಥಾನ ಬಿಟ್ಟು ಕೊಡಿ ಅಂದಿದ್ದರೆ ಅದಕ್ಕೊಂದು ಅರ್ಥವಿರುತ್ತಿತ್ತು. ಮುಖ್ಯಮಂತ್ರಿ ಅದಕ್ಕೆ ಸೂಕ್ತ ಉತ್ತರ ಕೊಡುತ್ತಿದ್ದರೋ ಅಥವಾ ಧಾರಾಳತನ ತೋರುತ್ತಿದ್ದರೋ ಯಾರಿಗೆ ಗೊತ್ತು? ಈ ಸ್ವಾಮೀಜಿಗಳು ತಮ್ಮ ಮಿತಿ ಅರಿತು ನಡೆದರೆ ಚೆನ್ನ ಎಂಬುದು ಪ್ರಜ್ಞಾವಂತ ನಾಗರಿಕರ ಅಭಿಪ್ರಾಯ.

ಸಿರಿವಂತೆ ಚಂದ್ರಶೇಖರ್, ಸಿರಿವಂತೆ, ಸಾಗರ

ಜನರಿಗೆ ಬುದ್ಧಿ ಬರುವುದು ಎಂದು?

'ಪ್ರಾಣಿಗಳಿಗೂ ಬದುಕುವ ಹಕ್ಕು ಇದೆ' ಎಂಬ ಸದಾಶಿವ್ ಸೊರಟೂರು ಅವರ ಲೇಖನ (ಸಂಗತ, ಜುಲೈ 2) ಅರಿವು ಮೂಡಿಸುವಂತಿದೆ. ಲೇಖಕರಿಗೆ ಆದ ಅನುಭವ ನನಗೂ ಆಗಿದೆ. ಸುಮಾರು 40 ವರ್ಷಗಳ ಹಿಂದೆ ಗಜೇಂದ್ರಗಡ ಸಮೀಪದ ಕುಂಟೋಜಿ ಗ್ರಾಮದ ಒಂದು ಆಕಳು ನನ್ನ ದ್ವಿಚಕ್ರ ವಾಹನಕ್ಕೆ ಯಾವಾಗಲೂ ಬೆನ್ನುಹತ್ತಿ ಕೂಗುತ್ತಿತ್ತು. ಪಶುವೈದ್ಯನಾದ ನನಗೆ ಈ ಆಕಳಿನ ವರ್ತನೆ ಬಗ್ಗೆ ಕುತೂಹಲ ತಡೆಯಲಾಗಲಿಲ್ಲ. ಆಕಳಿನ ಕರುವಿಗೆ ಒಬ್ಬ ದ್ವಿಚಕ್ರ ಸವಾರ ಡಿಕ್ಕಿ ಹೊಡೆದು, ಅದು ಮೃತಪಟ್ಟಿತ್ತು ಎಂಬುದನ್ನು ಊರಿನ ಹಿರಿಯರೊಬ್ಬರು ನನಗೆ ತಿಳಿಸಿದರು. ಪ್ರಾಣಿಗಳಿಗೂ ಭಾವನೆಗಳಿವೆ, ತಮ್ಮ ಸಿಟ್ಟನ್ನು ಅವು ತೋರಿಸಬಲ್ಲವು ಎಂಬುದು ಸತ್ಯ. ನಿರ್ಭಾವುಕ ಜನರಿಗೆ ಬುದ್ಧಿ ಬರುವುದೆಂದೋ?

ಅನಿಲಕುಮಾರ ಮುಗಳಿ, ಧಾರವಾಡ

ಶಿಕ್ಷಣ ರಂಗ: ಆತ್ಮಾವಲೋಕನ ಬೇಕು

ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶದ್ವಾರದಂತೆ ಇರುವ ನೀಟ್ ಪರೀಕ್ಷೆಯು ಒಂದು ದಂಧೆಯಾಗಿದೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ. ಇದು ನೂರಕ್ಕೆ ನೂರು ಸರಿಯಾದ ಮಾತು! ಆದರೆ, 20-30 ವರ್ಷಗಳ ಹಿಂದೆ ಬಡ ಮತ್ತು ಕೆಳಮಧ್ಯಮ ವರ್ಗಗಳ ಕೈಗೂ ಎಟುಕುವಂತಿದ್ದ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣ ಹಳ್ಳಹಿಡಿದಿದ್ದು ಏಕೆ ಎನ್ನುವ ಆತ್ಮಾವಲೋಕನವನ್ನು ನಮ್ಮ ವ್ಯವಸ್ಥೆ ಮಾಡಿಕೊಳ್ಳಬೇಕು. ಏಕೆಂದರೆ, ಪೂರ್ವ ಪ್ರಾಥಮಿಕದಿಂದ ಎಂ.ಟೆಕ್, ಎಂ.ಡಿ.ವರೆಗಿನ ಕಾಲೇಜುಗಳ ಜುಟ್ಟು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವ ರಾಜಕಾರಣಿಗಳ ಮುಷ್ಟಿಯಲ್ಲೇ ಇದೆ.


ಪ್ರಾಮಾಣಿಕ ದುಡಿಮೆ ಮತ್ತು ಆದಾಯ ನೆಚ್ಚಿಕೊಂಡಿರುವ ಯಾರೊಬ್ಬರೂ ಮಕ್ಕಳನ್ನು ಒಳ್ಳೆಯ ಗುಣಮಟ್ಟದ ಶಾಲೆಗೆ ಸೇರಿಸುವುದು ಸಾಧ್ಯವಿಲ್ಲ ಎನ್ನುವ ಸ್ಥಿತಿ ಇದೆ. ರಾಹುಲ್ ಅವರು ಸಂಸತ್ತಿನಲ್ಲಿ ನೀಟ್ ವಿರುದ್ಧ ಗುಡುಗಿದ್ದಾರೆ, ನಿಜ. ಆದರೆ ಇದೇ ಸಂದರ್ಭದಲ್ಲಿ ಅವರದೇ ಪಕ್ಷದ ನೇತೃತ್ವದ ಸರ್ಕಾರವಿರುವ ನಮ್ಮ ರಾಜ್ಯದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಎನ್‌ಆರ್‌ಐ ಕೋಟಾ ಅಡಿ 500ಕ್ಕೂ ಹೆಚ್ಚು ಸೂಪರ್ ನ್ಯೂಮರರಿ ಸೀಟುಗಳನ್ನು ಸೃಷ್ಟಿಸಬೇಕೆಂಬ ಕೆಟ್ಟ ಆಲೋಚನೆ ಮುನ್ನೆಲೆಗೆ ಬಂದಿದೆ. ಇದರಿಂದ ಎಷ್ಟು ಕೋಟಿ ಹಣ ಬರುತ್ತದೆ ಎಂದು ವೈದ್ಯಕೀಯ ಶಿಕ್ಷಣ ಸಚಿವರೇ ತಮ್ಮ ಪತ್ರದಲ್ಲಿ ಹೇಳಿದ್ದಾರೆ. ನೀಟ್ ಸ್ವಚ್ಛವಾಗಬೇಕು, ನಿಜ. ಅದಕ್ಕಿಂತ ಮುಖ್ಯವಾಗಿ ಶಿಕ್ಷಣದ ಹೆಸರಿನಲ್ಲಿ ನಡೆಯುತ್ತಿರುವ ಅಸಹ್ಯಕರ ವ್ಯಾಪಾರ ನಿಲ್ಲಬೇಕು.

ಬಿ.ಎಸ್. ಜಯಪ್ರಕಾಶ ನಾರಾಯಣ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಡೆಂಗಿಗೆ ತತ್ತರಿಸಿದ ಕರುನಾಡು






ಬೆಂಗಳೂರಿನಲ್ಲಿ ಡೆಂಗಿ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಸೊಳ್ಳೆಗಳ ನಿಯಂತ್ರಣಕ್ಕೆ ಬಿಬಿಎಂಪಿ ಸಿಬ್ಬಂದಿಯೊಬ್ಬರು ಕಬ್ಬನ್ ಪಾರ್ಕ್‌ನಲ್ಲಿ ಫಾಗಿಂಗ್ ಮಾಡಿದರು

ಪ್ರಜಾವಾಣಿ ಚಿತ್ರ ಪ್ರಶಾಂತ್ ಎಚ್‌.ಜಿ.

ರಾಜ್ಯದಲ್ಲಿ ಡೆಂಗಿ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಏರುತ್ತಿದೆ. ಆರೋಗ್ಯ ಇಲಾಖೆಯ ಪ್ರಕಾರ, ಆರು ತಿಂಗಳ ಅವಧಿಯಲ್ಲಿ 6,377 ಪ್ರಕರಣಗಳು ವರದಿಯಾಗಿವೆ. ಆರು ಮಂದಿ ಮೃತಪಟ್ಟಿದ್ದಾರೆ. ವರ್ಷದಿಂದ ವರ್ಷಕ್ಕೆ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವುದನ್ನು ಅಂಕಿ ಅಂಶಗಳು ಹೇಳುತ್ತಿವೆ. ಪ್ರತಿ ಮಳೆಗಾಲದ ಅವಧಿಯಲ್ಲಿ ಜಾಸ್ತಿ ವರದಿಯಾಗುವ ಪ್ರಕರಣಗಳ ನಿಯಂತ್ರಣಕ್ಕೆ ಇಲಾಖೆ ಕೈಗೊಳ್ಳುತ್ತಿರುವ ಕ್ರಮಗಳು ಫಲಕಾರಿಯಾಗುತ್ತಿರುವಂತೆ ಕಾಣುತ್ತಿಲ್ಲ

ರಾಜ್ಯದಲ್ಲಿ ಡೆಂಗಿ ಹಾವಳಿ				
	1,10,325	49,854	6,377	6
	ಶಂಕಿತ ಪ್ರಕರಣಗಳು	ರಕ್ತದ ಮಾದರಿ ಸಂಗ್ರಹ	ದೃಢಪಟ್ಟ ಪ್ರಕರಣಗಳು	ಸಾವು

ಜುಲೈ 2, 2024ರ ಮಾಹಿತಿ



ರಾಜ್ಯದಲ್ಲಿ ಮಳೆ ಹೆಚ್ಚಾಗುತ್ತಿದ್ದಂತೆಯೇ ಡೆಂಗಿ ಜ್ವರದಿಂದ ಬಳಲುತ್ತಿರುವವರ ಸಂಖ್ಯೆಯೂ ಜಾಸ್ತಿಯಾಗುತ್ತಿದೆ. ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದಾದ್ಯಂತ ಎಲ್ಲ ಜಿಲ್ಲೆಗಳಲ್ಲೂ ಮೇ ತಿಂಗಳ ನಂತರ ಡೆಂಗಿ ಪ್ರಕರಣಗಳು ಗಣನೀಯವಾಗಿ ಏರಿಕೆ ಕಾಣುತ್ತಿವೆ. ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಆಸ್ಪತ್ರೆಗಳು, ಜಿಲ್ಲಾ ಆಸ್ಪತ್ರೆಗಳು ಸೇರಿದಂತೆ ಸರ್ಕಾರಿ ಆಸ್ಪತ್ರೆಗಳಲ್ಲಿ ಪತ್ತೆಯಾಗುವ ಡೆಂಗಿ ಪ್ರಕರಣಗಳ ಲೆಕ್ಕ ಮಾತ್ರ ಸಿಗುತ್ತಿದೆ. ಖಾಸಗಿ ಆಸ್ಪತ್ರೆಗಳು, ಕ್ಲಿನಿಕ್‌ಗಳು, ರೋಗ ಪತ್ತೆ ಕೇಂದ್ರಗಳಲ್ಲಿ ದೃಢಪಡುತ್ತಿರುವ ಪ್ರಕರಣಗಳು ಪೂರ್ಣ ಪ್ರಮಾಣದಲ್ಲಿ ವರದಿಯಾಗುತ್ತಿಲ್ಲ. ಪರೀಕ್ಷೆಗೆ ಒಳಪಡದೆ ಮನೆಯಲ್ಲೇ ಇದ್ದುಕೊಂಡು, ಸ್ವಯಂ ಚಿಕಿತ್ಸೆ ಪಡೆಯುತ್ತಿರುವವರ ಸಂಖ್ಯೆಯೂ ಗಣನೆಗೆ ಸಿಗುತ್ತಿಲ್ಲ.

ರಾಜಧಾನಿಯ ಬಿಬಿಎಂಪಿ ವ್ಯಾಪ್ತಿಯಲ್ಲಿ ಹೆಚ್ಚು ಪ್ರಕರಣಗಳು ವರದಿಯಾಗಿದ್ದು, ಜ್ವರ, ಮೈ-ಕೈ ನೋವು ರೋಗ ಲಕ್ಷಣದವರು ಆಸ್ಪತ್ರೆಗಳಿಗೆ ಭೇಟಿ ನೀಡುತ್ತಿರುವುದು ಹೆಚ್ಚಾಗಿದೆ. ಜಿಲ್ಲೆಗಳ ಪೈಕಿ, ಚಿಕ್ಕಮಗಳೂರಿನಲ್ಲಿ ಅತ್ಯಂತ ಹೆಚ್ಚು ಪ್ರಕರಣಗಳು ವರದಿಯಾಗಿದ್ದು, ಮೈಸೂರು, ಹಾವೇರಿ ಜಿಲ್ಲೆಗಳು ನಂತರದ ಸ್ಥಾನದಲ್ಲಿವೆ.

ಆರು ಮಂದಿ ಸಾವು

ಕೇಂದ್ರ ಸರ್ಕಾರ ಹೊರಡಿಸಿರುವ ಮಾರ್ಗಸೂಚಿಯ ಪ್ರಕಾರ, ಡೆಂಗಿ ಪ್ರಕರಣಗಳಲ್ಲಿ ಮರಣ ಪ್ರಮಾಣ ಶೇ 0.5ಕ್ಕಿಂತ ಹೆಚ್ಚಿದ್ದರೆ ತೀರಾ ಅಪಾಯದ ಸ್ಥಿತಿ. ರಾಜ್ಯದಲ್ಲಿ ಮರಣ ಪ್ರಮಾಣ 0.09 % ಇದೆ.

ರಾಜ್ಯದಲ್ಲಿ ಹಾಸನದಲ್ಲಿ ಇಬ್ಬರು, ಹಾವೇರಿ, ಬೆಂಗಳೂರು, ಧಾರವಾಡ ಮತ್ತು ಶಿವಮೊಗ್ಗಗಳಲ್ಲಿ ತಲಾ ಒಬ್ಬರು ಸೇರಿ 6 ಮಂದಿ ಮೃತಪಟ್ಟಿದ್ದಾರೆ.


ಪರೀಕ್ಷೆ ಜಾಸ್ತಿ ಮಾಡಿದ್ದರಿಂದ ಡೆಂಗಿ ಪ್ರಕರಣ ಹೆಚ್ಚು ಎಂಬಂತೆ ಕಾಣಿಸುತ್ತಿದೆ. ಡೆಂಗಿಯಿಂದ ಯಾರೊಬ್ಬರೂ ಮೃತಪಟ್ಟಿಲ್ಲ. ಜನರು ಆತಂಕಪಡುವ ಅಗತ್ಯ ಇಲ್ಲ

ಡಾ.ಅಶ್ವತ್ಥಬಾಬು, ಚಿಕ್ಕಮಗಳೂರು ಡಿಎಚ್‌ಒ

ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಯಲ್ಲಿ ವ್ಯವಸ್ಥೆ ಮಾಡಲಾಗಿದೆ. ರೋಗ ನಿಯಂತ್ರಣಕ್ಕಾಗಿ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ವಾರದಲ್ಲಿ ಒಂದು ದಿನ ಫಾಗಿಂಗ್ ಮಾಡಲಾಗುತ್ತಿದೆ

ಡಾ.ಪಿ.ಸಿ.ಕುಮಾರಸ್ವಾಮಿ, ಮೈಸೂರು ಡಿಎಚ್‌ಒ

ಜಿಲ್ಲಾವಾರು ಚಿತ್ರಣ



ಜಿಲ್ಲೆ	ಶಂಕಿತ ಪ್ರಕರಣಗಳು	ದೃಢಪಟ್ಟ ಪ್ರಕರಣಗಳು	ಸಾವು
ವಿಜಯಪುರ	2,516	166	
ಯಾದಗಿರಿ	1,288	5	
ಬೀದರ್	1,171	44	
ರಾಯಚೂರು	699	32	
ಕಲಬುರಗಿ	12,938	180	
ಬಾಗಲಕೋಟೆ	730	53	
ಕೊಪ್ಪಳ	1,771	92	
ಧಾರವಾಡ	2,010	254	1
ಗದಗ	1,294	49	
ಬೆಳಗಾವಿ	3,491	177	
ಬಳ್ಳಾರಿ	2,926	84	
ಉತ್ತರ ಕನ್ನಡ	1,653	113	
ವಿಜಯನಗರ	399	29	
ಶಿವಮೊಗ್ಗ	8,851	283	1
ಹಾವೇರಿ	11,132	463	1
ದಾವಣಗೆರೆ	2,141	159	
ಉಡುಪಿ	3,079	195	
ಚಿಕ್ಕಮಗಳೂರು	4,049	512	
ಚಿತ್ರದುರ್ಗ	2,483	265	
ದಕ್ಷಿಣ ಕನ್ನಡ	2,703	233	
ಚಿಕ್ಕಬಳ್ಳಾಪುರ	1,990	89	
ಹಾಸನ	6,536	205	2
ತುಮಕೂರು	3,069	170	
ಕೊಡಗು	6,179	102	
ಮೈಸೂರು	10,236	479	
ಬೆಂಗಳೂರು ಗ್ರಾಮಾಂತರ	467	15	
ಕೋಲಾರ	1,230	43	
ಮಂಡ್ಯ	2,861	189	
ಚಾಮರಾಜನಗರ	834	54	
ರಾಮನಗರ	2,734	53	
ಬೆಂಗಳೂರು ನಗರ+ ಬಿಬಿಎಂಪಿ	6,865	1,590	1

ನಕ್ಷೆಯಲ್ಲಿ: 200ಕ್ಕೂ ಹೆಚ್ಚು ಪ್ರಕರಣಗಳು

ಆಧಾರ: ಆರೋಗ್ಯ ಇಲಾಖೆ, ಬಿಬಿಸಿ, ಎಎಫ್‌ಪಿ, ರಾಯಿಟರ್ಸ್

ಡೆಂಗಿ: ಏನು, ಎತ್ತ?

- ಇದೊಂದು ವೈರಲ್ ಸೋಂಕು
- ಹಗಲಿನಲ್ಲಿ ಕಚ್ಚುವ ಈಡೀಸ್ ಈಜಿಪ್ಟಿ ಸೊಳ್ಳೆಗಳಿಂದ ಹರಡುತ್ತದೆ
- ತೆರೆದ ಪಾತ್ರೆ ಅಥವಾ ಇನ್ನಿತರ ಮುಚ್ಚಳ ಇಲ್ಲದಿರುವ ವಸ್ತುಗಳಲ್ಲಿ ಸಂಗ್ರಹವಾಗುವ ನೀರಿನಲ್ಲಿ ಸೊಳ್ಳೆಗಳು ಉತ್ಪತ್ತಿಯಾಗುತ್ತವೆ
- ಸೊಳ್ಳೆ ಕಚ್ಚಿದ 4–10 ದಿನಗಳ ಒಳಗೆ ರೋಗ ಲಕ್ಷಣ ಕಾಣಿಸಿಕೊಳ್ಳುತ್ತದೆ
- ತೀವ್ರ ಜ್ವರ, ಕಣ್ಣಿನ ಗುಡ್ಡೆಯ ಹಿಂಭಾಗದಲ್ಲಿ ನೋವು, ತಲೆ ನೋವು, ಮೈ-ಕೈ ನೋವು ಪ್ರಮುಖ ರೋಗ ಲಕ್ಷಣ
- ಪ್ಲೇಟ್‌ಲೆಟ್ ಸಂಖ್ಯೆ ಕಡಿಮೆಯಾಗಿರುವುದು ಮತ್ತು ಇತರ ರೋಗ ಲಕ್ಷಣಗಳಿಂದ ಡೆಂಗಿ ದೃಢ
- ನಿರ್ದಿಷ್ಟ ಚಿಕಿತ್ಸೆ, ಲಸಿಕೆ ಇಲ್ಲ
- ರೋಗ ಲಕ್ಷಣಗಳಿಗೆ ಅನುಸಾರ ಚಿಕಿತ್ಸೆ
- ಮುಂಜಾಗ್ರತೆಯೇ ಮದ್ದು, ಮನೆಯ ಸುತ್ತಮುತ್ತ ನೀರು ನಿಲ್ಲದಂತೆ ನೋಡಿಕೊಳ್ಳಬೇಕು
- ನಿರ್ಲಕ್ಷ್ಯ ವಹಿಸಿದರೆ ಜ್ವರ ಜೀವಕ್ಕೆ ಎರವಾಗಬಹುದು

ಜಾಗತಿಕ ಸಮಸ್ಯೆ

ನಮ್ಮ ರಾಜ್ಯ ಮತ್ತು ದೇಶ ಅಷ್ಟೇ ಅಲ್ಲ; ಜಾಗತಿಕ ಮಟ್ಟದಲ್ಲಿಯೂ ಡೆಂಗಿ ಹಾವಳಿ ತೀವ್ರವಾಗಿದೆ. ಅಮೆರಿಕ ಒಂದರಲ್ಲೇ ಏಪ್ರಿಲ್ ಹೊತ್ತಿಗೆ 70 ಲಕ್ಷ ಮಂದಿ ಡೆಂಗಿಯಿಂದ ನರಳಿದ್ದಾರೆ. ಇದು ದಾಖಲೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ. ಕಳೆದ ವರ್ಷ 46 ಲಕ್ಷ ಪ್ರಕರಣಗಳು ವರದಿಯಾಗಿದ್ದವು. ಐರೋಪ್ಯ ಒಕ್ಕೂಟದ ದೇಶಗಳು ಸೇರಿದಂತೆ ಜಗತ್ತಿನೆಲ್ಲೆಡೆ ಈಡಿಸ್ ಸೊಳ್ಳೆ ಉಪಟಳ ಹೆಚ್ಚಾಗಿದೆ. ಇದರ ಸಂತತಿ ಹೆಚ್ಚಾಗಲು ಹವಾಮಾನ ಬದಲಾವಣೆಯೂ ಒಂದು ಕಾರಣ ಎನ್ನಲಾಗುತ್ತಿದೆ. ಪ್ಯಾರಿಸ್‌ನಲ್ಲಿ ಇದೇ ತಿಂಗಳು ಒಲಿಂಪಿಕ್ಸ್ ಆರಂಭವಾಗಲಿರುವುದರಿಂದ ಫ್ರಾನ್ಸ್ ಸರ್ಕಾರ ಡೆಂಗಿ ನಿಯಂತ್ರಣಕ್ಕೆ ವಿಶೇಷ ಮುತುವರ್ಜಿ ವಹಿಸಿದೆ.

‘ರೂಪಾಂತರ’ದಲ್ಲಿ ರಾಜ್ ಶೆಟ್ಟಿ

ನಟ ರಾಜ್ ಬಿ ಶೆಟ್ಟಿ ‘ರೂಪಾಂತರ’ ಚಿತ್ರದೊಂದಿಗೆ ಬಂದಿದ್ದಾರೆ. ಇದರೊಂದಿಗೆ ‘ಒಂದು ಮೊಟ್ಟೆಯ ಕಥೆ’ ಚಿತ್ರತಂಡ ಮತ್ತೆ ಒಂದಾಗಿದೆ. ಮಿಥಿಲೇಶ್ ನಿರ್ದೇಶನದ ಈ ಚಿತ್ರಕ್ಕೆ ಸುಹಾನ್ ಪ್ರಸಾದ್ ಬಂಡವಾಳ ಹೂಡಿದ್ದಾರೆ.

ರಾಜ್ ಹಿಂದಿನ ಚಿತ್ರಗಳಾದ ‘ಟೋಬಿ’, ‘ಸ್ವಾತಿಮುತ್ತಿನ ಮಳೆ ಹನಿಯೇ’ ಚಿತ್ರಮಂದಿರಗಳಲ್ಲಿ ಅಷ್ಟೇನು ಸದ್ದು ಮಾಡಿರಲಿಲ್ಲ. ಜೊತೆಗೆ ರಾಜ್ ‘ಟರ್ಬೊ’ ಚಿತ್ರದೊಂದಿಗೆ ಮಲಯಾಳಂನತ್ತ ಮುಖ ಮಾಡಿದ್ದರು. ಹೀಗಾಗಿ ‘45’ ಚಿತ್ರದ ಹೊರತಾಗಿ ಅವರ ಮುಂದಿನ ಚಿತ್ರದ ಬಗ್ಗೆ ಕುತೂಹಲ ಹೆಚ್ಚಿತ್ತು.


‘ಕೆಲ ಸಿನಿಮಾಗಳು ಮನಸ್ಸಿಗೆ ಬಲು ಹತ್ತಿರ. ಅಂತಹ ಒಂದು ಸುಂದರವಾದ ಚಿತ್ರ ರೂಪಾಂತರ, ಈ ಸಿನಿಮಾದ ಭಾಗವಾಗಿರುವುದು ಜೊತೆಗೆ ಈ ಚಿತ್ರವನ್ನು ನಿಮ್ಮ ಮುಂದೆ ಪ್ರಸ್ತುತ ಪಡಿಸುವ ಜವಾಬ್ದಾರಿ ನನಗೆ ಲಭಿಸಿರುವುದು ನನ್ನ ವೃತ್ತಿ ಜೀವನದ ಭಾಗ್ಯ’ ಎಂದು ರಾಜ್ ತಮ್ಮ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದಾರೆ.

4–5 ವರ್ಷಗಳ ಹಿಂದೆಯೇ ಪ್ರಾರಂಭಗೊಂಡಿದ್ದ ‘ರೂಪಾಂತರ’ ಚಿತ್ರವನ್ನು ರಾಜ್ ತಮ್ಮ ಲೈಟರ್ ಬುದ್ಧ ಫಿಲಮ್ಸ್ ಮೂಲಕ ಪ್ರೆಸೆಂಟ್ ಮಾಡುತ್ತಿದ್ದಾರೆ. ಪ್ರವೀಣ್ ಶ್ರೀಯಾನ್ ಛಾಯಾಚಿತ್ರಗ್ರಹಣ, ಮಿಥುನ್ ಮುಕುಂದನ್ ಸಂಗೀತ ಚಿತ್ರಕ್ಕಿದೆ.



ಚಿತ್ರದ ಪೋಸ್ಟರ್

‘ಚಿನ್ನಮ್ಮ’ನ ಹಿಂದೆ ಬಿದ್ದ ಗಣಿ



‘ಚಿನ್ನಮ್ಮ’ ಹಾಡಿನ ದೃಶ್ಯ

ಸ್ಯಾಂಡಲ್‌ವುಡ್‌ನ ಗೋಲ್ಡನ್ ಸ್ಟಾರ್ ನಟ ಗಣೇಶ್ ನಟನೆಯ ‘ಕೃಷ್ಣಂ ಪ್ರಣಯ ಸಖಿ’ ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದೆ. ಸಿನಿಮಾ ಆಗಸ್ಟ್ 15ರಂದು ಬಿಡುಗಡೆಯಾಗುತ್ತಿದ್ದು, ಇತ್ತೀಚೆಗಷ್ಟೇ ಬಿಡುಗಡೆಗೊಂಡ ‘ಚಿನ್ನಮ್ಮ’ ಹಾಡು ಟ್ರೆಂಡಿಂಗ್‌ನಲ್ಲಿದೆ.

ಕವಿರಾಜ್ ಅವರು ಬರೆದು ಅರ್ಜುನ್ ಜನ್ಯ ಸಂಗೀತ ನೀಡಿರುವ ಈ ಹಾಡನ್ನು ಖ್ಯಾತ ಗಾಯಕ ಕೈಲಾಶ್ ಖೇರ್ ಹಾಗೂ ಇಂದು ನಾಗರಾಜ್ ಹಾಡಿದ್ದಾರೆ. ‘ಪ್ರಸ್ತುತ ಆಲ್ ಇಂಡಿಯಾ ‘ಯೂಟ್ಯೂಬ್ ಟ್ರೆಂಡಿಂಗ್’ ಪಟ್ಟಿಯಲ್ಲಿ ‘ಚಿನ್ನಮ್ಮ’ ಹಾಡು ಬಿಡುಗಡೆಯಾದ ನಾಲ್ಕು ದಿನಗಳಲ್ಲಿ 70 ಲಕ್ಷಕ್ಕೂ ಅಧಿಕ ವೀಕ್ಷಣೆಗೊಂಡು ಮೂರನೇ ಸ್ಥಾನದಲ್ಲಿದೆ’ ಎಂದು ಚಿತ್ರತಂಡ ತಿಳಿಸಿದೆ.

ತ್ರಿಶೂಲ್ ಎಂಟರ್‌ಟೈನ್ಮೆಂಟ್ ಲಾಂಛನದಲ್ಲಿ ಪ್ರಶಾಂತ್ ಜಿ. ರುದ್ರಪ್ಪ ಈ ಸಿನಿಮಾ ನಿರ್ಮಿಸಿದ್ದು, ಶ್ರೀನಿವಾಸರಾಜು ಆ್ಯಕ್ಷನ್ ಕಟ್ ಹೇಳಿದ್ದಾರೆ. ಈ ಚಿತ್ರದ ಪ್ರಮುಖಪಾತ್ರದಲ್ಲಿ ಶಶಿಕುಮಾರ್ ಅಭಿನಯಿಸಿದ್ದಾರೆ. ಗಣೇಶ್ ಅವರಿಗೆ ನಾಯಕಿಯಾಗಿ ಮಾಳವಿಕ ನಾಯರ್ ನಟಿಸಿದ್ದಾರೆ. ಶರಣ್ಯ ಶೆಟ್ಟಿ, ಶ್ರೀನಿವಾಸಮೂರ್ತಿ, ಸಾಧು ಕೋಕಿಲ, ರಂಗಾಯಣ ರಘು, ಶ್ರುತಿ, ಭಾವನ, ಅಶೋಕ್, ರಾಮಕೃಷ್ಣ, ಶಿವಧ್ವಜ್, ರಘುರಾಮ್, ಮಾನಸಿ ಸುಧೀರ್, ಅಂಬುಜಾ, ಗಿರಿ ಶಿವಣ್ಣ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

❌ **ಪಶ್ಚಿಮ ಬಂಗಾಳದ** ಬರಸಾತ್ ಪಟ್ಟಣದಲ್ಲಿ 11 ವರ್ಷದ ಬಾಲಕ ಕಾಣೆಯಾಗಿದ್ದ. ನಾಲ್ಕು ದಿನಗಳ ನಂತರ ಬಾಲಕನ ಮೃತದೇಹ ಪತ್ತೆಯಾಗಿತ್ತು. ಆ ಬಾಲಕನನ್ನು ಮಕ್ಕಳ ಅಂಗಾಂಗ ಕಳ್ಳಸಾಗಣೆದಾರರು ಕೊಂದಿದ್ದಾರೆ ಎನ್ನುವ ವದಂತಿ ಹರಡಿತು. ಬಾಲಕನ ಚಿತ್ರ ಮತ್ತು ಮೃತದೇಹದ ಚಿತ್ರಗಳು ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕವಾಗಿ ಹರಿದಾಡತೊಡಗಿದವು. ಎಲ್ಲೆಡೆ ಆತಂಕ ಮೂಡಿ, ಮಕ್ಕಳ ಅಪಹರಣಕಾರರು ಎಂದು ಒಬ್ಬ ಮಹಿಳೆ ಸೇರಿದಂತೆ ಹಲವರ ಮೇಲೆ ಗುಂಪು ಹಲ್ಲೆ ನಡೆಸಿದ ಪ್ರಕರಣಗಳು ವರದಿಯಾದವು. ಆದರೆ, ಬಾಲಕನನ್ನು ಮಕ್ಕಳ ಅಪಹರಣಕಾರರು ಕೊಂದಿದ್ದಾರೆ ಎನ್ನುವುದು ಸುಳ್ಳು ಸುದ್ದಿ.

✅ **ವಾಸ್ತವವಾಗಿ,** ಕೌಟುಂಬಿಕ ದ್ವೇಷಕ್ಕೆ ಸಂಬಂಧಿಸಿದಂತೆ ಬಾಲಕನ ಸಂಬಂಧಿಯೇ ಆತನನ್ನು ಕೊಂದಿದ್ದ. ಜನರು ಹಾಗೂ ಪೊಲೀಸರ ದಿಕ್ಕುತಪ್ಪಿಸಲು, ಇದು ಮಕ್ಕಳ ಅಪಹರಣಕಾರರ ಕೃತ್ಯ ಎನ್ನುವಂತೆ ಸುದ್ದಿ ಹಬ್ಬಿಸಿದ. ಮಕ್ಕಳ ಕಳ್ಳರ ಬಗ್ಗೆ ಎಚ್ಚರಿಕೆಯಿಂದಿರುವಂತೆ ಮಸೀದಿಯ ಮೂಲಕ ಪ್ರಚಾರ ಮಾಡಿದ. ಆದರೆ, ಪೊಲೀಸರು ಲಭ್ಯ ಸಾಕ್ಷ್ಯಗಳ ಆಧಾರದಲ್ಲಿ ತನಿಖೆ ನಡೆಸಿದಾಗ, ಆತನೇ ಕೊಲೆಗಾರ ಎನ್ನುವುದು ತಿಳಿದುಬಂತು. ಆತನನ್ನು ಬಂಧಿಸಿದ ಪೊಲೀಸರು, ಮಕ್ಕಳ ಅಪಹರಣಕಾರರ ವದಂತಿ ಸುಳ್ಳು ಎಂದು ಸಾರ್ವಜನಿಕ ಪ್ರಕಟಣೆಯನ್ನೂ ನೀಡಿದರು. ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಹರಡಿದ ಸಂಬಂಧ ನಾಲ್ವರನ್ನು ಬಂಧಿಸಿದರು. ‘ಆಲ್ಟ್ ನ್ಯೂಸ್’ ಈ ಬಗ್ಗೆ ಸ್ಥಳೀಯರನ್ನು ಮಾತನಾಡಿಸಿ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಜುಲೈ 3, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ದ್ವಾದಶಿ ಗಂ. 7-11 ನಕ್ಷತ್ರ: ರೋಹಿಣಿ ಗಂ. 28-08 ಯೋಗ: ಶೂಲ ಗಂ. 09-02 ಕರಣ: ತೈತಿಲ ಗಂ. 7-11, ಮಿಥುನ ಮಾಸದ 19 ನೇ ದಿನ, ಮಳೆನಕ್ಷತ್ರ: ಆರ್ದ್ರಾ 4.
ರಾಹುಕಾಲ : ಮಧ್ಯಾಹ್ನ 12-00 – 01-30
ಸೂರ್ಯೋದಯ : 06-12 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 27 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 3, 7

ಮೇಷ: ಆತ್ಮೀಯರಲ್ಲಿ ಭಾವನೆಗಳನ್ನು ಹಂಚಿಕೊಳ್ಳಲು ಸೂಕ್ತ ಸಮಯ ದೊರಕುವುದು. ಅತಿ ಆಲಸ್ಯ, ಬೇಜವಾಬ್ದಾರಿತನ ಅಭಿವೃದ್ಧಿಯನ್ನು ಕುಂಠಿತ-ಗೊಳಿಸುತ್ತದೆ. ಆರೋಗ್ಯದಲ್ಲಿ ಸಣ್ಣ-ಪುಟ್ಟ ಸಮಸ್ಯೆಗಳು ಎದುರಾಗಬಹುದು.

ವೃಷಭ: ಧಾರ್ಮಿಕ ಕೆಲಸಗಳಿಗಾಗಿ ಖರ್ಚುಗಳಿದ್ದರೂ ದೈವಬಲದಿಂದ ಎಲ್ಲಾ ವ್ಯವಹಾರಗಳಲ್ಲಿ ಉತ್ತಮ ಧನ ಆದಾಯವನ್ನು ಹೊಂದುವಿರಿ. ಮನೆಯಲ್ಲಿರುವ ಸಣ್ಣ ಮಕ್ಕಳ ಕೆಲವು ಮಾತುಗಳು ಶಿರೋವೇದನೆಗೆ ಕಾರಣವಾಗುವುದು.

ಮಿಥುನ: ಮೇಲಧಿಕಾರಿಗಳು ಹಾಗೂ ಹಿರಿಯರಿಂದ ಬಯಸಿದ ಉಪಕಾರವನ್ನು ಪಡೆಯಬಹುದು. ಚಿಕಿತ್ಸೆಗಳನ್ನು ತಪ್ಪಿಸದೆ ತೆಗೆದುಕೊಳ್ಳಿರಿ. ಹಳೆಯ ಸಮಸ್ಯೆಗಳೇ ಹೊಸ ರೂಪವನ್ನು ಪಡೆದು ಬರುವವು.

ಕರ್ಕಾಟಕ: ನಾಟಕ ಅಥವ ಸಿನಿಮಾದಲ್ಲಿ ನಟನೆ ಮಾಡುವಂಥವರಿಗೆ ಉತ್ತಮ ಅವಕಾಶಗಳ ಜತೆ ಹೆಸರು ಬರಲಿದೆ. ಭೇದ-ಭಾವ, ತಾರತಮ್ಯದ ಮಾತುಗಳು ಆಡುವುದನ್ನು ಕಡಿಮೆ ಮಾಡಿ. ಪುಣ್ಯಕ್ಷೇತ್ರಗಳಿಗೆ ಹೋಗಿಬರುವ ಸಾಧ್ಯತೆಗಳಿವೆ.

ಸಿಂಹ: ಸಂತಾನ ಪ್ರಾಪ್ತಿಯಾಗಲಿದ್ದು ಸಂಸಾರದಲ್ಲಿ ಸಂತೃಪ್ತ ಜೀವನ ನಡೆಸುವಂ-ತಾಗುತ್ತದೆ. ಆತ್ಮವಿಶ್ವಾಸ ಹೆಚ್ಚಿಸಿ ಕೊಂಡು ಪರಿಶ್ರಮದಿಂದ ಪ್ರಗತಿಯ ಹಾದಿಗೆ ಹೋಗುವಿರಿ. ಹಾಳು ವ್ಯಸನಗಳಿಗೆ ಒಳಗಾಗುವ ಪರಿಸ್ಥಿತಿ ತಪ್ಪಿಸಿಕೊಳ್ಳಿರಿ.

ಕನ್ಯಾ: ಹೊಸದನ್ನು ಸಾಧಿಸುವ ಪ್ರಚೋದನೆ ನಿಮ್ಮನ್ನು ಸೆಳೆಯಲಿದೆ. ಈಗ ನಡೆಯುತ್ತಿರುವ ಕೆಲಸ ಕಾರ್ಯಗಳು ನಿಲ್ಲುವಂತಾಗಬಹುದು. ಶಿಸ್ತುಬದ್ಧ ನಿಯಮದ ಆಹಾರದಿಂದ ಆರೋಗ್ಯ ವೃದ್ಧಿಯಾಗುವುದು.

ತುಲಾ: ಮೂರನೇ ವ್ಯಕ್ತಿಯ ಮಾತುಗಳನ್ನು ಕೇಳಿಕೊಂಡು ಸಂಬಂಧಿಗಳಲ್ಲಿ ಇಲ್ಲಸಲ್ಲದ ವಿಚಾರಗಳಿಗೆ ಜಗಳನ್ನು ತೆಗೆಯದಿರಿ. ರಕ್ತದೊತ್ತಡವನ್ನು ನಿಯಂತ್ರ-ಣದಲ್ಲಿರಿಸಲು ಯೋಗಾಭ್ಯಾಸ ಅಥವಾ ಧ್ಯಾನ ಮಾಡುವುದನ್ನು ಅಭ್ಯಸಿಸಿ.

ವೃಶ್ಚಿಕ: ವಂಶದ ಕುಡಿಯು ನೀವು ಬಯಸಿದ ರೀತಿಯಲ್ಲಿಯೇ ಉತ್ತಮ ಜೀವನ ನಡೆಸುತ್ತಿರುವುದನ್ನು ಜನರು ಹೊಗಳುವುದು ಕೇಳಿ ಆನಂದ ಹೊಂದುವಿರಿ. ಉದ್ಯಮಿಗಳಿಗೆ ಅನುಕೂಲಕರ ಸನ್ನಿವೇಶ ನಿರ್ಮಾಣವಾಗಲಿದೆ.

ಧನು: ಅತ್ಯಂತ ಸೂಕ್ಷ್ಮಮನಸ್ಕರಾಗಿರುವ ನಿಮಗೆ ಇತರರು ಹೇಳ ಬಹುದಾದ ಮಾತುಗಳನ್ನು ಸ್ವೀಕರಿಸುವಂಥ ಸಾಮರ್ಥ್ಯ ಇಲ್ಲವಾಗುವುದು. ಇನ್ನೊಬ್ಬರಿಗೆ ಹೇಳಿಕೊಡುವ ಮುಂಚೆ ನಿಮ್ಮ ಜ್ಞಾನವು ಎಷ್ಟಿದೆ ಎಂದು ತಿಳಿಯಿರಿ.

ಮಕರ: ವಿದ್ಯುತ್ ಉಪಕರಣಗಳನ್ನು ಸರಿ ರೀತಿಯಲ್ಲಿ ಬಳಸದೇ ಇರುವುದರಿಂದ ಅಪಾಯಗಳು ಉಂಟಾಗಬಹುದು. ಆತ್ಮವಿಶ್ವಾಸ ಹೆಚ್ಚಿಸುವ ಕೆಲಸಗಳಲ್ಲಿ ತೊಡಗುವಿರಿ. ದುರ್ಗಾಪರಮೇಶ್ವರಿಯ ಆರಾಧನೆಯಿಂದ ಶುಭ.

ಕುಂಭ: ನಿನ್ನೆ ಇದ್ದಂಥ ವಸ್ತುಗಳು ಇಂದು ಕಾಣೆಯಾಗುವುದು. ನಿರ್ದಿಷ್ಟವಾಗಿ ಒಬ್ಬ ವ್ಯಕ್ತಿಯ ಮೇಲೆ ಅನುಮಾನವನ್ನು ತರಿಸುತ್ತದೆ. ವಿದೇಶಿ ಸಂಪರ್ಕಗಳಿಂದ ಉತ್ತಮ ಪ್ರಯೋಜನವು ಆಗಲಿದೆ. ಕೈಗಳ ಸ್ವಚ್ಛತೆಯ ಮೇಲೆ ಗಮನ ಹರಿಸಿ.

ಮೀನ: ಕುಟುಂಬದವರ ಜೊತೆ ನಡೆಯುತ್ತಿದ್ದ ಮುಸುಕಿನ ಗುದ್ದಾಟವನ್ನು ಮಾತನಾಡಿ ಬಗೆಹರಿಸಿಕೊಳ್ಳುವಿರಿ. ವ್ಯಾಪಾರದಲ್ಲಿ ಅನಿರೀಕ್ಷಿತ ಬದಲಾವಣೆ-ಯನ್ನು ಕಾಣುವ ಸಾಧ್ಯತೆ ಇದೆ. ಇತರರ ವಿಷಯದಲ್ಲಿ ತಲೆ ಹಾಕದಿರಿ.

ದೀಪದ ಬೆಳಕು

ನುಡಿ ಬೆಳಗು



ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಬುದ್ಧನ ಪ್ರೀತಿಯ ಸವಾರಿ ತನ್ನೂರಿಗೆ ಬಂದ ವಿಷಯ ತಿಳಿದು ಈಕೆ ಹೆಚ್ಚು ಪುಳಕಿತಳಾದಳು. ಅವನ ಈ ಮೊದಲು ಹತ್ತಿರದಿಂದ ಕಂಡಾಗಿನಿಂದ ಅವಳು ಅವನ ಆರಾಧಿಸುತ್ತಿದ್ದಳು. ರಾಜಗೃಹ ಊರಿನ ಜನ ಬುದ್ಧನ ಗುಣಗಾನ ಮಾಡುವುದು ಕೇಳಿ ಖುಷಿ ಪಡುತ್ತಿದ್ದಳು. ವೇಣುವನ ಎಂಬಲ್ಲಿ ಆತ ತನ್ನ ನೂರಾರು ಶಿಷ್ಯರೊಂದಿಗೆ ಬಂದು ತಂಗಿದ್ದ. ಅವನ ಜೀವಪ್ರೇಮದ ಸಂದೇಶ ಕೇಳಲು ಜನ ಹಿಂಡಾಗಿ ಬರತೊಡಗಿದರು. ದಿವ್ಯವಾದ ಉಡುಗೊರೆಗಳನ್ನು ಅವನಿಗೆ ಅರ್ಪಿಸುತ್ತಿದ್ದರು. ಎಲ್ಲರಂತೆ ತಾನು ಹೋಗಿ ಆತನ ಕಾಣುವ ಆಸೆ ಇಮ್ಮಡಿಯಾಗಿತ್ತು. ಆದರೆ ಬುದ್ಧನಿಗೆ ನಿವೇದಿಸಲು ತನ್ನ ಬಳಿ ಏನೂ ಇಲ್ಲವಲ್ಲ ಎಂದು ಯೋಚಿಸಿ ಆಕೆ ದುಃಖಿತಳಾದಳು. ಕೊನೆಗೆ ಒಂದು ಹಿಡಿ ಅನ್ನವನ್ನಾದರೂ ತಯಾರಿಸಿ ಬುದ್ಧನ ಕಡೆಯ ಒಬ್ಬ ಭಿಕ್ಷುವಿಗೆ ತಿನ್ನಿಸಿದರೆ ತನ್ನ ಜನ್ಮ ಸಾರ್ಥಕವಾಗಬಹುದು ಎಂದುಕೊಂಡಳು. ಮುಂಜಾನೆ ಎದ್ದು ಭಿಕ್ಷೆ ಬೇಡುತ್ತಾ ಪ್ರತಿ ಮನೆಗೂ ಹೋದಳು. ಇದರಿಂದ ಸಾಕಷ್ಟು ಅಕ್ಕಿ ಸಿಕ್ಕಿತು. ಮಧ್ಯಾಹ್ನದ ಹೊತ್ತಿಗೆ ತನ್ನ ಗುಡಿಸಲಿಗೆ ಬಂದು ಅನ್ನ ಬೇಯಿಸಿದಳು. ಸಂಜೆಯ ತನಕ ದಾರಿ ನೋಡುತ್ತಾ ಕೂತರೂ ಯಾವ ಭಿಕ್ಷುವೂ ಅತ್ತ ಕಡೆ ಸುಳಿಯಲಿಲ್ಲ. ಇದರಿಂದ ಆ ಬಡವಿಯ ಮನಸ್ಸಿಗೆ ತೀರಾ ವ್ಯಥೆಯಾಯಿತು.

ಬುದ್ಧನಿಗೆ ತನ್ನ ಸೇವೆ ಹೇಗೆ ಸಮರ್ಪಿಸುವುದೆಂದು ಆಕೆ ಮತ್ತೆ ಚಿಂತಿಸಿದಳು. ಅಕ್ಕಿಯ ಜೊತೆ ಜನರು ಕೊಟ್ಟ ಪುಡಿಗಾಸು ತನ್ನ ಗಂಟಲ್ಲಿರುವುದು ನೆನಪಿಗೆ ಬಂತು. ತಕ್ಷಣ ಎದ್ದವಳೆ ಪುಡಿಗಾಸು ಹಿಡಿದು ಅಂಗಡಿಗೆ ಹೋಗಿ ದೀಪದೆಣ್ಣೆ ಕೊಂಡಳು. ಬುದ್ಧ ವಿಹಾರದಲ್ಲಿ ರಾತ್ರಿಗೆ ಸಾವಿರಾರು ಉರಿಯುವ ದೀಪಗಳು ಸಿದ್ಧವಾಗುತ್ತಿದ್ದವು. ಅಳುಕುತ್ತಲೇ ಯಾರಿಗೂ ಕಾಣದಂತೆ ಅಲ್ಲಿಗೆ ಹೋದಳು. ತಾನು ತಂದ ಎಳ್ಳೆಣ್ಣೆ ಅಲ್ಲಿನ ಯಾವ ಹಣತೆಯ ಒಡಲಿಗೂ ತಾಕುವಂತಿರಲಿಲ್ಲ. ನಾಚಿಕೆ ಎನಿಸಿತು. ಆದರೂ ಆಕೆ ಧೈರ್ಯವಾಗಿ ನಿಂತು ಪುಟಾಣಿ ಮುರುಕು ಮಣ್ಣಿನ ಹಣತೆ ಹುಡುಕಿದಳು. ತಾನು ತಂದಿದ್ದ ದೀಪದೆಣ್ಣೆ ಅದಕ್ಕೆ ಸುರಿದು ಬತ್ತಿ ಹತ್ತಿಸಿ, ಕ್ಷಣ ಹೊತ್ತು ನಿಂತಳು. ಮನಸ್ಸಿನಲ್ಲೇ ಬುದ್ಧನ ಆಶೀರ್ವಾದ ಬೇಡಿಕೊಂಡು ಹೊರಟು ಬಿಟ್ಟಳು.

ಆ ದಿನ ಸರೊತ್ತಿನಲ್ಲಿ ಬಲವಾದ ಗಾಳಿಯೊಂದು ಬೀಸಿತು. ವಾಯು ಅಬ್ಬರಕ್ಕೆ ಅಲ್ಲಿದ್ದ ಹಣತೆಗಳೆಲ್ಲಾ ಬತ್ತಿ ಹೋಗಿ ಕತ್ತಲಾವರಿಸಿತು. ಆದರೆ ಅಚ್ಚರಿ ಎಂಬಂತೆ ಆ ಬಡವಿ ಹಚ್ಚಿ ಹೋಗಿದ್ದ ಪುಟಾಣಿ ದೀಪ ಆರದೆ ತಾನೊಂದೇ ನಗುತ್ತಾ ನಿಂತಿತ್ತು. ಈ ಸೋಜಿಗವನ್ನು ಭಿಕ್ಷುಗಳು ಬುದ್ಧನಿಗೆ ತಲುಪಿಸಿ ‘ದೊಡ್ಡ ದೊಡ್ಡ ಸೊಡರುಗಳೇ ಗಾಳಿ ಹೊಡೆತಕ್ಕೆ ಶರಣಾಗಿ ನಂದಿ ಹೋದವು. ಆದರೆ ಅಲ್ಲೊಂದು ಪುಟ್ಟ ಹಣತೆ ಮಾತ್ರ ಆರದೆ ಇನ್ನೂ ಉರಿಯುತ್ತಿದೆ’ ಎಂದು ನುಡಿದರು.

ಅವರ ಮಾತು ಕೇಳಿ ಮುಗುಳ್ನಕ್ಕ ಬುದ್ಧ ‘ಆ ಹಣತೆ ಹಚ್ಚಿದವರ ಮನಸ್ಸು ಪರಿಶುದ್ಧವಾದುದ್ದು. ಅವರ ಪ್ರೀತಿ, ಗೌರವ, ಮಮಕಾರಗಳು ಬೆಲೆ ಕಟ್ಟಲಾಗದ ಅಮೂಲ್ಯ ಮೌಲ್ಯಗಳು. ಯಾವ ಅಪೇಕ್ಷೆಯೂ ಇಲ್ಲದೆ ನಿರ್ಮಲ ಮನಸ್ಸಿನಿಂದ ಹಚ್ಚಲಾದ ಇಂತಹ ಹಣತೆಗಳನ್ನು ಅಷ್ಟು ಸುಲಭಕ್ಕೆ ಆರಿಸಲಾಗದು. ಹೃದಯದಾಳದಿಂದ ಹುಟ್ಟುವ ನಿಜವಾದ ಬೆಳಕು ಎಂದಿಗೂ ಬತ್ತುವುದಿಲ್ಲ’ ಎಂದನು.

ಪದಬಂಧ 5730


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

5.ದೊಡ್ಡ ಗಾತ್ರದ ಜಲಚರ ಸಸ್ತನಿ (4)
6.ಮಧುರವಾದ ಧ್ವನಿ (4)
7.ಹೆಚ್ಚಾಗಿಲ್ಲದ್ದಕ್ಕೇ ಹೀಗೆ ಕೊರತೆ! (3)
9.ಪಗಡೆದಾಳದ ಸೂಚಿತ ಸಂಖ್ಯೆ ನೋಡುತ್ತಿರುವ ಪತಿವ್ರತೆ (3)
10.ತಪ್ಪು ಉದ್ದೇಶಕ್ಕೆ ಬಳಸುವುದು (5)
11.ಆ ಕಾಳನ್ನೆಲ್ಲಾ ಮೇಯ್ದ ಹಸು (3)
12.ಬೆಳಗಿನ ಜಾವವಿದು (3)
16.ಪ್ರಯೋಜನವಿಲ್ಲದ ಮಾತು (4)
17.ಉಗ್ರವಾದ ಹೊಡೆದಾಟ (4)

ಮೇಲಿಂದ ಕೆಳಕ್ಕೆ

1.ರೂಢಿಗೆ ವಿರೋಧವಾದ ನಡೆ (4)
2.ಫಲದ ಹತ್ತಿರವಿರಿಸಿದ ಥಾಲು (3)
3.ನೂಲನ್ನು ತೆಗೆಯುವ ಉಪಕರಣ (3)
4.ಅತಿಯಲ್ಲಿನ ದುರ್ದಸೆ (4)
8.ಮಸ್ತಿಷ್ಕ ಇಲ್ಲಿದೆ (3)
9.ಗಮನವಿಟ್ಟು ವೀಕ್ಷಿಸಿದ ಆಕಾಶ (3)
11.ಆದಾಯ ಮತ್ತು ಖರ್ಚು (4)
13.ಒಮ್ಮೆಲೆ ಕೆಳಗೆ ಕುಳಿತುಕೊಳ್ಳು (4)
14.ಪಥದಲ್ಲಿ ಸಾಗುವಾಗ ಕೈಗೊಡಿರುವ ಪ್ರತಿಜ್ಞೆ (3)
15.ಮಾನಿನಿಯ ಮೇಲೆ ಈ ಸಂದೇಹ! (3)



5729ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹರವಿ 3.ಶೀತವಲಯ
5.ಸರಕು 6.ಪಾರಿವಾಳ
7.ಅಗ್ನಿಶಾಮಕದಳ 10.ನಳಪಾಕ
11.ಪಿನಾಕ 15.ಜಲಸ್ತಂಭನ
16.ಕಸಾಯಿ

ಮೇಲಿಂದ ಕೆಳಕ್ಕೆ:
1.ಹಚ್ಚೆ 2.ವಿಚಾರ
3.ಶೀರ್ಷ 4.ಯಮಳ
5.ಸಗಣಿ 6.ಪಾನಕ
8.ಶಾಸಕ 9.ಶವಕ
10.ನದೀಜ 12.ನಾಯಕ
13.ದಿನ 14.ಕಾಯಿ

ಸುಡೊಕು 6115

9		1			7		3	
	7		2	3				
5		2		1		9		7
2		5					7	
				5	3	8		9
	9		8				5	
4		3			2			
	5			4		7	9	2
7		9	6		5		1	


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6114 ಸುಡೊಕು

8	9	5	6	7	2	4	1	3
7	3	1	9	5	4	6	8	2
6	2	4	3	1	8	7	5	9
5	8	3	7	6	9	1	2	4
1	7	6	2	4	5	3	9	8
2	4	9	8	3	1	5	6	7
9	5	7	1	8	3	2	4	6
4	6	2	5	9	7	8	3	1
3	1	8	4	2	6	9	7	5

ಷೇರುಪೇಟೆ ವಹಿವಾಟು




ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,141
ಇಂದಿನ ಅಂತ್ಯ	24,123
▼	18
ದಿನದ ಕನಿಷ್ಠ	24,056

ವಿನಿಮಯ ದರ

$ ಡಾಲರ್	83.48
£ ಪೌಂಡ್	105.50
€ ಯುರೊ	89.45
¥ ಯೆನ್ (100ಕ್ಕೆ)	52

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹560
12 ಕ್ಕೆ	₹75
ಮೈಸೂರು	
100ಕ್ಕೆ	₹565

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1540 (1530)
ಸೋಯಾ (ರಿಫೈನ್ಡ್)	₹975 (965)
ಸೂರ್ಯಕಾಂತಿ (ರಿಫೈನ್ಡ್)	₹972 (960)
ಪಾಮೋಲಿನ್	₹927 (918)

ಆಕಸ್ಮಿಕ ಲಾಭ ತೆರಿಗೆ ಹೆಚ್ಚಳ

ನವದೆಹಲಿ (ಪಿಟಿಐ): ದೇಶೀಯವಾಗಿ ಉತ್ಪಾದಿಸುವ ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭ ತೆರಿಗೆಯನ್ನು ಕೇಂದ್ರ ಸರ್ಕಾರವು ಪ್ರತಿ ಟನ್‌ಗೆ ₹6 ಸಾವಿರಕ್ಕೆ ಹೆಚ್ಚಿಸಿದೆ.

ಈ ಹಿಂದೆ ಆಕಸ್ಮಿಕ ಲಾಭ ತೆರಿಗೆಯು ಪ್ರತಿ ಟನ್‌ಗೆ ₹3,250 ಇತ್ತು. ಪರಿಷ್ಕೃತ ದರವು ಮಂಗಳವಾರದಿಂದಲೇ ಜಾರಿಗೆ ಬಂದಿದೆ ಎಂದು ಸರ್ಕಾರ ತಿಳಿಸಿದೆ.

ಪೆಟ್ರೋಲ್, ಡೀಸೆಲ್ ಮತ್ತು ವಿಮಾನ ಇಂಧನದ ಮೇಲೆ ವಿಶೇಷ ಹೆಚ್ಚುವರಿ ಅಬಕಾರಿ ಸುಂಕ (ಎಸ್‌ಇಎಡಿ) ವಿಧಿಸದೆ ಯಥಾಸ್ಥಿತಿ ಕಾಯ್ದುಕೊಂಡಿದೆ.

ಸೆಬಿಯಿಂದ ‘ಅಸಂಬದ್ಧ’ ಕ್ರಮ: ಶಾರ್ಟ್ ಸೆಲ್ಲರ್ ಕಂಪನಿ ಆರೋಪ

ಹಿಂಡೆನ್‌ಬರ್ಗ್‌ಗೆ ನೋಟಿಸ್

ನವದೆಹಲಿ (ಪಿಟಿಐ): ಅದಾನಿ ಸಮೂಹದ ವಿರುದ್ಧ ಗಂಭೀರ ಆರೋಪ ಮಾಡಿದ್ದ ಅಮೆರಿಕ ಮೂಲದ ಶಾರ್ಟ್ ಸೆಲ್ಲರ್ ಕಂಪನಿ ಹಿಂಡೆನ್‌ಬರ್ಗ್ ರಿಸರ್ಚ್‌ಗೆ, ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಷೋಕಾಸ್ ನೋಟಿಸ್ ನೀಡಿದೆ.

ಷೇರುಪೇಟೆಯ ವಾಸ್ತವಿಕ ಬೆಲೆಗಿಂತ ಕೃತಕ ಬೆಲೆಯಲ್ಲಿ ಅದಾನಿ ಸಮೂಹದ ಷೇರುಗಳು ಮಾರಾಟವಾಗುತ್ತಿವೆ ಎಂದು 2023ರ ಜನವರಿಯಲ್ಲಿ ಹಿಂಡೆನ್‌ಬರ್ಗ್ ವರದಿ ಪ್ರಕಟಿಸಿತ್ತು. ಈ ವರದಿಯಲ್ಲಿ ಉದ್ದೇಶಪೂರ್ವಕವಾಗಿ ವಾಸ್ತವಾಂಶಗಳನ್ನು ತಿರುಚಲಾಗಿದೆ ಎಂದು ಸೆಬಿ ನೀಡಿರುವ ನೋಟಿಸ್‌ನಲ್ಲಿ ಹೇಳಲಾಗಿದೆ.

ಲಾಭದ ಆಸೆಯಿಂದ ಅದಾನಿ ಸಮೂಹಕ್ಕೆ ಸೇರಿದ ಸಂಘಟಿತ ಷೇರನ್ನು ಮಾರಾಟಕ್ಕಿಡುವಲ್ಲಿಯೂ ನಿಯಮಾವಳಿ ಉಲ್ಲಂಘಿಸಲಾಗಿದೆ ಎಂದು ಹೇಳಿದೆ.

ಜೂನ್ 26ರಂದು ಇ–ಮೇಲ್ ಮೂಲಕ ಹಿಂಡೆನ್‌ಬರ್ಗ್‌ಗೆ 46 ಪುಟಗಳ ನೋಟಿಸ್ ನೀಡಿದ್ದು, 21 ದಿನದ ಒಳಗೆ ಉತ್ತರಿಸುವಂತೆ ಸೂಚಿಸಿದೆ.

ಯಾವುದೇ ಕಂಪನಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಕ್ಕೂ ಪೂರ್ವಭಾವಿಯಾಗಿ ಸೆಬಿ ಷೋಕಾಸ್ ನೋಟಿಸ್ ನೀಡುತ್ತದೆ. ಬಳಿಕ ಅಂತಹ ಕಂಪನಿಗೆ ದಂಡ ವಿಧಿಸುವುದು ಮತ್ತು ಭಾರತದ ಷೇರು ಮಾರುಕಟ್ಟೆಯಲ್ಲಿ ಭಾಗವಹಿಸದಂತೆ ನಿರ್ಬಂಧ ಹೇರುವ ಸಾಧ್ಯತೆ ಇರುತ್ತದೆ.

ಅಸಂಬದ್ಧ ಕ್ರಮ: ‘ನೋಟಿಸ್ ನೀಡಿರುವುದು ಅಸಂಬದ್ಧ ಕ್ರಮವಾಗಿದೆ. ಭಾರತದಲ್ಲಿ ವೈಯಕ್ತಿಕವಾಗಿ ಪ್ರಭಾವಶಾಲಿಯಾದವರು ವಂಚನೆ ಎಸಗಿದ್ದಾರೆ. ಅವರ ವಿರುದ್ಧದ ಹೋರಾಟ ಮಾಡುವವರನ್ನು ಮೌನಗೊಳಿಸುವ ಹಾಗೂ ಬೆದರಿಕೆವೊಡ್ಡುವುದು ಈ ನೋಟಿಸ್‌ನ ತಂತ್ರವಾಗಿದೆ’ ಎಂದು ಹಿಂಡೆನ್‌ಬರ್ಗ್ ರಿಸರ್ಚ್ ಪ್ರತಿಕ್ರಿಯಿಸಿದೆ.

‘ಹಲವು ವರ್ಷಗಳಿಂದ ಅದಾನಿ ಸಮೂಹವು ಕೃತಕ ಬೆಲೆಯಲ್ಲಿ ಷೇರುಗಳನ್ನು ಮಾರಾಟ ಮಾಡುತ್ತಿದ್ದು, ವರದಿ ಮೂಲಕ ಇದನ್ನು ಬಹಿರಂಗಪಡಿಸಲಾಗಿದೆ’ ಎಂದು ತಿಳಿಸಿದೆ.

ಅದಾನಿ ಸಮೂಹವು ಈ ಎಲ್ಲಾ ಆರೋಪಗಳನ್ನು ನಿರಾಕರಿಸಿದೆ.

‘ವಿವಿಧ ಕಂಪನಿಗಳನ್ನು ಬಳಸಿಕೊಂಡು ಅದಾನಿ ಸಮೂಹದ ಷೇರುಗಳನ್ನು ಮಾರಾಟ ಮಾಡಿದ್ದೇವೆ. ಇದರಿಂದ ಲಕ್ಷಾಂತರ ರೂಪಾಯಿ ಲಾಭಗಳಿಸಿದ್ದೇವೆ ಎಂಬ ಆರೋಪ ನಿರಾಧಾರವಾದುದು. ಭಾರತದಲ್ಲಿ ನಮಗೆ ಹೂಡಿಕೆಗೆ ಸಂಬಂಧಿಸಿದಂತೆ ಒಬ್ಬರೇ ಪಾಲುದಾರರಿದ್ದಾರೆ. ಅದಾನಿ ಷೇರುಗಳ ಶಾರ್ಟ್ ಸೆಲ್ಲಿಂಗ್ ಮೂಲಕ ₹34 ಕೋಟಿ ಲಾಭ ಪಡೆಯಲಾಗಿದೆ’ ಎಂದು ಹಿಂಡೆನ್‌ಬರ್ಗ್ ಹೇಳಿದೆ.

ಆದರೆ, ತನ್ನ ಪಾಲುದಾರ ಕಂಪನಿಯ ಹೆಸರನ್ನು ಬಹಿರಂಗಪಡಿಸಿಲ್ಲ.

‘ಉದ್ಯಮಿ ಗೌತಮ್ ಅದಾನಿ ಇಲ್ಲಿಯವರೆಗೂ ನಮ್ಮ ವರದಿಯಲ್ಲಿನ ಆರೋಪಗಳಿಗೆ ಉತ್ತರಿಸುವಲ್ಲಿ ವಿಫಲರಾಗಿದ್ದಾರೆ. ಅವರ ಸಹೋದರ ವಿನೋದ್ ಅದಾನಿ ಮತ್ತು ಸಹವರ್ತಿಗಳಿಂದ ನಿಯಂತ್ರಣಕ್ಕೆ ಒಳಪಟ್ಟಿರುವ ವಿದೇಶಗಳಲ್ಲಿರುವ ಕಂಪನಿಗಳ ಬಗ್ಗೆಯೂ ವರದಿಯಲ್ಲಿ ಪುರಾವೆ ಒದಗಿಸಲಾಗಿದೆ’ ಎಂದು ತಿಳಿಸಿದೆ.

‘ಕೋಟಕ್ ಹೆಸರು ಮರೆಮಾಚಲು ಯತ್ನ’

ಅದಾನಿ ಸಮೂಹದ ಷೇರುಗಳಿಂದ ಅನಾಮಧೇಯ ಹೂಡಿಕೆದಾರರಿಗೆ ಲಾಭ ಮಾಡಿಕೊಡಲು ಉದ್ಯಮಿ ಉದಯ್ ಕೋಟಕ್ ಸ್ಥಾಪಿಸಿರುವ ಕೋಟಕ್ ಮಹೀಂದ್ರ ಬ್ಯಾಂಕ್, ಸಾಗರೋತ್ತರ ಫಂಡ್ ಸೃಷ್ಟಿಸಿದೆ ಎಂದು ಹಿಂಡೆನ್‌ಬರ್ಗ್ ರಿಸರ್ಚ್ ಆರೋಪಿಸಿದೆ.

ಆದರೆ, ಸೆಬಿ ನೀಡಿರುವ ನೋಟಿಸ್‌ನಲ್ಲಿ ಕೋಟಕ್ ಬ್ಯಾಂಕ್ ಅನ್ನು ಹೆಸರಿಸಿಲ್ಲ ಏಕೆ? ಎಂದು ಪ್ರಶ್ನಿಸಿದೆ.

‘ಕೋಟಕ್ ಬ್ಯಾಂಕ್ ದೇಶದ ಅತಿದೊಡ್ಡ ಬ್ಯಾಂಕ್ ಮತ್ತು ಬ್ರೋಕರೇಜ್ ಸಂಸ್ಥೆಯಾಗಿದೆ. ನೋಟಿಸ್‌ನಲ್ಲಿ ಕೆ–ಇಂಡಿಯಾ ಆಪರ್ಚುನಿಟೀಸ್ ಫಂಡ್ ಮತ್ತು ಸಂಕ್ಷಿಪ್ತವಾಗಿ ‘ಕೆಎಂಐಎಲ್’ ಎಂದು ನಮೂದಿಸಲಾಗಿದೆ. ಆದರೆ, ಕೋಟಕ್ ಮಹೀಂದ್ರ ಇನ್‌ವೆಸ್ಟ್‌ಮೆಂಟ್ಸ್ ಲಿಮಿಟೆಡ್ ಎಂದು ನಮೂದಿಸಿಲ್ಲ. ಆ ಮೂಲಕ ಕೋಟಕ್ ಹೆಸರನ್ನು ಮರೆಮಾಚಲು ಸೆಬಿ ಯತ್ನಿಸಿದೆ’ ಎಂದು ಆರೋಪಿಸಿದೆ.

₹7,777 ಕೋಟಿ ನಷ್ಟ: ಅದಾನಿ– ಹಿಂಡೆನ್‌ಬರ್ಗ್ ನಡುವಿನ ವಿವಾದದಲ್ಲಿ ಹೆಸರು ತಳಕು ಹಾಕಿಕೊಂಡಿರುವ ಬೆನ್ನಲ್ಲೇ ಕೋಟಕ್ ಮಹೀಂದ್ರ ಬ್ಯಾಂಕ್‌ನ ಷೇರುಗಳ ಮೌಲ್ಯದಲ್ಲಿ ಶೇ 2ರಷ್ಟು ಇಳಿಕೆಯಾಗಿದೆ. ಒಂದೇ ದಿನ ಬ್ಯಾಂಕ್‌ನ ಮಾರುಕಟ್ಟೆ ಬಂಡವಾಳವು ₹7,777 ಕೋಟಿ ಕರಗಿದೆ.

ಕೋಟಕ್ ಬ್ಯಾಂಕ್‌ನ ಸ್ಪಷ್ಟನೆ ಏನು?

ಹಿಂಡೆನ್‌ಬರ್ಗ್ ಆರೋಪದ ಬಗ್ಗೆ ಕೋಟಕ್ ಮಹೀಂದ್ರ ಇನ್‌ವೆಸ್ಟ್‌ಮೆಂಟ್ಸ್ ಲಿಮಿಟೆಡ್ (ಕೆಎಂಐಎಲ್) ಪ್ರತಿಕ್ರಿಯಿಸಿದ್ದು, ‘ಹಿಂಡೆನ್‌ಬರ್ಗ್ ನನ್ನ ಗ್ರಾಹಕನಲ್ಲ’ ಎಂದು ಸ್ಪಷ್ಟಪಡಿಸಿದೆ.

‘ಹಿಂಡೆನ್‌ಬರ್ಗ್‌ನ ಗ್ರಾಹಕನಾದ ಕಿಂಗ್‌ಡನ್ ಕ್ಯಾಪಿಟಲ್ ಮ್ಯಾನೇಜ್‌ಮೆಂಟ್ ಕಂಪನಿಯು, ಕೆಎಂಐಎಲ್‌ನ ಕೆ–ಇಂಡಿಯಾ ಆಪರ್ಚುನಿಟೀಸ್ ಫಂಡ್‌ನಲ್ಲಿ ಹೂಡಿಕೆ ಮಾಡಿತ್ತು. ಹಿಂಡೆನ್‌ಬರ್ಗ್ ವರದಿ ಬಿಡುಗಡೆಗೂ ಮೊದಲೇ ಅದಾನಿ ಎಂಟರ್‌ಪ್ರೈಸಸ್‌ನಲ್ಲಿ ತನ್ನ ಸ್ಥಾನ ಭದ್ರಪಡಿಸಿಕೊಂಡಿದ್ದ ಈ ಕಂಪನಿಯು ಒಟ್ಟು ₹183 ಕೋಟಿ ಲಾಭ ಗಳಿಸಿದೆ. ಈ ಬಗ್ಗೆ ಸೆಬಿ ನೋಟಿಸ್‌ನಲ್ಲಿ ತಿಳಿಸಿದೆ’ ಎಂದು ಹೇಳಿದೆ.

‘ಹಿಂಡೆನ್‌ಬರ್ಗ್ ಮತ್ತು ಕಿಂಗ್‌ಡನ್ ನಡುವಿನ ಬಾಂಧವ್ಯ 2022ರ ಸೆಪ್ಟೆಂಬರ್‌ನಲ್ಲಿ ಶುರುವಾಗಿದೆ’ ಎಂದು ಹೇಳಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಜಯರಾಮ್, ಬೆಂಗಳೂರು.

- **ಪ್ರಶ್ನೆ: ಇತ್ತೀಚೆಗೆ ನಾನು ಕ್ವಾಂಟ್ ಫಂಡ್‌ಗಳ ಬಗ್ಗೆ ಕೇಳಿದ್ದೇನೆ. ಇದು ಇತರೆ ಫಂಡ್‌ಗಳಿಗಿಂತ ತೀರಾ ಭಿನ್ನವಾಗಿರುತ್ತದೆ ಎಂಬುದನ್ನು ತಿಳಿದುಕೊಂಡೆ. ಇವುಗಳಲ್ಲಿ ಹೂಡಿಕೆ ಮಾಡುವುದು ಲಾಭದಾಯಕವೇ?**

ಉತ್ತರ: ಕ್ವಾಂಟ್ ಫಂಡ್ ಅಥವಾ ಕ್ವಾಂಟಿಟೇಟಿವ್ ಫಂಡ್ ಎನ್ನುವುದು ಮ್ಯೂಚುವಲ್ ಫಂಡ್‌ಗಳ ಒಂದು ವರ್ಗವಾಗಿದೆ. ಅದು ಗಣಿತ ಮತ್ತು ಸಂಖ್ಯಾಶಾಸ್ತ್ರದ (ಸ್ಟ್ಯಾಟಿಸ್ಟಿಕ್ಸ್) ಮಾದರಿ, ಕ್ರಮಾವಳಿ ಮತ್ತು ಇತರೆ ಪರಿಮಾಣಾತ್ಮಕ ತಂತ್ರಗಳನ್ನು ಹೂಡಿಕೆ ನಿರ್ಧಾರ ಕೈಗೊಳ್ಳುವಲ್ಲಿ ಮತ್ತು ವಹಿವಾಟುಗಳನ್ನು ಕಾರ್ಯಗತಗೊಳಿಸಲು ಬಳಸುತ್ತವೆ.

ಫಂಡ್ ಮ್ಯಾನೇಜರ್‌ಗಳು ಈ ವಿಧಾನದ ಮೂಲಕ ಸಂಗ್ರಹಿಸುವ ಮಾಹಿತಿ ಆಧಾರದ ಮೇಲೆ ತಮ್ಮ ಪೋರ್ಟ್‌ಫೋಲಿಯೊವನ್ನು ನಿರ್ಮಿಸುತ್ತಾರೆ. ಇದು ಕೆಲವು ಪೂರ್ವ ನಿಯೋಜಿತ ಮಾನದಂಡಗಳ ಸುತ್ತ ರಚಿತವಾಗುತ್ತದೆ. ಯಾವುದೇ ಫಂಡ್ ಮ್ಯಾನೇಜರ್ ತಮ್ಮ ಭಾವನಾತ್ಮಕ ತೀರ್ಮಾನ ಕೈಗೊಳ್ಳುವ ಅವಕಾಶ ಇದರಲ್ಲಿ ಇಲ್ಲ. ಕಂಪ್ಯೂಟರ್ ತಂತ್ರಾಂಶಕ್ಕೆ ಹಲವಾರು ಮಾಹಿತಿಗಳು ಹಾಗೂ ಆಯ್ಕೆ ಮಾನದಂಡಗಳನ್ನೂ ಇಲ್ಲಿ ದಾಖಲಿಸಲಾಗುತ್ತದೆ.

ಇದು ಇತರೆ ಫಂಡ್‌ಗಳಂತೆ ರಿಸ್ಕ್ ಇಲ್ಲವೆಂದಲ್ಲ. ಇಲ್ಲಿ ಸಮಯ, ಸಂದರ್ಭಕ್ಕೆ ಸಂಬಂಧಪಟ್ಟು ಸಮರ್ಪಕ ನಿರ್ಧಾರ ಕೈಗೊಳ್ಳುವಲ್ಲಿ ಈ ಹೂಡಿಕೆ ತಂತ್ರ ನೆರವಾಗುತ್ತದೆ. ಹೆಚ್ಚಾಗಿ ಈ ಫಂಡ್‌ಗಳು ಹಳೆಯ ಮಾಹಿತಿ ಆಧಾರದ ಮೇಲೆ ಅಲ್ಗೋರಿದಮ್ ನೆರವಿನಿಂದ ಮುಂದಿನ ನಿರ್ಧಾರ ಕೈಗೊಳ್ಳುತ್ತವೆ. ಆದರೆ, ಕೆಲವೆಲ್ಲ ಅಪರೂಪದ ವಿಚಾರಗಳು ಇಂತಹ ನಿರ್ಧಾರ ಕೈಗೊಳ್ಳುವಲ್ಲಿ ಪರಿಗಣನೆಗೆ ಬರುವುದಿಲ್ಲ. ಉದಾಹರಣೆಗೆ ಯುದ್ಧ ಭೀತಿ, ಪ್ರಮುಖ ಆರ್ಥಿಕ ನಿರ್ಧಾರಗಳು, ಜಾಗತಿಕವಾಗಿ ಹರಡುವ ಕೊರೊನಾದಂತಹ ರೋಗ ಇತ್ಯಾದಿ ಪರಿಣಾಮವನ್ನು ಇಲ್ಲಿ ಪರಿಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಆದರೆ, ಮಾರುಕಟ್ಟೆ ಮೇಲೆ ಇದರ ಪರಿಣಾಮ ಇಲ್ಲದಿರುವುದಿಲ್ಲ.

ಹೂಡಿಕೆ ವಿಚಾರದಲ್ಲಿ ಇವು ಇತರೆ ಫಂಡ್‌ಗಳಿಗಿಂತ ಉತ್ತಮ ರಿಟರ್ನ್ ನೀಡಿವೆ. ಆದರೆ, ಇಂತಹ ಯಾವುದೇ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಮುನ್ನ ಸಾಕಷ್ಟು ಪೂರ್ವ ವಿಮರ್ಶೆ ಹಾಗೂ ನಿಮ್ಮ ಆರ್ಥಿಕ ಅಪಾಯ ಸಹಿಸುವ ಸಾಮರ್ಥ್ಯವನ್ನು ಮೊದಲೇ ಯೋಚಿಸಿ ನಿರ್ಧಾರ ಕೈಗೊಳ್ಳಿ.

ವಿಜಯ್‌ಕುಮಾರ್, ವೈಟ್‌ಫೀಲ್ಡ್, ಬೆಂಗಳೂರು.

- **ಪ್ರಶ್ನೆ: ನಾನು ಐ.ಟಿ ಕಂಪನಿಯಲ್ಲಿ ಉದ್ಯೋಗ ಮಾಡುತ್ತಿದ್ದು, ಸ್ವಂತ ವಾಸಕ್ಕೆಂದು ಬೆಂಗಳೂರಿನಲ್ಲಿ ಒಂದು ಫ್ಲ್ಯಾಟ್ ಖರೀದಿಸುವ ಯೋಜನೆ ಮಾಡಿದ್ದೇನೆ. ಇದರಂತೆ 2021ರ ಆಗಸ್ಟ್ 20ರಂದು ಮೂರು ಬೆಡ್ ರೂಂ ಮನೆಯೊಂದನ್ನು ಖರೀದಿಸಿದ್ದೇನೆ. ಈ ಬಗ್ಗೆ ರಿಯಲ್ ಎಸ್ಟೇಟ್ ಕಂಪನಿಗೆ ಮುಂಗಡ ಹಣ ನೀಡಿ ಮನೆ ಖರೀದಿ ವ್ಯವಹಾರ ಪತ್ರ, ನಂತರದ ಹಂತದಲ್ಲಿ ಖರೀದಿ ಅಗ್ರಿಮೆಂಟ್ ಇತ್ಯಾದಿ ಪ್ರಕ್ರಿಯೆಯನ್ನೂ ಮುಗಿಸಿದ್ದೆ. ಈ ಸಂದರ್ಭದಲ್ಲಿ ಬ್ಯಾಂಕ್ ಸಾಲ ಮಾಡಿ ಸುಮಾರು ಮೊತ್ತವನ್ನು ಬಡ್ಡಿ ಸಮೇತ ಪಾವತಿಸುತ್ತಿದ್ದೇನೆ.**

ಪ್ರಸ್ತುತ ನನ್ನ ಉದ್ಯೋಗ ಮುಂಬೈ ನಗರಕ್ಕೆ ವರ್ಗಾವಣೆ ಆಗುವ ಸಾಧ್ಯತೆ ಇದೆ. ಅಲ್ಲದೆ, ಈ ಮನೆ ಪೂರ್ಣಗೊಳ್ಳಲು ಇನ್ನೂ ಒಂದು ವರ್ಷ ಬೇಕಾಗುತ್ತದೆ. ಇಂಟೀರಿಯರ್ ಕೆಲಸ ಬಾಕಿ ಇದೆ. ಹೀಗಾಗಿ, ಈ ಸಂದರ್ಭದಲ್ಲಿ ನಾನು ಮಾರಾಟ ಮಾಡುವ ಹಂತದಲ್ಲಿದ್ದೇನೆ. ಪ್ರಸ್ತುತ ನಾನು ಮನೆ ಖರೀದಿಸಿದ ಭಾಗದಲ್ಲಿ ಫ್ಲ್ಯಾಟ್ ಬೆಲೆ ಉತ್ತಮವಾಗಿದ್ದು, ನನಗೆ ಸುಮಾರು ಶೇ 40ರಷ್ಟು ಹೆಚ್ಚುವರಿ ಹಣ ಸಿಗುವ ಬಗ್ಗೆ ಬ್ರೋಕರ್‌ಗಳ ಮೂಲಕ ಮಾಹಿತಿ ಬಂದಿದೆ.

ನನ್ನ ಪ್ರಶ್ನೆ ಏನೆಂದರೆ, ಈ ಹಂತದಲ್ಲಿ ನಾನು ಮನೆ ಮಾರಾಟ ಮಾಡಿದರೆ ಬರುವ ಲಾಭಕ್ಕೆ ತೆರಿಗೆ ಇದೆಯೇ? ನಾನು ಕಟ್ಟಿದ ಮನೆಯ ಅಸಲು, ಬಡ್ಡಿ ಮೊತ್ತಕ್ಕೆ ಏನಾದರೂ ತೆರಿಗೆ ಲಾಭ ಇದೆಯೇ? ಮುಂದಿನ ನಿರ್ಧಾರ ಯಾವ ರೀತಿ ಕೈಗೊಳ್ಳಬೇಕು?

ಉತ್ತರ: ನೀವು ಈಗಾಗಲೇ ಖರೀದಿಸಬೇಕೆಂದಿದ್ದ ಮನೆ ನಿರ್ಮಾಣದ ಹಂತದಲ್ಲೇ ಮಾರಾಟ ಮಾಡುವ ಬಗ್ಗೆ ತಿಳಿಸಿರುತ್ತೀರಿ. ಆರ್ಥಿಕ ದೃಷ್ಟಿ ಹಾಗೂ ನಿಮ್ಮ ಔದ್ಯೋಗಿಕ ಸ್ಥಳದ ಬದಲಾವಣೆಗೆ ಸಂಬಂಧಿಸಿ ಇದು ಸೂಕ್ತ ನಿರ್ಧಾರವೇ ಆಗಿದ್ದರೂ ಅದರ ಬಗೆಗಿನ ಬಂಡವಾಳ ಲಾಭದ ತೆರಿಗೆ ವಿಚಾರದಲ್ಲಿ ನೀವು ಸೂಕ್ತವಾಗಿ ಪೂರ್ವ ಯೋಜನೆ ಮಾಡಿ ಮಾರಾಟ ಮಾಡುವುದು ಅನಿವಾರ್ಯ.

ಪ್ರಸ್ತುತ ನೀವು ಕಂಪನಿಯು ಕೊಟ್ಟಿರುವ ಪತ್ರದ ಆಧಾರದ ಮೇಲೆ ಮುಂಗಡ ಹಣ ಪಾವತಿಸಿ ನಂತರದ ಹಂತದಲ್ಲಿ ಇತರೆ ಕರಾರು ಪತ್ರಗಳನ್ನು ಹೊಂದಿದ್ದೀರಿ. 2021ರ ಆಗಸ್ಟ್‌ನಿಂದ ಇಲ್ಲಿಯವರೆಗೆ 24 ತಿಂಗಳಿಗಿಂತಲೂ ಹೆಚ್ಚು ಅವಧಿವರೆಗೆ ನಿಮ್ಮ ಹಣ ಇದರಲ್ಲಿ ಹೂಡಿಕೆಯಾಗಿದೆ. ಹೀಗಾಗಿ ಬರುವ ಲಾಭದ ಮೇಲೆ ದೀರ್ಘಾವಧಿ ಬಂಡವಾಳ ತೆರಿಗೆ ಅನ್ವಯವಾಗುತ್ತದೆ. ಇದು ಶೇ 20ರ ದರದಂತೆ ಅನ್ವಯಿಸುತ್ತದೆ.

ನಿಮ್ಮ ಮನೆ ಮಾರಾಟದ ಸಂದರ್ಭದಲ್ಲಿ ಯಾವುದೇ ಬ್ರೋಕರ್‌ಗಳಿಗೆ ನೀವು ಕಮಿಷನ್ ಪಾವತಿ ಮಾಡುವುದಿದ್ದರೆ, ಅಂತಹ ಮೊತ್ತವನ್ನು ನಿಮ್ಮ ಮಾರಾಟ ಮೌಲ್ಯದಿಂದ ಕಳೆದು ಉಳಿದ ಮೊತ್ತವನ್ನಷ್ಟೇ ತೆರಿಗೆಗೊಳಪಡಿಸಲಾಗುತ್ತದೆ. ನಿಮ್ಮ ವಿಚಾರದಲ್ಲಿ ತೆರಿಗೆ ಲೆಕ್ಕ ಹಾಕಲು ಸಮೀಪದ ತೆರಿಗೆ ಪರಿಣತರಲ್ಲಿ, ಆಸ್ತಿಯ ಮೌಲ್ಯ, ಪಾವತಿ ವಿವರಗಳೊಂದಿಗೆ ಸಮಾಲೋಚನೆ ನಡೆಸಬೇಕು.

ಇನ್ನು ತೆರಿಗೆ ವಿಚಾರದ ಬಗ್ಗೆ ಹೇಳುವುದಾದರೆ ನೀವು ಮನೆ ಮಾರಾಟ ಮಾಡುವ ಕಾರಣ ಯಾವುದೇ ರಿಯಾಯಿತಿ ನಿಮಗೆ ಪಡೆಯಲು ಅಸಾಧ್ಯ. ಆದರೆ, ನಿಮ್ಮ ಪ್ರಸ್ತುತ ಯೋಜನೆಯನ್ನು ನೀವು ವರ್ಗಾವಣೆಯಾಗುವ ಸ್ಥಳದಲ್ಲಿ ಇನ್ನೊಂದು ಮನೆ ಅಥವಾ ಫ್ಲ್ಯಾಟ್ ಖರೀದಿಗೆ ಬಳಸಿಕೊಂಡಲ್ಲಿ ತೆರಿಗೆ ಉಳಿತಾಯ ಸಾಧ್ಯ. ಇದಕ್ಕಾಗಿ ನಿಮ್ಮ ಪ್ರಸ್ತುತ ಮಾಹಿತಿಯನ್ನು ತೆರಿಗೆ ಸಲಹೆಗಾರರಿಗೆ ನೀಡಿ ಮಾಹಿತಿ ಪಡೆದುಕೊಳ್ಳಿ.

ಅಲ್ಲದೆ, ನಿರ್ಮಾಣ ಹಂತದಲ್ಲಿರುವ ನಿಮ್ಮ ಫ್ಲ್ಯಾಟ್ ಈಗಾಗಲೇ ಬ್ಯಾಂಕಿಗೆ ಅಡಮಾನವಾಗಿ ದಾಖಲಾಗಿರುತ್ತದೆ. ಹೀಗಾಗಿ, ಈ ಸಾಲದ ಮೇಲೆ ಬಾಕಿ ಉಳಿದಿರುವ ಅಸಲು ಮೊತ್ತ ಇನ್ನೂ ಮನೆ ಸಂಪೂರ್ಣ ಆಗದ ಕಾರಣ ಬಹುತೇಕ ಉಳಿದಿರುತ್ತದೆ. ಮಾರಾಟದಿಂದ ಬರಬಹುದಾದ ನಿವ್ವಳ ಮೊತ್ತ ಹಾಗೂ ಸಾಲದ ವಿಲೇವಾರಿಯ ಬಗ್ಗೆಯೂ ಬ್ಯಾಂಕಿನಲ್ಲಿ ಸಮರ್ಪಕ ಮಾಹಿತಿ ಪಡೆದುಕೊಂಡು ವ್ಯವಹರಿಸಬೇಕು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಸಂಕ್ಷಿಪ್ತ ಸುದ್ದಿ

ನ್ಯಾನೊ ರಸಗೊಬ್ಬರ ಬಳಕೆ ಉತ್ತೇಜಿಸಲು ಅಭಿಯಾನ

ನವದೆಹಲಿ (ಪಿಟಿಐ): ದ್ರವರೂಪದ ನ್ಯಾನೊ ರಸಗೊಬ್ಬರ ಬಳಸುವಂತೆ ರೈತರಲ್ಲಿ ಅರಿವು ಮೂಡಿಸಲು ದೇಶದಾದ್ಯಂತ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಇಫ್ಕೊ ತಿಳಿಸಿದೆ.

‘ನ್ಯಾನೊ ರಸಗೊಬ್ಬರ ಬಳಕೆ ಪ್ರಚಾರ ಮಹಾಅಭಿಯಾನ’ದ ಹೆಸರಿನಡಿ 200 ಮಾದರಿ ಗ್ರಾಮಗಳ ಗುಂಪು ರಚಿಸಲಾಗುವುದು. ಈ ಮೂಲಕ 800 ಹಳ್ಳಿಗಳಲ್ಲಿ ರಸಗೊಬ್ಬರ ಬಳಕೆಗೆ ಉತ್ತೇಜನ ನೀಡಲಾಗುವುದು. ದ್ರವರೂಪದ ನ್ಯಾನೊ ಯೂರಿಯಾ ಪ್ಲಸ್ ಹಾಗೂ ಯೂರಿಯಾದ ಗರಿಷ್ಠ ಮಾರಾಟ ದರದಲ್ಲಿ ರೈತರಿಗೆ ಶೇ 25ರಷ್ಟು ಸಬ್ಸಿಡಿ ದೊರೆಯಲಿದೆ’ ಎಂದು ತಿಳಿಸಿದೆ.

ನ್ಯಾನೊ ರಸಗೊಬ್ಬರ ಸಿಂಪಡಣೆಗೆ ಸಂಬಂಧಿಸಿದಂತೆ ಆಧುನಿಕ ತಾಂತ್ರಿಕತೆ ಅಳವಡಿಕೆಗೆ ಪ್ರೋತ್ಸಾಹ ನೀಡಲಾಗು ವುದು. ರಸಗೊಬ್ಬರ ಸಿಂಪಡಿಸುವ ಡ್ರೋನ್ ಬಳಕೆದಾರರಿಗೆ ಪ್ರತಿ ಎಕರೆಗೆ ₹100 ಪ್ರೋತ್ಸಾಹ ಧನ ನೀಡಲಾಗುವುದು ಎಂದು ತಿಳಿಸಿದೆ.

ಕಲ್ಲಿದ್ದಲು ಉತ್ಪಾದನೆ ಶೇ 14ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ದೇಶದಲ್ಲಿ ಜೂನ್ ತಿಂಗಳಲ್ಲಿ 8.46 ಕೋಟಿ ಟನ್ ಕಲ್ಲಿದ್ದಲು ಉತ್ಪಾದನೆಯಾಗಿದೆ ಎಂದು ಕೇಂದ್ರ ಕಲ್ಲಿದ್ದಲು ಸಚಿವಾಲಯ ಮಂಗಳವಾರ ತಿಳಿಸಿದೆ.

ಕಳೆದ ವರ್ಷದ ಜೂನ್‌ನಲ್ಲಿ 7.39 ಕೋಟಿ ಟನ್ ಉತ್ಪಾದನೆ ಆಗಿತ್ತು. ಇದಕ್ಕೆ ಹೋಲಿಸಿದರೆ ಶೇ 14ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.

ಭಾರತೀಯ ಕಲ್ಲಿದ್ದಲು ನಿಗಮವು (ಸಿಐಎಲ್) 6.31 ಕೋಟಿ ಟನ್ ಕಲ್ಲಿದ್ದಲು ಉತ್ಪಾದಿಸಿದ್ದು, ಶೇ 8ರಷ್ಟು ಹೆಚ್ಚಳವಾಗಿದೆ. 8.57 ಕೋಟಿ ಟನ್ ಕಲ್ಲಿದ್ದಲು ವಿತರಣೆಯಾಗಿದೆ.

ಜೂನ್ 30ರ ವರದಿ ಪ್ರಕಾರ ಕಲ್ಲಿದ್ದಲು ಕಂಪನಿಗಳ ಬಳಿ ಹೆಚ್ಚುವರಿಯಾಗಿ 9.50 ಕೋಟಿ ಟನ್ ಕಲ್ಲಿದ್ದಲು ದಾಸ್ತಾನಿದೆ. ಈ ಏರಿಕೆಯು ಕಲ್ಲಿದ್ದಲು ವಲಯದ ದೃಢ ಪ್ರದರ್ಶನ ಮತ್ತು ಸಾಮರ್ಥ್ಯವನ್ನು ತೋರಿಸುತ್ತದೆ ಎಂದು ತಿಳಿಸಿದೆ.

ದೇಶೀಯಮಟ್ಟದಲ್ಲಿನ ಕಲ್ಲಿದ್ದಲು ಉತ್ಪಾದನೆಯಲ್ಲಿ ನಿಗಮದ ಪಾಲು ಶೇ 80ರಷ್ಟಕ್ಕೂ ಹೆಚ್ಚಿದೆ.



ಮಹಾರಾಷ್ಟ್ರದ ಪಾಲ್ಘರ್ ಪ್ರದೇಶದಲ್ಲಿ ಇರುವ ರಿಲಯನ್ಸ್ ಕಾರ್ಪೊರೇಟ್ ಪಾರ್ಕ್‌ನಲ್ಲಿ ನಡೆದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಉದ್ಯಮಿ ಮುಕೇಶ್ ಅಂಬಾನಿ ಮತ್ತು ನೀತಾ ಅಂಬಾನಿ ಪಾಲ್ಗೊಂಡಿದ್ದರು

ಅಂಬಾನಿ ಕುಟುಂಬದಿಂದ ಸಾಮೂಹಿಕ ವಿವಾಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಿ ಮುಕೇಶ್– ನೀತಾ ಅಂಬಾನಿ ದಂಪತಿಯ ಪುತ್ರ ಅನಂತ್ ಅಂಬಾನಿ ಮತ್ತು ರಾಧಿಕಾ ಮರ್ಚೆಂಟ್ ಅವರ ವಿವಾಹವು ಇದೇ 12ರಂದು ನಡೆಯಲಿದೆ.

ಇದರ ಅಂಗವಾಗಿ ಅಂಬಾನಿ ಕುಟುಂಬದಿಂದ ಮಹಾರಾಷ್ಟ್ರದ ಪಾಲ್ಘರ್ ಪ್ರದೇಶದಲ್ಲಿ ಇರುವ ರಿಲಯನ್ಸ್ ಕಾರ್ಪೊರೇಟ್ ಪಾರ್ಕ್‌ನಲ್ಲಿ ಆರ್ಥಿಕವಾಗಿ ಹಿಂದುಳಿದ ಐವತ್ತಕ್ಕೂ ಹೆಚ್ಚು ಜೋಡಿಯ ಸಾಮೂಹಿಕ ವಿವಾಹ ಕಾರ್ಯಕ್ರಮ ಆಯೋಜಿಸಲಾಗಿತ್ತು.

ವಧು–ವರರ ಕುಟುಂಬಗಳ ಪರವಾಗಿ ಸುಮಾರು 800 ಮಂದಿ ಪಾಲ್ಗೊಂಡಿದ್ದರು. ಕಾರ್ಯಕ್ರಮದಲ್ಲಿ ನೀತಾ ಮತ್ತು ಮುಕೇಶ್ ಅವರು ತಮ್ಮ ಕುಟುಂಬದ ಸದಸ್ಯರೊಟ್ಟಿಗೆ ಪಾಲ್ಗೊಂಡಿದ್ದರು.

ಪ್ರತಿ ಜೋಡಿಗೂ ಮಂಗಳಸೂತ್ರ, ಉಂಗುರ, ಮೂಗುತಿ ಸೇರಿ ಚಿನ್ನಾಭರಣ ನೀಡಲಾಯಿತು. ಜೊತೆಗೆ ಬೆಳ್ಳಿ ಕಾಲುಂಗುರ, ಕಾಲ್ಗೆಜ್ಜೆ ನೀಡಲಾಯಿತು.

ಪ್ರತಿ ವಧುವಿಗೆ ₹1.01 ಲಕ್ಷ ನೀಡಲಾಯಿತು. ಪ್ರತಿ ದಂಪತಿಗೂ ಒಂದು ವರ್ಷಕ್ಕೆ ಸಾಕಾಗುವಷ್ಟು ದಿನಸಿ, ಗೃಹೋಪಯೋಗಿ ವಸ್ತುಗಳನ್ನು ವಿತರಿಸಲಾಯಿತು.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ		ರಾಶಿ	38509-50019	ಶಿರಸಿ	
ಕೋಕ	18000-28500	ಸಿಪ್ಪೆಗೋಟು	14599-18099	ಬೆಟ್ಟೆ	32199-45489
ಹೊಸತು	28500-37500	ಶಿವಮೊಗ್ಗ		ಬಿಳಿಗೋಟು	21000-29899
ಹಳತು	37500-45500	ಬೆಟ್ಟೆ	43069-56218	ಚಾಲಿ	33239-36266
ಚಿತ್ರದುರ್ಗ		ಗೊರಬಲು	20009-34509	ಕೆಂಪುಗೋಟು	24800-27800
ಅಪಿ	49169-50069	ರಾಶಿ	29138-51399	ರಾಶಿ	43339-47409
ಬೆಟ್ಟೆ	35129-35529	ಸರಕು	51410-87120	ಯಲ್ಲಾಪುರ	
ಕೆಂಪುಗೋಟು	28009-28410	ಸಿದ್ದಾಪುರ		ಅಪಿ	53299-68699
ರಾಶಿ	49139-49579	ಬಿಳಿಗೋಟು	25699-29000	ಬಿಳಿಗೋಟು	21899-30800
ಸಾಗರ		ಚಾಲಿ	30599-35149	ಚಾಲಿ	31899-35999
ಬಿಳಿಗೋಟು	24009-25511	ಕೋಕ	25299-30000	ಕೋಕ	14899-29318
ಚಾಲಿ	26899-33419	ಕೆಂಪುಗೋಟು	25099-27699	ಕೆಂಪುಗೋಟು	24969-31899
ಕೋಕ	24000-28199	ರಾಶಿ	42289-46899	ರಾಶಿ	45099-53299
ಕೆಂಪುಗೋಟು	24989-28989	ತಟ್ಟಿಬೆಟ್ಟೆ	30900-30900	ತಟ್ಟಿಬೆಟ್ಟೆ	34869-44419

ಮುಂಬೈ ಧಾರಣೆ (ಶೇಂಗಾ)

02-07-2024

ಜಾವಾ 70/80(ಹೊಸ)	11500-11600
ಜಾವಾ 80/90(ಹೊಸ)	11100-11200
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	10900-11000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1540)
ಒಂದು ವಾರದ ಡೆಲಿವರಿ	1545 (1535)
ಸೋಯಾ ಕಚ್ಚಾ	925 (920)
ಪಾಮ್ ವಾರದ ಡೆಲಿವರಿ	925 (916)
ಸೂರ್ಯಕಾಂತಿ ಎಣ್ಣೆ ಕಚ್ಚಾ	915 (910)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ ₹**71,500** (71,550)
ಬೆಳ್ಳಿ ಕೆ.ಜಿ ₹**87,950** (87,850)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹202
ಆರ್‌ಎಸ್‌ಎಸ್-5	₹194
ಗುಡ್ ಲಾಟ್	₹181

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹280-455
ದ್ವಿತಳಿ (ಬಿ.ವಿ)	₹333-630

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹8000-9075
ಮಧುಗಿರಿ	₹8000-9000
ತಿಪಟೂರು	₹8900-9050
ತುರುವೇಕೆರೆ	₹9050-9050

ನೇಪಾಳದಲ್ಲಿ ಹೊಸ ಸರ್ಕಾರ?: ಪ್ರಚಂಡಗೆ ಸಂಕಷ್ಟ

ಕಠ್ಮಂಡು (ಪಿಟಿಐ): ನೇಪಾಳ ರಾಜಕಾರಣದಲ್ಲಿ ಸೋಮವಾರ ಮಧ್ಯರಾತ್ರಿ ಮಹತ್ವದ ಬೆಳವಣಿಗೆಯಾಗಿದ್ದು, ಪ್ರಧಾನಿ ಪ್ರಚಂಡ ಅವರ ಸರ್ಕಾರವನ್ನು ಉರುಳಿಸುವ ಸಲುವಾಗಿ ನೇಪಾಳಿ ಕಾಂಗ್ರೆಸ್ ಮತ್ತು ಸಿಪಿಎನ್–ಯುಎಂಎಲ್ ಪಕ್ಷಗಳು ಮೈತ್ರಿ ಮಾಡಿಕೊಂಡು ‘ರಾಷ್ಟ್ರೀಯ ಒಮ್ಮತದ ಸರ್ಕಾರ’ ರಚನೆಗೆ ಮುಂದಾಗಿವೆ.

ನೇಪಾಳಿ ಕಾಂಗ್ರೆಸ್ ಅಧ್ಯಕ್ಷ ಶೇರ್ ಬಹದ್ದೂರ್ ದೇವುಬಾ ಮತ್ತು ಕಮ್ಯುನಿಸ್ಟ್ ಪಾರ್ಟಿ ಆಫ್ ನೇಪಾಳ–ಯುನಿಫೈಡ್ ಮಾರ್ಕ್ಸಿಸ್ಟ್ ಲೆನಿನಿಸ್ಟ್ (ಸಿಪಿಎನ್–ಯುಎಂಎಲ್) ಅಧ್ಯಕ್ಷ ಮತ್ತು ಮಾಜಿ ಪ್ರಧಾನಿ ಕೆ.ಪಿ. ಶರ್ಮ ಒಲಿ ಅವರು ಮೈತ್ರಿಸರ್ಕಾರ ರಚನೆಗೆ ತೀರ್ಮಾನಿಸಿದ್ದಾರೆ.

‘ನೇಪಾಳ ಸಂಸತ್ತಿನ ಉಳಿದ ಅವಧಿಯಲ್ಲಿ ಪ್ರಧಾನಿ ಹುದ್ದೆ ಹಂಚಿಕೊಳ್ಳಲು ದೇವುಬಾ ಮತ್ತು ಒಲಿ ಒಪ್ಪಿಕೊಂಡಿದ್ದಾರೆ’ ಎಂದು ನೇಪಾಳಿ ಕಾಂಗ್ರೆಸ್‌ನ ಕೇಂದ್ರೀಯ ಸದಸ್ಯ ಸೌದ್ ಅವರು ತಿಳಿಸಿದ್ದಾರೆ.

89 ಸ್ಥಾನಗಳನ್ನು ಹೊಂದಿರುವ ನೇಪಾಳಿ ಕಾಂಗ್ರೆಸ್ ಸಂಸತ್ತಿನಲ್ಲಿ ಅತಿ ದೊಡ್ಡ ಪಕ್ಷವಾಗಿದೆ. ಸಿಪಿಎನ್–ಯುಎಂಎಲ್ 78 ಸ್ಥಾನಗಳನ್ನು ಹೊಂದಿದೆ. ಎರಡು ಪಕ್ಷಗಳ ಒಟ್ಟು ಸ್ಥಾನ 167 ಆಗಲಿದ್ದು, ಸರ್ಕಾರ ರಚನೆಗೆ ಅವಕಾಶ ಸಿಗುತ್ತದೆ. 275 ಸ್ಥಾನಗಳನ್ನು ಹೊಂದಿರುವ ನೇಪಾಳ ಸಂಸತ್ತಿನಲ್ಲಿ ಸರ್ಕಾರ ರಚನೆಗೆ 138 ಸಂಸದರ ಬೆಂಬಲ ಅಗತ್ಯವಾಗಿದೆ.

ಪ್ರಧಾನಿ ಪುಷ್ಪ ಕಮಲ್ ದಹಲ್ ಪ್ರಚಂಡ ನೇತೃತ್ವದ ಕಮ್ಯುನಿಸ್ಟ್ ಪಾರ್ಟಿ ಆಫ್ ನೇಪಾಳವು ಸಿಪಿಎನ್–ಯುಎಂಎಲ್ ಮತ್ತು ಇತರ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಂಡು ಸರ್ಕಾರ ರಚನೆ ಮಾಡಿತ್ತು. ನಾಲ್ಕು ತಿಂಗಳ ಬಳಿಕ ಮೈತ್ರಿ ಕಡಿದುಕೊಳ್ಳಲು ತೀರ್ಮಾನಿಸಿರುವ ಸಿಪಿಎನ್–ಯುಎಂಎಲ್ ಅಧ್ಯಕ್ಷರು ಶನಿವಾರ ನೇಪಾಳಿ ಕಾಂಗ್ರೆಸ್ ಅಧ್ಯಕ್ಷರೊಂದಿಗೆ ಮಾತುಕತೆ ನಡೆಸಿದ್ದರು. ವಿಶ್ವಾಸಮತಯಾಚನೆಯ ಬಳಿಕವೇ ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಪ್ರಚಂಡ ಅವರು ತಮ್ಮ ಪಕ್ಷದ ಪದಾಧಿಕಾರಿಗಳ ಸಭೆಯಲ್ಲಿ ತಿಳಿಸಿದ್ದಾರೆ.

ಅಧಿಕಾರ ಹಂಚಿಕೆಯ ಒಪ್ಪಂದವು ಮಂಗಳವಾರ ಪೂರ್ಣಗೊಂಡಿದ್ದು, ಮೊದಲ ಅವಧಿಯಲ್ಲಿ ಒಲಿ ಅವರು ಪ್ರಧಾನಿಯಾಗಲಿದ್ದಾರೆ. ಒಂದೂವರೆ ವರ್ಷದ ಬಳಿಕ ದೇವುಬಾ ಅವರಿಗೆ ಅಧಿಕಾರ ಹಸ್ತಾಂತರಿಸುವ ಒಪ್ಪಂದ ನಡೆದಿದೆ.

ಆಗಸ್ಟ್‌ನಲ್ಲಿ ನೀಟ್–ಪಿಜಿ ಪರೀಕ್ಷೆ ಸಾಧ್ಯತೆ

ನವದೆಹಲಿ (ಪಿಟಿಐ): ಪ್ರಸಕ್ತ ಸಾಲಿನ ನೀಟ್–ಪಿಜಿ ಪರೀಕ್ಷೆಯನ್ನು ಆಗಸ್ಟ್ ಮಧ್ಯಭಾಗದಲ್ಲಿ ನಡೆಸುವ ನಿರೀಕ್ಷೆ ಇದೆ. ಈ ವಾರದೊಳಗೆ ಪರೀಕ್ಷೆಯ ಪರಿಷ್ಕೃತ ದಿನಾಂಕವನ್ನು ಪ್ರಕಟಿಸಲಾಗುವುದು.

ಕೇಂದ್ರ ಗೃಹ ಸಚಿವಾಲಯದಲ್ಲಿ ಸೋಮವಾರ ನಡೆಸಿದ ಸಭೆಯಲ್ಲಿ ಸಚಿವಾಲಯದ ಅಧಿಕಾರಿಗಳು, ವೈದ್ಯಕೀಯ ವಿಜ್ಞಾನ ಪರೀಕ್ಷೆಗಳ ರಾಷ್ಟ್ರೀಯ ಮಂಡಳಿ (ಎನ್‌ಬಿಇಎಂಎಸ್), ಅದರ ತಾಂತ್ರಿಕ ಸಹಭಾಗಿ ಸಂಸ್ಥೆ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ಮತ್ತು ಸೈಬರ್ ಸೆಲ್ ಅಧಿಕಾರಿಗಳು ಭಾಗವಹಿಸಿ, ಪರೀಕ್ಷೆ ನಡೆಸಲು ಮಾಡಿಕೊಳ್ಳಬೇಕಾದ ತಯಾರಿ ಕುರಿತು ಚರ್ಚೆ ನಡೆಸಿದರು.

ಆಕಾಂಕ್ಷಿಗಳ ಒಳಿತು ಬಯಸುವುದು ತುರ್ತು ಅವಶ್ಯ -ರಾಹುಲ್ ಗಾಂಧಿ

ನೀಟ್: ಚರ್ಚೆಗೆ ಆಗ್ರಹಿಸಿ ಪ್ರಧಾನಿಗೆ ಪತ್ರ

ನವದೆಹಲಿ (ಪಿಟಿಐ): ‘ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ‘ನೀಟ್’ ಕುರಿತು ಚರ್ಚೆಯಾಗಬೇಕಿದೆ. ಹಾಗಾಗಿ ಸದನದಲ್ಲಿ ಬುಧವಾರ ಚರ್ಚೆಗೆ ಅನುವು ಮಾಡಿಕೊಡಬೇಕು’ ಎಂದು ಲೋಕಸಭೆಯ ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿ ಅವರು, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.

ಲೋಕಸಭೆ, ರಾಜ್ಯಸಭೆಯಲ್ಲಿ ವಿಷಯದ ಚರ್ಚೆಗೆ ವಿರೋಧ ಪಕ್ಷಗಳ ಮೈತ್ರಿಕೂಟ ‘ಇಂಡಿಯಾ’ ಒತ್ತಾಯಿಸಿದ ಬೆನ್ನಲ್ಲೇ ರಾಹುಲ್ ಅವರು ಪತ್ರ ಬರೆದಿದ್ದಾರೆ. ಈ ಮಧ್ಯೆ, ರಾಷ್ಟ್ರಪತಿ ಭಾಷಣಕ್ಕೆ ವಂದನಾ ನಿರ್ಣಯ ಅಂಗೀಕರಿಸಿದ ನಂತರ ಲೋಕಸಭೆ ಅಧಿವೇಶನವನ್ನು ಅನಿರ್ದಿಷ್ಟ ಅವಧಿಗೆ ಮಂಗಳವಾರ ಮುಂದೂಡಲಾಯಿತು.

ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಮತ್ತು ರಾಜ್ಯಸಭೆ ಸಭಾಪತಿ ಜಗದೀಪ್ ಧನಕರ್ ಶುಕ್ರವಾರ ಮತ್ತು ಸೋಮವಾರ ಚರ್ಚೆಗೆ ಅವಕಾಶ ನಿರಾಕರಿಸಿದ್ದರು. ಆದರೆ, ವಿಷಯ ಪ್ರಸ್ತಾಪಿಸಲು ವಂದನಾ ನಿರ್ಣಯದ ಮೇಲಿನ ಚರ್ಚೆಯ ಅವಕಾಶವನ್ನು ಬಳಸಿಕೊಳ್ಳುವಂತೆ ಅವರು ವಿಪಕ್ಷಗಳ ಸದಸ್ಯರಿಗೆ ಹೇಳಿದ್ದರು.

ರಾಹುಲ್ ಅವರು ಮೋದಿಯವರಿಗೆ ಬರೆದ ಪತ್ರದಲ್ಲಿ, ‘ನೀಟ್ ಸಮಸ್ಯೆಗೆ ವಿದ್ಯಾರ್ಥಿಗಳು ಉತ್ತರ ಬಯಸುತ್ತಿದ್ದಾರೆ. ಸಂಸತ್ತಿನಲ್ಲಿ ಚರ್ಚೆ ನಡೆಸುವುದು ಅವರಲ್ಲಿ ನಂಬಿಕೆಯನ್ನು ಮರುಸ್ಥಾಪಿಸುವ ಮೊದಲ ಹೆಜ್ಜೆಯಾಗಲಿದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ನಿಮ್ಮ ನೇತೃತ್ವದಲ್ಲೇ ಚರ್ಚೆ ನಡೆಯಲಿ’ ಎಂದು ಪತ್ರದಲ್ಲಿ ಒತ್ತಾಯಿಸಿದ್ದಾರೆ.

‘ಸುಪ್ರೀಂ’ನಲ್ಲಿ 8ಕ್ಕೆ ವಿಚಾರಣೆ

ನೀಟ್ ಅಕ್ರಮಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂಕೋರ್ಟ್ ಇದೇ 8ರಂದು ನಡೆಸಲಿದೆ.

ನೀಟ್ ಪರೀಕ್ಷೆಯಲ್ಲಿ ಅವ್ಯವಹಾರ ಆಗಿದೆ ಎಂದು ಆರೋಪಿಸಿ, ಹೊಸದಾಗಿ ‘ನೀಟ್–ಯುಜಿ’ ಪರೀಕ್ಷೆ ನಡೆಸಲು ನಿರ್ದೇಶನ ನೀಡುವಂತೆ ಕೋರಿ ಈ ಅರ್ಜಿಗಳು ಸಲ್ಲಿಕೆಯಾಗಿವೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ, ಮನೋಜ್ ಮಿಶ್ರಾ ಅವರಿರುವ ಪೀಠದ ಎದುರು 26 ಅರ್ಜಿಗಳ ಗುಚ್ಛ ವಿಚಾರಣೆಗೆ ಬರಲಿದೆ. 2024ರ ಸಾಲಿನ ನೀಟ್–ಯುಜಿ ಪರೀಕ್ಷೆ ಮೇ 5ರಂದು ನಡೆದಿದ್ದು, ದೇಶದಾದ್ಯಂತ 24 ಲಕ್ಷ ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು. ಜೂನ್ 4ರಂದು ಫಲಿತಾಂಶ ಪ್ರಕಟಿಸಲಾಗಿತ್ತು.

ಕೇಂದ್ರಕ್ಕೆ ತರಾಟೆ

ನೀಟ್–ಯುಜಿಯಲ್ಲಿನ ಅಕ್ರಮಗಳ ಕುರಿತು ಮಂಗಳವಾರ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವನ್ನು ‘ಇಂಡಿಯಾ’ ಮೈತ್ರಿಕೂಟದ ಅಂಗಪಕ್ಷಗಳ ವಿದ್ಯಾರ್ಥಿ ಸಂಘಟನೆಗಳು ತೀವ್ರ ತರಾಟೆಗೆ ತೆಗೆದುಕೊಂಡವು. 24 ಲಕ್ಷ ಅಭ್ಯರ್ಥಿಗಳಿಗೆ ವೈದ್ಯಕೀಯ ಪ್ರವೇಶ ಪರೀಕ್ಷೆಯನ್ನು ಮತ್ತೊಮ್ಮೆ ನಡೆಸಬೇಕು ಎಂಬ ತಮ್ಮ ಬೇಡಿಕೆಯನ್ನು ಪುನರುಚ್ಚರಿಸಿವೆ. ನೀಟ್-ಯುಜಿ ಹಗರಣದಿಂದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ಅಪಾಯದಲ್ಲಿದೆ ಎಂದು ಎಡ ಪಕ್ಷಗಳ ಬೆಂಬಲಿತ ಅಖಿಲ ಭಾರತ ವಿದ್ಯಾರ್ಥಿ ಸಂಘ, ಭಾರತೀಯ ವಿದ್ಯಾರ್ಥಿ ಫೆಡರೇಷನ್, ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ಸೇರಿ ಸಮಾಜವಾದಿ ವಿದ್ಯಾರ್ಥಿ ಸಂಘಟನೆಗಳ ರಾಷ್ಟ್ರೀಯ ನಾಯಕರು ಆರೋಪಿಸಿದ್ದಾರೆ.

ವಿಂಬಲ್ಡನ್ ಟೆನಿಸ್ ಟೂರ್ನಿ: ಎರಡನೇ ಸುತ್ತಿಗೆ ಎಲೆನಾ ರಿಬಾಕಿನಾ, ಜೊಕೊವಿಚ್

ಹಾಲಿ ಚಾಂಪಿಯನ್ ಮರ್ಕೆತಾಗೆ ಆಘಾತ


ಕಜಕಸ್ತಾನದ ಎಲೆನಾ ರಿಬಾಕಿನಾ. –ಎಎಫ್‌ಪಿ ಚಿತ್ರ

ಲಂಡನ್ (ಎಎಫ್‌ಪಿ): ಹಾಲಿ ಚಾಂಪಿಯನ್ ಮರ್ಕೆತಾ ವೊಂಡ್ರುಸೊವಾ ಅವರು ಮಂಗಳವಾರ ವಿಂಬಲ್ಡನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲೇ ಆಘಾತ ಅನುಭವಿಸಿದರು.

ಝೆಕ್ ರಿಪಬ್ಲಿಕ್‌ನ 25 ವರ್ಷದ ವೊಂಡ್ರುಸೊವಾ, ಕಳೆದ ವರ್ಷ ವಿಂಬಲ್ಡನ್ ಪ್ರಶಸ್ತಿ ಗೆದ್ದ ಮೊದಲ ಶ್ರೇಯಾಂಕರಹಿತ ಆಟಗಾರ್ತಿ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದ್ದರು. ಆದರೆ, ಈ ಬಾರಿ ಆರನೇ ಶ್ರೇಯಾಂಕ ಪಡೆದಿರುವ ಅವರು 4–6, 2–6 ಸೆಟ್‌ಗಳಿಂದ ಶ್ರೇಯಾಂಕರಹಿತ ಜೆಸ್ಸಿಕಾ ಬೌಜಾಸ್ ಮನೇರೊ ಅವರಿಗೆ ಶರಣಾದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಆರನೇ ಸ್ಥಾನದಲ್ಲಿರುವ ವೊಂಡ್ರುಸೊವಾ ಕೇವಲ 66 ನಿಮಿಷಗಳ ಪಂದ್ಯದಲ್ಲಿ 83ನೇ ಕ್ರಮಾಂಕದ ಸ್ಪೇನ್‌ನ ಆಟಗಾರ್ತಿಗೆ ಶರಣಾದರು.

ಟೆನಿಸ್‌ನಲ್ಲಿ ಓಪನ್ ಯುಗ ಆರಂಭವಾದ ಮೇಲೆ ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಮೊದಲ ಸುತ್ತಿನಲ್ಲಿ ಸೋತ ಎರಡನೇ ಹಾಲಿ ಚಾಂಪಿಯನ್ ವೊಂಡ್ರುಸೊವಾ ಆಗಿದ್ದಾರೆ. 30 ವರ್ಷಗಳ ಹಿಂದೆ (1994) ಹಾಲಿ ಚಾಂಪಿಯನ್ ಆಗಿದ್ದ ಸ್ಟೆಫಿ ಗ್ರಾಫ್ ಅವರು ಲೋರಿ ಮೆಕ್‌ನೀಲ್ ಅವರಿಗೆ ಮೊದಲ ಸುತ್ತಿನಲ್ಲೇ ಮಣಿದಿದ್ದರು.

ವೃತ್ತಿಜೀವನದಲ್ಲಿ ಮೂರನೇ ಗ್ರ್ಯಾನ್‌ಸ್ಲಾಮ್ ಟೂರ್ನಿ ಆಡುತ್ತಿರುವ 21 ವರ್ಷ ವಯಸ್ಸಿನ ಜೆಸ್ಸಿಕಾ ಸ್ಫೂರ್ತಿಯುತ ಆಟ ಪ್ರದರ್ಶಿಸಿದರು. ಆದರೆ, ಪಂದ್ಯದುದ್ದಕ್ಕೂ ವೊಂಡ್ರುಸೊವಾ ನಿಖರ ಸರ್ವ್ ಕಂಡುಕೊಳ್ಳಲು ಪರದಾಡಿದರು. ಅವರು ಎಸಗಿದ 28 ಸ್ವಯಂಕೃತ ತಪ್ಪುಗಳು ಹಿನ್ನಡೆಗೆ ಕಾರಣವಾದವು.

‘ಕಳೆದ ತಿಂಗಳು ನಡೆದ ಬರ್ಲಿನ್‌ನ ಹುಲ್ಲಿನ ಅಂಗಣದ ಟೂರ್ನಿಯಲ್ಲಿ ಸೊಂಟಕ್ಕೆ ನೋವುಂಟಾದ ನಂತರ ಇಲ್ಲಿ ಮೊದಲ ಪಂದ್ಯದಲ್ಲಿ ಎಚ್ಚರ ವಹಿಸಿ ಆಡಿದೆ. ಅಭ್ಯಾಸದ ವೇಳೆ ಯಾವುದೇ ಸಮಸ್ಯೆಯಾಗಿರಲಿಲ್ಲ. ಆದರೆ, ಪ್ರಶಸ್ತಿಯನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ’ ಎಂದು ಪಂದ್ಯದ ಬಳಿಕ ವೊಂಡ್ರೊಸೋವಾ ನಿರಾಸೆ ವ್ಯಕ್ತಪಡಿಸಿದರು.

ರಿಬಾಕಿನಾ ಮುನ್ನಡೆ: ಮಾಜಿ ಚಾಂಪಿಯನ್ ಎಲೆನಾ ರಿಬಾಕಿನಾ 6-3, 6-1ರಿಂದ ಗೇಬ್ರಿಯೆಲಾ ರೂಸ್ ಅವರನ್ನು ಮಣಿಸಿ ಎರಡನೇ ಸುತ್ತಿಗೆ ಮುನ್ನಡೆದರು.

2022ರಲ್ಲಿ ಇಲ್ಲಿ ಪ್ರಶಸ್ತಿ ಗೆದ್ದಿರುವ ಕಜಕಸ್ತಾನದ 25 ವರ್ಷ ವಯಸ್ಸಿನ ರಿಬಾಕಿನಾ ಕೇವಲ 49 ನಿಮಿಷದ ಹೋರಾಟದಲ್ಲಿ ನೇರ ಸೆಟ್‌ಗಳಿಂದ ರೊಮೇನಿಯಾದ ಆಟಗಾರ್ತಿಯನ್ನು ಹಿಮ್ಮೆಟ್ಟಿಸಿದರು. ಮೊದಲ ಸೆಟ್‌ನಲ್ಲಿ 3–1ರಿಂದ ಹಿನ್ನಡೆಯಲ್ಲಿದ್ದ ರಿಬಾಕಿನಾ ನಂತರ ಚೇತರಿಸಿಕೊಂಡು ಸತತ ಒಂಬತ್ತು ಗೇಮ್‌ಗಳನ್ನು ಗೆದ್ದರು.

ಜೊಕೊವಿಚ್ ಶುಭಾರಂಭ: ಏಳು ಬಾರಿಯ ಚಾಂಪಿಯನ್ ನೊವಾಕ್ ಜೊಕೊವಿಚ್ ಅವರು ಪುರುಷರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ ಝೆಕ್ ರಿಪಬ್ಲಿಕ್‌ನ ಕ್ವಾಲಿಫೈಯರ್ ಆಟಗಾರ ವಿಟ್ ಕೊಪ್ರಿವಾ ಅವರನ್ನು ಮಣಿಸಿ ಶುಭಾರಂಭ ಮಾಡಿದರು. ಮೊಣಕಾಲು ಶಸ್ತ್ರಚಿಕಿತ್ಸೆಗೆ ಒಳಗಾಗಿ ಚೇತರಿಸಿಕೊಂಡು ಕಣಕ್ಕೆ ಇಳಿದ ಎರಡನೇ ಶ್ರೇಯಾಂಕದ ಜೊಕೊವಿಚ್ 6-1, 6-2, 6-2ರಿಂದ 123ನೇ ಕ್ರಮಾಂಕದ ಕೊಪ್ರಿವಾ ಅವರನ್ನು ಸದೆಬಡಿದರು. ನಾಲ್ಕನೇ ಶ್ರೇಯಾಂಕದ ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ 6-2, 6-4, 6-2ರಿಂದ ರಾಬರ್ಟೊ ಕಾರ್ಬಲ್ಸ್ ಬೇನಾ ಅವರನ್ನು ಮಣಿಸಿದರೆ, ಏಳನೇ ಶ್ರೇಯಾಂಕದ ಪೋಲೆಂಡ್‌ನ ಹಬರ್ಟ್ ಹರ್ಕಾಜ್ 5-7, 6-4, 6-3, 6-4ರಿಂದ ರಾಡು ಆಲ್ಬೋಟ್ ಅವರನ್ನು ಸೋಲಿಸಿ ಮುನ್ನಡೆದರು.

ಆದರೆ, ಆರನೇ ಶ್ರೇಯಾಂಕದ ಆಂಡ್ರೆ ರುಬ್ಲೆವ್ ಅವರಿಗೆ ಮೊದಲ ಸುತ್ತಿನಲ್ಲೇ ಆಘಾತವಾಯಿತು. ಅರ್ಜೆಂಟೀನಾದ ಫ್ರಾನ್ಸಿಸ್ಕೊ ಕೊಮೆಸಾನಾ 6-4, 5-7, 6-2, 7-6 (7/5) ರಷ್ಯಾದ ಆಟಗಾರನನ್ನು ಹಿಮ್ಮೆಟ್ಟಿಸಿದರು.

ಮೊದಲ ಸುತ್ತಿನಲ್ಲೇ ಸುಮಿತ್ ನಗಾಲ್‌ಗೆ ನಿರಾಸೆ


ಸುಮಿತ್ ನಗಾಲ್ ಎಪಿ/ಪಿಟಿಐ ಚಿತ್ರ

ಲಂಡನ್ (ಪಿಟಿಐ): ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ವಿಂಬಲ್ಡನ್ ಟೆನಿಸ್ ಟೂರ್ನಿಯ ಮೊದಲ ಸುತ್ತಿನಲ್ಲೇ ನಿರ್ಗಮಿಸಿದರು.

ಎಟಿಪಿ ಕ್ರಮಾಂಕದಲ್ಲಿ 72ನೇ ಸ್ಥಾನದಲ್ಲಿರುವ ನಗಾಲ್ ಅವರು ಸೋಮವಾರ ತಡರಾತ್ರಿ ನಡೆದ ಪಂದ್ಯದಲ್ಲಿ 2-6, 6-3, 3-6, 4-6 ರಲ್ಲಿ ವಿಶ್ವ ಕ್ರಮಾಂಕದಲ್ಲಿ 53ನೇ ಸ್ಥಾನದಲ್ಲಿರುವ ಮಿಯೋಮಿರ್ ಕೆಸ್ಮನೊವಿಚ್ (ಸರ್ಬಿಯಾ) ಅವರಿಗೆ ಮಣಿದರು. ಮೊದಲ ಸೆಟ್‌ನಲ್ಲಿ ಹಿನ್ನಡೆ ಅನುಭವಿಸಿದ ಭಾರತದ 26 ವರ್ಷ ವಯಸ್ಸಿನ ಆಟಗಾರ, ಎರಡನೇ ಸೆಟ್‌ನಲ್ಲಿ ತಿರುಗೇಟು ನೀಡಿದರು. ಆದರೆ, ನಂತರದ ಎರಡೂ ಸೆಟ್‌ನಲ್ಲೂ ಸರ್ಬಿಯಾ ಆಟಗಾರ ಮೇಲುಗೈ ಸಾಧಿಸಿದರು. 2ಗಂಟೆ 38 ನಿಮಿಷಗಳ ಕಾಲ ನಡೆದ ಹೋರಾಟದಲ್ಲಿ ನಗಾಲ್ ಎಸಗಿದ 44 ಸ್ವಯಂಕೃತ ತಪ್ಪುಗಳು ದುಬಾರಿಯಾದವು. ರ‍್ಯಾಂಕಿಂಗ್ ಆಧಾರದಲ್ಲಿ ಒಲಿಂಪಿಕ್ಸ್ ಅರ್ಹತೆ ಪಡೆದಿರುವ ನಗಾಲ್, ಕಳೆದ ಐದು ವರ್ಷಗಳಲ್ಲಿ ವಿಂಬಲ್ಡನ್ ಪುರುಷರ ಸಿಂಗಲ್ಸ್ ಮುಖ್ಯ ಡ್ರಾ ಪಂದ್ಯವನ್ನು ಆಡಿದ ಮೊದಲ ಭಾರತೀಯರಾಗಿದ್ದಾರೆ. 2019ರಲ್ಲಿ ಪ್ರಜ್ಞೇಶ್ ಗುಣೇಶ್ವರನ್ ಮೊದಲ ಸುತ್ತಿನಲ್ಲೇ ನಿರ್ಗಮಿಸಿದ್ದರು.

ಹಿಂದೆ ಸರಿದ ಮರ್ರೆ


ಆ್ಯಂಡಿ ಮರ್ರೆ ಎಎಫ್‌ಪಿ ಚಿತ್ರ

ಲಂಡನ್ (ಎಎಫ್‌ಪಿ): ಸಕಾಲಕ್ಕೆ ದೈಹಿಕ ಕ್ಷಮತೆ ಮರಳಿ ಪಡೆಯಲು ವಿಫಲರಾದ ಇಂಗ್ಲೆಂಡ್‌ನ ಆ್ಯಂಡಿ ಮರ್ರೆ, ವಿಂಬಲ್ಡನ್ ಟೆನಿಸ್ ಚಾಂಪಿಯನ್‌ಷಿಪ್ಸ್‌ನ ಪುರುಷರ ಸಿಂಗಲ್ಸ್‌ನಿಂದ ಮಂಗಳವಾರ ಹಿಂದೆಸರಿದರು.

37 ವರ್ಷ ವಯಸ್ಸಿನ ಮರ್ರೆ ಅವರು ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಎರಡು ಬಾರಿ (2013 ಮತ್ತು 2016ರಲ್ಲಿ) ಚಾಂಪಿಯನ್ ಆಗಿದ್ದರು. ಕೊನೆಯ ಸಲ ಇಲ್ಲಿ ಆಡಿ ವಿದಾಯ ಹೇಳುವ ಬಯಕೆ ಹೊಂದಿದ್ದರು.

ಅವರ ಬದಲು ಅರ್ಹತಾ ಸುತ್ತಿನ ‘ಲಕ್ಕಿ ಲೂಸರ್’ ಎನಿಸಿದ ಬೆಲ್ಜಿಯಂನ ಡೇವಿಡ್ ಗೊಫಿನ್ ಇಲ್ಲಿ ಆಡುವ ಅವಕಾಶ ಪಡೆದಿದ್ದಾರೆ.

ಮರ್ರೆ ಹಿಂದೆ ಸರಿದಿರುವ ಕಾರಣ ಟೆನಿಸ್‌ನ ‘ಬಿಗ್ ಫೋರ್’ ಆಟಗಾರರಲ್ಲಿ ನೊವಾಕ್ ಜೊಕೊವಿಚ್ ಮಾತ್ರ ಕಣದಲ್ಲಿ ಉಳಿದಂತಾಗಿದೆ. ಅವರಿಗೂ ಈಗ 37 ವರ್ಷ ವಯಸ್ಸು. ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗೆ ಅವರು ಪ್ರಯತ್ನಿಸುತ್ತಿದ್ದಾರೆ.

‘ನಿಮ್ಮ ಕರೆಗೆ ಧನ್ಯವಾದಗಳು ರೋ’!

ಕೋಚ್ ಹುದ್ದೆ ತ್ಯಜಿಸದಂತೆ ತಡೆದಿದ್ದ ರೋಹಿತ್ ಶರ್ಮಾ


ಟಿ20 ವಿಶ್ವಕಪ್ ಗೆದ್ದು ಭಾರತ ತಂಡ ಶನಿವಾರ ಸಂಭ್ರಮಿಸಿದ ಸಂದರ್ಭದಲ್ಲಿ ಗೆಲುವಿನ ಸಂಕೇತ ತೋರಿದ ದ್ರಾವಿಡ್ ಪಿಟಿಐ ಚಿತ್ರ

ಬ್ರಿಜ್‌ಟೌನ್ (ಬಾರ್ಬಾಡೋಸ್), (ಪಿಟಿಐ): ರೋಹಿತ್ ಶರ್ಮಾ ಅಂದು ಆ ಒಂದು ಫೋನ್ ಕರೆ ಮಾಡದೇ ಹೋಗಿದ್ದಲ್ಲಿ ಕೋಚ್ ರಾಹುಲ್ ದ್ರಾವಿಡ್ ಅವರು ಟಿ20 ವಿಶ್ವಕಪ್ ಗೆದ್ದು ಇತಿಹಾಸ ನಿರ್ಮಿಸಿದ ತಂಡದ ಭಾಗವಾಗುತ್ತಿರಲಿಲ್ಲ. ಈ ವಿಷಯವನ್ನು ಸ್ವತಃ ರಾಹುಲ್ ದ್ರಾವಿಡ್ ಅವರು ತಂಡವನ್ನು ಉದ್ದೇಶಿಸಿ ಮಾಡಿದ ವಿದಾಯ ಭಾಷಣದಲ್ಲಿ ಬಹಿರಂಗಪಡಿಸಿದ್ದಾರೆ.

ತವರಿನಲ್ಲಿ ಕಳೆದ ವರ್ಷದ ನವೆಂಬರ್‌ನಲ್ಲಿ ನಡೆದ ಏಕದಿನ ವಿಶ್ವಕಪ್ ಫೈನಲ್‌ನಲ್ಲಿ ಭಾರತ ತಂಡ ಸೋತ ನಂತರ ರಾಹುಲ್ ದ್ರಾವಿಡ್ ಮುಖ್ಯ ಕೋಚ್ ಹುದ್ದೆ ತ್ಯಜಿಸಲು ಮುಂದಾಗಿದ್ದರು. ಭಾರತ ಸತತ 10 ಪಂದ್ಯ ಗೆದ್ದು ಫೈನಲ್‌ನಲ್ಲಿ ಸೋತಿದ್ದು ತೀವ್ರ ನಿರಾಸೆ ಮೂಡಿಸಿತ್ತು.

ಆ ವಿಶ್ವಕಪ್‌ನೊಡನೆ ದ್ರಾವಿಡ್ ಅವರ ಒಪ್ಪಂದದ ಅವಧಿಯೂ ಕೊನೆಗೊಂಡಿತ್ತು. ಆದರೆ ಕೋಚ್ ಮತ್ತು ನೆರವು ಸಿಬ್ಬಂದಿ ಟಿ20 ವಿಶ್ವಕಪ್ ಅಂತ್ಯದವರೆಗೆ ಅವಧಿ ವಿಸ್ತರಣೆ ಪಡೆದರು.

ಭಾರತ ಟಿ20 ವಿಶ್ವಕಪ್ ಚಾಂಪಿಯನ್ ಪಟ್ಟಕ್ಕೇರಿದ ನಂತರ ದ್ರಾವಿಡ್ ಅವರು ಕೋಚ್ ಹುದ್ದೆಗೆ ಮರು ಅರ್ಜಿ ಸಲ್ಲಿಸಿಲ್ಲ. ಆದರೆ ಕೆನ್ಸಿಂಗ್‌ಟನ್ ಓವಲ್‌ನ ಡ್ರೆಸಿಂಗ್ ರೂಮ್‌ನಲ್ಲಿ ಶನಿವಾರ ವಿದಾಯ ಭಾಷಣದ ವೇಳೆ ನಾಯಕ ರೋಹಿತ್ ಶರ್ಮಾ ವಹಿಸಿದ್ದ ಪಾತ್ರವನ್ನು ಅವರು ವಿಶೇಷವಾಗಿ ಪ್ರಸ್ತಾಪಿಸಿದರು.

‘ರೋ (ರೋಹಿತ್) ಕಳೆದ ನವೆಂಬರ್‌ನಲ್ಲಿ ನನಗೆ ಕರೆ ಮಾಡಿ ಕೋಚ್ ಆಗಿ ಮುಂದುವರಿಯುವಂತೆ ಮನವಿ ಮಾಡಿದ್ದರು. ಅವರಿಗೆ ತುಂಬಾ ಧನ್ಯವಾದಗಳು’ ಎಂದು ದ್ರಾವಿಡ್ ಹೇಳಿರುವ ವಿಡಿಯೊವನ್ನು ಬಿಸಿಸಿಐ ಮಂಗಳವಾರ ಹಂಚಿಕೊಂಡಿದೆ.

‘ತಂಡದ ಪ್ರತಿಯೊಬ್ಬರ ಜೊತೆ ಕೆಲಸ ಮಾಡಿರುವುದು ನನಗೆ ಖುಷಿ ಮತ್ತು ಹೆಮ್ಮೆಯ ವಿಚಾರ. ಆದರೆ ರೋ, ನೀವು ಕೊಟ್ಟ ಸಮಯಕ್ಕೆ ಧನ್ಯವಾದಗಳು. ಸಾಕಷ್ಟು ಸಮಯ ನಾವು ಚರ್ಚೆ ನಡೆಸಿದ್ದೇವೆ. ಕೆಲವು ವಿಷಯಗಳನ್ನು ಒಪ್ಪಿಕೊಳ್ಳ ಬೇಕಾಯಿತು. ಕೆಲವಕ್ಕೆ ಅಭಿಪ್ರಾಯಭೇದಗಳು ಬಂದವು. ನಿಮಗೆ ತುಂಬಾ ಧನ್ಯವಾದಗಳು’ ಎಂದು ದ್ರಾವಿಡ್ ಹೇಳಿದಾಗ ರೋಹಿತ್ ಮುಗುಳ್ನಗೆ ಬೀರಿದರು.

ಟೂರ್ನಿಯುದ್ದಕ್ಕೂ ಆಟಗಾರರ ಸಾಂಘಿಕ ಪ್ರಯತ್ನವನ್ನು ದ್ರಾವಿಡ್ ಶ್ಲಾಘಿಸಿದರು.

‘ನೀವೆಲ್ಲ ಈ ಕ್ಷಣಗಳನ್ನು ಸದಾ ನೆನಪಿಸಿಕೊಳ್ಳಲಿದ್ದೀರಿ. ನೀವು ಗಳಿಸಿದ ರನ್, ಪಡೆದ ವಿಕೆಟ್‌ಗಳನ್ನು ಬದುಕಿನುದ್ದಕ್ಕೂ ನೆನಪಿನಲ್ಲಿಡುವುದಿಲ್ಲ. ಅದನ್ನು ಮರೆತುಬಿಡಬಹುದು. ಆದರೆ ಇಂಥ ಸಂಭ್ರಮದ ಕ್ಷಣಗಳನ್ನು ಮರೆಯಲಾರಿರಿ’ ಎಂದರು. ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಸಹ ಆ ವೇಳೆ ಹಾಜರಿದ್ದರು.

‘ಇಂದು ನಿಮ್ಮ ಪೋಷಕರು, ಪತ್ನಿಯರು, ಮಕ್ಕಳು, ಸಹೋದರರು, ತರಬೇತುದಾರರು, ಸಾಕಷ್ಟು ಮಂದಿ ನಿಮಗಾಗಿ ತ್ಯಾಗ ಮಾಡಿದ್ದಾರೆ. ನೀವು ಈ ಘಳಿಗೆ ಸಂಭ್ರಮಿಸುವ ಹಂತಕ್ಕೆ ಬರಲು ಅವರ ಶ್ರಮ ತುಂಬಾ ಇದೆ. ನಿಮ್ಮಗಳ ಜೊತೆ ಈ ನೆನಪಿನ ಭಾಗವಾಗಲು ನನಗೆ ಅತೀವ ಹೆಮ್ಮೆಯೆನಿಸುತ್ತಿದೆ’ ಎಂದು ದ್ರಾವಿಡ್ ಭಾವುಕರಾದರು.

ಸ್ಪಷ್ಟ, ನಿರರ್ಗಳವಾಗಿ ಮಾತನಾಡುವ ದ್ರಾವಿಡ್, ಈ ವೇಳೆ ತಮಗೆ ಪದಗಳೇ ಹೊರಡುತ್ತಿಲ್ಲ ಎಂದು ಒಪ್ಪಿಕೊಂಡರು. ಆದರೆ ನಿರ್ಗಮಿತ ಸಿಬ್ಬಂದಿ ವರ್ಗಕ್ಕೆ ತಂಡ ತೋರಿದ ಗೌರವಕ್ಕೆ ಮೆಚ್ಚುಗೆ ಸೂಚಿಸಿದರು. ತೆರೆಮರೆಯಲ್ಲಿ ಕೆಲಸಮಾಡಿದ ಬಿಸಿಸಿಐ ಅಧಿಕಾರಿಗಳಿಗೂ ಅವರು ಕೃತಜ್ಞತೆ ಸಲ್ಲಿಸಿದರು.

‘ಈ ದೊಡ್ಡ ತಂಡದ ಹಿಂದೆ, ಯಶಸ್ವಿ ಸಂಸ್ಥೆಯಿದೆ. ನಾವು ಬಿಸಿಸಿಐ ಮತ್ತು ತೆರೆಮರೆಯಲ್ಲಿ ಕೆಲಸ ಮಾಡಿದವರನ್ನು ಸ್ಮರಿಸಲೇಬೇಕು’ ಎಂದು ದ್ರಾವಿಡ್ ಹೇಳಿದರು.

ಸ್ವದೇಶಕ್ಕೆ ಭಾರತ ಕ್ರಿಕೆಟ್ ತಂಡ ಇಂದು?

ಬ್ರಿಜ್‌ಟೌನ್, ಬಾರ್ಬಾಡೋಸ್ (ಪಿಟಿಐ): ಬೆರಿಲ್ ಚಂಡಮಾರುತದ ಪರಿಣಾಮ ಬಾರ್ಬಾಡೋಸ್‌ನಲ್ಲಿಯೇ ಸಿಲುಕಿರುವ ಟಿ20 ವಿಶ್ವಕಪ್ ವಿಜೇತ ಭಾರತ ತಂಡ ಮಂಗಳವಾರ ಸಂಜೆ ಚಾರ್ಟರ್ ವಿಮಾನದಲ್ಲಿ ಸ್ವದೇಶಕ್ಕೆ ಪ್ರಯಾಣಿಸಲಿದೆ ಎಂದು ಬಾರ್ಬಾಡೋಸ್ ಪ್ರಧಾನಿ ಮಿಯಾ ಮೊಟ್ಲಿ ತಿಳಿಸಿದ್ದಾರೆ.

ಮುಂದಿನ 6ರಿಂದ 12 ಗಂಟೆಗಳ ಒಳಗಾಗಿ ವಿಮಾನ ನಿಲ್ದಾಣ ಕಾರ್ಯಾಚರಣೆಗೆ ಸಿದ್ಧವಾಗಲಿದೆ ಎಬ ನಿರೀಕ್ಷೆ ಹೊಂದಿರುವುದಾಗಿ ಅವರು ತಿಳಿಸಿದ್ದಾರೆ.

ದಕ್ಷಿಣ ಆಫ್ರಿಕಾ ವಿರುದ್ಧ ವಿಶ್ವಕಪ್ ಫೈನಲ್ ಪಂದ್ಯವನ್ನು ಏಳು ರನ್‌ಗಳಿಂದ ಗೆದ್ದ ನಂತರ ರೋಹಿತ್ ಶರ್ಮಾ ನೇತೃತ್ವದ ಭಾರತ ತಂಡ, ಸಹಾಯಕ ಸಿಬ್ಬಂದಿ, ಬಿಸಿಸಿಐ ಅಧಿಕಾರಿಗಳು ಸೇರಿದಂತೆ ಆಟಗಾರರ ಕುಟುಂಬದ ಸದಸ್ಯರು ಬಾರ್ಬಾಡೋಸ್‌ನಲ್ಲಿಯೇ ಉಳಿದಿದ್ದಾರೆ.

ಬೆರಿಲ್ ಚಂಡಮಾರುತವು ಬಾರ್ಬಬಡೋಸ್ ಮತ್ತು ಸಮೀಪದ ದ್ವೀಪಗಳಿಗೆ ಸೋಮವಾರ ಅಪ್ಪಳಿಸಿದೆ.

‘ನಾನು ವಿಮಾನ ನಿಲ್ದಾಣ ಸಿಬ್ಬಂದಿಗಳೊಂದಿಗೆ ಸಂಪರ್ಕದಲ್ಲಿದ್ದೇನೆ. ವಿಮಾನ ನಿಲ್ದಾಣದ ಕಾರ್ಯಾಚರಣೆಗೆ ಸಿಬ್ಬಂದಿಯು ಅಂತಿಮ ಹಂತದ ಪರಿಶೀಲನಾ ಕೆಲಸದಲ್ಲಿ ತೊಡಗಿದ್ದಾರೆ’ ಎಂದು ಮಿಯಾ ಮೊಟ್ಲಿ ಅವರು ತಿಳಿಸಿದ್ದಾರೆ.

ಭಾರತ ತಂಡದ ಸದಸ್ಯರು ಬ್ರಿಜ್‌ಟೌನ್‌ನಿಂದ ಸ್ಥಳೀಯ ಕಾಲಮಾನ ಮಂಗಳವಾರ ಸಂಜೆ 6 ಗಂಟೆ ಹೊರಟು, ಬುಧವಾರ ಸಂಜೆ 7.45ಕ್ಕೆ ದೆಹಲಿ ತಲುಪುವ ನಿರೀಕ್ಷೆ ಇದೆ.

ಗೋಲ್‌ಕೀಪರ್ ಡಿಯಾಗೊ ಕೋಸ್ಟಾ ಮಿಂಚು: ಸ್ಲೊವೇನಿಯಾ ತಂಡಕ್ಕೆ ನಿರಾಸೆ

ಕ್ವಾರ್ಟರ್ ಫೈನಲ್‌ಗೆ ಪೋರ್ಚುಗಲ್, ನೆದರ್ಲೆಂಡ್ಸ್

ಫ್ರಾಂಕ್‌ಫರ್ಟ್, ಜರ್ಮನಿ (ಎಎಫ್‌ಪಿ): ಗೋಲ್‌ಕೀಪರ್ ಡಿಯೊಗೊ ಕೋಸ್ಟಾ ಮೂರು ಗೋಲು ಯತ್ನಗಳನ್ನು ಅಮೋಘವಾಗಿ ತಡೆದು ಪೋರ್ಚುಗಲ್ ಗೆಲುವಿನ ರೂವಾರಿಯಾದರು.

ಸೋಮವಾರ ತಡರಾತ್ರಿ ಯುರೋ ಕಪ್ ಫುಟ್‌ಬಾಲ್ ಟೂರ್ನಿಯ ರೋಚಕ ಹಣಾಹಣಿಯಲ್ಲಿ ಸ್ಲೊವೇನಿಯಾ ತಂಡವನ್ನು ‘ಪೆನಾಲ್ಟಿ’ಯಲ್ಲಿ ಸೋಲಿಸಿದ ಪೋರ್ಚುಗಲ್ ತಂಡ ಕ್ವಾರ್ಟರ್‌ಫೈನಲ್ ಪ್ರವೇಶಿಸಿತು.

ನಿಗದಿತ ಅವಧಿಯ ಪಂದ್ಯವು ಗೋಲಿಲ್ಲದೇ ‘ಡ್ರಾ’ ಆಯಿತು. ನಂತರ ಪೆನಾಲ್ಟಿ ಶೂಟೌಟ್‌ನಲ್ಲಿ ಪೋರ್ಚುಗಲ್ 3–0 ಯಿಂದ ಜಯ ಸಾಧಿಸಿತು. ಪೋರ್ಚುಗಲ್ ತಂಡವು ಜೂನ್ 6ರಂದು ನಡೆಯುವ ಕ್ವಾರ್ಟರ್ ಫೈನಲ್ ನಲ್ಲಿ ಫ್ರಾನ್ಸ್ ತಂಡವನ್ನು ಎದುರಿಸಲಿದೆ.

ಪಂದ್ಯದ ಮೊದಲಾರ್ಧದ ‘ಇಂಜ್ಯುರಿ ಟೈಮ್’ ಅವಧಿಯಲ್ಲಿ ಪೋರ್ಚುಗಲ್‌ನ ಫಾರ್ವರ್ಡ್ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಅವರು ಪೆನಾಲ್ಟಿ ಅವಕಾಶವನ್ನು ಗೋಲಾಗಿ ಪರಿ ವರ್ತಿಸಲು ವಿಫಲವಾಗಿ, ಮೈದಾನದಲ್ಲೇ ಕಣ್ಣೀರು ಹಾಕಿದರು. 39 ವರ್ಷದ ರೊನಾಲ್ಡೊ ಗೋಲು ದಾಖಲಿಸುತ್ತಿದ್ದರೆ ಯುರೋ ಕಪ್‌ನಲ್ಲಿ ಸ್ಕೋರ್ ಗಳಿಸಿದ ಅತಿ ಹಿರಿಯ ವಯಸ್ಸಿನ ಆಟಗಾರ ಎಂಬ ಹಿರಿಮೆಗೆ ಪಾತ್ರವಾಗುತ್ತಿದ್ದರು.


ಪೆನಾಲ್ಟಿ ಅವಕಾಶದಲ್ಲಿ ಗೋಲು ದಾಖಲಿಸಲು ವಿಫಲವಾದ ಬಳಿಕ ಮೈದಾನದಲ್ಲೇ ಕಣ್ಣೀರು ಹಾಕಿದ ಪೋರ್ಚುಗಲ್‌ನ ಸ್ಟಾರ್ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ –ಎಎಫ್‌ಪಿ ಚಿತ್ರ

ಶೂಟೌಟ್‌ನಲ್ಲಿ ರೊನಾಲ್ಡೊ, ಬ್ರೂನೊ ಫರ್ನಾಂಡಿಸ್ ಮತ್ತು ಬರ್ನಾರ್ಡೊ ಸಿಲ್ವಾ ಅವರು ಪೋರ್ಚುಗಲ್ ಪರ ಚೆಂಡನ್ನು ಗುರಿ ಸೇರಿಸಿದರು. ಸ್ಲೊವೇನಿಯಾದ ಮೂವರು ಆಟಗಾರರೂ (ಜೋಸೆಫ್ ಇಲಿಸಿಕ್, ಜ್ಯೂರ್ ಬಾಲ್ಕೊವಿಕ್, ಬೆಂಜಮಿನ್ ವರ್ಬಿಕ್) ವಿಫಲರಾದರು. ಡಿಯೊಗೊ ಕೋಸ್ಟಾ ಅಮೋಘ ಪ್ರದರ್ಶನ ನೀಡಿ ಚೆಂಡನ್ನು ತಡೆದರು.

2016ರ ಆವೃತ್ತಿಯ ಚಾಂಪಿಯನ್ ಪೋರ್ಚುಗಲ್ ತಂಡದ ಆಟಗಾರರು ಆರಂಭದಿಂದಲೇ ಚೆಂಡಿನ ಮೇಲೆ ಪ್ರಾಬಲ್ಯ ಸಾಧಿಸಿದರು. ಆದರೆ, ಪ್ರಮುಖ ಟೂರ್ನಿಯೊಂದರಲ್ಲಿ ಮೊದಲ ಬಾರಿಗೆ ನಾಕೌಟ್ ಪ್ರವೇಶಿಸಿದ್ದ ಸ್ಲೊವೇನಿಯಾ ರಕ್ಷಣಾತ್ಮಕ ಆಟದ ಮೂಲಕ ಗಮನ ಸೆಳೆಯಿತು.

ಕೊನೆಯ ಆವೃತ್ತಿ: ಯುರೋ ಕಪ್‌ನಲ್ಲಿ ದಾಖಲೆಯ ಆರನೇ ಬಾರಿ ಆಡಿರುವ ರೊನಾಲ್ಡೊ, ಇದು ವೃತ್ತಿಜೀವನದ ಕೊನೆಯ ಆವೃತ್ತಿ ಎಂಬುದನ್ನು ಖಚಿತಪಡಿಸಿದ್ದಾರೆ. ಯುರೋ ಕಪ್‌ನಲ್ಲಿ ಅವರು 14 ಗೋಲುಗಳನ್ನು ಗಳಿಸಿದ ದಾಖಲೆ ಹೊಂದಿದ್ದಾರೆ. ಸ್ಲೊವೇನಿಯಾ ವಿರುದ್ಧ ಗೆಲುವು ಸಾಧಿಸಿದ ಬಳಿಕ ಪ್ರತಿಕ್ರಿಯಿಸಿದ ಅವರು, ‘ನಿಸ್ಸಂದೇಹವಾಗಿ, ಇದು ನನ್ನ ಕೊನೆಯ ಯುರೋಪಿಯನ್ ಚಾಂಪಿಯನ್‌ಷಿಪ್ ಆಗಿದೆ’ ಎಂದರು.

ನೆದರ್ಲೆಂಡ್ಸ್‌ಗೆ ಜಯ: ಮಂಗಳವಾರ ರಾತ್ರಿ ನಡೆದ ಪಂದ್ಯದಲ್ಲಿ ನೆದರ್ಲೆಂಡ್ಸ್ ತಂಡವು 3–0 ರಿಂದ ರೊಮೇನಿಯಾ ವಿರುದ್ಧ ಗೆಲುವು ಸಾಧಿಸುವ ಮೂಲಕ ಕ್ವಾರ್ಟರ್ ಫೈನಲ್ ಪ್ರವೇಶಿಸಿದೆ. ನೆದರ್ಲೆಂಡ್ಸ್ ಪರ ಕೋಡಿ ಗಾಕ್ಪೊ (20ನೇ ನಿಮಿಷ) ಡೊನಿಯೆಲ್ ಮಾಲೆನ್ (83, 90+3) ಗೋಲು ಗಳಿಸಿದರು.

ಚೆಸ್: ಪ್ರಜ್ಞಾನಂದಗೆ ಡೇನಿಯಲ್ ಎದುರಾಳಿ


ಪ್ರಜ್ಞಾನಂದ

ಬುಖಾರೆಸ್ಟ್ (ರೊಮೇನಿಯಾ), (ಪಿಟಿಐ): ಗ್ರ್ಯಾಂಡ್ ಮಾಸ್ಟರ್ ಆರ್.ಪ್ರಜ್ಞಾನಂದ ಅವರು ಸೂಪರ್‌ಬೆಟ್ ಕ್ಲಾಸಿಕ್ ಚೆಸ್ ಟೂರ್ನಿಯ ಆರನೇ ಸುತ್ತಿನಲ್ಲಿ ಡೀಕ್ ಬೊಗ್ಡಾನ್ ಡೇನಿಯಲ್ (ರೊಮೇನಿಯಾ) ಅವರನ್ನು ಎದುರಿಸಲಿದ್ದಾರೆ. ಡೇನಿಯಲ್ ಟೂರ್ನಿಯಲ್ಲಿ ಕೊನೆಯ ಸ್ಥಾನದಲ್ಲಿದ್ದಾರೆ.

ಭಾರತದ ಇನ್ನೊಬ್ಬ ಚೆಸ್ ತಾರೆ, ವಿಶ್ವ ಚಾಂಪಿಯನ್ ಪಟ್ಟಕ್ಕೆ ಚಾಲೆಂಜರ್ ಆಗಿರುವ ಗುಕೇಶ್, ಇನ್ನೊಂದು ಪಂದ್ಯದಲ್ಲಿ ಮ್ಯಾಕ್ಸಿಮ್ ವೇಷಿಯಲ್ ಲಗ್ರಾವ್ (ಫ್ರಾನ್ಸ್) ಅವರ ವಿರುದ್ಧ ಆಡಲಿದ್ದಾರೆ.

ಟೂರ್ನಿಯಲ್ಲಿ ಫ್ಯಾಬಿಯಾನೊ ಕರುವಾನಾ (3.5) ಅಗ್ರಸ್ಥಾನದಲ್ಲಿದ್ದಾರೆ. ಗುಕೇಶ್, ಪ್ರಜ್ಞಾನಂದ ತಲಾ ಮೂರು ಪಾಯಿಂಟ್ಸ್ ಗಳಿಸಿ ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ. ಹತ್ತು ಆಟಗಾರರು ಭಾಗವಹಿಸುತ್ತಿರುವ ಈ ಟೂರ್ನಿ ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾಗಿದೆ.

ಜಿಂಬಾಬ್ವೆಗೆ ತೆರಳಿದ ಭಾರತ ತಂಡ

ಮುಂಬೈ (ಪಿಟಿಐ): ಯುವ ಆಟಗಾರರಿರುವ ಭಾರತ ಕ್ರಿಕೆಟ್ ತಂಡ, ಐದು ಪಂದ್ಯಗಳ ಟಿ20 ಸರಣಿ ಆಡಲು ಮಂಗಳವಾರ ಜಿಂಬಾಬ್ವೆಗೆ ತೆರಳಿತು.

ನ್ಯಾಷನಲ್ ಕ್ರಿಕೆಟ್ ಅಕಾಡೆಮಿ ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್ ಅವರು ಕೋಚ್ ಆಗಿದ್ದಾರೆ. ನಾಯಕ ಶುಭಮನ್ ಗಿಲ್ ಅವರು ಅಮೆರಿಕದಲ್ಲಿದ್ದು, ಅಲ್ಲಿಂದ ನೇರವಾಗಿ ಜಿಂಬಾಬ್ವೆಗೆ ತೆರಳುವರು. ಜುಲೈ 6ರಂದು ಮೊದಲ ಪಂದ್ಯ ನಡೆಯಲಿದೆ. ಅಭಿಷೇಕ್ ಶರ್ಮಾ, ರಿಯಾನ್ ಪರಾಗ್, ಆವೇಶ್ ಖಾನ್ ಮೊದಲಾದವರು ವಿಮಾನದೊಳಗೆ ಹೋಗುತ್ತಿರುವ ಚಿತ್ರವನ್ನು ಬಿಸಿಸಿಐ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ.

‘ಹವಾಮಾನ ಬದಲಾವಣೆ ನಿರ್ಲಕ್ಷ್ಯ ಸಲ್ಲ’

ನವದೆಹಲಿ(ಪಿಟಿಐ): ಹವಾಮಾನ ಬದಲಾವಣೆ ವಿದ್ಯಮಾನವನ್ನು ನಿರ್ಲಕ್ಷ್ಯ ಮಾಡುವುದು ಸಲ್ಲ. ಪರಿಸರಕ್ಕೆ ಇಂಗಾಲ ಸೇರುವ ಪ್ರಮಾಣವನ್ನು ತಗ್ಗಿಸುವುದಕ್ಕಾಗಿ ‘ಪರಿಸರ ಸ್ನೇಹಿ ಜೀವನ ಶೈಲಿ’ ಅಳವಡಿಸಿಕೊಳ್ಳುವ ಅಗತ್ಯವಿದೆ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮಂಗಳವಾರ ಹೇಳಿದರು.

ಇಲ್ಲಿನ ಕರಕರಡೂಮಾ ಮತ್ತು ರೋಹಿಣಿ ಪ್ರದೇಶಗಳಲ್ಲಿ ವಿಚಾರಣಾ ನ್ಯಾಯಾಲಯಗಳ ಕಟ್ಟಡಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ದೆಹಲಿಯಲ್ಲಿ ಬೀಸಿದ ಬಿಸಿ ಗಾಳಿ ನಂತರ ಸುರಿದ ಭಾರಿ ಮಳೆ ಕುರಿತು ಪ್ರಸ್ತಾಪಿಸಿದರು.

‘ಈ ವರ್ಷ ದೆಹಲಿಯಲ್ಲಿ ಗರಿಷ್ಠ ತಾಪಮಾನ ದಾಖಲಾಗಿತ್ತು. ಬಿಸಿಗಾಳಿಯಿಂದಲೂ ನಾವು ತತ್ತರಿಸಿದೆವು. ಅದರ ಬೆನ್ನಲ್ಲೇ ಒಂದೇ ದಿನದಲ್ಲಿ ದಾಖಲೆ ಪ್ರಮಾಣದ ಮಳೆ ಸುರಿಯಿತು. ನಮ್ಮ ಮೂಲಸೌಕರ್ಯಗಳು ನಮ್ಮ ಬದುಕಿನ ವಸ್ತುಸ್ಥಿತಿಯನ್ನು ಹೇಳುತ್ತವೆ. ಹೀಗಾಗಿ, ಹವಾಮಾನ ಬದಲಾವಣೆಯನ್ನು ಇನ್ನು ನಿರ್ಲಕ್ಷ್ಯ ಮಾಡಬಾರದು’ ಎಂದು ಅವರು ಪ್ರತಿಪಾದಿಸಿದರು.

‘ಹವಾಮಾನ ಬದಲಾವಣೆ ತಡೆಗಟ್ಟುವ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿ ನಾವು ಪರಿಸರ ಸ್ನೇಹಿ ಜೀವನ ಶೈಲಿಯನ್ನು ರೂಢಿಸಿಕೊಳ್ಳಬೇಕು. ಇಂಗಾಲದ ಹೊರಸೂಸುವಿಕೆ ಪ್ರಮಾಣ ತಗ್ಗಿಸುವುದು ಸಹ ಇಂತಹ ಜೀವನಶೈಲಿಯ ಭಾಗವಾಗಿದೆ’ ಎಂದರು.

ಬಂಧನ: ಸಿಬಿಐಗೆ ನೋಟಿಸ್


ಅರವಿಂದ ಕೇಜ್ರಿವಾಲ್

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣ ಸಂಬಂಧ ತಮ್ಮನ್ನು ಸಿಬಿಐ ಬಂಧಿಸಿದ ಕ್ರಮವನ್ನು ಪ್ರಶ್ನಿಸಿ ದೆಹಲಿ ಮುಖ್ಯ ಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಸಲ್ಲಿಸಿದ್ದ ಅರ್ಜಿಯ ಕುರಿತು ಏಳು ದಿನಗಳ ಒಳಗೆ ಪ್ರತಿಕ್ರಿಯಿಸುವಂತೆ ಸಿಬಿಐಗೆ ದೆಹಲಿ ಹೈಕೋರ್ಟ್ ಸೂಚಿಸಿದೆ.

ಈ ಕುರಿತ ವಿಚಾರಣೆಯನ್ನು ಜುಲೈ 17ಕ್ಕೆ ಮುಂದೂಡಲಾಯಿತು.

ಇದೇ ವೇಳೆ ಕೇಜ್ರಿವಾಲ್ ಅವರನ್ನು ಸಿಬಿಐ ಬಂಧಿಸಿದ ಸಂಬಂಧ ಜಾಮೀನು ಅರ್ಜಿಯನ್ನೂ ಸಲ್ಲಿಸಲಾಗುವುದು ಎಂದು ಕೇಜ್ರಿವಾಲ್ ಪರ ವಕೀಲ ಅಭಿಷೇಕ್ ಮನು ಸಿಂಘ್ವಿ ಅವರು ನ್ಯಾಯಾಲಯಕ್ಕೆ ತಿಳಿಸಿದರು. ನ್ಯಾಯಮೂರ್ತಿ ನೀನಾ ಬನ್ಸಾಲ್ ಕೃಷ್ಣ ಅವರು ಸಿಬಿಐಗೆ ನೋಟಿಸ್ ನೀಡಿದರು. ಸಿಬಿಐ ಪ್ರತಿಕ್ರಿಯೆ ಸಲ್ಲಿಸಿದ ಎರಡು ದಿನಗಳ ಒಳಗೆ ಕೇಜ್ರಿವಾಲ್ ಪರ ವಕೀಲರು ಪ್ರತಿಕ್ರಿಯೆ ಸಲ್ಲಿಸಬಹುದು ಎಂದು ನ್ಯಾಯಾಲಯ ಹೇಳಿದೆ.

ಸಿಬಿಐ ತಮ್ಮನ್ನು ಬಂಧಿಸಿರುವುದರ ಕುರಿತು ಮಾತ್ರವಲ್ಲದೇ ವಿಚಾರಣಾ ನ್ಯಾಯಾಲಯವು ಈ ಸಂಬಂಧ ಜೂನ್ 26 ಮತ್ತು ಜೂನ್ 29ರಂದು ನೀಡಿದ ಆದೇಶವನ್ನೂ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದಾರೆ. ಈ ಆದೇಶಗಳಲ್ಲಿ ಕೇಜ್ರಿವಾಲ್ ಅವರನ್ನು ಸಿಬಿಐ ವಶಕ್ಕೆ ನೀಡಲಾಗಿತ್ತು. ಜೊತೆಗೆ, ಜೂನ್ 29ರಂದು ಕೇಜ್ರಿವಾಲ್ ಅವರ ನ್ಯಾಯಾಂಗ ಬಂಧನದ ಅವಧಿಯನ್ನು ಜುಲೈ 12ರವರೆಗೆ ವಿಸ್ತರಿಸಲಾಗಿತ್ತು.

ಸಂಕ್ಷಿಪ್ತ ಸುದ್ದಿ

ಮೀಸಲಾತಿ: ‘ಸುಪ್ರೀಂ’ ಮೆಟ್ಟಿಲೇರಿದ ಬಿಹಾರ

ನವದೆಹಲಿ (ಪಿಟಿಐ): ಮೀಸಲಾತಿ ಮಿತಿ ಹೆಚ್ಚಿಸಿರುವುದನ್ನು ರದ್ದುಪಡಿಸಿ ಪಟ್ನಾ ಹೈಕೋರ್ಟ್ ನೀಡಿರುವ ತೀರ್ಪನ್ನು ಪ್ರಶ್ನಿಸಿ ಬಿಹಾರ ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ.

ದಲಿತರು, ಆದಿವಾಸಿಗಳು ಹಾಗೂ ಹಿಂದುಳಿದ ವರ್ಗಗಳಿಗೆ ನೀಡಲಾಗಿದ್ದ ಮೀಸಲಾತಿ ಮಿತಿಯನ್ನು ಶೇ 50ರಿಂದ ಶೇ 65ಕ್ಕೆ ಏರಿಸಿ ಬಿಹಾರ ಸರ್ಕಾರವು ತಿದ್ದುಪಡಿಗಳನ್ನು ತಂದಿತ್ತು. ಮೀಸಲಾತಿ ಹೆಚ್ಚಿಸಿದ್ದರ ವಿರುದ್ಧ ಪಟ್ನಾ ಹೈಕೋರ್ಟ್‌ನಲ್ಲಿ ಹಲವು ಅರ್ಜಿಗಳು ಸಲ್ಲಿಕೆಯಾಗಿದ್ದವು.

ಈ ಅರ್ಜಿಗಳ ವಿಚಾರಣೆ ನಡೆಸಿದ ಪಟ್ನಾ ಹೈಕೋರ್ಟ್, ‘ಮೀಸಲಾತಿ ಮಿತಿಯನ್ನು ಏರಿಸುವ ಅಧಿಕಾರ ಸರ್ಕಾರಕ್ಕಿಲ್ಲ. ಇದು ಸಂವಿಧಾನಬಾಹಿರವಾಗುತ್ತದೆ. ಇದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ ಹಾಗೂ ಇದು ಸಮಾನತೆಯ ಹಕ್ಕಿನ ಉಲ್ಲಂಘನೆ’ ಎಂದು ತೀರ್ಪಿನಲ್ಲಿ ಅಭಿಪ್ರಾಯಪಟ್ಟಿತ್ತು.

ಬಾಲಕನ ತಂದೆ, ಅಜ್ಜನಿಗೆ ಜಾಮೀನು

ಪುಣೆ (ಪಿಟಿಐ): ಪೋಶೆ ಕಾರು ಅಪಘಾತ ಪ್ರಕರಣಕ್ಕೆ ಸಂಬಂಧಿಸಿ, ಬಾಲಕನ ತಂದೆ ಮತ್ತು ಅಜ್ಜನಿಗೆ ಪುಣೆ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ.

ಅಪಘಾತ ಎಸಗಿದ್ದ ಬಾಲಕನ ತಂದೆ ವಿಶಾಲ್ ಅಗರ್‌ವಾಲ್ ಮತ್ತು ಅಜ್ಜ, ತಮ್ಮ ಕಾರು ಚಾಲಕ ಪೊಲೀಸ್ ಠಾಣೆಯಿಂದ ಹೊರಬಂದ ಬಳಿಕ ಆತನನ್ನು ಅಪಹರಿಸಿ ಬಂಗಲೆಯಲ್ಲಿ ಕೂಡಿಹಾಕಿದ್ದರು. ಅಪಘಾತ ನಡೆದಾಗ ಕಾರು ಚಲಾಯಿಸಿದ್ದು ತಾನೇ ಎಂದು ಒಪ್ಪಿಕೊಳ್ಳುವಂತೆ ಒತ್ತಡ ಹೇರಿದ್ದರು ಎಂದು ಪೊಲೀಸರು ಆರೋಪಿಸಿದ್ದರು.

ಮೇ 19ರಂದು ಪುಣೆಯ ಕಲ್ಯಾಣಿ ನಗರದ ಬಳಿ ಪಾನಮತ್ತ ಬಾಲಕ ಚಲಾಯಿಸುತ್ತಿದ್ದ ಪೋಶೆ ಕಾರು ಡಿಕ್ಕಿ ಹೊಡೆದು ಇಬ್ಬರು ಟೆಕಿಗಳು ಮೃತಪಟ್ಟಿದ್ದರು. ಈ ಸಂಬಂಧ ಬಾಲಕನ ತಂದೆ ಮತ್ತು ಅಜ್ಜನನ್ನು ಬಂಧಿಸಲಾಗಿತ್ತು

₹3 ಕೋಟಿ ನಗದು, 22 ಕೆ.ಜಿ ಚಿನ್ನ ಜಪ್ತಿ

ಅಹಮದಾಬಾದ್: ರಾಜಕೋಟ್‌ನ ಪಟ್ಟಣ ಯೋಜನಾಧಿಕಾರಿಯ ತಮ್ಮನ ಕಚೇರಿಯಿಂದ ₹16 ಕೋಟಿ ಮೌಲ್ಯದ 22 ಕೆ.ಜಿ ಚಿನ್ನ ಮತ್ತು ₹ 3 ಕೋಟಿ ನಗದನ್ನು ಗುಜರಾತ್ ಭ್ರಷ್ಟಾಚಾರ ನಿಗ್ರಹ ಪಡೆ (ಎಸಿಬಿ) ಜಪ್ತಿ ಮಾಡಿದೆ.

27 ಜನರು ಬಲಿಯಾಗಿದ್ದ, ಮನರಂಜನಾ ತಾಣದಲ್ಲಿ ಸಂಭವಿಸಿದ್ದ ಬೆಂಕಿ ಅವಘಡದ ಪ್ರಕರಣಕ್ಕೆ ಸಂಬಂಧಿಸಿದಂತೆ ತಪಾಸಣೆ ನಡೆಸಿ, ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸದ್ಯ, ಸೇವೆಯಿಂದ ಅಮಾನತುಗೊಂಡಿರುವ ಪಟ್ಟಣದ ಯೋಜನಾಧಿಕಾರಿ ಸಾಗತೀಯ ಅವರ ತಮ್ಮ ದಿಲೀಪ್ ಅವರ ಕಚೇರಿಯಿಂದ ನಗದು, ಚಿನ್ನವನ್ನು ಜಪ್ತಿ ಮಾಡಲಾಗಿದೆ. ಈ ಪ್ರಕರಣದಡಿ ಸಾಗತೀಯಾ ಅವರನ್ನು ಬಂಧಿಸಿ ಕೋರ್ಟ್‌ಗೆ ಹಾಜರುಪಡಿಸಿದ್ದು, ಹೆಚ್ಚಿನ ವಿಚಾರಣೆಗೆ 6 ದಿನಕ್ಕೆ ವಶಕ್ಕೆ ಪಡೆಯಲಾಗಿದೆ ಎಂದು ತಿಳಿಸಿದ್ದಾರೆ.ಅಧಿಕಾರಿಗಳು ಸಾಗತೀಯ ಅವರನ್ನು ಮೇ 25ರಂದು ಬಂಧಿಸಿದ್ದರು.

ಈ ಪ್ರಕರಣಕ್ಕೆ ಸಂಬಂಧಿಸಿ ಆರು ಮಂದಿ ಸರ್ಕಾರಿ ನೌಕರರು ಸೇರಿದಂತೆ ಒಟ್ಟು 15 ಜನರನ್ನು ಅಧಿಕಾರಿಗಳು ಬಂಧಿಸಿದ್ದಾರೆ.

ಮಾನನಷ್ಟ ಪ್ರಕರಣ: 26ಕ್ಕೆ ಖುದ್ದಾಗಿ ಹಾಜರಾಗಲು ರಾಹುಲ್‌ಗೆ ಸೂಚನೆ



ಸುಲ್ತಾನ್‌ಪುರ (ಪಿಟಿಐ): ಮಾನನಷ್ಟ ಪ್ರಕರಣ ಸಂಬಂಧ ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆಗೆ ಜುಲೈ 26ರಂದು ಖುದ್ದಾಗಿ ಹಾಜರಾಗುವಂತೆ ರಾಹುಲ್ ಗಾಂಧಿ ಅವರಿಗೆ ಇಲ್ಲಿನ ಸಂಸದರ–ಶಾಸಕರ ನ್ಯಾಯಾಲಯ ಸೂಚಿಸಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ನೀಡಿದ್ದಾರೆ ಎನ್ನಲಾದ ಆಕ್ಷೇಪಾರ್ಹ ಹೇಳಿಕೆ ಸಂಬಂಧ ರಾಹುಲ್ ಗಾಂಧಿ ಅವರ ವಿರುದ್ಧ 2018ರಲ್ಲಿ ಮಾನನಷ್ಟ ಪ್ರಕರಣ ದಾಖಲಾಗಿದೆ.

ಈ ಪ್ರಕರಣದ ಕುರಿತು ಮಂಗಳವಾರವೇ ರಾಹುಲ್ ಅವರು ವಿಚಾರಣೆಗೆ ಹಾಜರಾಗಬೇಕಿತ್ತು. ಆದರೆ, ಸಂಸತ್ತಿನ ಕಲಾಪದಿಂದಾಗಿ ಅವರು ವಿಚಾರಣೆಗೆ ಹಾಜರಾಗಲು ಸಾಧ್ಯವಾಗಲಿಲ್ಲ. ನ್ಯಾಯಾಲಯಕ್ಕೆ ಹಾಜರಾದ ಅವರ ಪರ ವಕೀಲ ಕಾಶಿ ಪ್ರಸಾದ್ ಶುಕ್ಲಾ, ಈ ಪ್ರಕರಣದ ವಿಚಾರಣೆಗೆ ಮುಂದಿನ ದಿನಾಂಕ ನಿಗದಿಪಡಿಸಬೇಕು ಎಂದು ಕೋರಿದರು.

ಇದಕ್ಕೆ ಸಮ್ಮತಿಸಿದ ನ್ಯಾಯಾಧೀಶ ಶುಭಮ್ ವರ್ಮಾ ಅವರು, ಜುಲೈ 26ರಂದು ರಾಹುಲ್ ಖುದ್ದಾಗಿ ಹಾಜರಾಗಬೇಕು ಎಂದು ಹೇಳಿದರು.

ಮತಾಂತರದ ಸಭೆ ಸ್ಥಗಿತಗೊಳಿಸಿ

ಒಂದನೇ ಪುಟದಿಂದ...

ಪ್ರಕರಣವೇನು: ರಾಮಪಾಲ್ ಎಂಬುವವರನ್ನು ಆರೋಪಿ ಕೈಲಾಶ್, ದೆಹಲಿಯಲ್ಲಿ ನಡೆಯುತ್ತಿದ್ದ ಧಾರ್ಮಿಕ ಸಭೆಗಳಿಗೆ ಕರೆದುಕೊಂಡು ಹೋಗಿದ್ದರು. ಇಂತಹ ಸಭೆಗಳಲ್ಲಿ ಪಾಲ್ಗೊಳ್ಳುವವರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರ ಮಾಡಲಾಗುತ್ತಿತ್ತು ಎನ್ನಲಾಗಿದೆ. ರಾಮಪಾಲ್ ಸಹೋದರಿ ರಾಮ್‌ಕಲಿ ಪ್ರಜಾಪತಿ ನೀಡಿದ ಮಾಹಿತಿ ಆಧರಿಸಿ ದಾಖಲಿಸಿದ ಎಫ್‌ಐಆರ್‌ನಲ್ಲಿ ಈ ಕುರಿತು ಉಲ್ಲೇಖಿಸಲಾಗಿದೆ.

‘ನನ್ನ ಸಹೋದರ ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದು, ಚಿಕಿತ್ಸೆ ಕೊಡಿಸಿದ ನಂತರ ಆತನನ್ನು ವಾರದೊಳಗೆ ಗ್ರಾಮಕ್ಕೆ ಮರಳಿತಂದು ಬಿಡುವುದಾಗಿ ಕೈಲಾಶ್ ಹೇಳಿದ್ದ’ ಎಂಬುದಾಗಿ ರಾಮ್‌ಕಲಿ ಪ್ರಜಾಪತಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ವಾರ ಕಳೆದರೂ ತಮ್ಮ ಸಹೋದರ ಮರಳದಿರುವ ಕುರಿತು ಕೈಲಾಶ್‌ನನ್ನು ಪ್ರಶ್ನಿಸಿದಾಗ ಆತನಿಂದ ಸಮರ್ಪಕ ಉತ್ತರ ಸಿಗದ ಕಾರಣ ಅವರು ಪೊಲೀಸರಿಗೆ ದೂರು ನೀಡಿದ್ದರು.

ಛತ್ತೀಸಗಢದಲ್ಲಿ 5 ನಕ್ಸಲರು ಹತ

ನಾರಾಯಣಪುರ (ಛತ್ತೀಸಗಢ) (ಪಿಟಿಐ): ಭದ್ರತಾ ಸಿಬ್ಬಂದಿ ನಾರಾಯಣಪುರ ಜಿಲ್ಲೆಯಲ್ಲಿ ಮಂಗಳವಾರ ನಡೆಸಿದ ಗುಂಡಿನ ದಾಳಿಯಲ್ಲಿ ಐವರು ನಕ್ಸಲರು ಹತ್ಯೆಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದರು.

ವಿವಿಧ ಭದ್ರತಾ ಪಡೆಗಳ ತಂಡಗಳು ಜಂಟಿಯಾಗಿ ಕೋಹಕಾಮೇಟಾ ಪೊಲೀಸ್ ಠಾಣೆಯ ವ್ಯಾಪ್ತಿಯ ಅರಣ್ಯ ಪ್ರದೇಶದಲ್ಲಿ ನಕ್ಸಲ್ ವಿರೋಧಿ ಕಾರ್ಯಾಚರಣೆ ಕೈಗೊಂಡಿದ್ದವು. ಶೋಧ ಕಾರ್ಯಾಚರಣೆ ಮುಂದುವರಿದಿದ್ದು, ಭದ್ರತಾ ಪಡೆಗಳ ಸಿಬ್ಬಂದಿ ಸುರಕ್ಷಿತವಾಗಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಜಿಲ್ಲಾ ಮೀಸಲು ಪಡೆ, ವಿಶೇಷ ಕಾರ್ಯ ಪಡೆ, ಗಡಿ ಭದ್ರತಾ ಪಡೆ ಮತ್ತು ಭಾರತ–ಟಿಬೆಟ್ ಗಡಿ ಪೊಲೀಸ್ ಪಡೆ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದವು.

ಅಸ್ಸಾಂನಲ್ಲಿ ಪ್ರವಾಹ ಸ್ಥಿತಿ: 6.71 ಲಕ್ಷಕ್ಕೂ ಅಧಿಕ ಮಂದಿ ಬಾಧಿತರು

6 ದಿನ ಮೊದಲೇ ಮುಂಗಾರು ಪ್ರವೇಶ

ಮುಖ್ಯಾಂಶಗಳು

- ಉತ್ತರ ಪ್ರದೇಶದಲ್ಲಿ ಮನೆಯ ಗೋಡೆ ಕುಸಿದು ಇಬ್ಬರು ಸಹೋದರರ ಸಾವು
- ಗುಜರಾತ್‌ನ ಜುನಾಗಢದಲ್ಲಿ 30 ಹಳ್ಳಿಗಳ ಸಂಪರ್ಕ ರಸ್ತೆಗಳು ಜಲಾವೃತ

ನವದೆಹಲಿ/ಗುವಾಹಟಿ/ಇಂಫಾಲ (ಪಿಟಿಐ): ‘ಸಾಮಾನ್ಯವಾಗಿ ಜುಲೈ 8ರ ಹೊತ್ತಿಗೆ ನೈರುತ್ಯ ಮುಂಗಾರು ದೇಶದೆಲ್ಲೆಡೆ ವ್ಯಾಪಿಸುತ್ತಿತ್ತು. ಆದರೆ, ಈ ಬಾರಿ ಆರು ದಿನಗಳ ಮೊದಲೇ ಅಂದರೆ, ಜುಲೈ 2ರ ಹೊತ್ತಿಗೇ ದೇಶದೆಲ್ಲೆಡೆ ಮುಂಗಾರು ವ್ಯಾಪಿಸಿದೆ’ ಎಂದು ಭಾರತೀಯ ಹವಾಮಾನ ಇಲಾಖೆ ಮಂಗಳವಾರ ತಿಳಿಸಿದೆ. ರಾಜಸ್ಥಾನ, ಹರಿಯಾಣ ಹಾಗೂ ಪಂಜಾಬ್ ರಾಜ್ಯಗಳಿಗೆ ಮಂಗಳವಾರ ಮುಂಗಾರು ಪ್ರವೇಶಿಸಿದೆ ಎಂದೂ ಮಾಹಿತಿ ನೀಡಿದೆ.

ಈಶಾನ್ಯ ರಾಜ್ಯಗಳಲ್ಲಿ ಭಾರಿ ಮಳೆಯಾಗುತ್ತಿದ್ದು, ಪ್ರವಾಹ ಸ್ಥಿತಿ ನಿರ್ಮಾಣವಾಗಿದೆ. ಅಸ್ಸಾಂನಲ್ಲಿ ಪ್ರವಾಹದಿಂದಾಗಿ 20 ಜಿಲ್ಲೆಗಳ 6.71 ಲಕ್ಷಕ್ಕೂ ಅಧಿಕ ಮಂದಿ ಬಾಧಿತರಾಗಿದ್ದಾರೆ. ರಾಜ್ಯದಲ್ಲಿ ಈ ವರ್ಷ ಎರಡನೇ ಬಾರಿ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿದೆ. ಅಸ್ಸಾಂನಲ್ಲಿ ಬ್ರಹ್ಮಪುರ ನದಿಯು ಉಕ್ಕಿ ಹರಿಯುತ್ತಿದೆ. ವಿವಿಧ ಜಿಲ್ಲೆಗಳಲ್ಲಿನ ಸುಮಾರು 13 ಪ್ರಮುಖ ನದಿಗಳು ಅಪಾಯಮಟ್ಟವನ್ನು ಮೀರಿ ಹರಿಯುತ್ತಿವೆ. ಭಾರತೀಯ ವಾಯುಪಡೆಯು ಇಲ್ಲಿಯವರೆಗೆ 13 ಮೀನುಗಾರರನ್ನು ರಕ್ಷಿಸಿದೆ.

ಬ್ರಹ್ಮಪುತ್ರ ನದಿಯ ತಟದಲ್ಲಿರುವ ಎಲ್ಲ ಜಿಲ್ಲೆಗಳಲ್ಲಿಯೂ ಪ್ರವಾಹ ಸ್ಥಿತಿ ಇದೆ. ಅಸ್ಸಾಂನ ಡಿಬ್ರುಗಢ ಜಿಲ್ಲೆಯು ಭಾರಿ ಮಳೆಯಿಂದಾಗಿ ಹೆಚ್ಚು ಹಾನಿಗೆ ಒಳಗಾಗಿದೆ. ಕಳೆದ 24 ಗಂಟೆಗಳಲ್ಲಿ ಒಂದು ಸಾವು ಸಂಭವಿಸಿದೆ. ಈ ವರ್ಷದಲ್ಲಿ ಸಂಭವಿಸಿದ ಪ್ರವಾಹ, ಚಂಡಮಾರುತ ಮತ್ತು ಭೂಕುಸಿತದಿಂದಾಗಿ ಅಸ್ಸಾಂನಲ್ಲಿ ಇಲ್ಲಿಯವರೆಗೂ 46 ಮಂದಿ ಮೃತಪಟ್ಟಿದ್ದಾರೆ. ಗುವಾಹಟಿ ಸೇರಿದಂತೆ ಹಲವೆಡೆ ಅಧಿಕ ಮಳೆ ಸುರಿಯುವ ಮುನ್ಸೂಚನೆಯನ್ನು ಅಸ್ಸಾಂ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎಎಸ್‌ಡಿಎಂಎ) ನೀಡಿದೆ. ವಿವಿಧ ಜಿಲ್ಲೆಗಳಲ್ಲಿ 72 ನಿರಾಶ್ರಿತರ ಶಿಬಿರಗಳಲ್ಲಿ ಸುಮಾರು 8,142 ಮಂದಿ ಆಶ್ರಯ ಪಡೆದುಕೊಂಡಿದ್ದಾರೆ.

ಅಸ್ಸಾಂ ಮಾತ್ರವಲ್ಲದೆ ಮಣಿಪುರದಲ್ಲಿಯೂ ಭಾರಿ ಮಳೆಯಾಗುತ್ತಿದೆ. ಮಳೆಯ ಕಾರಣದಿಂದಾಗಿ ನದಿಗಳ ನೀರಿನಮಟ್ಟ ಏರಿಕೆಯಾಗುತ್ತಿದೆ. ಆದ್ದರಿಂದ, ನದಿತಟದಲ್ಲಿ ವಾಸಿಸುತ್ತಿರುವ ಜನರು ಎಚ್ಚರಿಕೆಯಿಂದ ಇರುವಂತೆ ಪಶ್ಚಿಮ ಇಂಫಾಲ್‌ನ ಜಿಲ್ಲಾಡಳಿತ ಮನವಿ ಮಾಡಿದೆ. ಇಂಫಾಲ್ ಹಾಗೂ ನಾಂಬುಲ್ ನದಿಗಳ ಪಾತ್ರದಲ್ಲಿ ತೀವ್ರ ಮಳೆಯಾಗುತ್ತಿದೆ.


ಅಸ್ಸಾಂನಲ್ಲಿ ಸುರಿಯುತ್ತಿರುವ ಭಾರಿ ಮಳೆಯ ಕಾರಣ ಇಲ್ಲಿನ ಪೊಬಿತೋರ ವನ್ಯಜೀವಿ ಅಭಯಾರಣ್ಯದ ಕೆಲವು ಭಾಗಗಳಲ್ಲಿ ಪ್ರವಾಹ ಉಂಟಾಗಿದೆ. ಈ ಕಾರಣದಿಂದಾಗಿ ಇಲ್ಲಿನ ಆನೆಗಳನ್ನು ಅರಣ್ಯ ಇಲಾಖೆ ಅಧಿಕಾರಿಗಳು ಎತ್ತರ ಪ್ರದೇಶಗಳಿಗೆ ಸ್ಥಳಾಂತರ ಮಾಡಿದರು –ಪಿಟಿಐ ಚಿತ್ರ

ಎಲ್ಲ ಸ್ಥಾನ ಗೆದ್ದರೂ ಇವಿಎಂ ನಂಬಲ್ಲ: ಅಖಿಲೇಶ್



ನವದೆಹಲಿ (ಪಿಟಿಐ): ‘ಉತ್ತರ ಪ್ರದೇಶದಲ್ಲಿನ ಎಲ್ಲ 80 ಲೋಕಸಭಾ ಕ್ಷೇತ್ರಗಳಲ್ಲಿ ನಾವು ಗೆಲುವು ಸಾಧಿಸಿದರೂ ಇವಿಎಂಗಳನ್ನು ನಂಬೋದಿಲ್ಲ’ ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಹೇಳಿದರು.

ಲೋಕಸಭೆಯಲ್ಲಿ ಮಂಗಳವಾರ ರಾಷ್ಟ್ರಪತಿ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯ ವೇಳೆ ಮಾತನಾಡಿದ ಅವರು, ‘ಇಂಡಿಯಾ ಮೈತ್ರಿಕೂಟ ಅಧಿಕಾರಕ್ಕೆ ಬಂದೊಡನೆ ಇವಿಎಂ ತೆಗೆದುಹಾಕಲಾಗುವುದು’ ಎಂದು ತಿಳಿಸಿದರು.

‘ಮಾದರಿ ನೀತಿ ಸಂಹಿತೆ ಜಾರಿಯಲ್ಲಿದ್ದಾಗಲೂ ಆಯೋಗವು ಕೆಲವರಿಗೆ ಅನುಕೂಲ ಮಾಡಿಕೊಟ್ಟಂತಿತ್ತು. ಈ ಬಗ್ಗೆ ಹೆಚ್ಚಿನ ವಿವರಣೆಗೆ ನಾನು ಮುಂದಾಗಲ್ಲ. ಆ ಸಂಸ್ಥೆಯ ಬಗ್ಗೆ ಎಲ್ಲೋ ಒಂದು ಪ್ರಶ್ನೆ ಎದ್ದಿದೆ’ ಎಂದು ಚುನಾವಣಾ ಆಯೋಗದ ಕುರಿತಂತೆಯೂ ಅವರು ಸ್ಪಷ್ಟವಾಗಿ ಉಲ್ಲೇಖಿಸಿದರು.

‘ನಿನ್ನೆಯೂ ಇವಿಎಂಗಳನ್ನು ನಂಬಿರಲಿಲ್ಲ. ಇಂದು ಸಹ ನಂಬಲ್ಲ. ಎಲ್ಲ 80 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದರೂ ನಂಬಲ್ಲ. ಇವಿಎಂಗಳ ಸಮಸ್ಯೆ ಮುಗಿದ ಅಧ್ಯಾಯವಲ್ಲ. ಈ ವಿಷಯದಲ್ಲಿ ಸಮಾಜವಾದಿಗಳ ನಿಲುವು ಅಚಲವಾಗಿರುತ್ತದೆ’ ಎಂದು ಹೇಳಿದರು.

ಭಾರತ ತಂಡಕ್ಕೆ ಸುದರ್ಶನ್, ಜಿತೇಶ್, ರಾಣಾ ಸೇರ್ಪಡೆ

ನವದೆಹಲಿ (ಪಿಟಿಐ): ಸಾಯಿ ಸುದರ್ಶನ್, ಜಿತೇಶ್ ಶರ್ಮಾ ಮತ್ತು ಹರ್ಷಿತ್ ರಾಣಾ ಅವರನ್ನು, ಜಿಂಬಾಬ್ವೆ ವಿರುದ್ಧ ಟಿ20 ಕ್ರಿಕೆಟ್ ಸರಣಿಯ ಮೊದಲ ಎರಡು ಪಂದ್ಯಗಳನ್ನು ಆಡಲಿರುವ ಭಾರತ ತಂಡಕ್ಕೆ ಸೇರ್ಪಡೆ ಮಾಡಿಕೊಳ್ಳಲಾಗಿದೆ. ಅವರು ಸಂಜು ಸ್ಯಾಮ್ಸನ್, ಶಿವಂ ದುಬೆ ಮತ್ತು ಯಶಸ್ವಿ ಜೈಸ್ವಾಲ್ ಅವರಿಗೆ ಬದಲಿಯಾಗಿ ತಂಡವನ್ನು ಸೇರಿಕೊಳ್ಳಲಿದ್ದಾರೆ.

ಭಾರತವು ಈ ಸರಣಿಯ ಮೊದಲ ಪಂದ್ಯವನ್ನು ಜುಲೈ 6ರಂದು ಹರಾರೆಯಲ್ಲಿ ಆಡಲಿದೆ. ಸಂಜು, ದುಬೆ ಮತ್ತು ಯಶಸ್ವಿ ಅವರು ಅಮೆರಿಕ- ವೆಸ್ಟ್ ಇಂಡೀಸ್‌ನಲ್ಲಿ ನಡೆದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಚಾಂಪಿಯನ್ ಆದ ಭಾರತ ತಂಡದ ಭಾಗವಾಗಿದ್ದರು. ಆದರೆ ಅವರು ಬೆರಿಲ್ ಚಂಡಮಾರುತದ ಕಾರಣ ಬಾರ್ಬಡೋಸ್‌ನಲ್ಲಿ ಸಿಲುಕಿ, ಜಿಂಬಾಬ್ವೆಗೆ ಹೋಗುವ ತಂಡ ಸೇರಿಕೊಳ್ಳಲು ಸಾಧ್ಯವಾಗಿರಲಿಲ್ಲ.

ಈ ಮೂವರು ಭಾರತ ತಂಡದ ಇತರ ಆಟಗಾರರ ಜೊತೆ ಮಂಗಳವಾರ ಸಂಜೆ ಚಾರ್ಟರ್ ವಿಮಾನದಲ್ಲಿ ಹೊರಟಿದ್ದು, ಬುಧವಾರ ಬೆಳಿಗ್ಗೆ ದೆಹಲಿಗೆ ತಲುಪಲಿದ್ದಾರೆ. ನಂತರ ಆಟಗಾರರನ್ನು ಪ್ರಧಾನಿ ಮೋದಿ ಅವರು ಸನ್ಮಾನಿಸುವ ಕಾರ್ಯಕ್ರಮವಿದೆ.

ಟಿ20 ವಿಶ್ವಕಪ್‌ಗೆ ಭಾರತ ತಂಡದ ಮೀಸಲು ಆಟಗಾರ ರಾಗಿದ್ದ ಖಲೀಲ್ ಅಹ್ಮದ್ ಮತ್ತು ರಿಂಕು ಸಿಂಗ್ ಅವರೂ ಬಾರ್ಬಡೋಸ್‌ನಲ್ಲೇ ಇದ್ದಾರೆ. ಅವರ ಜಿಂಬಾಬ್ವೆ ಸರಣಿಗೆ ಆಯ್ಕೆಯಾಗಿದ್ದರೂ ಬಿಸಿಸಿಐ ಅವರ ಬದಲಿಗೆ ಬೇರೆ ಆಟಗಾರರನ್ನು ಹೆಸರಿಸಿಲ್ಲ.



ಕರ್ನಾಟಕದ ಮಾಜಿ ಆಲ್‌ರೌಂಡರ್ ಜೆ.ಅಭಿರಾಮ್ ಅವರು ಜಿಂಬಾಬ್ವೆ ಪ್ರವಾಸ ಕೈಗೊಂಡಿರುವ ಭಾರತ ತಂಡದ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸಲಿದ್ದಾರೆ. ಪ್ರಜಾವಾಣಿ ಚಿತ್ರ

ಸಾಯಿ ಸುದರ್ಶನ್, ಸದ್ಯ ಲಂಡನ್‌ನಲ್ಲಿದ್ದು ಕೌಂಟಿ ಆಡುತ್ತಿದ್ದಾರೆ. ಅವರು ತಕ್ಷಣ ಹರಾರೆಗೆ ತೆರಳುವ ನಿರೀಕ್ಷೆಯಿದೆ.

ಜಿಂಬಾಬ್ವೆ ವಿರುದ್ಧ ಟಿ20 ಸರಣಿಯ ಮೊದಲ ಎರಡು ಪಂದ್ಯಗಳಿಗೆ ಪರಿಷ್ಕೃತ ತಂಡ ಇಂತಿದೆ: ಶುಭಮನ್ ಗಿಲ್ (ನಾಯಕ), ಋತುರಾಜ್ ಗಾಯಕವಾಡ, ಅಭಿಷೇಕ್ ಶರ್ಮಾ, ರಿಂಕು ಸಿಂಗ್, ಧ್ರುವ್ ಜುರೇಲ್ (ವಿಕೆಟ್ ಕೀಪರ್), ರಿಯಾನ್ ಪರಾಗ್, ವಾಷಿಂಗ್ಟನ್ ಸುಂದರ್, ರವಿ ಬಿಷ್ಣೋಯಿ, ಆವೇಶ್ ಖಾನ್, ಖಲೀಲ್ ಅಹ್ಮದ್, ಮುಕೇಶ್ ಕುಮಾರ್, ತುಷಾರ್ ದೇಶಪಾಂಡೆ, ಸಾಯಿ ಸುದರ್ಶನ್, ಜಿತೇಶ್ ಶರ್ಮಾ (ವಿಕೆಟ್ ಕೀಪರ್) ಮತ್ತು ಹರ್ಷಿತ್ ರಾಣಾ.

ಟೆನಿಸ್: ಸೆಮಿಗೆ ಹೃಷಿಕೇಶ್ ಅಯ್ಯರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೇಯಾಂಕರಹಿತ ಆಟಗಾರ ಹೃಷಿಕೇಶ್ ಅಯ್ಯರ್ ಅವರು ಎಸ್‌ಎಟಿ–ಎಐಟಿಎ ಆಶ್ರಯದಲ್ಲಿ ನಡೆಯುತ್ತಿರುವ 16 ವರ್ಷದೊಳಗಿನವರ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ನಾಲ್ಕನೇ ಶ್ರೇಯಾಂಕದ ಆದರ್ಶ ದಿಲೀಪ್‌ಕುಮಾರ್‌ಗೆ ಆಘಾತ ನೀಡಿದರು.

ಇಲ್ಲಿನ ಎಸ್‌ಎಟಿ ಕೋರ್ಟ್‌ನಲ್ಲಿ ಮಂಗಳವಾರ ನಡೆದ ಬಾಲಕರ ವಿಭಾಗದ ಸಿಂಗಲ್ಸ್ ಪಂದ್ಯದಲ್ಲಿ ಹೃಷಿಕೇಶ್ 9–3ರಿಂದ ಆದರ್ಶ ಅವರನ್ನು ಸೋಲಿಸಿ ಸೆಮಿಫೈನಲ್‌ಗೆ ಮುನ್ನಡೆದರು.

ಅಗ್ರ ಶ್ರೇಯಾಂಕದ ಲಿಖಿತ್ ಎಸ್. ಗೌಡ 9–2ರಿಂದ ಅರ್ಹಾನ್ ಜೈನ್ ಅವರನ್ನು ಮಣಿಸಿ ನಾಲ್ಕರ ಘಟ್ಟ ಪ್ರವೇಶಿದರು.

ಮೂರನೇ ಶ್ರೇಯಾಂಕದ ಅರ್ಜುನ್ ಸೂರಿ, ಎರಡನೇ ಶ್ರೇಯಾಂಕದ ಅಯಾನ್ ಎಂ.ತೀರನ್ ಅವರೂ ಸೆಮಿಫೈನಲ್ ತಲುಪಿದರು.

ಬಾಲಕಿಯರ ವಿಭಾಗದ ಸಿಂಗಲ್ಸ್‌ನಲ್ಲಿ ಲಾವಣ್ಯ ತಿವಾರಿ 9–4ರಿಂದ ನಾಲ್ಕನೇ ಶ್ರೇಯಾಂಕದ ತೀರ್ಥ ಎ.ಎನ್ ಅವರನ್ನು ಮಣಿಸಿ ಸೆಮಿಫೈನಲ್ ಪ್ರವೇಶಿಸಿದರು.

ಅಯ್ಲಿನ್ ಎಂ. ಕರ್ನೆಲಿಯೊ 9–4ರಿಂದ ಮೂರನೇ ಶ್ರೇಯಾಂಕದ ತನು ವಿಶ್ವಾಸ್ ಅವರನ್ನು ಸೋಲಿಸಿದರು.

ಅಗ್ರ ಶ್ರೇಯಾಂಕದ ವಿಧಿ ಗುಪ್ತಾ 9-2ರಿಂದ ಅನಿಕಾ ಜೋಸನ್ ವಿರುದ್ಧ ಸುಲಭ ಜಯ ಸಾಧಿಸಿದರೆ, ಪೂಜ್ಯಾ ಪಿ. ಕುಮಾರ್ 9-0ಯಿಂದ ಅಕ್ಷಯಾ ವಿಶ್ವಕರ್ಮ ಅವರನ್ನು ಸೋಲಿಸಿ ಸೆಮಿಫೈನಲ್‌ಗೆ ಲಗ್ಗೆಯಿಟ್ಟರು.

27ರಿಂದ ಡ್ಯುರಾಂಡ್ ಕಪ್ ಫುಟ್‌ಬಾಲ್

ಕೋಲ್ಕತ್ತಾ (ಪಿಟಿಐ): ಡ್ಯುರಾಂಡ್ ಕಪ್ ಫುಟ್‌ಬಾಲ್ ಪಂದ್ಯಾವಳಿಯು ಜುಲೈ 27ರಂದು ಆರಂಭವಾಗಲಿದ್ದು ಆಗಸ್ಟ್ 31ರವರೆಗೆ ನಡೆಯಲಿದೆ. ದೇಶದ ನಾಲ್ಕು ವಿವಿಧ ಸ್ಥಳಗಳಲ್ಲಿ ಪಂದ್ಯಗಳು ನಡೆಯಲಿವೆ.

ಇಂಡಿಯನ್ ಸೂಪರ್ ಲೀಗ್, ಐ–ಲೀಗ್‌ನ ತಂಡಗಳು ಸೇರಿದಂತೆ ಇತರ ಆಹ್ವಾನಿತ ತಂಡಗಳು 133ನೇ ವರ್ಷದ ಈ ಟೂರ್ನಿಯಲ್ಲಿ ಭಾಗವಹಿಸಲಿವೆ.

ರೌಂಡ್ ರಾಬಿನ್ ಮತ್ತು ನಾಕೌಟ್ ಮಾದರಿಯಲ್ಲಿ 43 ಪಂದ್ಯಗಳು ನಡೆಯಲಿವೆ. ಆರಂಭದ ಹಾಗೂ ಫೈನಲ್ ಪಂದ್ಯಕ್ಕೆ ಕೋಲ್ಕತ್ತಾದ ವಿವೇಕಾನಂದ ಯುವ ಭಾರತಿ ಕ್ರೀಡಾಂಗಣ ಆತಿಥ್ಯ ವಹಿಸಲಿದೆ. ಡ್ಯುರಾಂಡ್ ಕಪ್ ಫುಟ್‌ಬಾಲ್ ಪಂದ್ಯಾವಳಿಯು ಏಷ್ಯಾದ ಅತ್ಯಂತ ಹಳೆಯ ಟೂರ್ನಿಯಾಗಿದೆ.

ಟೂರ್ನಿಯಲ್ಲಿ ಭಾಗವಹಿಸುವ 24 ತಂಡಗಳನ್ನು ಆರು ಗುಂಪುಗಳಲ್ಲಿ ವಿಂಗಡಿಸಲಾಗಿದೆ.

ಗುಂಪಿನಲ್ಲಿ ಅಗ್ರಸ್ಥಾನ ಪಡೆದ ತಂಡಗಳು ಮತ್ತು ಎರಡನೇ ಸ್ಥಾನ ಪಡೆದ ಎರಡು ಅತ್ಯುತ್ತಮ ತಂಡಗಳು ಸೇರಿ ಒಟ್ಟು ಎಂಟು ತಂಡಗಳು ನಾಕೌಟ್‌ಗೆ ಅರ್ಹತೆ ಪಡೆಯುತ್ತವೆ.

ಕಳೆದ ವರ್ಷದಂತೆ ಈ ವರ್ಷವೂ ಕೂಡಾ ಅಂತರರಾಷ್ಟ್ರೀಯ ತಂಡಗಳು ಭಾಗವಹಿಸುವ ನಿರೀಕ್ಷೆಯಿದೆ ಎಂದು ಸಂಘಟಕರು ಮಂಗಳವಾರ ತಿಳಿಸಿದ್ದಾರೆ.

ಟೂರ್ನಿಯನ್ನು ಪೂರ್ವ ಮತ್ತು ಈಶಾನ್ಯದ ಪ್ರದೇಶಗಳಿಗೆ ಕೊಂಡೊಯ್ಯುವ ನಿಟ್ಟಿನಲ್ಲಿ ಜಾರ್ಖಂಡ್‌ನ ಜಮ್ಶೆಡ್‌ಪುರ ಹಾಗೂ ಮೇಘಾಲಯದ ರಾಜಧಾನಿ ಶಿಲ್ಲಾಂಗ್‌ನಲ್ಲೂ ಪಂದ್ಯಗಳನ್ನು ಆಯೋಜನೆ ಮಾಡಲಾಗುತ್ತಿದೆ.

ಕೋಲ್ಕತ್ತಾ ಮೂರು ಗುಂಪಿನ ಪಂದ್ಯಗಳಿಗೆ ಆತಿಥ್ಯ ವಹಿಸಿದರೆ, ಕೊಕರಾಜಾರ್, ಶಿಲ್ಲಾಂಗ್, ಜಮ್ಶೆಡ್‌ಪುರ ತಲಾ ಒಂದು ಗುಂಪಿನ ಪಂದ್ಯಗಳಿಗೆ ಆತಿಥ್ಯ ವಹಿಸಲಿವೆ. ಮೋಹನ್ ಬಾಗನ್ ಸೂಪರ್ ಜೈಂಟ್ಸ್ ತಂಡ ಹಾಲಿ ಚಾಂಪಿಯನ್ ಆಗಿದ್ದು, 17 ಬಾರಿ ಪ್ರಶಸ್ತಿ ಜಯಿಸಿದೆ.

ಹಾಕಿ ಇಂಡಿಯಾದಿಂದ ಮಾಸ್ಟರ್ಸ್ ಕಪ್



ದಿಲೀಪ್ ಟಿರ್ಕಿ

ನವದೆಹಲಿ (ಪಿಟಿಐ): ಮೊದಲ ಬಾರಿ ಮಾಸ್ಟರ್ಸ್ ಕಪ್ ಟೂರ್ನಿಯನ್ನು ನಡೆಸುವುದಾಗಿ ಹಾಕಿ ಇಂಡಿಯಾ ಮಂಗಳವಾರ ಘೋಷಿಸಿದೆ. ಪುರುಷರ ಮತ್ತು ಮಹಿಳಾ ವಿಭಾಗಗಳಲ್ಲಿ ನಡೆಯುವ ಈ ಟೂರ್ನಿಯಲ್ಲಿ ಅನುಭವಿ ಆಟಗಾರರು ಭಾಗವಹಿಸಲಿದ್ದಾರೆ.

ಹಿರಿಯ ಆಟಗಾರರ ಕೌಶಲ ಮತ್ತು ಉತ್ಸಾಹವನ್ನು ಗಮನದಲ್ಲಿಟ್ಟುಕೊಂಡು ಈ ಟೂರ್ನಿ ಹಮ್ಮಿಕೊಳ್ಳಲಾಗಿದೆ.

ಎಲ್ಲಾ ಹಾಕಿ ಇಂಡಿಯಾ ಸಂಯೋಜಿತ ರಾಜ್ಯ ಘಟಕಗಳು ಈ ಟೂರ್ನಿಯಲ್ಲಿ ಭಾಗವಹಿಸಲು ಅರ್ಹವಾಗಿವೆ. ಪಂದ್ಯಾವಳಿಯ ದಿನಾಂಕಗಳು ಮತ್ತು ಸ್ಥಳಗಳನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು ಎಂದು ಹಾಕಿ ಇಂಡಿಯಾ ಅಧ್ಯಕ್ಷ ದಿಲೀಪ್ ಟಿರ್ಕಿ ತಿಳಿಸಿದ್ದಾರೆ.

‘ಈ ಟೂರ್ನಿಯು ಭಾರತದಲ್ಲಿ ಹಾಕಿಗೆ ಅವರು ನೀಡಿದ ಅಮೂಲ್ಯ ಕೊಡುಗೆಗಳಿಗೆ ಸಾಕ್ಷಿಯಾಗಲಿದೆ’ ಎಂದು ದಿಲೀಪ್ ಹೇಳಿದ್ದಾರೆ.